ನವರೇ ಆಯ್ಕೆ ಯಾಗಿದ್ದಿದ್ದರೆ ಆಗ ಟೀಕೆ ಮಾಡುವ ಸಂದರ್ಭವೇ ಬರುತ್ತಿರಲಿಲ್ಲ. ಪರಿಸ್ಥಿತಿ ಸುಧಾರಿಸುತ್ತಿತ್ತೇನೋ ನನಗೆ ಗೊತ್ತಿಲ್ಲ, ಆದರೆ ಒಂದು ಸಮಸ್ಯೆ ನನಗನ್ನಿಸುತ್ತಿರುವುದು ಅನೇಕ ಕಾರಣಗಳಿಂದ ಅನೇಕ ಗೊಂದಲ ಆಡಳಿತಪಕ್ಷದಲ್ಲಿತ್ತು, ಈಗ ಸುಧಾರಣೆಯಾಗಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಪರಸ್ಪರ ಆಡಳಿತಪಕ್ಷದಲ್ಲಿದ್ದ ಭಿನ್ನಮತ ಕಚ್ಚಾಟ ಹೋಗಿ ಮುಖ್ಯಮಂತ್ರಿಗಳು ರಾಜ್ಯದ ಜನರ ಸಮಸ್ಯೆಗಳನ್ನು ಬಗೆ ಹರಿಸುವ ಕಡೆ ಗಮನಕೊಡುವಂತಹ ಒಳ್ಳೆಯ ವಾತಾವರಣ ಈಗ ಸೃಷ್ಟಿಯಾಗಿದೆ.

ನಿಜ. ಕಳೆದ ಒಂದೂಕಾಲು ವರ್ಷದಲ್ಲಿ ಬಂಗಾರಪ್ಪನವರು ಮುಖ್ಯಮಂತ್ರಿಯಾದ ಮೇಲೆ ನಿಮ್ಮಲ್ಲೇ ಆದ ಕಚ್ಚಾಟ ಬಡಿದಾಟಗಳಿಂದ ಜನಹಿತ ಮಾಡೋಕೆ ಆಗದೇ ಇರುವಂತಹ ವಿಚಿತ್ರ ಪರಿಸ್ಥಿತಿ ನಿಮ್ಮವರೇ ತಂದರು. ಅದು ಸರಿ ತಪ್ಪು ಎಂಬುದು ಜನತೆಗೆ ಬಿಟ್ಟದ್ದು. ಈಗ ಮುಖ್ಯಮಂತ್ರಿಗಳನ್ನು ನಾನು ಪ್ರಾರ್ಥನೆ ಮಾಡುವಂತದ್ದು ಒಬ್ಬ ಹಿಂದುಳಿದ ವರ್ಗದ ವ್ಯಕ್ತಿಯಾಗಿ ಒಳ್ಳೆಯ ಅವಕಾಶ ಒಂದು ಸಿಕ್ಕಿದೆ. ಬರುವ ದಿನಗಳಲ್ಲಾದರೂ ಸಹ ಜನಹಿತದ ಬಗ್ಗೆ ವಿಶೇಷ ಗಮನಕೊಟ್ಟು ಸರ್ಕಾರದ ಬೊಕ್ಕಸಕ್ಕೆ ಬರುವ ಹಣ ಏನು ಲೂಟಿಯಾಗುತ್ತಿರುವುದನ್ನು ತಪ್ಪಿಸಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಮುಂದೆ ಬರುವ ಐದು ವರ್ಷಗಳು ಪೂರ್ಣವಾಗಿ ಉಳಿದ ಎರಡೂವರೆ ವರ್ಷಗಳಲ್ಲಿ ಅವರು ಮುಖ್ಯಮಂತ್ರಿಯಾಗಿ ಸರ್ಕಾರ ನಡೆಸುವಂತಹ ಅವಕಾಶ, ವಾತಾವರಣ ನಮ್ಮ ಭಿನ್ನಮತೀಯರು ಕೊಡಬೇಕೆಂದು ಕಾಂಗ್ರೆಸ್ ಸದಸ್ಯರು ನಿಶ್ಚಯಮಾಡಿರೋದನ್ನು ಕಾಣುತ್ತಾ ಇದ್ದೇವೆ. ಬಂಗಾರಪ್ಪನವರು ಒಳ್ಳೆಯ ಕೆಲಸ ಮಾಡುವುದಕ್ಕೆ ಇನ್ನಾವುದೇ ರೀತಿಯ ಅಡ್ಡಿ ಆತಂಕಗಳು ಬರದೇ ಇರೋ ರೀತಿ ಅಧಿಕಾರ ನಡೆಸುವ ವ್ಯವಸ್ಥೆಯನ್ನು ನಮ್ಮ ಭಿನ್ನಮತೀಯ ಶಾಸಕರು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಎರಡೂವರೆ ವರ್ಷಗಳಿಂದ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ವೀರೇಂದ್ರಪಾಟೀಲರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಾಗ ಒಂದು ಮಾತನ್ನು ನಾಡಿನ ಜನತೆಗೆ ಹೇಳಿದ್ದಾರೆ. ಹಿಂದೆ 1982ರ ಕಾಲಕ್ಕೆ ಸನ್ಮಾನ್ಯ ಗುಂಡುರಾವ್ ಅವರು ಮುಖ್ಯಮಂತ್ರಿಗಳಿದ್ದಂಥ ಕಾಲದಿಂದಲೂ ಅದಕ್ಕೆ ಮುಂಚೆ ಅನೇಕ ತಪ್ಪು ನೆಪ್ಪುಗಳು ಆದವು. ಆ ತಪ್ಪು ನೆಪ್ಪುಗಳನ್ನು ಮಾಡಿದ್ದಕ್ಕೋಸ್ಕರ ಎರಡು ಸಾರಿ ಜನರು ಶಿಕ್ಷೆಯನ್ನು ಕೊಟ್ಟರು. ಎರಡು ವಿಧಾನ ಸಭೆಯ ಚುನಾವಣೆಯಲ್ಲಿಯೂ ನಮ್ಮನ್ನು ಸೋಲಿಸಿ ಬೇರೆಯವರ ಆಯ್ಕೆ ಮಾಡಿದರು. ನಮ್ಮ ತಪ್ಪನ್ನು ಕ್ಷಮಿಸಿ. ಹಿಂದೆ ಆದಂಥ ತಪ್ಪುಗಳನ್ನು ಮಾಡುವುದಿಲ್ಲ, ಒಳ್ಳೆಯ ದಿಕ್ಕಿನಲ್ಲಿ ಹೋಗುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟು ಅಧಿಕಾರಕ್ಕೆ ಬರತಕ್ಕಂಥ ಒಂದು ಪ್ರಯತ್ನವನ್ನು ತಾವುಗಳು ಮಾಡಿದಿರಿ. ಈ ಒಂದು ಸಂದರ್ಭದಲ್ಲಿ ನಾನು ಸನ್ಮಾನ್ಯ ಈ ಸರ್ಕಾರದ ನಾಯಕತ್ವವನ್ನು ವಹಿಸಿರುವ ಬಂಗಾರಪ್ಪನವರಿಗೆ, ಮುಖ್ಯಮಂತ್ರಿಗಳವರಿಗೆ ಕೆಲವು ಪ್ರಶ್ನೆಗಳನ್ನು ಈ ನಾಡಿನ ಜನರ ಪರವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದು ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾಗಿರತಕ್ಕಂಥ ಈ ಸಂದರ್ಭದಲ್ಲಿ ಈ ಕಾವೇರಿ ನೀರಾವರಿ ಯೋಜನೆಗಳಿಗೆ, ಕೃಷ್ಣ ನೀರಾವರಿ ಯೋಜನೆಗಳಿಗಾಗಿ ಎಷ್ಟು ಹಣವನ್ನು ತಾವು ಕೊಟ್ಟಿದ್ದೀರಿ? ಇದರಿಂದ ಎಷ್ಟು ಪ್ರಗತಿಯಾಗಿದೆ? ನಾಳೆ ಮತ್ತೆ ಬಚಾವತ್ ತೀರ್ಪಿನ ಪ್ರಕಾರ ಕೃಷ್ಣ ಬೇಸಿನ್ ಕೆಲಸ ಎರಡು ಸಾವಿರ ಎ.ಡಿ. ಒಳಗಡೆ ಮುಗಿಸುವುದಕ್ಕೋಸ್ಕರ ನಿಮ್ಮ ಕಾರ್ಯಕ್ರಮಗಳೇನು? ಇದರ ಬಗ್ಗೆ ಒಂದು ವೈಟ್ ಪೇಪರನ್ನು ಹೊರಡಿಸಿ, ನಿಮ್ಮ ಕಾರ್ಯಕ್ರಮಗಳನ್ನು ನೀವು ಏನು ಮಾಡಿದ್ದೀರಿ? ಮುಂದೆ ಏನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಎರಡನೆಯದು ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ದಿನಾಂಕ 21-9-1991ರಂದು ಪ್ರತಿಪಕ್ಷದ ಮುಖಂಡರುಗಳನ್ನು ಮತ್ತು ನಮ್ಮನ್ನು ದೆಹಲಿಗೆ ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು, ಹಣಕಾಸಿನ ಸಚಿವರನ್ನು, ಕೃಷಿ ಸಚಿವರುಗಳನ್ನು ಭೇಟಿ ಮಾಡಿಸಿ ಕೇಂದ್ರ ಸರ್ಕಾರ ಈ ರೈತನ ಸಾಲ ಮನ್ನಾದ ಬಗ್ಗೆ ಏನು ಷರತ್ತುಗಳನ್ನು ಹಾಕಿದ್ದೀರಿ? ಅದನ್ನು ತೆಗೆದು ಹಾಕಿ ಸಾಲ ಮನ್ನಾ ಯೋಜನೆಯನ್ನು ತರಬೇಕು ಎಂದು ಹೇಳಿದ್ದೀರಿ. ಈಗ ಆರು ತಿಂಗಳು ಕಳೆದುಹೋಯಿತು. ತಾವು ಹೋಗಿ ಬಂದಮೇಲೆ ಪ್ರಧಾನಮಂತ್ರಿಗಳಿಂದ ಏನು ಉತ್ತರ ಬಂತು ? ಈ ದಿಕ್ಕಿನಲ್ಲಿ ನಿಮ್ಮ ಕಡೆಯಿಂದ ಪ್ರಾಮಾಣಿಕ ಪ್ರಯತ್ನ ಏನು ? ಕೇಂದ್ರ ಸರ್ಕಾರ ಇದಕ್ಕೆ ಸಹಾಯ ಮಾಡುವಂಥ ಸ್ಥಿತಿಯಲ್ಲಿ ಇಲ್ಲದಿದ್ದರೆ ನಮ್ಮ ರಾಜ್ಯ ಸರ್ಕಾರವೇ ಹಣವನ್ನು ತುಂಬಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನಾದರೂ ದಿಟ್ಟ ಕ್ರಮವನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿದ್ದೀರಾ ಎನ್ನತಕ್ಕಂಥ ಪ್ರಶ್ನೆ. ಮೂರನೆಯದು ನೀವು ಈ ರಾಜ್ಯದ ಒಂದು ರೀತಿಯಲ್ಲಿ ಪ್ರಥಮ ಹಿಂದುಳಿದ ಮುಖ್ಯಮಂತ್ರಿಗಳು. ಹಿಂದುಳಿದ ಜನತೆಯ ಮುಖ್ಯಮಂತ್ರಿಗಳು. ಈ ಸಂವಿಧಾನದ ಶಿಲ್ಪಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮಶತಾಬ್ದಿಯ ಸಂದರ್ಭದಲ್ಲಿ ಆ ಒಂದು ವರ್ಷ ಏನೇನು ಕಾರ್ಯಕ್ರಮಗಳನ್ನು ಮಾಡಿದಿರಿ ? ಎಷ್ಟು ಜನ ನಮ್ಮ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜನಾಂಗದವರಿಗೆ ಈ ನಿಮ್ಮ ಕಾರ್ಯಕ್ರಮಗಳ ಯೋಜನೆಗಳಿಂದ ಲಾಭವಾಗಿದೆ. ಏನು 18ಪರ್‌ಸೆಂಟ್ ಹಣ ಅವರ ಅಭಿವೃದ್ಧಿಗೋಸ್ಕರ ತೆಗೆದಿಟ್ಟಿದ್ದು

ಎಷ್ಟರಮಟ್ಟಿಗೆ ಅದರ ಉಪಯೋಗವಾಗಿದೆ? ಇದರ ಬಗ್ಗೆ ಸ್ಪಷ್ಟವಾದ ಕಾರ್ಯಕ್ರಮಗಳೇನು ಆಗಿದೆ, ಇದನ್ನು ಜನತೆಗೆ ತಾವು ತಿಳಿಸುತ್ತೀರಾ? ನಾಲ್ಕನೆಯದು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಸುಮಾರು ಹತ್ತೊಂಭತ್ತೂವರೆ ಲಕ್ಷ ನಿರುದ್ಯೋಗಿ ಯುವಕರು ನೋಂದಾವಣೆಯನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ನಿಮ್ಮ ಅಂಕಿ ಅಂಶದ ಪ್ರಕಾರ ಸುಮಾರು 56 ಸಾವಿರ ಹುದ್ದೆಗಳು ಖಾಲಿ ಇದೆ. 1987ನೇ ಅಕ್ಟೋಬರ್ ನಿಂದ ನೇಮಕಾತಿಯ ಒಂದು ನಿರ್ಬಂಧ ಇದೆ. ಅದನ್ನು ಯಾವಾಗ ತೆಗೆಯುತ್ತೀರಿ? ಯಾವಾಗ ಈ ನಾಡಿನ ಈ ನಿರುದ್ಯೋಗಿ ಯುವಕರಿಗೆ ಅವರ ಭವಿಷ್ಯದ ಬಗ್ಗೆ ಒಂದು ಬೆಳಕನ್ನು ಚೆಲ್ಲುವಂಥ ಕಾರ್ಯಕ್ರಮವನ್ನು ನೀವು ರೂಪಿಸುತ್ತೀರಿ? ಇದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಅನೇಕ ಆರೋಪಗಳ ಪಟ್ಟಿ ಇದೆ. ರಾಜ್ಯಪಾಲರಿಗೆ ನಾವು ಮನವಿಯನ್ನು ಕೊಟ್ಟಿದ್ದೇವೆ. ಇಲ್ಲಿ ಅವಿಶ್ವಾಸ ನಿರ್ಣಯ ಸಂದರ್ಭದಲ್ಲಿ ಇದನ್ನು ಪ್ರಸ್ತಾಪ ಮಾಡುವಂಥ ಪ್ರಯತ್ನವನ್ನು ಮಾಡಿದ್ದೇವೆ. ವಿಧಾನಸಭೆಯ ಒಳಗೆ ಮತ್ತು ಹೊರಗೆ ಅಂಕಿ ಅಂಶಗಳನ್ನು ಒದಗಿಸುವಂಥ ಪ್ರಯತ್ನವನ್ನು ಮಾಡಿದ್ದೇವೆ ಅಬ್ಕಾರಿ ವ್ಯವಹಾರಗಳ ಬಗ್ಗೆ ಏನು ಅವ್ಯವಹಾರ ನಡೆಯಿತು ಅದರ ಬಗ್ಗೆ ಹೇಳಿದ್ದೇನೆ.

ಗ್ರಾನೈಟ್ ಹಗರಣದಲ್ಲಿ ಒಂದೇ ದಿವಸದಲ್ಲಿ ಶಾಸನ ತಿದ್ದುಪಡಿಯನ್ನು ಮಾಡಿ 210 ಜನರಿಗೆ ಏನು ಲೈಸೆನ್ಸನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ನಾಡಿನ ಅಭಿವೃದ್ಧಿಗೋಸ್ಕರ ರೈತರಿಂದ ಅಕ್ವೈರ್ ಮಾಡಿ ಕೊಂಡಂಥ ಜಮೀನನ್ನು ಅದಕ್ಕೆ ಉಪಯೋಗ ಮಾಡಿಕೊಳ್ಳದೇ ದೊಡ್ಡ ದೊಡ್ಡ ಬಿಲ್ಡರ್ಸ್‌ಗೆ ಏನು ವರ್ಗಾವಣೆಯನ್ನುಮಾಡಿದ್ದೀರಿ, ಆ ರೀತಿಯ ಒಂದು ಭೂಗಳ್ಳತನ ನಡವಳಿಕೆ ಆಯಿತು ಎಂದು ನಾನು ಇಲ್ಲಿ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಮೋಹನ್ ಮೆಕೆನ್ಸಿ ಈ ರೀತಿಯಲ್ಲಿ ವಿವರಗಳನ್ನು ಕೊಟ್ಟೆವು. ಈ ಬಗ್ಗೆ ಜನರಿಗೆ ಏನು ಹೇಳಿದ್ದೀರಿ. ಈ ಗಂಧ ಮತ್ತು ದಂತ ಕಳ್ಳ ವೀರಪ್ಪನನ್ನು ಬಂಧನ ಮಾಡುತ್ತೇವೆ ಎಂದು ಹೇಳಿಕೊಂಡು ಏನೆಲ್ಲಾ ನಡೆದುಕೊಂಡು ಹೋಗುತ್ತಿದೆ, ಅದರ ಬಗ್ಗೆ ಏನು ನೀವು ಮಾಡಿದ್ದೀರಿ, ಈ ಸಂಗತಿಗಳ ಬಗ್ಗೆ ಜನರಿಗೆ ನಿಮ್ಮ ಉತ್ತರವೇನು? ಮತ್ತೆ ಆರನೆಯದು ಈ ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರು ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದ್ದಾರೆ. ಜಿಲ್ಲಾಪರಿಷತ್ತು, ಮಂಡಲ ಪಂಚಾಯಿತಿ ಚುನಾವಣೆ ಮಾಡದೇ ಇರತಕ್ಕಂಥದ್ದು ಇವತ್ತಿನ ರಾಜಕೀಯದ ಒಂದು ವಿಚಿತ್ರವಾದ ಸನ್ನಿವೇಶ. ಒಂದು ರಾಜಕೀಯ ಅಸ್ಥಿರತೆ ಎಲ್ಲಾ ರಂಗದಲ್ಲೂ ವ್ಯಾಪಕ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈ ಸಂದರ್ಭದಲ್ಲಿ ಜನರ ಮುಂದೆ ಹೋದರೆ ನಾವು ಚುನಾವಣೆಯಲ್ಲಿ ಗೆಲ್ಲುವುದಿಲ್ಲ ಎನ್ನತಕ್ಕಂಥ ಒಂದು ಪರಿಸ್ಥಿತಿ ನಿಮಗೆ ಏನು ಒದಗಿಬಂದಿದೆ, ಅದಕ್ಕಾಗಿ ನೀವು ಚುನಾವಣೆಗೆ ಹೋಗುತ್ತಿಲ್ಲ ಎಂದು ಜನ ಮಾಡನಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ವೀರೇಂದ್ರಪಾಟೀಲರು ಹೇಳಿರುವಂಥ ಈ ಸಂದರ್ಭದಲ್ಲಿ ದಯಮಾಡಿ ಇದರ ಬಗ್ಗೆ ಒಂದು ಒಳ್ಳೆಯ ವ್ಯವಸ್ಥೆ ಇತ್ತು. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಮಂಡಲಪಂಚಾಯಿತಿ, ಜಿಲ್ಲಾಪರಿಷತ್ ಲೆವೆಲ್‌ನಲ್ಲಿ ಸಾಮಾನ್ಯ ವ್ಯಕ್ತಿ ಸಮಾಜದ ಬಗ್ಗೆ ಕಳಕಳಿ ಇರತಕ್ಕಂಥವರು ನಾಯಕನಾಗಿ ಈ ಜನರ ಅಭಿವೃದ್ಧಿಯನ್ನು ಮಾಡತಕ್ಕಂಥ ಒಂದು ಒಳ್ಳೆಯ ಕಾರ್ಯಕ್ರಮ ಇದಾಗಿತ್ತು. ಯಾರು ಅಧಿಕಾರಕ್ಕೆ ಬರುತ್ತಾರೆ ಎನ್ನುವುದು ಶಾಶ್ವತವಲ್ಲ. ಯಾರು ಜನರ ಕೆಲಸವನ್ನು ಮಾಡುತ್ತಾರೆ ಅವರ ಕಣ್ಣೀರನ್ನು ಒರಿಸುತ್ತಾರೆ ಅವರು ಅಧಿಕಾರಕ್ಕೆ ಬರುವಂಥ ವ್ಯವಸ್ಥೆ ಇತ್ತು. ಪ್ರಾರಂಭದಲ್ಲಿ ಅಧಿಕಾರ ವೀಕೇಂದ್ರೀಕರಣದ ಕತ್ತನ್ನು ಹಿಸುಕುವಂತಹ ಪ್ರಯತ್ನವನ್ನು ತಾವು ಮಾಡಿದ್ದೀರಿ. ಇದನ್ನು ಬಿಟ್ಟು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತಿಯ ಚುನಾವಣೆಯನ್ನು ಯಾವಾಗ ಮಾಡುತ್ತೀರಿ? ಈ ಆರು ಪ್ರಮುಖ ಪ್ರಶ್ನೆಗಳಿಗೆ ರಾಜ್ಯಪಾಲರ ಭಾಷಣಕ್ಕೆ ಉತ್ತರಕೊಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಅಲ್ಲದೆ ಇಲ್ಲಿ ನನ್ನ 4-5 ಸಲಹೆಗಳು ಸಹ ಇವೆ. ನಿಮಗೆ ಜನ ಕೊಟ್ಟಂತಹ ಭರವಸೆ, ಮತ್ತೆ ನೀವು ಅಧಿಕಾರಕ್ಕೆ ಬರಬೇಕು, ಜನಹಿತ ಮಾಡಬೇಕು, 44 ವರ್ಷಗಳಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಉಳಿಯಬೇಕು ಎನ್ನುವ ಪ್ರಾಮಾಣಿಕವಾದ ಕಳಕಳಿ ಇದ್ದರೆ, ನನ್ನ ವಿನಂತಿಯನ್ನು ತಾವು ಕೇಳಬೇಕು. ಈ ನಾಡಿನ ರೈತ ಕೂಲಿ ಕಾರ್ಮಿಕ ನಮ್ಮ ಹರಿಜನ ಗಿರಿಜನ ಬಂಧುಗಳು ಕಾಂಗ್ರೆಸ್ ಪಕ್ಷಕ್ಕೆ ಒಂದು ಬದಲಾವಣೆಯನ್ನು ತಂದು ಹಿಂದೆ ಎಂದೂ ಇಲ್ಲದಂತಹ ಒಂದು ಬಹುಮತವನ್ನು ಕೊಟ್ಟಿದ್ದಾರೆ. ಆ ಸಮಯದಲ್ಲಿ ಭರವಸೆಯನ್ನು ತಾವು ಏನು ಕೊಟ್ಟೀರಿ ಭರವಸೆಯನ್ನು ಈಡೇರಿಸುವಂತಹ ಕಾಲ ಇವತ್ತು ಹತ್ತಿರ ಬರುತ್ತಿದೆ. ಇದು ಯಾರ ಒಬ್ಬರ ಪ್ರಶ್ನೆ ಅಲ್ಲ. ಇದು ಎಲ್ಲರಿಗೂ ಕಳಕಳಿ ಇರುವ ಪ್ರಶ್ನೆಯಾಗಿದೆ. ಆ ಕಡೆ ಕುಳಿತಿರುವಂತಹ ನಮ್ಮ ಹಿರಿಯರು ರೈತರ ಸಾಲಮನ್ನಾ ಇದೊಂದು ಅಭಿವೃದ್ಧಿ ಕಾರ್ಯ ಎಂದು ತಿಳಿದುಕೊಂಡು ಈ ಬಜೆಟ್ ನಲ್ಲಿ 300 ಕೋಟಿ ರೂಪಾಯಿ ರೈತಕಟ್ಟ ಬೇಕಾದ ಹಣವನ್ನು ತೆಗೆದಿಟ್ಟು ಬಜೆಟ್ ಪ್ರಾವಿಜನ್ ಮಾಡಿಕೊಟ್ಟು ಅವನನ್ನು ಋಣಮುಕ್ತನನ್ನಾಗಿ ಮಾಡಿ, ಅವರು ಗೌರವದಿಂದ ಧೈರ್ಯದಿಂದ ಮತ್ತೊಮ್ಮೆ

ಕೃಷಿ ಮಾಡಿ ಚೇತರಿಸಿಕೊಳ್ಳುವಂತಹ ವಾತಾವರಣವನ್ನು ತರಬೇಕೆನ್ನುವ ಸಲಹೆಯನ್ನು ನಾನು ಕೊಡುತ್ತೇನೆ. ಇನ್ನು ಕೃಷ್ಣ ಕಾವೇರಿ ಜಲಾನಯನ....

ಪ್ರೊ|| ಎಂ.ಡಿ. ನಂಜುಂಡಸ್ವಾಮಿ :- ಸನ್ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾ ರೈತರ ಸಾಲ ಮನ್ನಾವನ್ನು ಒಂದು ಅಭಿವೃದ್ಧಿ ಕಾರ್ಯ ಎಂದು ತಿಳಿದುಕೊಂಡು ಮಾಡಿ ಎಂದು ಹೇಳುತ್ತಿದ್ದಾರೆ. ಕೊಟ್ಟಿದ್ದೆ ಅದಕ್ಕೋಸ್ಕರ. It is called a development strategy. ಅದಕ್ಕೆ ನೀವು ರದ್ದು ಮಾಡಬೇಕೆಂದು ಮಾಡುವುದು ನಿಮ್ಮ ಕರ್ತವ್ಯವೆಂದು ನಾವು ಹೇಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರಿಗೆ ರೈತನ ನಿಜವಾದ ಪರಿಸ್ಥಿತಿ ಗೊತ್ತಿಲ್ಲವೋ ಅವನ ಮನಸ್ಸಿನಲ್ಲಿ ಏನು ಭಾವನೆ ಇದೆ, ಏನು ಬೆಳಿಗ್ಗೆ ಎದ್ದು ಬಂದರೆ ಯಡಿಯೂರಪ್ಪನವರು ರೈತರ ಸಾಲ ಮನ್ನಾದ ಬಗ್ಗೆ ಮಾತನಾಡುತ್ತಾರೆ, ಇವರಿಗೆ ಅಭಿವೃದ್ಧಿ ಬಗ್ಗೆ ಚಿಂತನೆ ಇಲ್ಲ ಎಂಬ ಮಾತನ್ನು ನಾನು ಕೇಳುತ್ತೇನೆ. ನಾನು ಅತ್ಯಂತ ವಿನಿಯದಿಂದ ಪ್ರಾರ್ಥನೆಯನ್ನು ಮಾಡುವುದೇನೆಂದರೆ ಎಲ್ಲಿಯೂ ಸಹ ಈ ದೇಶದಲ್ಲಿ ರೈತನ ಸಾಲಮನ್ನಾ ಮಾಡಿ ಯಾರೂ ಸಹ ಕೇಳಿಲ್ಲ ಎಂದೂ ಅವನು ಭಿಕ್ಷೆಯನ್ನು ಕೇಳಿಲ್ಲ. ಇನ್ನೊಬ್ಬನಿಗೆ ಕೊಡುವಂತಹ ಕೈ ಅದು. ಆದರೆ ನಮಗೆ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ವಿಶೇಷವಾದಂತಹ ಒಂದು ಪರಿಸ್ಥಿತಿ ಏನೆಂದರೆ ಬರಗಾಲ ಅತಿವೃಷ್ಟಿಯಿಂದ ಅವನು ಬೆಳೆದಂತಹ ಬೆಳೆಗೆ ಸರಿಯಾದಂತಹ ವೈಜ್ಞಾನಿಕ ಬೆಲೆ ಸಿಗಲಿಲ್ಲ. ಇವೆಲ್ಲಾ ಕಾರಣಗಳಿಂದ ಅವನು ತೆಗೆದುಕೊಂಡು ಮೂರು-ನಾಲ್ಕು ಸಾವಿರರೂಪಾಯಿಗಳನ್ನು ಅವರು ಭೂಮಿಗೆ ಹಾಕಿ ಅಲ್ಲಿ ಅಭಿವೃದ್ದಿ ಕಾರ್ಯ ಮಾಡಿ ಒಳ್ಳೆಯ ಬೆಳೆ ಬೆಳೆಯಲಿಕ್ಕೆ ಆಗುವಂತಹ ಶಕ್ತಿ ಸ್ವಾತಂತ್ರ್ಯ ಬಂದು 44 ವರ್ಷಗಳಿಂದಲೂ ಅವನಿಗೆ ಆಗಿಲ್ಲ, ಅದಕ್ಕಾಗಿ ಬೇರೆ ಏನೇನೋ ಮಾಡುತ್ತಿದ್ದೇವೆ. ಈಗ ಈ ಋಣ ತೀರಿಸುವಂತಹ ಒಂದು ಜವಾಬ್ದಾರಿ ಕೂಡ ಇದೆ. ನಾವು ಕೊಟ್ಟ ಭರವಸೆಗೆ ನಾವೆಲ್ಲರೂ ಜವಾಬ್ದಾರರಾಗಿದ್ದೇವೆ. ಈ ಹೆಗ್ಗಳಿಕೆ ಯಡಿಯೂರಪ್ಪನವರದಲ್ಲ, ನೀವು ಸಾಲ ಮನ್ನಾ ಮಾಡಿದರೆ ಬಿಜೆಪಿ ನಾಯಕರಾದ ಯಡಿಯೂರಪ್ಪನವರಿಗೆ ಲಾಭ ಹೇಗೆ ಆಗುತ್ತದೆ? ಇಷ್ಟು ದೊಡ್ಡ ಸಂಖ್ಯೆಯಲ್ಲಿರುವ ನಿಮ್ಮ ಸರ್ಕಾರಕ್ಕೆ ಅದರಿಂದ ಹೆಚ್ಚು ಲಾಭ ಅಗಬಹುದು. ಜನ ನಿಮ್ಮ ಬಗ್ಗೆ ವಿಶ್ವಾಸ ಇಡಬಹುದು. ನಾಳೆ ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯಿತಿಯಲ್ಲಿ ನಿಮ್ಮ ಜೊತೆಗೆ ಜನ ಬರಬಹುದು. ಅವರು ಗೌರವದಿಂದ ಜೀವನ ಮಾಡಬಹುದು. ಈ ದೃಷ್ಟಿಯಿಂದ ನಾನು ವಿನಂತಿ ಮಾಡುತ್ತೇನೆ. ದಯಮಾಡಿ ಮುಖ್ಯಮಂತ್ರಿಗಳಿಗೆ ಒತ್ತಾಯವನ್ನು ನೀವು ತನ್ನಿ, ಆ ಕೆಲಸವನ್ನು ಮಾಡುವುದಕ್ಕೆ ಈ ಬಜೆಟ್ ನಲ್ಲಿ 300 ಕೋಟಿ ರೂಪಾಯಿಯನ್ನು ತೆಗೆದಿಡಬೇಕೆಂಬ ಮಾತನ್ನು ಹೇಳುತ್ತೇನೆ. ಎಲ್ಲಾ ಕಡೆ ಕಾವೇರಿ ಸಮಸ್ಯೆಯ ಬಗ್ಗೆ ಬೃಹದಾಕಾರವಾಗಿ ಮಾತನಾಡುತ್ತಿದ್ದೇವೆ. ಏಕೆ ಈ ಪ್ರಶ್ನೆ ಉದ್ಭವವಾಯಿತು? ಪಕ್ಕದ ಆಂಧ್ರದಲ್ಲಿ, ತಮಿಳುನಾಡಿನಲ್ಲಿ ಅವರು ಸುಮಾರು 28 ಲಕ್ಷ ಎಕರೆ ಜಮೀನನ್ನು ನೀರಾವರಿಗೆ ಅಳವಡಿಸಿದ್ದಾರೆ. ಏನೂ ಮಾಡಿಲ್ಲ. ನಮ್ಮ ಅನೇಕ ತಪ್ಪುಗಳಿಂದ ನಾವು ಯಾವುದಕ್ಕೆ ಆದ್ಯತೆ ಕೊಡಬೇಕು ಅದಕ್ಕೆ ಆಗಲಿಲ್ಲ. ಕೃಷ್ಣ ಬೇಸಿನ್‌ನಲ್ಲೂ ಬರುವಂಥ ಯೋಜನೆಗಳನ್ನು 2000 ಇಸವಿಯೊಳಗೆ ಅಂದರೆ ಇನ್ನು 6-7 ವರ್ಷಗಳಲ್ಲಿ ಮುಗಿಸಬೇಕಾಗುತ್ತದೆ. ಅಂದಾಜಿನ ಪ್ರಕಾರ 500 ಕೋಟಿ ರೂಪಾಯಿ ಆಗುವುದಿಲ್ಲ. ಇನ್ನು 5-6 ವರ್ಷಗಳಲ್ಲಿ ಆಗಬೇಕಾದರೆ ಪ್ರತಿವರ್ಷ 600 ಕೋಟಿ ರೂಪಾಯಿಯನ್ನು ಈ ಅಭಿವೃದ್ದಿ ಕಾರ್ಯಕ್ಕೆ ಹಾಕಬೇಕಾಗುತ್ತದೆ. ಅದಕ್ಕಾಗಿ ಒಬ್ಬ ನೀರಾವರಿ ಸಚಿವರನ್ನು ನೇಮಕಮಾಡಬೇಕಾಗುತ್ತದೆ. ಬೇರೆ ಏನಕ್ಕೂ ಗಮನಕೊಡದೆ ನೀರಾವರಿ ಯೋಜನೆಗೆ ಗಮನವನ್ನು ಕೊಡಬೇಕು. ಅದಕ್ಕೋಸ್ಕರ ಹಣವನ್ನು ತೊಡಗಿಸಬೇಕು. ಕೃಷ್ಣಾ ಮತ್ತು ಕಾವೇರಿ ಜಲನಯನದ ಕಾರ್ಯ ಮುಗಿಯುವುದಕ್ಕೋಸ್ಕರ ಕನಿಷ್ಠ ಈ ಬಜೆಟ್ ನಲ್ಲಿ ಪ್ರತಿವರ್ಷ ಒಂದು ಸಾವಿರ ಕೋಟಿ ರೂಪಾಯಿಯನ್ನು ತೆಗೆದಿಡಬೇಕು.

ಮತ್ತೆ ನೇಮಕಾತಿ ನಿರ್ಬಂಧವನ್ನು ತೆಗೆದು ಹಾಕಿ ಅಗತ್ಯವಿರುವ ಕಡೆ ನಿರುದ್ಯೋಗಿಗೆ ಉದ್ಯೋಗಗಳನ್ನು ಕೊಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ಗೊಂದಲವಾದಂತಹ ವಾತಾವರಣ ಉಂಟಾಗಿದೆ. ಅಲ್ಲಿ ಖಾಲಿ ಇರುವ ಉದ್ಯೋಗವನ್ನು ಭರ್ತಿ ಮಾಡಬೇಕಾಗುತ್ತದೆ. ಇನ್ನು ಕೆಲವು ಪ್ರಮುಖವಾದ ಕಡೆ ಉದ್ಯೋಗವನ್ನು ತುಂಬ ಬೇಕಾಗಿದೆ. ಈ ದಿಕ್ಕಿನಲ್ಲಿ ದಯಮಾಡಿ ಒಂದು ದಿಟ್ಟ ಹೆಜ್ಜೆಯನ್ನು ಸರ್ಕಾರ ಹಾಕಿಕೊಳ್ಳಬೇಕು.

ಮತ್ತೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಏಳಿಗೆಯ ದೃಷ್ಟಿಯಿಂದ ಅನೇಕ ಸಮಿತಿಗಳಾಗಿವೆ. ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಹಣವನ್ನು ತೆಗೆದಿಟ್ಟಿದ್ದೇವೆ. ಆದರೆ ಊರಿನ ಹೊರಗಡೆ ಕುಡಿಯುವುದಕ್ಕೆ ನೀರಿಲ್ಲ,

ಸ್ವಚ್ಛವಾದಂಥ ಪರಿಸರ ಇಲ್ಲ, ಈ ರೀತಿಯ ಒಂದು ಪರಿಸ್ಥಿತಿಯಲ್ಲಿ ಅವನು ಬದುಕುತ್ತಿದ್ದಾನೆ. ಅವನ ಅಭಿವೃದ್ಧಿಕೋಸ್ಕರ ಒಂದು ಸದನದ ಸಮಿತಿ ಮಾಡಿ. ಡಾ। ಅಂಬೇಡ್ಕರ್‌ರವರ ಜನ್ಮ ಶತಾಬ್ದಿಯನ್ನು ತುಂಬ ದೊಡ್ಡ ಪ್ರಮಾಣದಲ್ಲಿ ಆಚರಿಸಿ ಅವರ ಹೆಸರನ್ನು ಜ್ಞಾಪಕ ಮಾಡಿಕೊಂಡಿದ್ದೇವೆ. ಆದರೆ, ಹರಿಜನರನ್ನು ಮೇಲೆತ್ತುವಂಥ ಒಂದು ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ಈ ದೃಷ್ಟಿಯಿಂದ ವಿಶೇಷವಾದಂಥ ಕಾರ್ಯಕ್ರಮವನ್ನು ಹಮ್ಮಿಕೊಂಡು, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ನಿರ್ದಿಷ್ಟವಾದ ಹಣವನ್ನು ತೊಡಗಿಸಿ ಇರುವ 18 ಪರ್ಸೆಂಟ್ ಹಣವನ್ನು ಉಪಯೋಗಿಸಿ, ಅವರ ಅಭಿವೃದ್ಧಿ ಆಗುತ್ತದೆಯೋ, ಇಲ್ಲವೋ ಎನ್ನುವುದನ್ನು ನೋಡಿಕೊಳ್ಳುವುದಕ್ಕೋಸ್ಕರ ಒಂದು ಸಮಿತಿ ಇದೆ. ಇದರ ಬಗ್ಗೆ ವಿಶೇಷ ಗಮನ ಕೊಡುವುದಕ್ಕೋಸ್ಕರ ಒಂದು ಸದನದ ಸಮಿತಿಯನ್ನಾಗಲಿ, ಅಥವಾ ಬೇರೆ ಯಾವುದಾದರೂ ಮಾರ್ಗವನ್ನು ಮಾಡಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಕೊನೆಯದಾಗಿ ಈ ಸರ್ಕಾರದ ಬಗ್ಗೆ ಏನು ಆರೋಪ ಇದೆಯೆಂಬುದನ್ನು ನಾವು ಹೇಳಿದ್ದೇವೆ. ಆ ಆರೋಪಗಳಲ್ಲಿ ಹೆಂಡದ ಹಗರಣ ಇರಬಹುದು, ಮೊನ್ನೆ ಅಬ್ಕಾರಿ ಹರಾಜಿನಲ್ಲಿ ಆಗಿರುವಂಥ ಅನ್ಯಾಯಗಳಿರಬಹುದು, ಭೂ ಹಗರಣವಿರಬಹುದು, ಗ್ರಾನೈಟ್ ಕಲ್ಲುಗಳ ಹಗರಣ ಇರಬಹುದು. ಈ ಒಂದು ಆರೋಪದಿಂದ ಮುಕ್ತರಾಗುವುದಕ್ಕೋಸ್ಕರ ನಾನು ಸಲಹೆ ಕೊಡುವಂಥದ್ದು ಏನೆಂದರೆ, ಕೇಂದ್ರದಲ್ಲೂ ನಿಮ್ಮದೇ ಸರ್ಕಾರವಿದೆ, ಇಲ್ಲಿಯೂ ನಿಮ್ಮದೇ ಸರ್ಕಾರ ಇದೆ. ಎರಡು ಒಂದೇ ಪಕ್ಷವಾಗಿವೆ. ಇದಕ್ಕೆ ಸಂಬಂಧ ಪಟ್ಟ ದಾಖಲೆಗಳು ನನ್ನ ಹತ್ತಿರ ಇದೆ, ಮುಂದೆ ಇಂತಹ ತಪ್ಪು ಆಗಬಾರದು, ಸರ್ಕಾರದ ಬೊಕ್ಕಸವನ್ನು ತುಂಬಬೇಕು ಎನ್ನುವ ಪ್ರಾಮಾಣಿಕ ಕಳಕಳಿಯಿದ್ದರೆ ನಮ್ಮ ಮುಖ್ಯಮಂತ್ರಿಗಳು ಈ ಸಿ.ಬಿ.ಐ. ತನಿಖೆಗೆ ಒಳಗಾಗಿ ನಡೆದಿರುವಂಥ ಹಗರಣಗಳ ತನಿಖೆಮಾಡಿಸಿ, ಅಕಸ್ಮಾತ್ ಅವರ ಕೈವಾಡ ಇಲ್ಲದಿದ್ದರೆ, ಇದರಲ್ಲಿ ಯಾರ ಕೈವಾಡ ಇದೆ, ಅವರ ಮೇಲಾದರೂ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಈ ದಿಕ್ಕಿನಲ್ಲಿ ತಾವು ದಿಟ್ಟ ಹೆಜ್ಜೆ ಇಡದೇ ಇದ್ದರೆ ಬಹುಶಃ ಈ ನಾಡಿನ ಜನರು ಕ್ಷಮಿಸುವುದಿಲ್ಲ. ಈ ಎಲ್ಲಾ ಅವ್ಯವಹಾರಗಳಿಗೆ, ಹಗರಣಗಳಿಗೆ, ಈ ಸರ್ಕಾರದ ಮಂತ್ರಿ ಮಂಡಲದವರೇ ಜವಾಬ್ದಾರರು ಎಂದು ಹೇಳುವಂಥ ಅನಿವಾರ್ಯ ಸಂದರ್ಭಕ್ಕೆ ಅವಕಾಶ ಮಾಡಿಕೊಡಬೇಡಿ. ಯಡಿಯೂರಪ್ಪನವರೇ ಇದರಲ್ಲಿ ನಮ್ಮ ಪಾತ್ರ ಏನೂ ಇಲ್ಲಾ, ಗೊತ್ತಿಲ್ಲದೆ ನಡೆದುಹೋಗಿದೆ, ಇದರ ಬಗ್ಗೆ ಜನತೆಗೆ ತಿಳಿಸೋಣ ಎನ್ನುವ ಪ್ರಾಮಾಣಿಕ ಕಳಕಳಿ ಇದ್ದರೆ, ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಸಬೇಕೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಾವು ಕಳೆದ 6-7 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದೇವೆ.

ಸನ್ಮಾನ್ಯ ಬೈರೇಗೌಡರು ನನ್ನ ಪಕ್ಕದಲ್ಲಿ ಕುಳಿತಿದ್ದಾರೆ. ಇವರು ಎಕ್ಸೈಜ್ ಇಲಾಖೆಯಲ್ಲಿ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿಗಳು ಸೆಕೆಂಡ್ಸ್ ಮೂಲಕ ಹಾಳಾಗುತ್ತಿದೆಯೆಂದು ಹೇಳಿ, ಹರಾಜು ಮಾಡಿದಂತಾದ್ದು ಸತ್ಯ ಸಂಗತಿ ಎಂದು ಮನವರಿಕೆಯಾಗಿದೆ. ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಎಕ್ಸೈಜ್ ಇಲಾಖೆಯಲ್ಲಿ ಸರ್ಕಾರಕ್ಕೆ ದೊಡ್ಡದಾಗಿ ಲಾಭ ತರುವಂಥ ಪ್ರಯತ್ನ ಮಾಡಿದ್ದಾರೆ. ಆದರೆ, ಈ ವರ್ಷ 15 ಪರ್ಸೆಂಟ್ ಏರಿಕೆ ಯಾಗಿದ್ದರೂ, ಹೋದ ವರ್ಷದ ಜುಲೈ ತಿಂಗಳಿನಲ್ಲಿ ಹರಾಜಾದಾಗ ಖಂಡಿತವಾಗಿಯೂ 150 ಕೋಟಿ ರೂಪಾಯಿಗಳನ್ನು ಎಕ್ಸೈಜ್ ಇಲಾಖೆಯಲ್ಲಿ ತುಂಬುವುದಕ್ಕೆ ಸಾಧ್ಯವಿತ್ತು. ಆದರೆ, ಆ ರೀತಿ ಮಾಡದೆ ಇವೊತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಯವರೆಗೆ ಹೇಳುವುದಕ್ಕೆ ಹೋದರೆಂದರೆ ಸುಮ್ಮನೆ ಹರಾಜು ಕಟ್ಟಿ ಜಾಸ್ತಿ ಕೂಗಿ, ಅವರು ಕಟ್ಟುವುದಕ್ಕೆ ಆಗದೆ ಇರುವಂತ ಪರಿಸ್ಥಿತಿಯನ್ನು ನೋಡಿ ಕರೆಕ್ಟಾಗಿ ಕೊಡುವಂಥಾದ್ದು ಒಳ್ಳೆಯದೆಂದು ಲಿಖಿತ ಮೂಲಕ ಉತ್ತರ ಕೊಟ್ಟಿದ್ದಾರೆ, ನಾನು ದಾಖಲೆ ಕೊಡುತ್ತೇನೆ. ಅಂದರೆ, ನಾನು ನಿಮ್ಮನ್ನು ಕೇಳುತ್ತೇನೆ: ಯಾವುದೇ ಒಬ್ಬ ಕಂಟ್ರಾಕ್ಟರ್ ಅಥವಾ ಎಕ್ಸೈಜ್ ಇರಬಹುದು, ಮತ್ತೊಂದು ಇರಬಹುದು, ಹರಾಜಿಗೆ ಬಂದು ಕೂಗುವುದು ಅವನಿಗೆ ಗೊತ್ತಿಲ್ಲವೆ?

ಅವನ್ನು ಬ್ಯಾಂಕ್ ಡಿಪಾಜಿಟ್ ಇಡುತ್ತಾನೆ, ಬ್ಯಾಂಕ್ ಗ್ಯಾರಂಟಿ ಕೊಡುತ್ತಾನೆ. ಡಿಪಾಜಿಟ್ ಕಟ್ಟುತ್ತಾನೆ. ತಾನು ಬದುಕಬೇಕೆನ್ನುವ ಕಳಕಳಿ ಅವನಿಗೆ ಇರುತ್ತದೆ. ಎಷ್ಟು ಕೊಡಬೇಕು? ಎಷ್ಟು ಲಾಭವಾಗುತ್ತದೆ ಎಷ್ಟು ಲುಕ್ಸಾನವಾಗುತ್ತದೆ. ಎಂಬುದು ಅವನಿಗೆ ಗೊತ್ತಿಲ್ಲವೆ? ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ದೊಡ್ಡ ಪ್ರಮಾಣದಲ್ಲಿ ಹರಾಜಿನಲ್ಲಿ ಕೂಗಿ ಲಾಭ ಬಂದಿದ್ದರೂ ಅಬ್ ನಾರ್ಮಲ್ಲಾಗಿ ಬೆಳವಣಿಗೆ ಆಗಿ ಹೋಯಿತು. ಇದು ಸರಿಯಲ್ಲ ಎನ್ನುವ ಮಾತನ್ನು ಈ ರಾಜ್ಯದ ಮುಖ್ಯಮಂತ್ರಿಗಳು ಹೇಳಿದರೆ, ನಮಗೆ ಅನುಮಾನವಾಗುತ್ತದೆ. ನೀವು ಯಾರ ಜೊತೆಗೆ ಇದ್ದೀರಿ? ಏನು ಹೇಳಬೇಕೋ ನಮಗೆ ಗೊತ್ತಾಗುವುದಿಲ್ಲ. ಬಹುಶಃ ನಮ್ಮ ಕಾಂಗ್ರೆಸ್ ಪಕ್ಷದ ಸ್ನೇಹಿತರಿಗೆ ಸಿಟ್ಟು ಬರಬಹುದು. ಆದರಲ್ಲಿ ಸುಮಾರು 200 ಕೋಟಿ ರೂಪಾಯಿಗಳನ್ನು ಬರುವಂಥದ್ದನ್ನು ನೀವು

ಮಾಡಿದಿರಿ. ನಾನು ಇದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಬೆಂಗಳೂರು ಒಂದರಲ್ಲಿಯೇ 1990-91ರ ಜೂನ್‌ನಲ್ಲಿ ಹರಾಜಾದಾಗ 6 ಕೋಟಿ 87 ಲಕ್ಷಕ್ಕೆ ಹರಾಜಾಗಿದೆ. ಈ ಸಲ ಹರಾಜಾದುದು ಕೇವಲ 4 ಕೋಟಿ 11 ಲಕ್ಷಕ್ಕೆ ಎಷ್ಟು ವ್ಯತ್ಯಾಸವಾಗಿದೆ? 15 ಪರ್ಸೆಂಟ್ ಏರಿಕೆಯಾಗಿದ್ದರೆ ಬೆಂಗಳೂರು ಮಹಾನಗರ ಒಂದರಲ್ಲಿಯೇ 50 ಕೋಟಿ ರೂಪಾಯಿ ಎಕ್ಸೈಜ್‌ನಲ್ಲಿ ಒಂದು ವರ್ಷಕ್ಕೆ ಸರ್ಕಾರದ ಬೊಕ್ಕಸಕ್ಕೆ ತುಂಬಬಹುದಾಗಿತ್ತು. ಅತ್ತ ಕಡೆ ನೀವು ಕಳಕಳಿ ತೋರಲಿಲ್ಲ. ಇದರ ಪರಿಣಾಮ ಇವೊತ್ತು ಸರ್ಕಾರದ ಬೊಕ್ಕಸಕ್ಕೆ ಬರುವಂಥ ಹಣ ಲೂಟಿಯಾಗಿದೆ. ಮತ್ತು ಗ್ರಾನೈಟ್ ಕಲ್ಲಿನ ಬಗ್ಗೆ ಹೇಳಬೇಕೆಂದರೆ ಅದರ ವಿವರಣೆಗೆ ಬಂದಾಗ ಹೇಳುತ್ತೇನೆ. ಅದರ ಬಗ್ಗೆ ಸರಿಯಾದ ಬಿಗಿ ನೀತಿಯನ್ನು ತೆಗೆದುಕೊಂಡರೆ ಸರ್ಕಾರದ ಬೊಕ್ಕಸಕ್ಕೆ ಹಣ ಬರಬಹುದು. ಹಣವನ್ನು ತುಂಬಲು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಕನಿಷ್ಠ 4 ಕೋಟಿ ರೂಪಾಯಿಗಳು ಪ್ರತಿ ವರ್ಷ ಹರಾಜಿನ ಮೂಲಕ ಆದಾಯ ಬರುವುದಕ್ಕೆ ಸಾಧ್ಯವಿದೆ. ಬೆಲೆ ಏರಿಕೆಯಾಯಿತು. ಕಮರ್ಷಿಯಲ್ ಟ್ಯಾಕ್ಸ್ ಒಂದರಲ್ಲಿಯೇ ನಿಮ್ಮ ಸರ್ಕಾರ ನಿರೀಕ್ಷೆ ಮಾಡಿದ್ದಕ್ಕಿಂತ 500 ಕೋಟಿ ರೂಪಾಯಿ ಹೆಚ್ಚಿನ ಆದಾಯ ಈ ಸಲ ಬಂದಿದೆ. ಮುಂದಿನ ವರ್ಷ ಸರಿಯಾದ ಬಿಗಿಕ್ರಮ ತೆಗೆದುಕೊಂಡರೆ ಒಂದು ಸಾವಿರ ಕೋಟಿಯನ್ನು ದಾಟಬಹುದು. ನೀವು ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣವನ್ನು ಸರಿಯಾಗಿ ತುಂಬುವಂಥ ಪ್ರಯತ್ನ ಮಾಡಿದರೆ ಒಳ್ಳೆಯದಾಗುತ್ತದೆ. ನೀವು ಕೊಟ್ಟಿರುವ ಉತ್ತರದ ಪ್ರಕಾರ ಅನೇಕ ದೊಡ್ಡ ದೊಡ್ಡ ಕೈಗಾರಿಕಾ ಮಾಲೀಕರಿಂದ ತೆರಿಗೆ ಬಾಕಿ ಬರಬೇಕಾಗಿದೆ. ಕೆ.ಇ.ಬಿ. ಯಿಂದ ನಮಗೆ ಬರಬೇಕಾಗಿರತಕ್ಕ ಬಾಕಿ 400 ಕೋಟಿಗಳಿಗೂ ಜಾಸ್ತಿ ಎಂದು ಕೊಟ್ಟಿದ್ದಾರೆ. ಕೋರ್ಟಿನಲ್ಲಿರತಕ್ಕ ತಕರಾರುಗಳಲ್ಲಿ ಸುಮಾರು 300 ಕೋಟಿ ರೂಪಾಯಿಗಳ ಬಾಕಿ ಇದೆ. ಈ 300 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಲು ಪ್ರಯತ್ನವಾಗಿಲ್ಲ. ಇದನ್ನು ವಸೂಲಿ ಮಾಡಿದರೆ ರೈತರ ಸಾಲ ಮನ್ನಾ ಮಾಡಲು ಈ ವರ್ಷದ ಬಜೆಟ್ ನಲ್ಲಿಯೇ ಸಾಧ್ಯವಾಗಬಹುದಾಗಿತ್ತು. ಕೃಷ್ಣ-ಕಾವೇರಿಯ ಅಭಿವೃದ್ಧಿಗೋಸ್ಕರ 1000 ಕೋಟಿ ರೂಪಾಯಿಗಳನ್ನು ತೆಗೆದಿಡಬಹುದು. ವಿದ್ಯುತ್ ಅಭಿವೃದ್ಧಿ ಗೋಸ್ಕರ ಪವರ್ ಜನರೇಷನ್ ಸ್ಟೇಷನ್ ಅಭಿವೃದ್ಧಿ ಗೋಸ್ಕರ ಅದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದುದರಿಂದ ಈ ದಿಕ್ಕಿನಲ್ಲಿ ವಿಶೇಷವಾದಂಥ ಒಂದು ಕಾರ್ಯಕ್ರಮವನ್ನು ತಾವು ರೂಪಿಸಬೇಕು, ಇದರಲ್ಲಿ ಹಣವನ್ನು ತೊಡಗಿಸಬೇಕು ಎನ್ನತಕ್ಕಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲು ಇಚ್ಛಿಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ನಿನ್ನೆದಿನ ತುಂಬಾ ನೋವಾಗತಕ್ಕ ಮಾತುಗಳನ್ನು ನಮ್ಮ ಕಾಂಗ್ರೆಸ್‌ನ ಸ್ನೇಹಿತರು ರಾಮ ಮಂದಿರದ ಒಂದು ಪ್ರಸ್ತಾವನೆ ಬಂದಾಗ ಹೇಳಿದರು. ನಾನು ಅದಕ್ಕೆ ಸಂಬಂಧ ಪಟ್ಟವನೆಂದು ಹೇಳುವುದಕ್ಕೆ ಹೆಮ್ಮೆಪಡುತ್ತೇನೆ. ನಾನು ನನ್ನ ಜವಾಬ್ದಾರಿಯಿಂದ ಹಿಂದೆ ಸರಿಯಲು ಇಚ್ಛೆ ಪಡುವುದಿಲ್ಲ. ಅದು ನನ್ನ ಕರ್ತವ್ಯ. ಈ ಸದನದಲ್ಲಿ ನಾಡಿನ ಜನತೆಗೆ ತಮ್ಮ ಕಲ್ಪನೆ ಬರುವ ರೀತಿಯಲ್ಲಿ ಮಾತನಾಡಿದ್ದಾರೆ, ಯಾವುದೋ ಒಂದು ಸಂದರ್ಭ ಬಂದಾಗ ಮಾನ್ಯ ವಿನಯಕುಮಾರ್ ಸೊರಕೆಯವರು ಎದ್ದುನಿಂತು ರಾಮಮಂದಿರ ಒಂದು ಸಂದರ್ಭದಲ್ಲಿ ವಸೂಲಿ ಮಾಡಿದಂಥ ಹಣವನ್ನು ಏನು ಮಾಡಿದಿರಿ. ನೀವು ಅದರ ಏಜೆಂಟರು ಎನ್ನತಕ್ಕಂಥ ಮಾತನ್ನು ಹೇಳಿದರು. ಶ್ರೀಮಾನ್ ಆರ್.ಎನ್. ನಾಯಕ್ ರವರು ರಾಮನ ಗುಡಿಯನ್ನು ಕಟ್ಟುತ್ತೇವೆಂದು ಹೇಳಿ ಹಣ ವಸೂಲಿ ಮಾಡಿ ಲೆಕ್ಕವನ್ನು ಕೊಟ್ಟಿಲ್ಲ. ಲೆಕ್ಕವನ್ನು ಕೇಳಿದರೆ ಹೊಡೆಯಲು ಗುಂಡಾಗಳನ್ನು ಬಿಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದರು. ರಾಮಮಂದಿರವನ್ನು ಕಟ್ಟುವ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿ ಮಾಡಿದ್ದಾರೆಂದು ಶ್ರೀಮಾನ್ ನಂಜಪ್ಪನವರು ಹೇಳಿದರು. ಸ್ವಾಮಿ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅಯೋಧ್ಯೆಯಲ್ಲಿ ರಾಮಜನ್ಮಭೂಮಿಯ ಸ್ಥಾನದಲ್ಲಿ ರಾಮಮಂದಿರವನ್ನು ಕಟ್ಟತಕ್ಕ ಪ್ರಶ್ನೆಯು ಕೇವಲ ಯಡಿಯೂರಪ್ಪನವರದು, ಲಾಲ್‌ಕೃಷ್ಣಅದ್ವಾಣಿಯವರದು ಎಂದು ನಾನು ಭಾವಿಸುವುದಿಲ್ಲ. ಇದು ದೇಶದ 80 ಕೋಟಿ ಭಾರತೀಯರ ಶ್ರದ್ಧೆಯ ಪ್ರಶ್ನೆ ಎಂದು ನಾನು ಭಾವಿಸಿದ್ದೇನೆ.

ಒಬ್ಬ ಮಾನ್ಯ ಸದಸ್ಯರು :- ಇದರಲ್ಲಿ ನಾನು ಸೇರಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಇಲ್ಲ ಎಂದು ಹೇಳಿಬಿಡಿ. ನೀವು ಸೇರಿಲ್ಲ ಎಂದರೆ ನಮ್ಮದೇನು ಅಭ್ಯಂತರವಿಲ್ಲ.

ಪ್ರೊ। ಎಂ.ಡಿ. ನಂಜುಂಡಸ್ವಾಮಿ :- 80 ಕೋಟಿ ಜನರಲ್ಲಿ ನನ್ನದು ಸೇರಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಈಲ್ಡ್ ಆಗಿಲ್ಲ. ದಯಮಾಡಿ ಕ್ಷಮಿಸಿ.

(ಗೊಂದಲ)

ಪ್ರೊ। ಎಂ.ಡಿ. ನಂಜುಂಡಸ್ವಾಮಿ :- 80 ಕೋಟಿಯಲ್ಲಿ ನನ್ನನ್ನು ಸೇರಿಸಲು ನಿಮಗೆ ಹಕ್ಕಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :-ನೀವು ಭಾಷಣ ಮಾಡಬೇಕಾದರೆ ಅದನ್ನು ಹೇಳಿ ಆಗ ನಾನು ಅದನ್ನು ವಿರೋಧ ಮಾಡುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ :- ಅಯೋಧ್ಯೆಯಲ್ಲಿ ರಾಮ ಹುಟ್ಟಿದ್ದ ಎಂದರೆ ತಪ್ಪಾಗುತ್ತದೆ. ತ್ರೇತಾಯುಗದಲ್ಲಿ ಆ ನಂಬಿಕೆ ಇತ್ತೊ ಏನೋ ನಾವು ಈಗ ತ್ರೇತಾಯುಗದಿಂದ,ದ್ವಾಪರಯುಗದಿಂದ, ಕಲಿಯುಗದಲ್ಲಿದ್ದೇವೆ. ದೇಶದ ಇಡೀ 80 ಕೋಟಿ ಜನರು ಇದರಲ್ಲಿದ್ದಾರೆಂದರೆ ಸರಿಯಲ್ಲ. ಈಗ ರಾಮನಿದ್ದನೆಂಬುದು ನಿಮ್ಮ ನಂಬಿಕೆ. ನಮ್ಮ ನಂಬಿಕೆಯ ಮಾತು ಬೇರೆಯಾಗುತ್ತದೆ. ಇವರು ಎಲ್ಲಿ ಗರ್ಭಗುಡಿಯನ್ನು ಕಟ್ಟುತ್ತೇವೆ, ಎಲ್ಲಿ ರಾಮನನ್ನು ಪ್ರತಿಷ್ಠಾಪನೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರಲ್ಲ ಅದೇ ಜಾಗದಲ್ಲಿ ರಾಮ ಹುಟ್ಟಿದ್ದ ಎನ್ನುವುದಕ್ಕೆ ಏನಾದರೂ ದಾಖಲೆಗಳು ಇವೆಯೇ?

(ಗೊಂದಲ)

ಆ ವಿಷಯ ನಿಮಗೂ ಗೊತ್ತಿಲ್ಲ, ಈಶ್ವರಪ್ಪನವರಿಗೂ ಗೊತ್ತಿಲ್ಲ ಮತ್ತು ಪೂಜಾರಿಯವರಿಗೂ ಗೊತ್ತಿಲ್ಲ. ಮೂವರಿಗೂ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ :- ಈ ಭೂಮಿಯಲ್ಲಿ ಯಾರ್‍ಯಾರು ಇದ್ದಾರೊ ಅವರೆಲ್ಲರಿಗೂ ಗೊತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ :- ಆ ಸ್ಥಳವನ್ನು ಹೇಳಿದರೆ ನಾವು ಒಪ್ಪಿಕೊಳ್ಳಬಹುದು, ಒಪ್ಪಿಕೊಳ್ಳಲು ಆಗುವುದಿಲ್ಲವೆಂದು ಹೇಳುವುದಿಲ್ಲ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :- ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮತ್ತು ನನ್ನ ಬಿಜೆಪಿಯ ಸ್ನೇಹಿತರಿಗೆ ನಾನು ಕೊಡತಕ್ಕ ಸಲಹೆ ಈ ಭಾರತದ ಜನಸಂಖ್ಯೆಯೊಳಗೆ ಕೆಲವರು ಈ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿದರೆ ಅದು ಸಮಜಾಯಿಷಿಯಾಗುತ್ತದೆ. ನನ್ನಂಥವರನ್ನು ಈ 80 ಕೋಟಿ ಜನರಲ್ಲಿ ಸೇರಿಸತಕ್ಕ ಹಕ್ಕು ಅವರಿಗೆ ಇಲ್ಲ. ಏಕೆಂದರೆ ಈ ಹಿಂದೆಯೆ ನಾನು ಈ ಸದನದಲ್ಲಿ ರಾಮನ ಬಗ್ಗೆ ರಾಮ ಪೂಜೆಗೆ ಯೋಗ್ಯವಲ್ಲದ ವ್ಯಕ್ತಿ ಎಂದು ಹೇಳಿದ್ದೇನೆ. ನಾನು ಒಟ್ಟಿಗೆ ಕೆಲಸ ಮಾಡಿದವನಲ್ಲ. ವಾಲ್ಮೀಕಿ ರಾಮಾಯಣದ ಉಲ್ಲೇಖಗಳನ್ನು ಬೇಕಾದರೆ ತಂದು ಇಲ್ಲಿ ಮಂಡಿಸುತ್ತೇನೆ. ರಾಮ, ರಾಮಾಯಣದ ಚರಿತ್ರೆಯನ್ನು, ರಾಮನ ವ್ಯಕ್ತಿತ್ವ ಏನಿತ್ತು ಎನ್ನುವುದರ ಬಗ್ಗೆ ವಾಲ್ಮೀಕಿ ಬರೆದಿರುವ ರಾಮಾಯಣವನ್ನೇ ತಂದು ತಮಗೆ, ಸಭೆಗೆ ತಿಳಿಸುತ್ತೇನೆ. ಆದುದರಿಂದ ಶ್ರೀಮಾನ್ ಯಡಿಯೂರಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರ ಲೆಕ್ಕದಲ್ಲಿ ನನ್ನನ್ನು ಸೇರಿಸಬೇಡಿ ಎಂದು.

ಶ್ರೀ ಸಿ.ಬೈರೇಗೌಡ :-ಈ ರಾಮಾಯಣದ ಜೊತೆಗೆ ಈ ದೇಶದಲ್ಲಿ ತ್ರಿಮಾಯಣವು ಕೂಡ ಇದೆ.

ಅಧ್ಯಕ್ಷರು :- ಈ ಗೌರ್ನರ್ಸ್ ಅಡ್ರೆಸ್‌ನಲ್ಲಿ ವಾಲ್ಮೀಕಿ, ರಾಮಾಯಣ ಏನೂ ಇಲ್ಲ. ನಾನು ಓದಿದೆ, ಅದು ಏನೂ ಕಾಣಲಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ :- ರಾಜ್ಯಪಾಲರ ಭಾಷಣದಲ್ಲಿ ಆರಾಧನಾ ಸ್ಕೀಮ್ ಕೂಡ ಇದೆ. ಈ ಆರಾಧನಾ ಸ್ಕೀಮ್‌ನಲ್ಲಿ ಬರುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- ಈ ಸಭೆ ಸಂಪೂರ್ಣ ರಾಮಾಯಣವಾಗಿ ಹೋದರೆ ಪರಿಸ್ಥಿತಿ ಏನು?

ಅಧ್ಯಕ್ಷರು :- ಈ 80 ಕೋಟಿ ಜನರಲ್ಲಿ ನಿಮ್ಮನ್ನು ತೆಗೆದು ಹಾಕಿದ್ದಾರೆ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇದಕ್ಕೆ ಖಂಡಿತ ನನ್ನ ವಿರೋಧವಿಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಇದಕ್ಕೆ ಸಾಕ್ಷಿ ಆಧಾರಗಳನ್ನು ತರುವುದಕ್ಕೆ ಬರುವುದಿಲ್ಲ. ಇದು ನಂಬಿಕೆಯ ಪ್ರಶ್ನೆ, ನಾವು ನಂಬಿಕೆ ಇಟ್ಟುಕೊಂಡಿರತಕ್ಕಂಥ ನಾಡಿನಲ್ಲಿ ಹುಟ್ಟಿದಂತವರು. ಸಾವಿರಾರು ಸಾಧುಸಂತರು ಇದನ್ನೇ ಹೇಳಿಕೊಂಡು ಬಂದರು. ನಮ್ಮಪ್ಪ ಈ ಒಂದು ಸ್ಥಾನದಲ್ಲಿ ಪ್ರಭು ಶ್ರೀರಾಮಚಂದ್ರನ ಜನ್ಮಸ್ಥಾನವಿತ್ತು ಎಂದು ಅದನ್ನು ಪೂಜೆ ಮಾಡಿಕೊಂಡು ಬಂದರು. ಆ ವ್ಯಕ್ತಿಯ ಪೂಜಾ ಸ್ಥಾನದಲ್ಲಿ ಪುಣ್ಯ ಜನ್ಮಸ್ಥಾನದಲ್ಲಿ ಯಾರೋ ಆಕ್ರಮಣಕಾರರು ದೇವಸ್ಥಾನವನ್ನು ಒಡೆದು ಹಾಕುವಂತಹ ಪ್ರಯತ್ನ ಮಾಡಿದರು. ಇದೇ ಪೂಜೆ ಇವತ್ತು ಅಲ್ಲಿ ನಡೆಯುತ್ತಾ ಇದೆ. ಇದು ನಂಬಿಕೆಯ ಪ್ರಶ್ನೆ, ಪ್ರಶ್ನೆ ಎಲ್ಲಿಗೆ ಬರುತ್ತೆ? ಯಾರ ಮಗನಪ್ಪ ನೀನು ಎಂದರೆ, ನಮ್ಮ ತಾಯಿ ಹೇಳಿದಳಪ್ಪ, ಇವನು ನಿಮ್ಮ ತಂದೆ ಎಂದು. ಆದು ನಮ್ಮ ತಾಯಿ ಹೇಳಿದ ಮಾತನ್ನು ನಂಬಿದ್ದೇನೆ. ನಾನು ಅಂದುಕೊಂಡಿದ್ದೇನೆ, ಇದು ಜನ್ಮಸ್ಥಾನವೆಂದು, ಪೂಜ್ಯರು, ಹಿರಿಯರು, ಸಾಧು ಸಂತರು ಏನು ಹೇಳಿದರು, ಪ್ರತಿಯೊಂದಕ್ಕೂ ದಾಖಲೆ ಮಾಡುವುದಕ್ಕೆ ಹೋದರೆ ಅದು ಆಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ತುಂಬಾ ಗೌರವದಿಂದ ನಾನು ಹೇಳುತ್ತೇನೆ. ಇದು ನಂಬಿಕೆಯ ಪ್ರಶ್ನೆ. ಇಲ್ಲಿ ಏನೆಂದರೆ ಅನೇಕ ವಿಷಯಗಳ ಬಗ್ಗೆ ನಾವು ಅಲ್ಲಿ ಏನು ಹೋಗಿ ಓದುವುದಿಲ್ಲ. ಇಷ್ಟೇ ಮಾತು ಹೇಳುತ್ತೇನೆ. ಎರಡನೆಯದಾಗಿ ನೀವು ನಂಬಿ ಎಂದು ನಾನು ಹೇಳುತಿಲ್ಲ ನಾನು ಹೇಳುತ್ತೇನೆ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಅಲ್ಲಿ ರಾಮಮಂದಿರ ಕಟ್ಟುವ ಅಗತ್ಯವಿಲ್ಲ. ರಾಮ ಸರಿಯಿಲ್ಲ, ಆ ಜನ್ಮಸ್ಥಾನ ಅಲ್ಲಿ ಇಲ್ಲ, ಕಟ್ಟಡ ಕಟ್ಟಬೇಡಿ ಎಂದು ಹೋರಾಟ ಮಾಡಿ, ನಮ್ಮದು ವಿರೋಧವಿಲ್ಲ. ಆದರೆ ನಾಡಿನ ಈ ದೇಶದ ಜನ ಇವತ್ತು ಏನು ಪ್ರಭು ಶ್ರೀರಾಮಚಂದ್ರನ ಜನ್ಮಸ್ಥಾನ ಅದೇ ಎಂದು ಹೇಳಿದ್ದನ್ನು ಕೇಳಿ, ನಾವು ಮಾಡುವುದಕ್ಕೆ ಹೊರಟ್ಟಿದ್ದೇವೆ. ಇದನ್ನೆ ಅಡ್ಡಿ ಮಾಡುವುದಕ್ಕೆ ಹೋದವರ ಪರಿಸ್ಥಿತಿ ಏನಾಯಿತು? ಇದರ ಬಗ್ಗೆ ಯೋಚನೆ ಮಾಡಿ ಉತ್ತರ ಪ್ರದೇಶದ ಸರ್ಕಾರ ಏಕೆ ಹೋಯಿತು? ಈಗಾಗಲೇ ಅನೇಕ ರಾಜ್ಯಗಳು ಹೋಗಿವೆ, ಅಡ್ರೆಸ್ ಇಲ್ಲದೆ ಬಹುಮತವಿಲ್ಲದೆ ಕೇಂದ್ರದಲ್ಲಿ ಸರ್ಕಾರ ನಡೆಸುವಂತಹ ಒಂದು ಪರಿಸ್ಥಿತಿ ನಿಮಗೆ ಒದಗಿ ಬಂದಿದೆ. ದೇಶದಲ್ಲಿ ಪ್ರಧಾನಿಗಳು ಹೇಳುತ್ತಿದ್ದಾರೆ ವಿರೋಧಪಕ್ಷಗಳನ್ನು ನಂಬಿಕೊಂಡು ನಾನು ಅಧಿಕಾರ ನಡೆಸುತ್ತಿದ್ದೇನೆಯೇ ಹೊರತು ನಿಮ್ಮನ್ನು ನಂಬಿಕೊಂಡು ನಡೆಯುತ್ತಿಲ್ಲವೆಂದು. ಅಂದರೆ ಈ ನಮ್ಮ 44ನೇ ಕಾಂಗ್ರೆಸ್ ರಹಿತ ಇತಿಹಾಸವನ್ನು ತೆಗೆದು ನೋಡಿದಾಗ ನಿಮ್ಮ ಈ ರೀತಿಯ ವರ್ತನೆಯಿಂದ ಈ ದೇಶವನ್ನು ಯಾವ ಒಂದು ಆಧಾರದ ಮೇಲೆ ಕೊಡಬೇಕು, ಇಂದಿನ 80 ಕೋಟಿ ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳದೇ ಕೇವಲ ಓಟಿಗೋಸ್ಕರ, ಕೇವಲ ರಾಜಕಾರಣ ಮಾಡುವುದಕ್ಕೋಸ್ಕರ ನಿಮ್ಮದೇ ಆದಂತಹ ರೀತಿ ನೀತಿಗಳನ್ನು ಅನುಸರಿಸಿಕೊಂಡು ಬಂದರೆ ಇದರ ಪರಿಣಾಮವೇನಾಯಿತು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನಾವು ಇವತ್ತು ಯಾವ ಹಂತಕ್ಕೆ ಹೋಗಿದ್ದೇವೆ ಅದನ್ನು ಹೇಳಲಿಕ್ಕೆ ಇಷ್ಟಪಡುವುದಿಲ್ಲ.

ಡಾ: ವೈ. ನಾಗಪ್ಪ :- ಅಧ್ಯಕ್ಷರೇ.....

ಅಧ್ಯಕ್ಷರು :- ಬೇಸಿಕ್ ಸ್ಪೀಕರ್ ಪಾರ್ಲಿಮೆಂಟ್ ಫ್ಲೋರನ್ನು ಹಿಡಿದುಕೊಂಡಿರುವಾಗ, ಅವರು ಈಲ್ಡ್ ಆದರೆ ನೀವು ಮಧ್ಯೆ ಪ್ರವೇಶ ಮಾಡುವುದಕ್ಕೆ ಅನುಮತಿ ಇದೆಯೆಂದು ಭಾವಿಸುತ್ತೇನೆ.

ಡಾ: ವೈ. ನಾಗಪ್ಪ :- ಅವರು ಹೀಲ್ಡ್ ಆಗುವುದಿಲ್ಲ.

ಅಧ್ಯಕ್ಷರು:- ಹಾಗಾದರೆ ನೀವು ಹಾಗೆಯೇ ಕುಳಿತಿರಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ರಾಮಮಂದಿರ ಕಟ್ಟುತ್ತೇವೆಂದು ಕಲೆಕ್ಟ್ ಮಾಡಿದ ದುಡ್ಡು ಎಲ್ಲಿ ಹೋಯಿತು. ಅದು ದುರುಪಯೋಗವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಹೇಳುತ್ತೇನೆ. ರಾಮಮಂದಿರ ಶಿಲಾನ್ಯಾಸಕ್ಕಾಗಿ ಸುಮಾರು 8 ಕೋಟಿ ರೂಪಾಯಿ ಸಂಗ್ರಹವಾಗಿದೆ. ಆ 8 ಕೋಟಿ ರೂಪಾಯಿ ಸಂಗ್ರಹವಾಗಿದ್ದು ಬ್ಯಾಂಕಿನಲ್ಲಿದೆ. ನಾನು ಹೇಳುವಂತಾದ್ದು ಇಷ್ಟೇ, ನಿಮ್ಮ ಬಗ್ಗೆ ಜನ ನಂಬಿಕೆ ಕಳೆದುಕೊಂಡಿದ್ದಾರೆಂದರೆ, ಆದರೆ ನನ್ನ ಬಗ್ಗೆ ಇರುವ ನಂಬಿಕೆಯನ್ನು ಹಾಳು ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ. ಅದಕ್ಕೆ ಸಲಹೆ ಏನು ಎಂದು ಖಂಡಿತ ಇದನ್ನು ಬಹಿರಂಗ ಮಾಡುವಂತದ್ದು ನಿಮ್ಮ ಕರ್ತವ್ಯವಿದೆ. ಅದಕ್ಕೆ ಕಾಂಗ್ರೆಸ್ ಸ್ನೇಹಿತರು ಹೇಳುವಂಥಾದ್ದಕ್ಕೆ ಸತ್ಯ ಶೋಧನಾ ಮಂಡಳಿಯನ್ನು ರಚನೆ ಮಾಡಿ, ಆಗ ನೋಡಿ ನಾವು ಸಂಗ್ರಹ ಮಾಡಿರುವ ಹಣವೆಷ್ಟು ಎಲ್ಲಿ ಇದೆ?

ಇದು ರಾಮಮಂದಿರ ಕಾರ್ಯಕ್ಕಾಗಿ ಬಿಟ್ಟು ಇನ್ನೊಂದಕ್ಕೆ ಒಂದು ರೂಪಾಯಿಯಾದರೂ ಕರ್ಚಾಗಿದೆಯೆಂದರೆ ನಾನು ರಾಜಕೀಯದಿಂದ ನಿವೃತ್ತಿ ಹೊಂದುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಅವರು ಏನಾಗಿದ್ದಾರೆಂದರೆ ಶ್ರೀ ರಾಮ, ಶ್ರೀರಾಮ ಅಂತ ಹೇಳಿ ರಾಮನ ಜಗತ್ತಿನಲ್ಲೇ ಇದ್ದಾರೆ. ರಾಮನ ಜಗತ್ತಿನಲ್ಲಿ ಏನಾಗಿದೆಯೆಂದರೆ ಒಬ್ಬ ಅಗಸ ಎಲ್ಲೋ ದಾರಿಯಲ್ಲಿ ಏನೋ ಹೇಳಿದ ಎಂದು ಕೇಳಿ ಶ್ರೀರಾಮಚಂದ್ರ ತನ್ನ ಧರ್ಮಪತ್ನಿಯನ್ನೇ ಕಾಡಿಗೆ ಕಳಿಸಿಬಿಟ್ಟನು. ಅವರು ಏನೋ ಅಲ್ಲಿ ಇಲ್ಲಿ ಸುದ್ದಿ ಕೇಳಿರಬೇಕು. ಅದಕ್ಕೆ ರಾಮನ ಜಗತ್ತಿನಲ್ಲೇ ಇದ್ದಂತವರಿಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಲೆಕ್ಕ ಪರಿಶೋಧನಾ ಮಂಡಲಿ ರಾಮನ ಜಗತ್ತಿನಲ್ಲಿ ಮಾಡಿಯೇ ಇಲ್ಲ. ಒಬ್ಬ ಮಾತು ಕೇಳಿದ ಎಂದು ಹೀಗೆ ಹೇಳಿದರೆ ಹೇಗೆ? ಆದ್ದರಿಂದ ಇದೆ, ಅಂತ ಹೇಳಿದರೆ ವನ್ ಶುಡ್ ಬಿ ಅದು ಕೂಡ ರಾಮನ ಹೆಸರು ಹೇಳಿದ ಮೇಲೆ ಯಾವುದೇ ಒಂದು ಅನುಮಾನಕ್ಕೆ ಆಸ್ಪದಕೊಡಬಾರದು ಎಂದು ಹೇಳಿ ಅಷ್ಟೇ ತಾತ್ಪರ್ಯ ಅದರ ಮೇಲೆ ವ್ಯಾಖ್ಯಾನ ಏಕೆ?

ಅಂದು ಶ್ರೀರಾಮನಿಗೆ ಸ್ವಲ್ಪ ಅನುಮಾನ ಬಂದತಕ್ಷಣ ಆರೀತಿ ಮಾಡಿದ. ಅವನ ಉದ್ದೇಶ ಏನಿತ್ತು ಎಂದರೆ, ಒಂದು ಉನ್ನತ ಸ್ಥಾನದಲ್ಲಿ ರಾಜನ ಸ್ಥಾನದಲ್ಲಿದ್ದಂಥ ವ್ಯಕ್ತಿ, ಪ್ರಜೆಗಳು ಒಂದು ಸಣ್ಣ ತಪ್ಪನ್ನು ಹುಡುಕಿದರೂ ಕೂಡ ಆ ಜನರಿಗೆ ಸತ್ಯಸಂಗತಿ ಮನದಟ್ಟು ಮಾಡಿಕೊಳ್ಳುವಂಥ ಒಂದು ದೊಡ್ಡ ಕಾರ್ಯವನ್ನು ಶ್ರೀರಾಮ ಮಾಡಿದ. ಇದು ನಿಮಗೆಲ್ಲಿ ಅನ್ವಯವಾಗುತ್ತದೆ? ನಿಮಗೆ ಆ ಪ್ರಶ್ನೆ ಇಲ್ಲ. ಸ್ವಾಮಿ, ನಾನು ಬೋಫರ್ಸ್ ಹಗರಣವನ್ನು ಪ್ರಸ್ತಾಪ ಮಾಡಬಹುದಲ್ಲವೆ? ನಾನು ಮಾಡಿದೇನೆ? ಏಕೆಂದರೆ ಇದಕ್ಕೆ ಸೀಮಿತವಾದಂಥ ವಿಷಯ ಅಲ್ಲ. ಈ ಚೌಕಟ್ಟಿನಲ್ಲಿ ನಾವು ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಬೋಫರ್ಸ್ ಹಗರಣದ ಬಗ್ಗೆ ಸ್ವೀಡನ್‌ನವರು ಏನು ಹೇಳಿದ್ದಾರೆ, ಸ್ವಿಡ್ಜರ್‌ಲೆಂಡ್‌ನವರು ಏನು ಹೇಳಿದ್ದಾರೆ, 400 ಕೋಟಿ ರೂ. ಯಾರ ಖಾತೆಯಲ್ಲಿ ಇದೆ ಎಂಬುದನ್ನು ಹೇಳುತ್ತಾ ಹೋದರೆ ಅದಕ್ಕೆ ಕೊನೆಯೇ ಇಲ್ಲ. ಆದುದರಿಂದ ನಾನು ಹೇಳುತ್ತೇನೆ, ದಯವಿಟ್ಟು ಈ ಒಂದು ಚೌಕಟ್ಟಿನಲ್ಲಿ ಅನಗತ್ಯವಾಗಿ ಕೆಟ್ಟ ಹೆಸರನ್ನು ತರುವಂಥ ಪ್ರಯತ್ನವನ್ನು ನೀವು ಏನು ಮಾಡುತ್ತಿದ್ದೀರಿ ಅದು ನಿಮ್ಮಲ್ಲಿರತಕ್ಕ ಕಪ್ಪು ಕಲೆಯನ್ನು ಬೇರೆಯವರ ಮೇಲೆ ಹೊರಿಸುವಾಗ ಪ್ರಯತ್ನವನ್ನು ನೀವು ಏನು ಮಾಡುತ್ತಿದ್ದೀರಿ ಇದು ನಿಮಗೆ ಸರಿಯಲ್ಲ. ದಯವಿಟ್ಟು ಸತ್ಯಸಂಗತಿಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ನೀವು ಕೇಳತಕ್ಕದ್ದು ಸತ್ಯ ಇದೆ. ಜನರಿಗೆ ಅಲ್ಲಿ ಅನ್ಯಾಯವಾಗಿದೆ. ಅದು ಯಾವುದೇ ಸಮಸ್ಯೆ ಇರಬಹುದು. ಯಾರ ಹೆಸರಿನಲ್ಲೇ ಇರಬಹುದು, ಅದನ್ನು ಬಹಿರಂಗ ಮಾಡದೆ ಅದನ್ನು ತುಂಬಾ ಹಗುರವಾಗಿ ಈ ರೀತಿ ಮಾಡುವುದನ್ನು ಬಿಡಬೇಕೆಂದು ನಾನು ಈ ಸಲಹೆಯನ್ನು ಕೊಟ್ಟಿದ್ದೇನೆ. ಉಳಿದುದು ಮಾನ್ಯ ಅಧ್ಯಕ್ಷರಿಗೆ ಬಿಟ್ಟಿದ್ದುದು.

ಇನ್ನು ಕಾವೇರಿ ಸಮಸ್ಯೆಯ ಬಗ್ಗೆ ಒಂದೇ ಒಂದು ಸಲಹೆಯನ್ನು ಕೊಡುತ್ತೇನೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈಗ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಕಾವೇರಿ ಜಲಾನಯನ ಪ್ರದೇಶದ ವಿಚಾರ ಬಹಳ ಪ್ರಮುಖವಾದುದು. ಕಾವೇರಿ ಸಮಸ್ಯೆಗೆ ಸಂಬಂಧಪಟ್ಟಂತೆ ಟ್ರಿಬ್ಯುನಲ್ ಮುಂದೆ, ಸುಪ್ರೀಂ ಕೋರ್ಟಿನ ಮುಂದೆ ನಮ್ಮ ಸರ್ಕಾರದವರು ಹಾಜರಾಗಿ ನಮ್ಮ ಜನರಿಗೆ ನ್ಯಾಯವನ್ನು ಒದಗಿಸಿಕೊಡುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಬೇಜಾವಾಬ್ದಾರಿತನದಿಂದ ನಿಮ್ಮ ಗೊಂದಲದಲ್ಲಿ, ರಾಜಕೀಯ ಬಡಿದಾಟದಲ್ಲಿ ಅದಕ್ಕೆ ಹೆಚ್ಚಿನ ಸಮಯವನ್ನು ಮಾನ್ಯ ಮುಖ್ಯ ಮಂತ್ರಿಗಳು, ಸಂಬಂಧಪಟ್ಟ ಮಂತ್ರಿಗಳು ಕೊಡುವುದಕ್ಕಾಗದೇ ಇದ್ದುದರಿಂದ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರಪಾಟೀಲರು ಹೇಳಿದಂಥ ರೀತಿಯಲ್ಲಿ ಟ್ರಿಬ್ಯುನಲ್ ಮುಂದೆ ನಮ್ಮ ಅಡ್ವೋಕೇಟ್ ರವರು ಮಾರ್ಗದರ್ಶನ ಮಾಡಿ ಏನು ಹೇಳಬೇಕೋ, ಏನು ಹೇಳಬಾರದೋ ಎಂಬ ಬಗ್ಗೆ ಗಮನ ಕೊಡದೇ ಇದ್ದ ಪರಿಣಾಮವಾಗಿ ಇವತ್ತು ಈ ಪರಿಸ್ಥಿತಿ ಬಂದಿದೆ. ಇವತ್ತು ಎಲ್ಲರ ಒಕ್ಕೊರಲಿನ ಒಂದೇ ಒಂದು ಅಭಿಪ್ರಾಯ ಎಂದರೆ ಈ ಪರಿಸ್ಥಿತಿಯಲ್ಲಿ ಕಾವೇರಿ ನೀರಿನ ಸಮಸ್ಯೆಯನ್ನು ಕೇವಲ ಮಾತುಕತೆಯ ಮೂಲಕ ಬಗೆಹರಿಸಬೇಕೇ ಹೊರತು ಯಾವುದೇ ನ್ಯಾಯಾಲಯ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಕಾರಣ ಒಂದು ರಾಷ್ಟ್ರೀಯ ಜಲನೀತಿಯನ್ನು ಕೇಂದ್ರ ಸರ್ಕಾರ ನಿರೂಪಿಸಿಲ್ಲ. ಇಂಥ ಸಂದರ್ಭದಲ್ಲಿ ಯಾವ ಆಧಾರದಮೇಲೆ ಈ ಚರ್ಚೆಯನ್ನು ಮಾಡಬೇಕು, ಇದರ ಟರ್ಮ್ಸ್ ಆಂಡ್ ರೆಫರೆನ್ಸ್ ಏನಿದೆ ಅದು ಗೊತ್ತಾಗದೇ ಇರುವುದ್ದರಿಂದ ಮಾತುಕತೆ ಮೂಲಕವೇ ಇದು ಬಗೆಹರಿಯಬೇಕು.

ಮಾನ್ಯ ಅಧ್ಯಕ್ಷರೆ, ಮಂಡ್ಯದಲ್ಲಿ ಒಂದು ಐತಿಹಾಸಿಕ ತೀರ್ಮಾನವಾಯಿತು. ಟೀಕೆ ಟಿಪ್ಪಣಿಗಳು ಎಲ್ಲಾ ಕಡೆ ಬರಬಹುದು. ಅಲ್ಲಿಗೆ ಮಂತ್ರಿಗಳು ಬಂದಿದ್ದರು. ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಬಂದಿದ್ದರು. ಎಲ್ಲಾ ಪಕ್ಷದ ಮುಖಂಡರೂ ಬಂದಿದ್ದರು. ಅಲ್ಲಿ ಅಂಥ ಒಕ್ಕೊರಲಿನ ತೀರ್ಮಾನವಾದರೂ ಏನು ? ನಾವು ತೆಗೆದುಕೊಂಡಂಥ ತೀರ್ಮಾನ ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಒತ್ತಡವನ್ನು ತಂದು ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ಹೇಳಿದಾಗ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಜವಾಬ್ದಾರಿಯನ್ನು ಹೊತ್ತಿರತಕ್ಕ ವ್ಯಕ್ತಿ ಹೇಳುತ್ತಾರೆ, ಬಿಡುವಿಲ್ಲದ ಕಾರಣದಿಂದ ಟ್ರಿಬ್ಯುನಲ್ ಮುಂದೆ ವಾದಮಾಡಿ ನಮ್ಮ ಜನರಿಗೆ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಆಗಲಿಲ್ಲ. ಈ ಜವಾಬ್ದಾರಿಯನ್ನು ನಮ್ಮ ಎಲ್ಲಾ ಪಕ್ಷದವರೂ ತೆಗೆದುಕೊಂಡು ನಮ್ಮ ಪಕ್ಷದ ಎದುರಿಗೆ ನಾವು ತೀರ್ಮಾನ ತೆಗೆದುಕೊಂಡಾಗ ಕೊನೆಯಪಕ್ಷ ಬಾಯಿ ಮುಚ್ಚಿಕೊಂಡು ಸುಮ್ಮನೆ ಇರಬಹುದಿತ್ತು. ನೀವು ಏನು ಹೇಳಿದಿರಿ, ಇದಕ್ಕೆ ನಾನು ಬದ್ಧನಲ್ಲ ಎಂದು, ಇದು ಸರಿಯಲ್ಲ. ಪ್ರತಿಯೊಬ್ಬರಿಗೂ ಇದು ಗೊತ್ತಿದೆ. ಮಂಡ್ಯದಲ್ಲಿ ತೆಗೆದುಕೊಂಡ ತೀರ್ಮಾನಗಳ ಪರಿಣಾಮವಾಗಿ ಎಲ್ಲಾ ಪಕ್ಷದ ಶಾಸಕರೂ ಪಕ್ಷ ಭೇದವನ್ನು ಮರೆತು ಲೋಕಸಭಾ ಸದಸ್ಯರು, ರಾಜ್ಯದ ಉಳಿವಿಗೋಸ್ಕರ ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಎಂದರೆ ನೀವು ರಾಜೀನಾಮೆಯನ್ನು ಕೊಡಬೇಕೆಂದಲ್ಲ. ನಾವು ಈ ನಾಡಿನ ಹಿತಕ್ಕೋಸ್ಕರ ನಮ್ಮ ಎಲ್ಲಾ ಸ್ಥಾನಮಾನಗಳನ್ನೂ ಕಿತ್ತೊಗೆದು ಈ ದಿಸೆಯಲ್ಲಿ ರೈತರನ್ನು ಉಳಿಸುವುದಕ್ಕೆ ನಾವು ಸಿದ್ಧವಾಗಿದ್ದೇವೆ ಎನ್ನತಕ್ಕ ಒಂದು ಭಾವನೆಯನ್ನು ವ್ಯಕ್ತ ಪಡಿಸುವಂಥ ನಿರ್ಣಯ ಇದೆ. ಆಗ ಇದರ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಹಗುರವಾಗಿ ಮಾತನಾಡಿದರು. ಇದನ್ನು ಹೇಳತಕ್ಕದ್ದು ನನ್ನ ಕರ್ತವ್ಯ, ಇಲ್ಲದೇ ಹೋದರೆ ನಾಳೆ ಮುಂದಿನ ಪೀಳಿಗೆ ನನ್ನನ್ನು ಶಪಿಸುತ್ತಾರೆ. ಆದುದರಿಂದ ನಾನು ಹೇಳುತ್ತಿದ್ದೇನೆ. ಮಾನ್ಯ ಪ್ರಧಾನ ಮಂತ್ರಿಗಳು 17-2-1992 ರಂದು ಮಾತುಕತೆಗೆ ಕರೆದರು. ಆಗ ತಮಿಳ್ನಾಡು ಮುಖ್ಯಮಂತ್ರಿಗಳು ಅವರದೇ ಆದ ಒಂದು ನಿಲುವನ್ನು ಇಟ್ಟುಕೊಂಡು ಅಲ್ಲಿಗೆ ಹೋದಾಗ ನೀವು ಏನು ಒಂದು ಒಟ್ಟಾದ ಒಪ್ಪಂದವನ್ನು ಮಾಡಿಕೊಂಡು ಬಂದಿದ್ದೀರೋ ಅದು ಏನು?ಈ ರಾಜ್ಯದ ಎಲ್ಲಾ ಜನರ ಒಕ್ಕೊರಲಿನ ಅಭಿಪ್ರಾಯ ಎಲ್ಲಾ ಪಕ್ಷದ ಮುಖಂಡರ ಅಬಿಪ್ರಾಯ ಈ ನಾಡಿನಲ್ಲಿರತಕ್ಕ ತಜ್ಞರ ಅಭಿಪ್ರಾಯದ ಪ್ರಕಾರ ಇನ್ನು ಮಾತುಕತೆಯ ಮುಖಾಂತರವೇ ಬಗೆಹರಿಯಬೇಕೆಂಬುದು. ಇಂಥ ಸಂದರ್ಭದಲ್ಲಿ ನಿಮ್ಮ ಜಾಯಿಂಟ್ ಸ್ಟೇಟ್‌ಮೆಂಟ್‌ನಲ್ಲಿ ಏನು ಹೇಳಿದ್ದೀರಿ ಎಂದರೆ the States also agreed to facilitate expenditious completions of all proceedings before the Tribunal. ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ನಾವು ಇಷ್ಟೊಂದು ಒತ್ತಾಯ ಮಾಡಿ ಮಾತುಕತೆ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಿಮ್ಮನ್ನು ಕಳುಹಿಸಿಕೊಟ್ಟಾಗ ಈರೀತಿ ಈ ಸದನವನ್ನು ವಿಶ್ವಾಸಕ್ಕೆ ಇಟ್ಟುಕೊಂಡು ಒಂದು ನಿರ್ಣಯನ್ನು ಪಾಸ್ ಮಾಡಿ ಕೊಟ್ಟಮೇಲೂ ಸಹ ನೀವು ತಪ್ಪು ಮಾಡುತ್ತಿದ್ದೀರೆಂದು ಗೊತ್ತಿದ್ದರೂ ಸಹ ಈ ರೀತಿ ನಿಮಗೆ ಯಾವುದೇ ಕಾರಣಕ್ಕಾಗಿ ಕೆಲಸ ಮಾಡುವುದರಲ್ಲಿ ಅಡ್ಡಿ ಬರಬಾರದೆಂದು ಒಮ್ಮತದ ಒಲವನ್ನು ಕೊಟ್ಟು ನಿಮ್ಮ ಜೊತೆಯಲ್ಲಿ ಇದ್ದರೂ ಸಹ ನೀವು ಮಾತುಕತೆಗೆ ಹೋದಾಗ ನೀವು ಈ ರೀತಿ ಜಾಯಿಂಟ್ ಸ್ಟೇಟ್‌ಮೆಂಟ್ ಕೊಟ್ಟು ಒಂದು ಅಗ್ರಿಮೆಂಟ್ ಮಾಡಿಕೊಂಡು ಬಂದಿದ್ದೀರಲ್ಲ ಇದರಿಂದ ನಾಡಿನ ಹಿತಕ್ಕೆ ಧಕ್ಕೆಯಾಗಲಿಲ್ಲವೇ? ನಾಳೆ ಟ್ರಿಬ್ಯುನಲ್ ಫೈನಲ್ ರಿಪೋರ್ಟ್ ಕೊಟ್ಟರೆ ಅದರ ಒಪ್ಪಿಗೆ ಮೇಲೆ ನಾನು ಹೇಳುತ್ತಿರುವುದು.

ಶ್ರೀ ಕೆ.ಹೆಚ್. ರಂಗನಾಥ್ :- ಅದು ತೀರ್ಮಾನವಾಗಿದ್ದರೆ ಹೇಗೆ ಎಂದು ಹೇಳಿ. ಅದರಿಂದ ಯಾವರೀತಿ ತೊಂದರೆಯಾಗುತ್ತದೆನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಎರಡು ರೀತಿಯಲ್ಲಿ ತೊಂದರೆಯಾಗುತ್ತದೆ. ಒಂದು ಟ್ರಿಬ್ಯುನಲ್ ಅವರ ಮಧ್ಯಂತರ ಆಜ್ಞೆ ಏನಿದೆ ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ.

SRI K.H. RANGANATH :- I have asked him to yield. He has yielded.

ಪ್ರಶ್ನೆ ಟ್ರಿಬ್ಯುನಲ್ ಮುಂದೆ ಇದೆ. ಮತ್ತೊಂದು ನಮ್ಮ ಕೇಸ್ ಕೂಡಾ ಇನ್ನೂ ಹಾಗೆಯೇ ಇದೆ. ಹೀಗಿರುವಾಗ ಎರಡು ಪ್ರಶ್ನೆಗಳನ್ನು ತಮ್ಮನ್ನು ಕೇಳುತ್ತಿರುವುದು, ಸ್ಪಷ್ಟೀಕರಣವನ್ನು ತಿಳಿಯುವಹಾಗೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಸನ್ಮಾನ್ಯ ಹಿರಿಯ ಸದಸ್ಯರಾದ ರಂಗನಾಥರವರು ಹೇಳಿದಹಾಗೆ ಟ್ರಿಬ್ಯುನಲ್ ಮುಂದೆ ಎರಡು ಇದೆ. ಒಂದು ಮರುಪರಿಶೀಲನಾ ಅರ್ಜಿ, ಇನ್ನೊಂದು ಸೂಟ್ ಎರಡೂ ಇದೆ. ನಮ್ಮ

ಮರುಪರಿಶೀಲನಾ ಅರ್ಜಿಗೆ ಒಂದು ತೀರ್ಮಾನವಾಗುವರೆಗೆ ಮುಖ್ಯ ಅರ್ಜಿಯ ಬಗ್ಗೆ ವಾದ ಮಾಡುವುದು ಬೇಡ. ಇದು ಒಂದು. ಎರಡನೆಯದು ಅಲ್ಲಿ ಏನಾಗುತ್ತದೆ ಆಗಲಿ ನೀವು ಒಂದುಸಾರಿ ಸಂಬಂಧಪಟ್ಟ ಮುಖ್ಯಮಂತ್ರಿಗಳು ಪ್ರಧಾನಿಯವರ ಜೊತೆಗೆ ಒಂದು ಜಾಯಿಂಟ್ ಸ್ಟೇಟ್‌ಮೆಂಟ್ ಮಾಡಿ ಒಪ್ಪಿಕೊಂಡರೆ ಅದು ಏನಾಗುತ್ತದೆ ಇದು ಒಂದು. ನಾಳೆ ಟ್ರಿಬ್ಯುನಲ್ ಕೊಡತಕ್ಕಂಥ ಒಂದು ತೀರ್ಮಾನಕ್ಕೆ ತಾವು ಬದ್ಧರಾಗಿದ್ದೀರೆಂದು ಹೇಳಿದರೆ, ಇದು ನಮೆಲ್ಲರ ಅಭಿಪ್ರಾಯ, ಇದನ್ನು ಇವತ್ತು ತೀರ್ಮಾನ ಕೊಡುವುದಕ್ಕೆ ಸಾಧ್ಯವಿಲ್ಲದಿರತಕ್ಕಂಥ ಒಂದು ಸಂದರ್ಭವಿರುವುದರಿಂದ ಮಾತುಕತೆಯ ಮೂಲಕವೇ ಈ ಸಮಸ್ಯೆಯನ್ನು ಬಗೆಹರಿಸಬೇಕೆನ್ನತಕ್ಕಂಥದ್ದು ನಮ್ಮ ಸದನದ ನಿರ್ಣಯ ಮತ್ತು ಇದು ಎಲ್ಲರ ಅಭಿಪ್ರಾಯ.

ಶ್ರೀ ಆರ್.ವಿ. ದೇಶಪಾಂಡೆ :- ಮೂಲ ಪ್ರಶ್ನೆಯಲ್ಲಿ ಏನಿದೆ ಎಂದರೆ in your joint statement you have left your stand. Tamilnadu is very firm. They say,'we want decision from the Tribunal' ಟ್ರಿಬ್ಯುನಲ್ ನಲ್ಲಿ ಅದಷ್ಟು ಬೇಗ ನಿರ್ಣಯ ಮಾಡಬೇಕೆಂದು ಹೇಳುವುದಕ್ಕೆ ತಾವು ಇಲ್ಲ, ಇವತ್ತು Tamilnadu has an upper hand. ನೀವು ಮಾತುಕತೆಯಿಂದ ಬಗೆಹರಿಸಬೇಕೆಂದು ನಿಮ್ಮ ಸೂಚನೆ ಇದ್ದು, ಕರ್ನಾಟಕದವರ ಸ್ಟಾಂಡ್ ಇದ್ದು ಆ ಸ್ಟಾಂಡನ್ನು ಬಿಟ್ಟುಬಿಟ್ಟಿದ್ದಿರಿ. ಹಾಗಾಗಿ ಇವತ್ತು ತಮಿಳುನಾಡು ಅಪ್ಪರ್‌ಹ್ಯಾಂಡ್‌ನಲ್ಲಿದೆ.

ಶ್ರೀ ಕೆ.ಹೆಚ್. ರಂಗನಾಥ್ :- ನನಗೆ ಮಾನ್ಯ ಸದಸ್ಯರು ಒಂದು ಸ್ಪಷ್ಟೀಕರಣ ಕೊಡಬೇಕು. ಏತಕ್ಕೆಂದರೆ ಬಹಳ ಪ್ರಮುಖವಾದ ಪ್ರಶ್ನೆಯನ್ನು ಮಾತನಾಡುತ್ತಿದ್ದಾರೆ. ನಾಲ್ಕು ಜನ ಮಂತ್ರಿಗಳು ಸೇರಿ ಸ್ಟೇಟ್‌ಮೆಂಟ್ ಕೊಟ್ಟಿರುವುದು ಏನಿದೆ, ಅದನ್ನು ತಾವು ಒಪ್ಪಿಕೊಂಡಿರುತ್ತೀರಿ. To expedite proceedings you should help ಎನ್ನುವ ಮಾತು ಇದೆ. ಈ ಮಧ್ಯೆ ಕರ್ನಾಟಕ ರಾಜ್ಯಕ್ಕೆ ಯಾವರೀತಿ ತೊಂದರೆಯಾಗುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡುವುದಕ್ಕೆ ಸಾಧ್ಯನಾದರೆ ಅವರು ಕೊಡಲಿ, ಇಲ್ಲವಾದರೆ ಮಾನ್ಯ ಮಂತ್ರಿಗಳು ಬರಲಿ. ನಾವೆಲ್ಲರೂ ಈ ವಿಷಯವನ್ನು ನೆಗೋಷಿಯೇಟ್ ಮಾಡಲು ನಾಲ್ಕು ಜನ ಮಂತ್ರಿಗಳನ್ನು ಹೋಗಿ ಎಂದು ಕಳುಹಿಸಿದ್ದೆವು. ಅಲ್ಲಿ ನೀವು ಹೋಗಿ ಇದನ್ನು ಒಪ್ಪಿಕೊಂಡುಬಿಟ್ಟಿದ್ದೀರಿ. ಅದು ಒಂದಕ್ಕೊಂದಕ್ಕೆ ತದ್ವಿರುದ್ಧವಾಗಿದೆ, ರಾಜ್ಯದ ಹಿತಕ್ಕೆ ದಕ್ಕೆಯಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಗಳು ವಿವರಣೆ ಹೇಳುವುದಕ್ಕೆ ಸಾಧ್ಯವಾದರೆ ಹೇಳಲಿ ಇಲ್ಲದೆ ಹೋದರೆ ಮಾನ್ಯ ಮುಖ್ಯಮಂತ್ರಿಗಳು ಹೇಳುವುದಾದರೆ ಅದಕ್ಕೆ ಸ್ಪಷ್ಟೀಕರಣ ಕೊಡಲಿ. ಏತಕ್ಕೆಂದರೆ ಸರ್ಕಾರ ಮಾಡುವ ತಪ್ಪಿಗೆ ನಾವೆಲ್ಲರೂ ಹೊಣೆಗಾರರಾಗತಕ್ಕಂಥ ಪರಿಸ್ಥಿತಿ ಬರಬಹುದು. ನಮಗಿದಂತೂ ಗೊತ್ತಿಲ್ಲ. We don't know. I should not say this on the floor of the House but even then since the matter has been raised by him, I would like to know from the Hon. Minister because we have not been briefed about this also. ಅಲ್ಲಿ ಏನಾಯಿತು, ಹೇಗಾಯಿತು ಎಂದು. ಇಂಥ ಪರಿಸ್ಥಿತಿ ಇರುವಾಗ ಇದು ಬಹಳ ಗಹನವಾದ ವಿಚಾರ. ರಾಜ್ಯ ಹಿತದೃಷ್ಟಿಯಿಂದ ಇದು ಬಹಳ ಮಹತ್ವವಾದ ವಿಚಾರ. ದಯವಿಟ್ಟು ಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡಬೇಕು, ಇಲ್ಲದಿದ್ದರೆ ಮುಖ್ಯಮಂತ್ರಿಗಳು ಕೊಡಬೇಕು. ಮಾನ್ಯ ಯಡಿಯೂರಪ್ಪನವರು ಏನು ಹೇಳುತ್ತಿದ್ದಾರೆ ಅದು ಹೇಗೆ ನಮಗ ಧಕ್ಕೆ ತರುತ್ತಿದೆ?

ಶ್ರೀ ಎಂ. ವೀರಪ್ಪಮೊಯಿಲಿ:- ನ್ಯಾಯವಾಗಿ ನಾವು ಈ ಒಂದು ಜಟಿಲವಾದ ಪ್ರಶ್ನೆಯನ್ನು ಬಗೆಹರಿಸತಕ್ಕ ದೃಷ್ಟಿಯಲ್ಲಿ ಈ ವಿಚಾರದ ಬಗ್ಗೆ ಹೆಚ್ಚು ವಿಶ್ಲೇಷಣೆಯನ್ನು ಈ ಸದನದಲ್ಲಿ ಮಾಡತಕ್ಕದ್ದು, ಈ ಸದನದ ದೃಷ್ಟಿಯಲ್ಲಿ, ಕರ್ನಾಟಕ ರಾಜ್ಯದ ಹಿತದೃಷ್ಟಿಯಲ್ಲಿ ಯೋಗ್ಯವಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಕೆ.ಹೆಚ್. ರಂಗನಾಥ್:- ಯೋಗ್ಯ ಅಲ್ಲವೆಂಬ ಮಾತು ಸರಿಹೋಗಲಿಲ್ಲ.

ಶ್ರೀ ಆರ್. ದಯಾನಂದರಾವ್ :- ನಾಲ್ಕು ಮಂದಿ ಮುಖ್ಯ ಮಂತ್ರಿಗಳು ಸೇರಿ ಒಂದು ಅಗ್ರಿಮೆಂಟ್ ಮಾಡಿದ್ದೇವೆಂದು ಹೇಳಿದ್ದಾರೆ. Let us know what type of the agreement the four Chief Ministers have done.

ಶ್ರೀ ಬಿ.ಎಸ್. ಯಡಿಯೂರಪ್ಪ :- ಯಡಿಯೂರಪ್ಪನ ಬಾಯಿಯಿಂದ ಬಂದದ್ದರಿಂದ ಯೋಗ್ಯ ಅಲ್ಲವೆಂದೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ನಿಮ್ಮ ಮಾತು ಯೋಗ್ಯ ಅಲ್ಲವೆಂದು ಹೇಳಲಿಲ್ಲ, ವಿರುದ್ಧವಾಗಿ ಇಂಟರ್‌ಪ್ರಿಟೇಷನ್ ಮಾಡಿ ಏತಕ್ಕೆ ತಮ್ಮ ತಲೆ ಮೇಲೆ ಹಾಕಿಕೊಳ್ಳುತ್ತೀರಿ? ಈ ಕಾವೇರಿ ವಿವಾದದ ವಿಚಾರ ಟ್ರಿಬ್ಯುನಲ್‌ನಲ್ಲಿ ಇದೆ. ಇವತ್ತು ಹಿಯರಿಂಗ್ ಆಗುತ್ತದೆ. ಇದು ಇವತ್ತೇ ಕನ್‌ಕ್ಲೂಡ್ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ, ಬಹುಶಃ ಮುಂದುವರಿಯಬಹುದು. ಮತ್ತೊಂದು ಕಡೆ ಸುಪ್ರೀಂ ಕೋರ್ಟಿನಲ್ಲಿ ವಾದ ಇದೆ. ಇನ್ನೊಂದು ಕಡೆ ಪ್ರಧಾನ ಮಂತ್ರಿಗಳ ಮಧ್ಯಸ್ತಿಕೆ ವಹಿಸುವ ವೇದಿಕೆ ಮೇಲೆ ಇದೆ. ಮೂರು ಕಡೆಯಲ್ಲಿ ನಮ್ಮ ವಿವಾದಗಳು ಇವೆ. ಈಗ ತಮಗೆ ಗೊತ್ತಿದ್ದ ಹಾಗೆ ಯಾವುದೇ ಸಂದರ್ಭದಲ್ಲಿ ಇಡೀ ರಾಷ್ಟ್ರದ ಒಂದು ನೀರಿನ ವಿವಾದದ ದೃಷ್ಟಿಯಲ್ಲಿ ಈ ರೀತಿ ಟ್ರಿಬ್ಯುನಲ್‌ನಲ್ಲಿ ವಿಚಾರಗಳು ಇರುವುದು, ಪ್ರಧಾನಿಯವರು ಮಧ್ಯಸ್ತಿಕೆ ವಹಿಸುವಂಥ ಪ್ರಸಂಗ ಇದ್ದರೆ ಅದು ಕಾವೇರಿ ವಿವಾದ ಮಾತ್ರ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ಇಲ್ಲಿಯವರೆಗೆ ಯಾವುದೇ ಪ್ರಧಾನ ಮಂತ್ರಿಯವರು ವಿವಾದ ಟ್ರಿಬ್ಯುನಲ್‌ನಲ್ಲಿ ಇರುವಾಗ ಮಧ್ಯಸ್ತಿಕೆ ವಹಿಸಿದ ಪ್ರಸಂಗ ಇಲ್ಲ. ಇದೊಂದು ವಿಶೇಷ ಪ್ರಸಂಗ.

(ಉಪಾಧ್ಯಕ್ಷಿಣಿಯವರು ಪೀಠವನ್ನಲಂಕರಿಸಿದರು)

SHRI. R.V. DESHPANDE :- It is face saving device.

ಶ್ರೀ ಎಂ. ವೀರಪ್ಪಮೊಯಿಲಿ :- ಇದರ ಬಗ್ಗೆ ರಾಜಕೀಯ ಮಾಡುವುದು ಇದ್ದರೆ, ಸಾರಿ. I am very sorry please don't play up with waters of cauvery.

SRI R.V. DESHPANDE :- We are saying that basically you have changed your stand. What were the compulsions for the Government to change their stand unlike the Chief Minister of Tamilnadu, who was firm. Before going to meeting, she was firm. What went wrong with your Government to change your stand ?

SRI M.VEERAPPA MOILY :- You should have been involved with the discussion of the Apex Committee. ತಾವು ಆ ಕಮಿಟಿಯಲ್ಲಿ ಬಂದಿದ್ದರೆ ಪ್ರಶ್ನೆ ಎತ್ತುತ್ತಿರಲಿಲ್ಲ. Better you consult your own leaders on this becaue we had thorough discussions.

SRI P.G.R. SINDIYA :- There should not be any misunderstanding. I have made it very clear at the apex body meeting also that we had authorised the Chief Minister and also the Government to see that the matter should be settled amicably. But what is there in the joint statement which has made ? He is referring to it.

ಶ್ರೀ ಎಂ. ವೀರಪ್ಪಮೊಯಿಲಿ:- ಜಾಯಿಂಟ್ ಸ್ಟೇಟ್‌ಮೆಂಟ್ ಆದಮೇಲೆ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಈ ವಿಚಾರದಲ್ಲಿ ಏನು ನಡೆಯಿತು ಎಂದು ಮಾತುಕತೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ವಿರೋಧ ವ್ಯಕ್ತಪಡಿಸಿದ್ದೆ. ಸಭೆ ಕರೆದಾಗ ಕೂಡ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ವಿರೋಧ ವ್ಯಕ್ತಪಡಿಸತಕ್ಕ ಹಕ್ಕು ತಮಗೆ ಇದೆ. ಕಾವೇರಿ ವಿವಾದ ಸರ್ಕಾರದ ಪ್ರಶ್ನೆ ಅಲ್ಲ; ಇಡೀ ಕರ್ನಾಟಕ ರಾಜ್ಯದ ಪ್ರಶ್ನೆ. ತಾವು ನಾವು ಎಲ್ಲರೂ ಕಷ್ಟ ನಷ್ಟ ಅನುಭವಿಸಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮೊಯಿಲಿಯವರೆ, ರಾಜಕಾರಣ ಮಾಡಿದರೆ ದೊಡ್ಡ ದ್ರೋಹ ಮಾಡಿದಂತಾಗುತ್ತದೆ. ನಾಳೆ ಏನು ಹೇಳುತ್ತೀರಿ ? ಇಂಥ ಗಹನವಾದ ವಿಚಾರ ಚರ್ಚೆಗೆ ಬಂದಾಗ ಈ ರೀತಿ ಜಾಯಿಂಟ್ ಸ್ಟೇಟ್‌ಮೆಂಟ್ ಮಾಡಿದ್ದೇವೆ, ಒಪ್ಪಿಕೊಂಡು ಬಂದಿದ್ದೇವೆಂದು ಹೇಳಿದಾಗ ಇದು ಸರಿಯಲ್ಲ, ಈ ದಿಕ್ಕಿನಲ್ಲಿ ಹೋಗಬಾರದೆಂದು ಮಾರ್ಗದರ್ಶನ ಮಾಡದೆ ತಪ್ಪು ಆದಾಗ ಗೂಬೆ ಕೂರಿಸುವಪ್ರಯತ್ನ ಮಾಡುತ್ತೀರೆಂದು ಹೇಳಬೇಕಾಗುತ್ತದೆ.

ಅಧ್ಯಕ್ಷಣೆಯರೆ, ಇಲ್ಲಿ ಏನಾಯಿತು ? ಸನ್ಮಾನ್ಯ ಹಿರಿಯ ಸಚಿವರಿಗೆ ಹೇಳುತ್ತೇನೆ. ಈ ಕಡೆ ಇರುವವರ ಅಭಿಪ್ರಾಯ ಭೇದಗಳು ಇರಬಹುದು. ಆದರೆ ಒಳ್ಳೆಯದಾಗಬಹುದು ಎಂಬ ದೃಷ್ಟಿಯಿಂದ ನಿಮ್ಮ ಮಾತು ಒಪ್ಪಿಕೊಂಡು ಬಂದೆವು. ಆದರೆ ಮೊನ್ನೆ ಪ್ರಧಾನಮಂತ್ರಿಗಳು ಕರೆದ ಮುಖ್ಯಮಂತ್ರಿಗಳ ಸಭೆಗೆ ಹೋಗುವ ಮುಂಚೆ ವಿರೋಧ ಪಕ್ಷದವರ ಸಭೆ ಕರೆದಿದ್ದರು. ನಾನು ಅನಿವಾರ್ಯ ಕಾರಣಗಳಿಂದ ಬಂದಿರಲಿಲ್ಲ, ನಮ್ಮವರು ಬಂದಿದ್ದರು. ಅಲ್ಲಿ ಯಾವುದೇ ಷರತ್ತಿಲ್ಲದೆ ನಾನು ಹೋಗುತ್ತೇನೆ ಎಂದು ಹೇಳಿದ್ದರು. ಅದನ್ನು ಹೇಳಬಾರದಾಗಿತ್ತು. ಏಕೆಂದರೆ ಮಾತುಕತೆಗೆ ಪ್ರಧಾನಿಯವರು ಏನೋ ಕರೆಸಿದ್ದಾರೆ, ನಾನು ಹೋಗುತ್ತಿದ್ದೇನೆ ಎನ್ನಬಹುದಿತ್ತು. ನನ್ನದೇನೂ ಷರತ್ತಿಲ್ಲದೆ ಹೋಗುತ್ತಿದ್ದೇನೆ ಅಂದರೆ ಏನು ? ನಾವೆಲ್ಲಾ ಮುಳುಗಿಹೋಗಿದ್ದೇವೆ, ಹೇಗೋ ಆ ಯಮ್ಮ ತಮಿಳುನಾಡಿನ ಮುಖ್ಯಮಂತ್ರಿ ಬಂದರೆ ಸಾಕು ಎಂಬ ಭಾವನೆ ಬಂತು. ಎರಡನೆಯದು ರಾಜ್ಯದ ಮುಖ್ಯಮಂತ್ರಿಗಳು ಕಳೆದ ಆರೆಂಟು ತಿಂಗಳಿಂದ ಗೊಂದಲದ ವಾತಾವರಣ ಇದೆ. ಬೆಂಕಿ ಹೊತ್ತಿಕೊಂಡು ಉರಿಯುತ್ತಿದೆ. ಈ ರಾಜ್ಯದಲ್ಲಿ ಈ ಒಂದು ಸಮಸ್ಯೆಯನ್ನು ಸರಿಯಾಗಿ ಬಗೆಹರಿಸುವುದಕ್ಕೆ ಆಗಲಿಲ್ಲ ಎನ್ನುವಾಗ ನ್ಯಾಯವಾಗಿ ಆ ಪಾಪದ ಕೂಸಿಗೆ ನೀವು ಜವಾಬ್ದಾರಿ ಇದ್ದರೂ ಸಹ ನಾವೂ ಜವಾಬ್ದಾರಿ ಹೊತ್ತುಕೊಂಡು ನಾಡಿನ ಹಿತದೃಷ್ಟಿಯಿಂದ ಮುಂದೆ ಬಂದಾಗ ಮುಖ್ಯಮಂತ್ರಿಗಳು ಈ ರೀತಿ ಜಾಯಿಂಟ್ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಯಾರ ಸಲಹೆ ತೆಗೆದುಕೊಂಡಿರಿ? ಮನಬಂದಂತೆ ನೀವು ಒಂದು ಅಗ್ರಿಮೆಂಟಿಗೆ ಸೈನ್ ಮಾಡಿ ಬರುವುದಾದರೆ ನಾಡಿನ ಜನರ ಹಿತವನ್ನು ಕೈಬಿಟ್ಟು ಬೀಗ ಹಾಕಿಕೊಂಡು ಬಂದಿದ್ದೀರಿ. ತಮಿಳುನಾಡಿನ ಮುಖ್ಯಮಂತ್ರಿ ನಿಲುವು ಏನಿತ್ತು? ಟ್ರಿಬ್ಯೂನಲ್‌ದೇ ಫೈನಲ್ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದನ್ನು ಒಪ್ಪಿಕೊಂಡು ಬರುವುದಕ್ಕೆ ಮುಖ್ಯಮಂತ್ರಿಗಳು ಹೋಗಬೇಕಾಗಿತ್ತೇನು ? ಅದಕ್ಕೆ ವಿರೋಧಪಕ್ಷದ ಸಭೆ ಬೇಕಾಗಿತ್ತೇನು? ನೀವು ತಲೆ ಮೇಲೆ ದೊಡ್ಡ ಕಲ್ಲು ಎಳೆಯುತ್ತಾ ಇದ್ದೀರಿ ಎಂದು ಸನ್ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ದಯಮಾಡಿ ಜಾಯಿಂಟ್ ಸ್ಟೇಟ್‌ಮೆಂಟ್‌ಗೆ ಒಟ್ಟಿಗೆ ಸೈನ್ ಆಗಿದ್ದರೆ ಈ ನಾಡಿನ ಜನ ನಿಮ್ಮ ಸರ್ಕಾರವನ್ನು ಕ್ಷಮಿಸುವುದಿಲ್ಲ. ನಮಗೆ ನ್ಯಾಯ ಸಿಗುವುದಿಲ್ಲ, ಅದರ ಬದಲಾಗಿ ಪ್ರಧಾನ ಮಂತ್ರಿ ಜೊತೆ ಮಾತುಕತೆ ಆಯಿತು, ಒಂದು ಅಗ್ರಿಮೆಂಟಿಗೆ ಬರುತ್ತೇವೆ. ಅದಾದ ಮೇಲೆ ಟ್ರಿಬ್ಯೂನಲ್ ಮುಂದೆ ಹೋಗಿ ನಾವು ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ಈ ರೀತಿ ತೀರ್ಪು ಕೊಡಿ ಎಂದು ಹೋಗುತ್ತೇವೆ ಎಂಬ ಜಾಯಿಂಟ್ ಸ್ಟೇಟ್‌ಮೆಂಟ್ ಇದ್ದರೆ ನನ್ನ ಅಭ್ಯಂತರ ಇರಲಿಲ್ಲ. ಈಗ ಪ್ರಧಾನಮಂತ್ರಿ ಹೇಳುತ್ತಾರೆ, ನಾನು ರೆಡಿ ಮಾತುಕತೆಯಿಂದ ಬಗೆ ಹರಿಸುವುದಕ್ಕೆ ಇದ್ದೆ, ನೀವೇ ಜಾಯಿಂಟ್ ಸ್ಟೇಟ್‌ಮೆಂಟ್ ಮಾಡಿ ಒಪ್ಪಿಕೊಂಡು ಬಂದಿದ್ದೀರಿ, ನಾನೇನು ಮಾಡಲಿ ಎಂದರೆ ಉತ್ತರ ಏನು? ಸನ್ಮಾನ್ಯ ಹಿರಿಯರಾದ ರಂಗನಾಥ್ ಅವರು ನಮಗೆ ಮಾರ್ಗದರ್ಶನ ಮಾಡಲಿ.

ಶ್ರೀ ಎಂ. ವೀರಪ್ಪಮೊಯಿಲಿ:- ನಾನು ಹೇಳಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್:- ಹೇಳಬಹುದಾಗಿತ್ತು ಎಂದು ನಾನು ಹೇಳಿದ್ದು.

ಶ್ರೀ ಎಂ. ವೀರಪ್ಪಮೊಯಿಲಿ:- ಹೇಳುವುದಕ್ಕೆ ಬಿಡಲೇ ಇಲ್ಲ.

ಶ್ರೀ ಕೆ.ಎಚ್. ರಂಗನಾಥ್ :- ನಾನು ಓದುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ನಾನು ಹೇಳಿಬಿಡುತ್ತೇನೆ. ಏನು ಪ್ರಶ್ನೆ...

SRI K.H. RANGANATH :- I would like to quote item No.4. It says 'the State also agreed to facilitate expeditious completion of all proceedings before the Tribunal, ಈ ಮಾತಿನಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ಇರತಕ್ಕ ರೈತರಿಗೆ ಯಾವ ತರಹ ಧಕ್ಕೆ ಬರುತ್ತದೆ? ಮಾನ್ಯ ದೇಶಪಾಂಡೆಯವರು ಏನು ಹೇಳುತ್ತಿದ್ದಾರೆ? ಒಂದು ಕಡೆ ಟ್ರಿಬ್ಯೂನಲ್ ಎಂದು ಹೇಳುತ್ತಿದ್ದೀರಿ, ಒಂದು ಕಡೆ ಮಾತುಕತೆ ಮಾಡಬೇಕು ಎಂದು ಹೇಳುತ್ತಿದ್ದೀರಿ, ಇದರಿಂದ ತೊದರೆಯಾಗಿದೆ ಎಂದು ಹೇಳುತ್ತಿದ್ದಾರೆ. ಇವತ್ತು ಆಳುವ ಪಕ್ಷಕ್ಕೆ ಸೇರಿರತಕ್ಕ ನಾವು ಅವರು ಹೇಳುವ ಮಾತನ್ನು ಸುಮ್ಮನೆ ಕುಳಿತುಕೊಂಡು ಕೇಳಿದರೆ ಏನಾಗುತ್ತದೆಂದರೆ ನಾವು ಕೂಡ ಹೌದು ಎಂದು ಹೇಳಿದಹಾಗಾಗುತ್ತದೆ. ತಾವು ಇದರಿಂದ ಧಕ್ಕೆ ಆಗುತ್ತದೆಯೇ ಆಗುವುದಿಲ್ಲವೇ ಹೇಳಿ. ತಾವೂ ಅದರಲ್ಲಿದ್ದೀರಿ ಎಂದು ನಾನು ಭಾವಿಸುತ್ತೇನೆ. ತಮಗೆ ಗೊತ್ತಿದ್ದರೆ ಆ ಮಾತು ಬೇರೆ. ಇಲ್ಲದೇ ಇದ್ದರೆ ಇದಕ್ಕೆ ಸ್ಪಷ್ಟೀಕರಣ ಕೊಡುವುದು ಮಾನ್ಯ ಮುಖ್ಯಮಂತ್ರಿಗಳ ಆದ್ಯಕರ್ತವ್ಯ ವಾಗುತ್ತದೆ. ಅದನ್ನು ಹೇಳಬೇಕು. Because he is harping, 'the States also agreed to facilitate

expeditious completion of all proceedings before the Tribunal.' ಇದಕ್ಕೆ ಒಪ್ಪಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಒಂದು ಕಡೆ ಮಾತುಕತೆಗೆ ಒಪ್ಪಿಕೊಂಡಿದ್ದೇವೆ ಎಂದು ಹೇಳುತ್ತಿದ್ದಾರೆ. ಹೇಗೆ ಎನ್ನುವಂಥ ಮಾತನ್ನು ಹೇಳುತ್ತಿದ್ದಾರೆ ಅವರು. ದಯಮಾಡಿ you should help us also. ನಾನು ಏತಕ್ಕೆ ಇಲ್ಲಿ ಕೇಳಿದೆ ಎಂದರೆ ಪಕ್ಷದಲ್ಲಿ ಇದರ ಬಗ್ಗೆ ಏನಾದರೂ ಸ್ಪಷ್ಟೀಕರಣ ಸಿಕ್ಕಿದರೆ I myself would have answered him, the Hon. Member Mr. Yadiyurappa. ಏನೋ ಸ್ವಾಮಿ ನೀವು ಹೇಳುವುದು ಸರಿಯಲ್ಲ ಇಂಥ ಕಾರಣದಿಂದ ಎಂದು ಹೇಳುತ್ತಿದ್ದೆವು. ನಮಗೆ ಅದು ಗೊತ್ತೇ ಇಲ್ಲ,

ಶ್ರೀ ಬಿ.ಎಸ್. ಯಡಿಯೂರಪ್ಪ:- ನನ್ನ ಗ್ರಹಿಕೆ ತಪ್ಪಾಗಿದ್ದರೆ ಎನ್‌ಲೈಟ್ ಮಾಡಬೇಕು.

ಶ್ರೀ ಕೆ.ಎಚ್. ರಂಗನಾಥ್:- ಈ ವಿಷಯದಲ್ಲಿ ಪಕ್ಷಭೇದವಿಲ್ಲದೇ ಇರುವುದರಿಂದ it is a greater responsibility on the Ministers also.

ಶ್ರೀ ಬಿ.ಎಸ್. ಯಡಿಯೂರಪ್ಪ:- ಏನೂ ಉತ್ತರ ಇಲ್ಲ, ನಮ್ಮ ತಲೆಯ ಮೇಲೆ ಕಲ್ಲು ಎಳೆದಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ:- ಉತ್ತರ ಇಲ್ಲ ಎಂದು ತಾವೇ ನಿರ್ಣಯ ಮಾಡುವುದಾದರೆ ಉತ್ತರ ಹೇಗೆ ಕೊಡುವುದಕ್ಕೆ ಬರುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನೇರವಾದ ಸಮಂಜಸವಾದ ಉತ್ತರ ನಾವು ಅಪೇಕ್ಷೆ ಪಡುತ್ತೇವೆ ಅಷ್ಟೆ.

ಶ್ರೀ ಎಂ. ವೀರಪ್ಪಮೊಯಿಲಿ:- ಹಾಗಾದರೆ ನಾಳೆ ಉತ್ತರ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೀಗೆ ಸಿಟ್ಟು ಏತಕ್ಕೆ?

ಶ್ರೀ ಎಂ. ವೀರಪ್ಪಮೊಯಿಲಿ:- ಏನೂ ಸಿಟ್ಟಿಲ್ಲ, ತಾವು ಉತ್ತರವೇ ಬೇಡ ಎಂದು ಹೇಳಿದರೆ? ಸನ್ಮಾನ್ಯ ಅಧ್ಯಕ್ಷಿಣಿಯವರೆ, ಪ್ರಶ್ನೆ ಇಷ್ಟೆ.

ಶ್ರೀ ಸಿ. ಬೈರೇಗೌಡ:- ತಮ್ಮ ಗಮನಕ್ಕೆ ಒಂದೇ ಒಂದು ಮಾತು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಚಾರದಲ್ಲಿ ಚರ್ಚೆಯಾಗಿದೆ. ಇವತ್ತಿನ ದಿವಸ ಇದು ಟ್ರಿಬ್ಯುನಲ್ ಮುಂದೆ ಇರುವುದರಿಂದ ಏನು ತೀರ್ಪು ಬರುತ್ತದೋ ಏನಾಗುತ್ತದೋ ನೋಡಿ ಆಮೇಲೆ ಇದನ್ನು ಚರ್ಚೆ ಮಾಡುವುದು ಯುಕ್ತ ಎಂಬ ತೀರ್ಮಾನಕ್ಕೆ ನಾವೆಲ್ಲರೂ ಬಂದಿದ್ದೇವೆ. ನೀವು ಈಗ ಹೇಳಿಕೆ ಮಾಡುವುದಕ್ಕೆ ಹೊರಟಿದ್ದೀರಿ. ಚರ್ಚೆ ಆಗಿರುವುದನ್ನು ಗಮನಿಸಿ ಎಂದು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಬೈರೇಗೌಡರು ಹೇಳಿದ ಮಾತಿನಲ್ಲಿ ಬಹಳ ಸತ್ಯಾಂಶ ಇದೆ. ಏಕೆಂದರೆ ಈಗ ಈ ವಿಚಾರದಲ್ಲಿ ಜಾಯಿಂಟ್ ಸ್ಟೇಟ್‌ಮೆಂಟ್ ಆಗಿದೆ. ಅಲ್ಲಿ ಸುಮಾರು 4 ಗಂಟೆ ಕಾಲ ಚರ್ಚೆಯಾಗಿದೆ. ಚರ್ಚೆಯಲ್ಲಿ ಏನು ಆಯಿತು ಎಂದು ಇವತ್ತು ಈ ಸದನದಲ್ಲಿ ಹೇಳುವುದು ಅದು propriety wise it is not proper. ಆ ಚರ್ಚೆಯಲ್ಲಿ ಏನಾಗಿದೆ ಅದು ನಮಗೆ ಗೊತ್ತಿದೆ. ಅದನ್ನು ಇವತ್ತು ಸಾರ್ವಜನಿಕವಾಗಿ ಪ್ರಚಾರ ಮಾಡತಕ್ಕದ್ದು ಸರಿಯಲ್ಲ, ಚರ್ಚೆಗೆ ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡುವವರಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ನಾವು ಒಂದು ಸಭೆ ಸೇರಿ ವಿಚಾರವನ್ನು ಸ್ಪಷ್ಟವಾಗಿ ಚರ್ಚೆ ಮಾಡಿದರೆ ತಮಗೆ ಉತ್ತರ ಸಿಗುತ್ತದೆ. ಇವತ್ತು ಅಲ್ಲಿ ಹಿಯರಿಂಗ್ ಆಗುತ್ತಾ ಇದೆ. ನಮ್ಮ ಮುಖ್ಯಮಂತ್ರಿಗಳ ಬಾಯಲ್ಲಿ ಏನೂ ಮಾತು ಬರಿಸುವುದು ಸರಿಯಲ್ಲ, ಇವತ್ತು ಪ್ರಧಾನಿಯವರು ಮಧ್ಯಸ್ಥಿಕೆ ವಹಿಸಿದ್ದಾರೆ. ಅವರು ಮಧ್ಯಸ್ಥಿಕೆ ವಹಿಸಿದ ಮೇಲೆ ಅವರ ನೇತೃತ್ವದಲ್ಲಿ ಜಾಯಿಂಟ್ ಸ್ಟೇಟ್‌ಮೆಂಟ್ ಆಗಿದೆ. ಪ್ರಧಾನಿಯವರ ಮಧ್ಯಸ್ತಿಕೆಯಲ್ಲಿ ಒಂದು ಸಭೆ ನಡೆದು ಜಾಯಿಂಟ್ ಸ್ಟೇಟ್‌ಮೆಂಟ್ ಆಗಿದೆ. ಈ ಸ್ಟೇಟ್‌ಮೆಂಟ್ ಅವರ ಅಧ್ಯಕ್ಷತೆಯಲ್ಲಿ ಆಗಿರುವುದರಿಂದ ಅವರ ಮೇಲೆ ಇರುವ ವಿಶ್ವಾಸವನ್ನು ಕದಲತಕ್ಕ ಅದು ಶೀತಲ ಆಗತಕ್ಕ ರೀತಿಯ ಅಭಿಪ್ರಾಯ ಈ ಸಂದರ್ಭದಲ್ಲಿ ಸಂದೇಶ ಹೊರಗೆ ಹೋದರೆ it will not be helpful for a negotiation. ಆದ್ದರಿಂದ ಮಧ್ಯಸ್ಥಿಕೆಗೆ ತೊಂದರೆ ಆಗುತ್ತದೆ. ಆದುದರಿಂದ ಇದರ ಬಗ್ಗೆ, for the first time the Hon. Prime Minister spent two days on this.

SRI B.S. YEDIYURAPPA :- What is the result ?

SRI M. VEERAPPA MOILY :- Result, you have to see. ರಿಸಲ್ಟ್ ಒಂದೇ ದಿವಸದಲ್ಲಿ ಬರುವುದಿಲ್ಲ. ಇದು ಬರೀ ಕಣ್ಣೊರೆಸುವ ನಿರ್ಧಾರ ಅಥವಾ ಬರೀ 19ನೇ ತಾರೀಖು ಆಗುವ ಅನಾಹುತವನ್ನು ತಪ್ಪಿಸುವುದಕ್ಕೆ ಒಂದು ತಾಂತ್ರಿಕ ಕಾರಣದಿಂದ ಈ ಸಭೆ ಅಥವಾ ಮಧ್ಯಸ್ಥಿಕೆ ನಡೆದಿದ್ದರೆ, he need not have spent two days or 10 hours on this Cauvery. ಅವರಿಗೆ ನಿಜವಾಗಿ ನೈಜವಾಗಿ ಒಂದು ತೀರ್ಮಾನ ಮಾಡತಕ್ಕ ಕಳಕಳಿ, ತೀರ್ಮಾನ ಮಾಡತಕ್ಕ ಒಂದು ಮನೋಭಾವ ಇಲ್ಲದೇ ಇದ್ದರೆ ಇದು ನಡೆಯುತ್ತಾ ಇರಲಿಲ್ಲ. ಆದುದರಿಂದ let us strengthen the hands of the Frime Minister.

ಶ್ರೀ ಆರ್.ವಿ. ದೇಶಪಾಂಡೆ:- ವೀರಪ್ಪಮೊಯಿಲಿಯವರೇ ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಮಗೆ ಸುಪ್ರೀಂ ಕೋರ್ಟ್ ಬಗ್ಗೆ, ಟ್ರಿಬ್ಯುನಲ್ ಬಗ್ಗೆ ರೆಸ್ಪೆಕ್ಟ್ ಇದೆ. ಪ್ರಧಾನಿಗಳ ಬಗ್ಗೆ ಫೈತ್ ಇದೆ. ಆದರೆ ಪ್ರಶ್ನೆ ಏನೆಂದರೆ ನೀವು ಏನು ಚರ್ಚೆ ಮಾಡಿದ್ದೀರಿ ಎಂದು ಕೇಳುತ್ತಾ ಇಲ್ಲ. ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬರುವುದಿಲ್ಲ. ನಾವು ಏನು ಹೇಳುತ್ತಿದ್ದೇವೆ ಎಂದರೆ, ತಮಿಳು ನಾಡಿನ ಮುಖ್ಯಮಂತ್ರಿಯವರು ಮಾತುಕತೆಗೆ ಹೋಗುವುದಕ್ಕೆ ರೆಡಿ ಇರಲಿಲ್ಲ. ಅವರನ್ನು ಕರೆದಾಗ ಇದನ್ನು ಸ್ಪಷ್ಟವಾಗಿ ಹೇಳಿದರು. ಟ್ರಿಬ್ಯುನಲ್ ಏನು ನಿರ್ಣಯ ಕೊಟ್ಟಿದೆ ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂಬುದರ ಬಗ್ಗೆ ಬಿಟ್ಟು ಬೇರೆ ಏನೂ ಮಾತನಾಡುವುದಿಲ್ಲವೆಂದು ಅವರು ಹೇಳಿದರು. ಆದರೆ ನಮ್ಮ ಸ್ಟಾಂಡ್, ಮಾತುಕತೆ ಮಾಡಿ ನೆಗೋಶಿಯೇಟ್ ಮಾಡಬೇಕೆಂದು ಇತ್ತು. ಈ ಜಾಯಿಂಟ್ ಸ್ಟೇಟ್‌ಮೆಂಟ್ ಪ್ರಕಾರ ಏಕೆ ಅದು deviation ಆಯಿತೋ ಗೊತ್ತಿಲ್ಲ. Tamilnadu has got upper hand or the Tamilnadu Chief Minister could influence the deliberation more than Karnataka and thereby you have changed that stand.

ಶ್ರೀ ಎಂ. ವೀರಪ್ಪಮೊಯಿಲಿ:- ಏಕೆ ಹೇಳುತ್ತೀರಿ ಅದು? ಒಂದು ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಪ್ರಧಾನಿಯವರ ಮಧ್ಯಸ್ಥಿಕೆಯಲ್ಲಿ ಮಾತುಕತೆ ಪ್ರಾರಂಭ ಆಗಿದ್ದು ಮುಂದೆ ಕೂಡ ನಡೆಯಬೇಕು ಎನ್ನುವುದರಲ್ಲಿ ವಾದ ವಿವಾದ ಇಲ್ಲ. ಏಕೆಂದರೆ, ಮೀಟಿಂಗ್ ಆಗಿ ಒಂದು ಸ್ಟೇಟ್‌ಮೆಂಟ್ ಕೊಟ್ಟಮೇಲೆ ಒಟ್ಟು ಸಾರಾಂಶ ಎಂದರೆ, ಪ್ರಧಾನಿಯವರು ಮಧ್ಯಸ್ತಿಕೆ ವಹಿಸುವುದಕ್ಕೆ ಒಪ್ಪಿದ್ದಾರೆ, ಮಧ್ಯಸ್ತಿಕೆ ಮುಂದುವರಿಸಿಕೊಂಡು ಹೋಗುತ್ತಾರೆ. ಎರಡನೆಯದಾಗಿ, ತಮಿಳುನಾಡಿನ ಮುಖ್ಯಮಂತ್ರಿಗಳು ಆ ಹೇಳಿಕೆಯನ್ನು ಆ ಸದನದಲ್ಲಿ ಹೇಳಿಲ್ಲ. ಸದನದ ಹೊರಗಡೆ ಏನು ಹೇಳಿದ್ದಾರೆ ಅದು ಅವರ ಅಭಿಪ್ರಾಯ. ಅಧಿಕಾರಯುತವಾಗಿ ಏನು ಅಫಿಶಿಯಲ್ ಸಭೆ ನಡೆಯಿತು ಅದು ಇದಲ್ಲ, ಅದು ಹೊರಗಡೆ ನಡೆಯಿತು. The Karnataka Government need not take official cognisance of that. We take official cognisance of the fact that the Prime Minister has intervened in the matter and the Prime Minister will continue to intervene in this matter for an amicable settlement. That is the official position.

ಶ್ರೀ ಕೆ. ಹೆಚ್. ರಂಗನಾಥ್ :- ಯಡಿಯೂರಪ್ಪನವರೇ, ತಾವು ಏನು ಹೇಳಬೇಕು ಎಂದಿದ್ದೀರಿ ಅದನ್ನು ಬಿಡಿಸಿ ಹೇಳಬೇಕಾಗುತ್ತದೆ. ಈಗ ತೊಂದರೆ ಆಗುತ್ತದೆ ಎಂದಿರಿ. ಆ ಒಪ್ಪಿಗೆಯಿಂದ ಹೇಗೆ ತೊಂದರೆಯಾಗುತ್ತದೆಂದು ತಾವು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಜಂಟಿ ಹೇಳಿಕೆ ಏನು ಮಾಡಿದ್ದಾರೆ ಅದರ ಬಗ್ಗೆ ಒಂದು ವಿವರವಾದ ಚರ್ಚೆನಡೆಯಬೇಕಾಗುತ್ತದೆ. ಅದು ಗುಟ್ಟಾಗಿ, ಗುಪ್ತವಾಗಿ ಇಟ್ಟಿದ್ದು ಅಲ್ಲ. ಅದು ಬಹಿರಂಗವಾಗಿದೆ. ಅದು ದೇಶದ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇದು ಗುಪ್ತವಾದ ಹೇಳಿಕೆಯಲ್ಲ. ಜಂಟಿ ಹೇಳಿಕೆ ಬಂದ ನಂತರ ತಮಿಳುನಾಡಿನ ಮುಖ್ಯಮಂತ್ರಿಗಳು ಆ ಸಭೆಯಲ್ಲಿ ಭಾಗವಹಿಸಿದ್ದರು. ಅವರು ಹೊರಗಡೆ ಬಂದು ಮಾತುಕತೆ ವಿಫಲವಾಗಿದೆ. ನಾವು ಅದಕ್ಕೆ ಬದ್ಧರಲ್ಲ ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಅವರು ಹೊರಗಡೆ ಹೇಳಿದರು ಒಳಗಡೆ ಹೇಳಲಿಲ್ಲ ಆದ್ದರಿಂದ ಅದು ಸಾಧುವಲ್ಲ ಎನ್ನತಕ್ಕ ಪ್ರಶ್ನೆಯನ್ನು ನಾವು ಆಮೇಲೆ ಮಾತನಾಡೋಣ. ಆದರೆ ಅವರು ಹೇಳಿರುವುದರಲ್ಲಿ ಸ್ಪಷ್ಟವಾಗಿದೆ ಅದರಲ್ಲಿ ಏನೂ ಅನುಮಾನವಿಲ್ಲ. ಈಗ ನಮ್ಮ ಮುಖ್ಯಮಂತ್ರಿಗಳು ಹೇಳಿರತಕ್ಕ ಮಾತಿನ ಪ್ರಕಾರ ಮಾತುಕತೆ ಸಫಲ ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ನಾನು ತಮಗೆ ಹೇಳುತ್ತಿದ್ದೇನೆ,

ಸರ್ಕಾರ ಈವೊಂದು ಜಂಟಿ ಹೇಳಿಕೆಗೆ ನಾವು ಸಂಪೂರ್ಣವಾಗಿ ಬದ್ಧರಾಗಿದ್ದೇವೆ ಎನ್ನುವುದನ್ನು ಸ್ಪಷ್ಟಪಡಿಸಿದೆ.

ಶ್ರೀ ಎಂ. ಭಕ್ತವತ್ಸಲಂ:- ಮಾನ್ಯ ಅಧ್ಯಕ್ಷರೆ, ಈ ಜಾಯಿಂಟ್ ಸ್ಟೇಟ್‌ಮೆಂಟ್‌ಗೆ ಒಪ್ಪಿಕೊಂಡು ಯಾವ್ಯಾವ ಚೀಫ್‌ಮಿನಿಸ್ಟರ್ ಸಿಗ್ನೇಚರ್ಸ್ ಮಾಡಿದ್ದಾರೆ ಅದನ್ನು ಕ್ಲಿಯರ್ ಮಾಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ:- ಜಂಟಿ ಹೇಳಿಕೆಯ ಬಗ್ಗೆ ಕಾವೇರಿ ನದಿ ನೀರಿನ ಹಂಚಿಕೆಯ ವಿವಾದದ ಬಗ್ಗೆ ಚರ್ಚೆಯನ್ನು ಪ್ರತ್ಯೇಕವಾಗಿ ಮಾಡುವುದಕ್ಕೆ ನಾವು ತಯಾರಿದ್ದೇವೆ. ಅದರ ಬಗ್ಗೆ ಚರ್ಚೆಯನ್ನು ಯಾವಾಗ ಮಾಡಬೇಕು ಯಾವ ಸ್ವರೂಪದಲ್ಲಿ ಮಾಡಬೇಕು ಅದನ್ನು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಚರ್ಚೆ ಮಾಡೋಣ. ಅದಕ್ಕಾಗಿ ಬಿಸಿನೆಸ್ ಅಡ್ವೈಜರಿ ಕಮಿಟಿ ಇದೆ. ಈ ತರಹ ನೀವು ಚರ್ಚೆ ಮಾಡುವುದು ಅದಕ್ಕೆ ಉತ್ತರ ಪಡೆಯುತಕ್ಕದ್ದು ಪ್ರಶ್ನೆ ಎತ್ತತಕ್ಕದ್ದು ಅದರ ವಿಶ್ಲೇಷಣೆ ಮಾಡತಕ್ಕದ್ದು ಸರ್ಕಾರದ ದೃಷ್ಟಿಯಲ್ಲಿ ಅದು ಸರಿಯಲ್ಲವೆಂದು ನನಗನ್ನಿಸುತ್ತದೆ. ಅದರ ಬಗ್ಗೆ ಸಪರೇಟಾಗಿ ಡಿಸ್‌ಕಷನ್ ಮಾಡೋಣ. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರ ಕೊಡುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ :- ನಾನು ಮಾನ್ಯ ಮಂತ್ರಿಗಳ ಮಾತಿಗೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಸರ್ಕಾರ ಆ ಸ್ಟೇಟ್‌ಮೆಂಟ್‌ಗೆ ಒಪ್ಪಿಕೊಂಡಿರುವುದರಿಂದ ಅಂತಹ ಮಾತಿನಿಂದ ಹೇಗೆ ಧಕ್ಕೆ ಬರುತ್ತದೆ ಅದನ್ನು ತಾವು ಸ್ಪಷ್ಟಪಡಿಸಬೇಕು. ಏನು ತೊಂದರೆಯಾಗುತ್ತದೆ. How does that influence the tribunal ? ಹೇಗೆ ಇನ್‌ಫ್ಲುಯೇನ್ಸ್ ಮಾಡಿದಹಾಗೆ ಆಗುತ್ತದೆ ? ಅವರು ಮತ್ತೆ ಮತ್ತೆ ಹೇಳುತ್ತಿದ್ದಾರೆ ಸರ್ಕಾರ ತಪ್ಪು ಮಾಡಿದೆಯೆಂದು ಮಾನ್ಯ ದೇಶಪಾಂಡೆಯವರೂ ಸಹ ಹೇಳುತ್ತಿದ್ದಾರೆ. ತಾವು ರಿವ್ಯೂ ಪಿಟಿಷನ್ ಹಾಕಿದ್ದೀರಿ. ಅದಕ್ಕೆ ಸಭೆಯೂಕೂಡ ಒಪ್ಪಿದೆ. ಅವರೂ ಒಪ್ಪಿದ್ದಾರೆ ರಿವ್ಯೂ ಪಿಟಿಷನ್ ಇದೆ. ನೀವು ಎಕ್ಸಪ್ಲೇನ್ ಮಾಡಬೇಕು. ಮಾನ್ಯ ಯಡಿಯೂರಪ್ಪನವರು ಏನು ಇದರಿಂದ ನಮಗೆ ಧಕ್ಕೆಯಾಗುತ್ತದೆನ್ನುವ ಮಾತನ್ನು ಹೇಳುತ್ತಿದ್ದಾರೆ. ರಿವ್ಯೂ ಪಿಟಿಷನ್‌ಗೆ ಸಭೆ ಒಪ್ಪಿಗೆ ಕೊಟ್ಟಿದೆ. ಅದು ನಮ್ಮ ಮುಂದಿದೆ. 'Expeditious completion of proceedings ಎಂದು ಹೇಳಿದರೆ ಅದು ಹೇಗಾಗುತ್ತದೆ ? ಅದಕ್ಕಾಗಿ ನಾನು ಮಾನ್ಯ ಯಡಿಯೂರಪ್ಪನವರನ್ನು ಕೇಳುತ್ತಿದ್ದೇನೆ ತಾವು ಬಿಡಿಸಿ ಹೇಳಿ. ಇಲ್ಲದಿದ್ದರೆ ಸರ್ಕಾರ ಬಿಡಿಸಿ ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದನ್ನು ನಾನು ಹೇಳುತ್ತೇನೆ. ಮೊದಲಿನಿಂದಲೂ ಈ ನಿಮಿಷದವರೆಗೂ ಸದನದ ಒಳಗಿರುವವರ ಅಭಿಪ್ರಾಯ ನಾಡಿನ ತಜ್ಞರ ಅಭಿಪ್ರಾಯ ಇಡೀ ನಾಡಿನ ರಾಜ್ಯದ ರೈತ ಸಮುದಾಯದ ಪ್ರಮುಖರ ಅಭಿಪ್ರಾಯ ಯಾವುದೇ ಕಾರಣಕ್ಕೋಸ್ಕರ ನ್ಯಾಯಾಲಯದಲ್ಲಿ ತೀರ್ಮಾನವಾಗುವ ವಿಷಯವಲ್ಲ. ರಾಷ್ಟದ ಜಲನೀತಿ ಸ್ಪಷ್ಟವಿಲ್ಲದಿರುವುವರಿಂದ ಇದು ಸಾಧ್ಯವಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:-ಮಾನ್ಯ ಯಡಿಯೂರಪ್ಪನವರೇ ಒಂದು ನಿಮಿಷ ಈಲ್ಡ್ ಆಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಈಲ್ಡ್ ಆಗುವುದಿಲ್ಲ. ರಾಷ್ಟ್ರದ ಜಲನೀತಿ ನಿರ್ಧಾರವಾಗದಿರುವ ಕಾರಣದಿಂದ...

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಈ ಒಂದು ಒಪ್ಪಂದ ಇದೆಯಲ್ಲ. ಇದು ನಮಗೆ ಧಕ್ಕೆ ತಂದಿದೆ ಎಂದು ಶ್ರೀ ದೇಶಪಾಂಡೆಯವರು ಹೇಳಿದರು. ಶ್ರೀಮಾನ್ ಯಡಿಯೂರಪ್ಪನವರೂ ಧಕ್ಕೆ ತಂದಿದೆ ಎಂದು ಹೇಳಿದರು. ನಾನು ಕೇಳುತ್ತಿದ್ದೇನೆ ಈ ಇಬ್ಬರು ಮಾನ್ಯ ಸದಸ್ಯರುಗಳು ರಾಷ್ಟ್ರೀಯ ಪಕ್ಷಗಳ ಸದಸ್ಯರುಗಳು. ಅವರ ರಾಷ್ಟ್ರೀಯ ಪಕ್ಷಗಳು ಜಲವಿವಾದಗಳು ನ್ಯಾಯಮಂಡಲಿಗಳ ಮೂಲಕ ತೀರ್ಮಾನ ಆಗಬಾರದು ಎನ್ನುವ ನಿಲುವನ್ನು ಏನಾದರೂ ತೆಗೆದುಕೊಂಡಿವೆಯೇ? ಇದು ಸಣ್ಣ ವಿಷಯ ಅಲ್ಲ. ಈ ವಿವಾದ ಪ್ರಾರಂಭವಾದಾಗಿನಿಂದ ನಾನು ಒಬ್ಬನೇ ಎಂದು ಕಾಣುತ್ತದೆ, ಈ ಸದನದಲ್ಲಿ ಕೇವಲ ಕಾನೂನು ಪಂಡಿತರಿಂದ ಈ ಸಮಸ್ಯೆಯನ್ನು ಬಗಹರಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಬಂದಿರುವವನು. ನ್ಯಾಯ ಮಂಡಳಿಯನ್ನು ರಚನೆ ಮಾಡಿದಂಥ ರಾಷ್ಟ್ರೀಯ ಪಕ್ಷದವರು ನ್ಯಾಯಮಂಡಳಿಯ ಮುಂದೆ ಶೀಘ್ರವಾಗಿ ಸಮಸ್ಯೆ ಬಗೆಹರಿಸಲು ಸಹಕರಿಸಿದಂಥ ರಾಜ್ಯ ಸರ್ಕಾರದ ತೀರ್ಮಾನವನ್ನು ಟೀಕೆ ಮಾಡುತ್ತಿದ್ದಾರೆ. ಇನ್ನೊಂದು ರಾಷ್ಟ್ರೀಯ ಪಕ್ಷದವರು ಈ ಕಾವೇರಿ ಜಲವಿವಾದದ ಬಗ್ಗೆ ಮೌನವಾಗಿದ್ದಾರೆ. ಶ್ರೀ ಆಡ್ವಾನಿಯವರಿಂದ ಇದರ ಬಗ್ಗೆ ಯಾವುದೇ ಹೇಳಿಕೆ ಬಂದಿಲ್ಲ. ನ್ಯಾಯಮಂಡಳಿ ರದ್ದಾಗಬೇಕೆಂದು ಯಾರೂ

ಹೇಳಿಲ್ಲ. ಇವತ್ತು ಇವರು ಹೇಳುತ್ತಿದ್ದಾರೆ ನ್ಯಾಯಮಂಡಳಿ ರದ್ದಾಗಬೇಕೆಂದು. ಇಲ್ಲದಿದ್ದರೆ ನ್ಯಾಯಮಂಡಳಿ ರದ್ದು ಮಾಡಿ ಎಂದು ಹೇಳದೇನೆ, ನ್ಯಾಯಮಂಡಳಿಯ ಮುಂದೆ ನಡೆಸತಕ್ಕಂಥ ಮೊಕದ್ದಮೆಯನ್ನು ಸ್ಥಗಿತಗೊಳಿಸಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಧೈರ್ಯ ಇದ್ದರೆ ಇವತ್ತು ಹೇಳಿ. ಬಿ.ಜೆ.ಪಿ.ಯವರು ಹೇಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಭಾರತೀಯ ಜನತಾಪಕ್ಷದ ನಿಲುವು ಬಹಳ ಸ್ಪಷ್ಟವಾಗಿದೆ. ಜಲನೀತಿಯನ್ನು ಎಲ್ಲಿಯವರೆಗೆ ಕೇಂದ್ರ ಸರ್ಕಾರ ಒಂದು ನಿರ್ಣಯಕ್ಕೆ ಬಂದು ಮಾಡುವುದಿಲ್ಲ ಅಲ್ಲಿಯವರೆಗೆ ಯಾವುದೇ ಟ್ರಿಬ್ಯುನಲ್ ಯಾವುದೇ ಒಂದು ರಾಜ್ಯಕ್ಕೆ ......

SRI K.H. RANGANATH :- Apply that to Cauvery.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಬಿ.ಜೆ.ಪಿ.ಯ ನಿಲುವು ಕೇಂದ್ರದ್ದು, ರಾಜ್ಯದ್ದು ಯಾವ ವ್ಯತ್ಯಾಸವೂ ಇಲ್ಲ. ಈ ರೀತಿ ಒಂದು ರಾಜ್ಯಕ್ಕೆ ಮತ್ತೊಂದು ರಾಜ್ಯಕ್ಕೆ ನದಿವಿವಾದದ ಸಮಸ್ಯೆ ಬಂದಾಗ ಹೇಗೆ ಬಗೆಹರಿಸಿಕೊಳ್ಳಬೇಕು ಎನ್ನತಕ್ಕಂಥ ಒಂದು ನಿಶ್ಚಿತವಾದಂಥ ರಾಷ್ಟ್ರೀಯ ಜಲನೀತಿಯನ್ನು ಕೇಂದ್ರಸರ್ಕಾರ ಎಲ್ಲಿಯವರೆಗೆ ರೂಪಿಸುವುದಿಲ್ಲವೋ, ಅಲ್ಲಿಯವರೆಗೆ ಯಾವುದೇ ಟ್ರಿಬ್ಯುನಲ್‌ನಿಂದ ಈ ರೀತಿ ತೀರ್ಮಾನ ಕೊಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಭಾರತೀಯ ಜನತಾಪಕ್ಷದ ಆಗ್ರಹ ಏನೆಂದರೆ.........

ಪ್ರೊ: ಎಂ.ಡಿ. ನಂಜುಂಡಸ್ವಾಮಿ :- ಈ ಹೇಳಿಕೆಯನ್ನು ಆದ್ವಾನಿಯವರು ಕೊಟ್ಟಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ದಯವಿಟ್ಟು ಕೇಳಿ. ನನ್ನ ಪಾಯಿಂಟ್ ಬಹಳ ಸ್ಪಷ್ಟ ಇದೆ. ಶ್ರೀ ಲಾಲ್‌ಕೃಷ್ಣ ಆದ್ವಾನಿಯವರನ್ನು, ವಿರೋಧ ಪಕ್ಷದ ನಾಯಕರನ್ನು ಮುಖ್ಯಮಂತ್ರಿಗಳು ಭೇಟಿ ಮಾಡಿದ್ದಂಥ ಸಂದರ್ಭದಲ್ಲಿಯೂ ಸಹ ಈವತ್ತಿನ ಈ ಪರಿಸ್ಥಿತಿಯಲ್ಲಿ ಮಾತುಕತೆಯು ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬೇಕೇ ಹೊರತು ಯಾವುದೇ ಟ್ರಿಬ್ಯುನಲ್ ಈ ಒಂದು ಸಂದರ್ಭದಲ್ಲಿ ತೀರ್ಮಾನ ಕೊಡುವುದಕ್ಕೆ ಆಗುವುದಿಲ್ಲ. ಮಾತುಕತೆಯ ಮೂಲಕ ಬಗೆಹರಿಸುವುದಕ್ಕೆ ನನ್ನ ಕಡೆಯಿಂದ ಆಗುವ ಎಲ್ಲಾ ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಅವರು ಹೇಳಿದ್ದಾರೋ ಇಲ್ಲವೋ ಎಂಬುದನ್ನು ಬೇಕಾದರೆ ಸಭೆಗೆ ಸ್ಪಷ್ಟಮಾಡಿ. ಏತಕ್ಕೆ ಈ ಮೂಲ ಪ್ರಶ್ನೆ ಇದ್ದಾಗ ಹೋರಾಟ ಮಾಡಿದಿರಿ? ಏಕೆ ಕರ್ನಾಟಕ ಬಂದ್‌ನ್ನು ನಿಮ್ಮ ಸರ್ಕಾರ ಮಾಡಿಸಿದ್ದುದು? ಯಾವ ಟ್ರಿಬ್ಯುನಲ್ ತನಗೆ ಮಧ್ಯಂತರ ಆಜ್ಞೆ ಕೊಡುವುದಕ್ಕೆ ಅಧಿಕಾರ ಇಲ್ಲವೆಂದು ಹೇಳಿತೇ, ಆ ರೀತಿ ತೀರ್ಮಾನ ಕೊಡುವುದಕ್ಕೆ ಪರಿಶೀಲನೆ ಪಟ್ಟಿಯಲ್ಲಿ ಇಲ್ಲ ಅಂತ ಹೇಳಿತೋ, ಅಂತಹ ಒಂದು ಸಂದರ್ಭದಲ್ಲಿ ಸುಪ್ರೀಂ ಕೋರ್ಟಿಗೆ ಇಂಟರೀಮ್ ಆರ್ಡರ್ ಕೊಡುವುದಕ್ಕೆ ಅಧಿಕಾರ ಇಲ್ಲವೆಂದು ತಮಿಳುನಾಡು ಹೋದಾಗ, ಕೊನೆಗಳಿಗೆಯವರೆಗೆ ಹೋರಾಟ ಮಾಡಿದಂಥ ನೀವು ಕೊನೆಗೆ ಇಂಟರೀಮ್ ಆರ್ಡರ್ ಮೆರಿಟ್ ಆಧಾರದ ಮೇಲೆ ಕೊಡಬಹುದು ಎಂದು ಒಪ್ಪಿಕೊಂಡು ಬಂದಿರಿ. ಈಗ ಸಮಸ್ಯೆ ಇರುವುದು ಇಷ್ಟೆ. ಸನ್ಮಾನ್ಯ ಹಿರಿಯ ಸಚಿವರಾದ ಶ್ರೀ ರಂಗನಾಥ್ ಅವರು ಇದ್ದಾರೆ. ಇದರಲ್ಲಿ ರಾಜಕಾರಣ ಏನಿದೆ? ನಾಳೆ ಪ್ರಧಾನಿಗಳ ಹತ್ತಿರ ಒತ್ತಡ ತಂದು ದಯಮಾಡಿ ಸಂಬಂಧಪಟ್ಟ ಮುಖ್ಯಮಂತ್ರಿಗಳು ಮಾತುಕತೆ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ ಎಂದು ವಿನಂತಿ ಮಾಡಿದ್ದೇವೆ. ಪ್ರಧಾನ ಮಂತ್ರಿಗಳು ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಒಂದು ಕಡೆ ಮಾತುಕತೆ ಮೂಲಕ ಬಗೆಹರಿಸಬೇಕೆಂದು ಅವರ ಹತ್ತಿರ ಹೋಗಿ, ಮತ್ತೊಂದು ಕಡೆ ಟ್ರಿಬ್ಯುನಲ್ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೇಳಬೇಕು ಸಹಕಾರ ಕೊಡಬೇಕೆಂದು ಅಗ್ರಿಮೆಂಟ್ ಮಾಡಿ ಕೈಕಟ್ಟಿಕೊಂಡು ಬಂದಮೇಲೆ, ತಮಿಳುನಾಡು ಸರ್ಕಾರ ಅವರ ಅಡ್ವೋಕೇಟ್ ಮೂಲಕ ನಾಳೆ ಹೇಳಬಹುದು ಮಾತುಕತೆ ಪ್ರಶ್ನೆ ಇಲ್ಲ ಎಂದು. ಸನ್ಮಾನ್ಯ ಅಧ್ಯಕ್ಷರೇ, ಅವರು ಟ್ರಿಬ್ಯುನಲ್ ನ್ಯಾಯಾಧೀಶರಿಗೆ ಹೇಳುತ್ತಾರೆ. ನೋಡಿ ಈ ಅಗ್ರಿಮೆಂಟ್ ಕಾಪಿಯನ್ನು ಒಪ್ಪಿಕೊಂಡು ಬಂದಿದ್ದೇವೆ ಎಂದು ಟ್ರಿಬ್ಯುನಲ್ ಎದುರುಗಡೆ ಹೇಳುತ್ತಾರೆ. ಇದುವರೆಗೂ ಗೊಂದಲ ಇತ್ತು. ಇದಕ್ಕೆ ಎಲ್ಲಾ ರಾಜ್ಯಗಳವರೂ ಸಹಿ ಮಾಡಿದ್ದಾರೆ. ನೀವೇ ನ್ಯಾಯಾಲಯದಲ್ಲಿ ಈ ಅಗ್ರಿಮೆಂಟ್ ಆಧಾರದ ಮೇಲೆ ಆದಷ್ಟು ಶೀಘ್ರವಾಗಿ ಈ ತೀರ್ಪನ್ನು ಕೊಡಬೇಕೆಂದು, ಇಡದೆ ಇರುವಷ್ಟು ದಡ್ಡರೇನು?

ಎರಡನೆಯದು, ಈ ಸದನದಲ್ಲಿ ಏನು ನಡೆಯುತ್ತದೆ. ಹುಲಿ ಬಂತು ಹುಲಿ ಬಂತು ಎಂದು ಬೆದರಿಸುತ್ತಾರೆ. ಆ ರೀತಿಯಾಗಿದೆ. ನಮ್ಮ ನ್ಯಾಯಾಧೀಶರು, ಪರಿಣತರು ಯಾರಿದ್ದಾರೆ ಅವರು ಇದನ್ನು ಸ್ಟಡಿ ಮಾಡಿ, ನಮಗೆ ಏನು ಅನ್ಯಾಯವಾಗಿದೆ, ನಾವೆಷ್ಟು ನೀರಾವರಿ ಪ್ರದೇಶವನ್ನು ಅಳವಡಿಸಿಕೊಂಡಿದ್ದೇವೆ, ನೀವೆಷ್ಟು ಅಳವಡಿಸಿಕೊಂಡಿದ್ದೀರಿ. ನೀವು ಏಕೆ ನೀರು ಸಮುದ್ರಕ್ಕೆ ಹೋಗುವುದಕ್ಕೆ ಬಿಡುತ್ತಿದ್ದೀರಿ, ನಮ್ಮ ಹಕ್ಕು ಏನು ಇದರ ಬಗ್ಗೆ ವಾದ ಮಾಡುತ್ತಾರೆಯೇ ವಿನಹ ಅವರು ತಮಿಳುನಾಡಿನವರು ತಮ್ಮ ಹಕ್ಕು ಏನಿದೆ ಅದನ್ನು ವಾದ ಮಾಡುತ್ತಾರೆಯೇ ವಿನಃ ನಾವು ಅಕಸ್ಮಾತ್ ಇಲ್ಲಿ ಹೇಳದಿದ್ದರೆ, ಜಾಯಿಂಟ್ ಅಗ್ರಿಮೆಂಟ್ ಏನಿದೆ ಅದರಲ್ಲಿ ಸಹಿ ಇಲ್ಲ. ಸಹಿ ಮಾಡಿದ ಪ್ರತಿ ಇಲ್ಲ. ಅದನ್ನು ಅಲ್ಲಿ ಪ್ರಡ್ಯೂಸ್ ಮಾಡುವುದಿಲ್ಲ. ಇಲ್ಲಿ ಚರ್ಚೆಯಾಗಿರುವುದರಿಂದ, ನಾಳೆ ಈ ಚರ್ಚೆಯ ಫಲಿತಾಂಶದ ಆಧಾರದ ಮೇಲೆ ನಮ್ಮ ಅಡ್ವೋಕೇಟ್ಸ್ ಪ್ರಾಪರ್ ಗೈಡೆನ್ಸ್ ಕೊಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಸ್ಟ್ಯಾಂಡ್ ಏನು ಎನ್ನುವುದನ್ನು ಸ್ಪಷ್ಟ ಮಾಡುವುದಕ್ಕಾಗುತ್ತದೆ. ನೀವು ಹೋಗಿ ಸಹಿ ಮಾಡಿ ನ್ಯಾಯಾಲಯದ ತೀರ್ಪು ಕೊಡಬೇಕೆಂದು ಟ್ರಿಬ್ಯುನಲ್ ಮುಂದೆ ಕೈಕಟ್ಟಿಕೊಂಡು ಬರುವಂಥ ಅಕ್ಷಮ್ಯ ಅಪರಾಧ ಮಾಡಿದ್ದೀರಿ. ಯಾವ ಕಾರಣಕ್ಕೂ ಪ್ರಧಾನಿಯವರು ಸಂಬಂಧಪಟ್ಟ ಮಂತ್ರಿಗಳನ್ನು, ಮುಖ್ಯಮಂತ್ರಿಗಳನ್ನು ಕರೆಯಿಸಿ ಮಾತುಕತೆ ಆಡುವಂಥ ಪ್ರಶ್ನೆ ಇದರಿಂದ ಉದ್ಭವವಾಗುವುದಿಲ್ಲ. ಯಾವ ಹೋರಾಟವನ್ನು ಮಂಡ್ಯದಲ್ಲಿ ಮಾಡಿ ಎಲ್ಲಾ ಪಕ್ಷದ ಮುಖಂಡರೂ ಸೇರಿ ತೀರ್ಮಾನ ತೆಗೆದುಕೊಂಡಿದ್ದೇವೆ, ಆ ತೀರ್ಮಾನ, ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ, ಹಿಂದೆಯೂ ಅದೇ ರೀತಿಯಲ್ಲಿ ರಾಜ್ಯ ಸರ್ಕಾರ ನಡೆದುಕೊಂಡಿತು. ಈಗಲೂ ಸಹ ಯಾವುದೋ ಒಂದು ಒತ್ತಡಕ್ಕೆ ಮಣಿದು, ಈ ರೀತಿಯ ಅಗ್ರಿಮೆಂಟ್‌ಗೆ ಸಹಿ ಮಾಡಿ ಬಂದು ಕನ್ನಡ ನಾಡಿನ ನಾಲ್ಕೂವರೆ ಕೋಟಿ ಜನಕ್ಕೆ ಅನ್ಯಾಯ ಮಾಡುವಂಥ ಪ್ರಸಂಗ ಒದಗಿ ಬಂದಿದೆ. ಇದು ಇಲ್ಲವೆಂದು ಹೇಳುವುದಾದರೆ, ನಮಗೆ ತುಂಬಾ ಸಂತೋಷ. ಇದು ಟ್ರಿಬ್ಯುನಲ್ ಮುಂದೆ ತೀರ್ಮಾನ ಆಗುವುದಿಲ್ಲ. ಇದು ಮಾತುಕತೆಯ ಮೂಲಕ ಮಾತ್ರ ಬಗೆಹರಿಸಬೇಕು. ಈ ಒಂದು ಒತ್ತಾಯವನ್ನು ತರಬೇಕು. ದಯಮಾಡಿ ಈ ಒಂದು ಜಾಯಿಂಟ್ ಸ್ಟೇಟ್‌ಮೆಂಟ್ ಏನು ಒಪ್ಪಿಕೊಂಡು ಬಂದಿದ್ದೀರಿ, ಪ್ಯಾರಾ 4 ರಲ್ಲಿ ಏನು ಹೇಳಿದ್ದೀರಿ, ಆದಷ್ಟು ಬೇಗ, ಶೀಘ್ರವಾಗಿ ಟ್ರಿಬ್ಯುನಲ್ ಮುಂದೆ ಏನು ಒಪ್ಪಿಕೊಂಡು ಬಂದಿದ್ದೀರಿ ಅದಕ್ಕೆ ಭಾರತೀಯ ಜನತಾ ಪಾರ್ಟಿ ಸಂಪೂರ್ಣವಾಗಿ ವಿರೋಧವಿದೆ. ನಮ್ಮ ನಾಡಿನ ಹಿತ ಇದರಿಂದ ಆಗುವುದಿಲ್ಲ ಎಂದು ಈ ಮಾತನ್ನು ಸದನದಲ್ಲಿ ಸ್ಪಷ್ಟಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇದು ಆದಮೇಲೆ ನಾಳೆ ನೀರು ಹೇಗೆ ಬೇಕಾದರೂ ಹೋಗಿ, ಅದು ನಿಮಗೆ ಬಿಟ್ಟಿದ್ದುದು. ಇದರ ಬಗ್ಗೆ ಸ್ಪಷ್ಟೀಕರಣ ಕೇಳುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರೇ, ಈಗಾಗಲೇ 127 ನಿಮಿಷ ಮಾತನಾಡಿದ್ದೀರಿ, ದಯಮಾಡಿ ಬೇಗ ಮುಗಿಸಿ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಕೇಳಿದ್ದಕ್ಕೆ ಪ್ರೊ: ನಂಜುಂಡಸ್ವಾಮಿಯವರು ಇಂಟರ್‌ಪ್ರಿಟ್ ಮಾಡಿದ್ದಾರೆ. ವಿ.ಪಿ. ಸಿಂಗ್ ಸರ್ಕಾರ ಇದ್ದಾಗ ಟ್ರಿಬ್ಯುನಲ್ ಏಕೆ ರಚನೆಯಾಯಿತು ಎಂಬ ವಿಚಾರದಲ್ಲಿ ಬೇರೆ ಅಲಾಯಿದ ಚರ್ಚೆ ಮಾಡೋಣ. ನಮ್ಮದು ತಪ್ಪಾಗಿದ್ದರೆ, ತಪ್ಪು ಎಂದು ಹೇಳುವುದಕ್ಕೆ ಸಿದ್ಧನಿದ್ದೇನೆ. ಸರಿ ಇದ್ದರೆ, ಸರಿ ಎಂದು ಹೇಳುವುದಕ್ಕೂ ಸಿದ್ಧನಿದ್ದೇನೆ. ನಾನು ಇವತ್ತು ಏನು ಹೇಳುತ್ತಿದ್ದೇನೆಂದರೆ, ಇದು ಸಿಂಪಲ್. ನಮ್ಮ ಸ್ಟ್ಯಾಂಡ್ ಏನಿತ್ತು ಎಂದರೆ, ನೆಗೋಷಿಯೇಷನ್‌ನಿಂದ ಮಾತುಕತೆಯಿಂದ ಶುರುವಾಗುವುದಕ್ಕೆ ಮುಂಚೆ, ತಮಿಳುನಾಡಿನ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಮಾತುಕತೆ ಇಲ್ಲ, ಟ್ರಿಬ್ಯುನಲ್ ನವರು ಏನು ಹೇಳುತ್ತಾರೆ, ಅದನ್ನೇ ಒಪ್ಪಿಕೊಳ್ಳುತ್ತೇವೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ನಮ್ಮ ಮುಖ್ಯಮಂತ್ರಿಗಳು ಏನು ಹೇಳಿದರು ಎನ್ನುವುದಕ್ಕೆ ಕೊನೆಗೆ ನಮಗೆ ಸಿಕ್ಕಿದ್ದು ಅವರ ಜಾಯಿಂಟ್ ಸ್ಟೇಟ್‌ಮೆಂಟ್. ಅಲ್ಲಿ ತಾವು ಟ್ರಿಬ್ಯುನಲ್ ಕೊಟ್ಟ ನಿರ್ಣಯಕ್ಕೆ ಒಪ್ಪಿಕೊಳ್ಳುತ್ತೇವೆಂದು ಹೇಳಿದಿರಿ. ಈ ಜಾಯಿಂಟ್ ಸ್ಟೇಟ್‌ಮೆಂಟ್ ಮಾಡುವಂಥ ಅವಶ್ಯಕತೆ ಏನಿತ್ತು? ಅದು ಒಪ್ಪಿಕೊಳ್ಳಬೇಕಾಗುತ್ತದೆ. ಟ್ರಿಬ್ಯುನಲ್ ಮುಂದೆ ಕೋ ಅಪರೇಟಿವ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ? ಆದರೆ, ಈ ಜಾಯಿಂಟ್ ಸ್ಟೇಟ್‌ಮೆಂಟ್ ಮಾಡುವಂಥ ಅವಶ್ಯಕತೆ ಏನಿತ್ತು. ಇದರಿಂದ ಕರ್ನಾಟಕಕ್ಕೆ ಏನು ಲಾಭವಾಗಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :- ನಾನು ಮಾತನಾಡಬೇಕೆಂದು ಹೇಳಿದ್ದೇನೆ, ನನ್ನ ಸಮಯವನ್ನು ನಿಮಗೆ ಕೊಡುತ್ತೇನೆ. ಏಕೆಂದರೆ, ಇದು ಬಹಳ ಮುಖ್ಯವಾದ ವಿಷಯ. ಆ ವಾಕ್ಯ ಏನಿದೆ, ನಾವು ನ್ಯಾಯಮಂಡಳಿ ಮುಂದೆ ಇರತಕ್ಕಂಥ ಮೊಕದ್ದಮೆಯನ್ನು ಶೀಘ್ರವಾಗಿ ಬಗೆಹರಿಸುವುದಕ್ಕೆ ಸಹಕರಿಸಬೇಕು ಎನ್ನುವುದನ್ನು ಹೇಳದೇ ಇರುವುದಕ್ಕೆ ಯಾವಾಗ ಸಾಧ್ಯ. ಇಲ್ಲ ನ್ಯಾಯಮಂಡಳಿ ಬೇಡ ಎಂದು ಹೇಳಬೇಕು. ಇಲ್ಲ ನ್ಯಾಯಮಂಡಳಿ ಕೆಲಸವನ್ನು

ಸ್ಥಗಿತಗೊಳಿಸಬೇಕು ಎಂದು ಹೇಳಬೇಕು. ಅವೆರಡನ್ನೂ ತಾವು ಹೇಳಲಿಲ್ಲ, ಯಾರು ಮಾತನಾಡುತ್ತಿದ್ದಾರೆ, ಅವರು ಯಾರೂ ಹೇಳಲಿಲ್ಲ, ನ್ಯಾಯಮಂಡಳಿಯ ಕಾರ್ಯಾಚರಣೆ ಬೇಗ ಮುಗಿಯಬೇಕು ಅದಕ್ಕೆ ಸಹಕರಿಸಬೇಕು ಎನ್ನುವುದನ್ನು ನಾವೇನೂ ಹೇಳಿ ಬರೆಯಬೇಕಾಗಿಲ್ಲ, ನಮ್ಮ ಕರ್ತವ್ಯವನ್ನು ನಾವು ಮಾಡಲೇಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ....

SRI R.V. DESHPANDE:- Tribunal constitute...

(Interruption)

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ನೀವು ಅಬ್ಜೆಕ್ಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ, ನೀವು ಮಾಡಬೇಕಾದಂಥ ಮೊದಲನೆಯ ಕಾರ್ಯ ಏನು ಎಂದರೆ...

ಶ್ರೀ ಡಿ.ಬಿ.ಚಂದ್ರೇಗೌಡ:- ಕಾವೇರಿ ಜಲಾನಯನ ಸಮಸ್ಯೆಯ ವಿಚಾರ ಮೊಟ್ಟಮೊದಲಿಗೆ ಶಾಸನಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಾಗ ಟ್ರಿಬ್ಯೂನಲ್ ರಚನೆಯನ್ನು ವಿರೋಧ ಮಾಡಿರತಕ್ಕಂಥದ್ದು ನಾವಾಗಲೀ ನಮ್ಮ ಪಕ್ಷವಾಗಲೀ ಎಂದು ಶಾಸನಸಭೆಯ ಕಡತವನ್ನು ನೋಡಿದರೆ ಗೊತ್ತಾಗುತ್ತದೆ. ನಾನು ಆಗ ಒಂದು ಮಾತು ಹೇಳಿದೆ, ಮುಂದೆ ಬರುವಂತಹದನ್ನು ಇಂದೇ ಎದುರಿಸೋಣ ಆದುದರಿಂದ ನಾವು ಟ್ರಿಬ್ಯೂನಲ್ ಮುಂದೆ ಹೋಗಬಾರದೆಂಬ ನಿರ್ಣಯ ನಮ್ಮದು. ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಟ್ರಿಬ್ಯೂನಲ್ ಬಗ್ಗೆ ಪರಿಪೂರ್ಣ ವಿಶ್ವಾಸವನ್ನು ವ್ಯಕ್ತ ಮಾಡಿದರು, ವಿಶ್ವಾಸ ಇಟ್ಟುಕೊಳ್ಳೋಣ, ನ್ಯಾಯ ಸಿಗುತ್ತದೆ ಎಂದು ಹೇಳಿದರು. ಅವತ್ತಿನ ಮುಖ್ಯ ಮಂತ್ರಿ ಯಾರು, ಇವತ್ತಿನ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆ ಅಲ್ಲ, ಕಾಂಗ್ರೆಸ್ ಸರಕಾರ.....

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ನಾನು ಹೇಳುವಂಥದನ್ನು ಕೇಳಿರಿ, ಕುಳಿತುಕೊಳ್ಳಿ ನಿಮಗೆ ಅವಕಾಶ ಬಂದಾಗ ಹೇಳಿರಿ.

ಶ್ರೀ ಎಂ. ಮಹದೇವ್:- ಟ್ರಿಬ್ಯೂನಲ್‌ಗೆ ರೆಫರ್ ಆಗಿ ಹೋಗಿದೆ, ಅದರಿಂದ ಈಗ ಏನೂ ಮಾಡುವಹಾಗೆ ಇಲ್ಲ, ಟ್ರಿಬ್ಯೂನಲ್ ಮೇಲೆ ವಿಶ್ವಾಸ ಇಡಬೇಕಾಗುತ್ತದೆ ಎಂದು ವೀರೇಂದ್ರ ಪಾಟೀಲರು ಹೇಳಿದರು. ಟ್ರಿಬ್ಯೂನಲ್ ಮೇಲೆ ವಿಶ್ವಾಸ ಇಟ್ಟರೇ ಹೊರತು ಅವರೇನೂ ಟ್ರಿಬ್ಯೂನಲ್‌ಗೆ ರೆಫರ್ ಮಾಡಲಿಲ್ಲ, ನೀವು ಏತಕ್ಕೆ ರಾಂಗ್ ಆಗಿ ಇಂಟರ್‌ಪ್ರಿಟ್ ಮಾಡುತ್ತೀರಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ಆಯಿತೇ, ಆಯಿತೇ?

ಶ್ರೀ ಆರ್. ದಯಾನಂದರಾವ್:- ಟ್ರಿಬ್ಯೂನಲ್‌ಗೆ ಹೋಗುವುದಕ್ಕೆ ನೀವೇ ಫೌಂಡೇಷನ್ ಹಾಕಿದ್ದುದು.

ಶ್ರೀ ಡಿ. ಬಿ. ಚಂದ್ರೇಗೌಡ:- ಇಂತಹ ವಿಚಾರಗಳು ಕಡತಕ್ಕೆ ಹೋಗಬೇಕು, ಚರ್ಚೆ ಮಾಡಬೇಕು ಎಂದರೆ ನಾನು ಸಿದ್ಧನಿದ್ದೇನೆ. ದಯಾನಂದರಾವ್ ಅವರು ಏನು ಹೇಳಿದ್ದಾರೆ ಅದೂ ಕಡತದಲ್ಲಿ ಇರಲಿ. ಯಾವರೀತಿ ಅದನ್ನು ಸಾಬೀತು ಮಾಡುತ್ತಾರೆ ಅದನ್ನು ನೋಡಬೇಕು. ಅವರು ತೀರ್ಪು ಏನೆಂದು ಓದಿರುತ್ತಾರೋ ಇಲ್ಲವೋ ಗೊತ್ತಿಲ್ಲ, 256ನೇ ಪರಿಚ್ಛೇದದ ಪ್ರಕಾರ ಇರತಕ್ಕಂಥ ಟ್ರಿಬ್ಯೂನಲ್ ನಿರ್ಣಯಕ್ಕೆ ಮಾಡಿರತಕ್ಕಂಥ ಶಾಸನ ಏನೆಂದು ಓದಿರುತ್ತಾರೋ ಗೊತ್ತಿಲ್ಲ, ಟ್ರಿಬ್ಯೂನಲ್‌ಗೆ ಮುಂಚೆ ನಡೆದಂಥ ಚರ್ಚೆಗಳ ಅನುಭವ ಇದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲಿ ನಡೆದಂಥ ನಡವಳಿಕೆಗಳಿಗೆ ನಾನು ತಪ್ಪಿ ನಡೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ, ಅವತ್ತೂ ಕೂಡ ನಾವು ಟ್ರಿಬ್ಯೂನಲ್‌ಗೆ ವಿರೋಧ ಮಾಡಿದೆವು. ಆದರೂ ಕೂಡ ಟ್ರಿಬ್ಯೂನಲ್ ಏತಕ್ಕೆ ರಚನೆ ಆಯಿತು ಎಂಬುದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ. ಈ ಸದನದಲ್ಲಿ ಪ್ರಾಸ್ತಾವಿಕ ಭಾಷಣ ಮಾಡುವಾಗ ನಾನು ಆ ವಿಚಾರ ಪ್ರಸ್ತಾಪ ಮಾಡಲಿಲ್ಲ, ಕಾರಣ, ನಮ್ಮ ಕಾರ್ಯಕಲಾಪಗಳ ಸಲಹಾ ಸಮಿತಿ, ಅಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಸೇರಿದ್ದಂಥ ಕಾಲದಲ್ಲಿ ನಾವು ಇನರ ಜೊತೆಗೆ ಕಾವೇರಿ ವಿವಾದ ಸೇರಿಸಿ ಚರ್ಚೆ ಮಾಡಿದರೆ ಅದರ ಎತ್ತರ ಎಷ್ಟು ಏರಬೇಕೋ ಅಷ್ಟು ಏರುವುದಿಲ್ಲ ಎಂದು ಬಂತು.

ಶ್ರೀ ಬಿ. ಎಸ್. ಯಡಿಯೂರಪ್ಪ:- ಇದು ಮಾನ್ಯ ಮುಖ್ಯಮಂತ್ರಿಗಳು ಕರೆದ ಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಿತ್ತೇ ಹೊರತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬರಲಿಲ್ಲ. ಅಲ್ಲಿ ಒಪ್ಪಿಕೊಂಡಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ:- ನೀವು ಒಪ್ಪದಿದ್ದರೆ, ನೀವು ಇದ್ದೀರೋ ಇಲ್ಲವೋ ಗೊತ್ತಿಲ್ಲ. ನಾವಂತೂ ಒಪ್ಪಿಕೊಂಡಿದ್ದೇವೆ. ಆಗ ನಾವು ಏನು ಹೇಳಿದ್ದೆವು ನಾಳೆ 29ನೇ ತಾರೀಖು, ನಮ್ಮ ಮಧ್ಯಂತರ ಆಜ್ಞೆಯ ಮರು ಪರಿಶೀಲನಾ ಅರ್ಜಿ ಕಾವೇರಿ ಟ್ರಿಬ್ಯೂನಲ್ ಮುಂದೆ ಇರುವುದರಿಂದ ಅದರ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡತಕ್ಕಂಥಾದ್ದು ಸ್ವಲ್ಪ ಮಟ್ಟಿಗೆ ನಮಗೆ ಹಾನಿಕರ ಆಗಬಹುದು, ಅಗದೇ ಇರಲೂ ಬಹುದು, ನನಗೆ ಗೊತ್ತಿಲ್ಲ, ಸ್ವಲ್ಪ ಇತಿ ಮಿತಿಯನ್ನು ಮೀರಿ ಮಾತನಾಡುವುದು ಅಲ್ಲಿಯ ತೀರ್ಪಿಗೆ ಬಾಧಕವಾಗಬಹುದು ಎಂಬ ಸದಿಚ್ಛೆಯಿಂದ ಮಾತನಾಡಬಾರದೆಂದು ಅವಕ್ಕೆ ಮಾನ್ಯತೆ ಕೊಟ್ಟು ಅವಿಚಾರ ಪ್ರಸ್ತಾಪ ಮಾಡಲಿಲ್ಲ. ಸೆಪರೇಟ್ ಆಗಿ ಮಾತನಾಡೋಣ ಎಂದು ಹೇಳಿದ್ದೆವು. ಆದರೆ ಈಗ ವಿಸ್ತ್ರತವಾದ ಚರ್ಚೆ ಆಗುತ್ತಿದೆ.

ಶ್ರೀ ಕೆ. ಹೆಚ್. ರಂಗನಾಥ್:- ಒಂದು ಮಾತು ಬಂದುದರಿಂದ ಈ ಮಾತನ್ನು ಕೇಳಬೇಕಾಗಿ ಬಂದಿತು. ಮಾನ್ಯ ಯಡಿಯೂರಪ್ಪನವರು ಇದರಿಂದ ತೊಂದರೆಯಾಗುತ್ತದೆಂದು ಹೇಳಿದರು, ಹೇಗೆ ತೊಂದರೆಯಾಗುತ್ತದೆ ಎಂದು ಸ್ಪಷ್ಟ ಮಾಡಿರಿ ಎಂದು ನಾನು ಹೇಳಿದೆನೇ ಹೊರತು ಇದು ಚರ್ಚೆ ಆಗುತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ:- ಉಳಿದದು ಏನಿದೆ.

ಶ್ರೀ ಕೆ. ಹೆಚ್. ರಂಗನಾಥ್:- ಅಸೆಂಬ್ಲಿಯಲ್ಲಿ ಏನಾಗುತ್ತಿದೆ ಎಂದರೆ ಏನೂ ಮಾತನಾಡಬಾರದು ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳಿದಹಾಗೆ ಆಗುತ್ತದೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ತಾವು ಹಿರಿಯ ಸದಸ್ಯರಿದ್ದೀರಿ. 29ನೇ ತಾರೀಖು ಮಧ್ಯಂತರ ಆಜ್ಞೆಯ ಬಗ್ಗೆ ಮರು ಪರಿಶೀಲನಾ ಅರ್ಜಿಯ ನಿರ್ಣಯ ಏನಾದರೂ ಬಂದ ಮೇಲೆ ವಿಶೇಷ ಚರ್ಚೆ ಮಾಡೋಣ ಎಂದು ನಾವು ಒಪ್ಪಿಕೊಂಡಿದ್ದೆವು. ಅದರ ಮಧ್ಯದಲ್ಲಿ ಚರ್ಚೆಮಾಡಬೇಕೆಂದು ಆದರೆ ನಾವು ಬೇರೆಯವರ ಕೈ ಕಟ್ಟುವುದಕ್ಕೆ ಆಗುವುದಿಲ್ಲ. ನಮ್ಮ ಕೈಯನ್ನು ನಾವೇ ನಮ್ಮಷ್ಟಕ್ಕೆ ಕಟ್ಟಿಕೊಂಡಿದ್ದೇವೆ. ಅದರ ಪ್ರಕಾರ ನಾನು ಮಾತನಾಡಲಿಲ್ಲ. ಅದರ ಬಗ್ಗೆ ಚರ್ಚೆ ಆಗಬೇಕೆಂದು ಆದರೆ ಚರ್ಚೆಮಾಡೋಣ. ಆಗ ಯಾವ ಯಾವ ರಾಜಕೀಯ ಪಕ್ಷಗಳ ನಿಲುವು ಏನು ಎನ್ನತಕ್ಕಂಥ ಬಗ್ಗೆ ಚರ್ಚೆ ಮಾಡೋಣ. ನಾನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುವುದೇನೆಂದರೆ, ಸರ್ವ ಪಕ್ಷಗಳ ಸದಸ್ಯರು ನಿಯೋಗ ಹೋದಾಗ ಶ್ರೀಮಾನ್ ಎಲ್. ಕೆ. ಅದ್ವಾನಿಯವರನ್ನು ನೋಡಿದ್ದೇವೆ. ಬಹುಶಃ ಅವರಷ್ಟು ಪೇಶನ್ಸ್ ಆಗಿ ವಿಚಾರವನ್ನು ಬೇರೆಯವರು ಯಾರೂ ಕೇಳಲಿಲ್ಲ. ನಾವು ಚಂದ್ರಶೇಖರ್‌ರವರನ್ನು ನೋಡಿದೆವು. ಶ್ರೀಮಾನ್ ಎಲ್. ಕೆ. ಅದ್ವಾನಿಯವರನ್ನು ನೋಡಿದೆವು. ನಮ್ಮ ಜೈಪಾಲ ರೆಡ್ಡಿ ವಿರೋಧ ಪಕ್ಷದ ನಾಯಕರನ್ನು ನೋಡಿದೆವು. ಹಾಗೆಯೇ ಎಲ್ಲಾ ವಿವಿಧ ಪಕ್ಷಗಳ ಮುಸ್ಲಿಂಲೀಗ್ ಅಧ್ಯಕ್ಷರಾದ ಸುಲೇಮಾನ್ ಸೇಠ್ ರವರನ್ನು ನೋಡಿದೆವು. ನೋಡಿ. ಎಲ್ಲರಿಗೂ ನಾವು ನಮ್ಮ ಅಭಿಪ್ರಾಯವನ್ನು ಹೇಳಿದ್ದೇವೆ. ಶ್ರೀ ಎಲ್.ಕೆ. ಅದ್ವಾನಿಯವರು ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದರು. ಚಂದ್ರಶೇಖರ್‌ರವರು ಅದನ್ನೇ ಹೇಳಿದರು. ಅದನ್ನೇ ಶ್ರೀ ವಿ. ಪಿ. ಸಿಂಗ್‌ರವರು ಹೇಳಿದರು. ಅದೇನೆಂದರೆ ಎರಡೂ ರಾಜ್ಯಗಳ ಸಂಬಂಧ ಯಾವ ಒಂದು ನದಿ ನೀರಿನಿಂದ ಬೆಂಕಿ ಆರಿಸಬೇಕಾಗಿತ್ತೋ ಆ ನೀರು ಬೆಂಕಿ ಹಚ್ಚುವುದಕ್ಕೆ ಅವಕಾಶ ಕೊಡಬೇಡಿ ಎಂದು ಬಹಳ ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಹೇಳಿದರು. ಅವರು ಅಷ್ಟಕ್ಕೆ ಬಿಡಲಿಲ್ಲ. I would like to draw the attention of the House that in the National Integration Council meeting an unanimous resolution has been passed. What is the status of National Integration Council? That is the highest national forum.

ಅಲ್ಲಿ ಪಾಸ್ ಮಾಡಿರತಕ್ಕಂಥ ನಿರ್ಣಯ. ಇದು ಮಾತು ಕತೆಯಿಂದ ಬಗೆಹರಿಯಬೇಕು. ಎನ್ನತಕ್ಕಂಥ ನಿಲುವು ಇತ್ತು. ಅಲ್ಲಿ ಪ್ರಧಾನ ಮಂತ್ರಿಗಳು ಇದ್ದರು. ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಇದ್ದರು. ಕೇಂದ್ರದ ಮಂತ್ರಿಗಳು ಇದ್ದರು. ರಾಜ್ಯದ ಮುಖ್ಯಮಂತ್ರಿಗಳು ಇದ್ದರು. ಅಲ್ಲಿ ಪಾಸ್ ಮಾಡಿದಂತಹ ತೀರ್ಮಾನವನ್ನು ಡೆಫರ್

ಮಾಡತಕ್ಕಂಥ ಸಾಮರ್ಥ್ಯ ಅಥವಾ ಶಕ್ತಿ ಅಧಿಕಾರ ತಮಿಳುನಾಡಿಗೆ ಇದೆ ಎಂದು ಆದರೆ, ಈ ದೇಶದಲ್ಲಿ ಹೇಗೆ ನಡೆದು ಹೋಗುತ್ತದೆ? ಅದಕ್ಕಾಗಿ ನಾನು ಹೆಚ್ಚು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ;- ಮಾನ್ಯ ಉಪಾಧ್ಯಾಕ್ಷಣೀಯವರೇ, ನಾನು ಅದಕ್ಕೆ ಒಂದೇ ಒಂದು ಮಾತು ಜೋಡಿಸುವುದೇನೆಂದರೆ ಯಾವ ಕಾರಣಕ್ಕೂ ಸಹ, ರಾಜ್ಯದ ಜನ ತಮಿಳುನಾಡು ಜನಗಳಿಗೆ ನ್ಯಾಯವಾಗಿ ಸಿಗಬೇಕಾದಂತಹ ನೀರನ್ನು ಬಿಡುವುದಕ್ಕೆ ವಿರೋಧ ಮಾಡುವುದಿಲ್ಲ. ಆದರೆ ಇಡೀ ದೇಶದಲ್ಲಿ ನಾವು ತಮಿಳುನಾಡಿಗೆ ನ್ಯಾಯವಾಗಿ ಸಿಗತಕ್ಕಂಥ ನೀರನ್ನು ಕೊಡುತ್ತಿಲ್ಲ ಎಂದು ಒಂದು ಕೆಟ್ಟ ಅಭಿಪ್ರಾಯ ಇದೆ. ಟ್ರಿಬ್ಯೂನಲ್ ಮತ್ತು ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿ ನಾವು ನಡೆದು ಕೊಳ್ಳುತ್ತಿದ್ದೇವೆ ಎನ್ನತಕ್ಕಂಥ ಭಾವನೆ ಏನು ಇದೆ ಅದು ಸರಿ ಅಲ್ಲ ಎನ್ನುವ ಮಾತನ್ನು ನಾನು ಈ ಒಂದು ಸದನದ ಮೂಲಕ ತಮಿಳುನಾಡು ಸರ್ಕಾರಕ್ಕೆ ಮತ್ತು ಜನತೆಗೆ ಸ್ಪಷ್ಟ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ನಿಮಗೆ ಸಮಸ್ಯೆ ಬಂದಾಗ ನೀರು ಬೇಕೆಂದು ಬಂದಾಗ ಪ್ರತಿಯೊಂದು ಸಂದರ್ಭದಲ್ಲೂ ಸಹ ನೀರು ಇರಲಿ ನೀರು ಇಲ್ಲದೆ ಇರಲಿ ನಿಮ್ಮ ಬೆಳೆಗೆ ನಾವು ನೀರು ಕೊಟ್ಟಿದ್ದೇವೆ. ಈಗಲೂ ಸಹ ನ್ಯಾಯಬದ್ಧವಾಗಿ ಕೊಡತಕ್ಕಂಥ ನೀರು ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ ಮತ್ತೆ ಇದು ಮಾತುಕತೆ ಮೂಲಕ ಬಗೆಹರಿಯಬೇಕು. ನಾವೆಲ್ಲ ಅಣ್ಣ ತಮ್ಮಂದಿರಂತೆ ಬದುಕಿಬಾಳುವಂಥಾದ್ದು ಎರಡು ರಾಜ್ಯಗಳ ಸಂಬಂಧ ಬೆಳೆಯಬೇಕು ನಮ್ಮ ಸಂಬಂಧ ಕೆಡಬಾರದು ಎಂದು ಮಾತ್ರ ನಾನು ಹೇಳಿದೆ. ಈಗಲೂ ಸಹ ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವ ದೃಷ್ಟಿಯಿಂದ ಪದೇ ಪದೇ ಈ ಮಾತನ್ನು ನಾವು ಹೇಳುವಂತಹ ಪ್ರಯತ್ನ ಮಾಡುತ್ತಿದ್ದೇವೆ. ನಾನು ಇನ್ನೊಂದು ಪ್ರಮುಖವಾದ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷಣೀಯವರು:- ಬೇಗ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ;- ಇನ್ನೂ ಯಾವ ಪಾಯಿಂಟ್ ನನ್ನದು ಮುಗಿದಿಲ್ಲ.

ಉಪಾಧ್ಯಕ್ಷಣೀಯವರು:- 5 ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ;- ಮಾನ್ಯ ಅಧ್ಯಕ್ಷಣೀಯವರೇ ಕಳೆದ ಒಂದು ಗಂಟೆಯಿಂದ ಹಿರಿಯ ಸದಸ್ಯರಾದ ಶ್ರೀ ರಂಗನಾಥ್‌ರವರು ಬಹಳ ಪ್ರಾಮುಖ್ಯವಾದ ವಿಷಯದ ಬಗ್ಗೆ ಮಾತನಾಡುತ್ತಿದ್ದರು. ಅದಕ್ಕೆ ನಾನು ಮಾತನಾಡಲಿಲ್ಲ, ನಾನು ಎಲ್ಲಾ ಪಾಯಿಂಟ್‌ಗಳ ವಿವರಕ್ಕೆ ಹೋಗುವುದಿಲ್ಲ. ನನ್ನಲ್ಲಿ 20 ಪಾಯಿಂಟ್ಸ್ ಇವೆ. ನಾನು ಆ ಬಗ್ಗೆ ಮಾತನಾಡಬೇಕಾಗಿದೆ.....

ಶ್ರೀ ವಾಟಾಳ್ ನಾಗರಾಜ್:- ಅವರು 20 ಪಾಯಿಂಟ್ಸ್ ಮಾತನಾಡಿ ಮುಗಿಸುವುದರೊಳಗೆ ನಾವು ಹೋಗಿ ಊಟ ಮಾಡಿಕೊಂಡು ಬರುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ;- ನಾನು ಇನ್ನು ಒಂದು ಗಂಟೆಯಲ್ಲಿ ಮುಗಿಸುತ್ತೇನೆ.

ಶ್ರೀ ಆರ್. ದಯಾನಂದ್‌ರಾವ್:- ಬೇರೆಯವರು ಮಾತನಾಡುವವರಿದ್ದಾರೆ....

ಉಪಾಧ್ಯಕ್ಷಣೀಯವರು:- ಇವತ್ತು ಚರ್ಚೆ ಮುಗಿದು ನಾಳೆ ಉತ್ತರ ಕೊಡಬೇಕು. ಇನ್ನು 28 ಜನರ ಪಟ್ಟಿ ನನ್ನಲ್ಲಿ ಇದೆ. ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ತಾವು 5-10 ನಿಮಿಷದಲ್ಲಿ ಮುಗಿಸಿ. ನೀವೆಲ್ಲಾ ನನಗೆ ಸಹಕಾರ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:- ಒಂದು ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಮೊನ್ನೆ 25ನೇ ತಾರೀಖು ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅಕ್ರಮ ಸಂಪತ್ತು ಮತ್ತು ವರಮಾನಕ್ಕಿಂತ ಹೆಚ್ಚು ಆದಾಯ ಹೊಂದಿದ್ದರೆನ್ನಾಲಾದ ಕೆಲವು ಅಧಿಕಾರಿಗಳ ಮೇಲೆ ಲೋಕಾಯುಕ್ತರು ಮೊಕದ್ದಮೆ ದಾಖಲು ಮಾಡಿ ತದನಂತರ ನ್ಯಾಯಾಲಯದಲ್ಲಿ 'ಬಿ' ರೀಪೋರ್ಟ್ ಸಲ್ಲಿಸುವ ಬಗ್ಗೆ ಪ್ರಸ್ತಾಪ ಮಾಡಿದಾಗ ಉತ್ತರ ಏನು ಬಂದಿದೆ ಎಂದರೆ ಅಕ್ರಮ ಸಂಪತ್ತು ಹಾಗೂ ವರಮಾನಕ್ಕಿಂತ ಹೆಚ್ಚು ಆದಾಯ ಹೊಂದಿದ್ದರೆನ್ನಲಾದ ಅಧಿಕಾರಿಗಳ ವಿರುದ್ಧ ವಿವರವಾದ ತನಿಖೆ ಮಾಡಿ ತದನಂತರ ಸದರಿ ಆರೋಪ ಸಾಬೀತಾಗಿಲ್ಲದ ಕಾರಣ ಈ ಪ್ರಕರಣಗಳಿಗೆ ಸಂಬಂಧಪಟ್ಟ ಹಾಗೆ 'ಬಿ' ರಿಪೋರ್ಟ್ ಸಲ್ಲಿಸಲಾಗಿದೆ ಎಂದು ಈ 30 ಜನರ ಬಗ್ಗೆ ವರದಿ

ಸಲ್ಲಿಸಲಾದ ಪಟ್ಟಿ ಕೊಟ್ಟಿದ್ದಾರೆ. ನಾನು ಇಲ್ಲಿ ಏನು ಹೇಳುತ್ತಿದ್ದೇನೆಂದರೆ ಮಾನ್ಯ ಅಧ್ಯಕ್ಷರೇ ಈ 30 ಜನರ ಬಗ್ಗೆ ಲೋಕಾಯುಕ್ತರಿಂದ ತನಿಖೆ ಆಯಿತು. ತನಿಖೆಯಾದಂತಹ ಒರಿಜನಲ್ ಡಾಕ್ಯುಮೆಂಟ್ಸ್ ಝೆರಾಕ್ಸ್ ಕಾಪಿಯನ್ನು ನಾನು ಇಟ್ಟುಕೊಂಡಿದ್ದೇನೆ.

3 ಜನ ಪ್ರಮುಖರ ಬಗ್ಗೆ ನಿಮ್ಮ ಕೊಠಡಿಗೆ ಇವತ್ತು ನಾನು ಬರುತ್ತೇನೆ. ಈ ರಾಜ್ಯದ ಮುಖ್ಯ ಮಂತ್ರಿಗಳೂ ಅಲ್ಲಿ ಒಳಗೆ ಬರಲಿ. ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಚಂದ್ರೇಗೌಡರೂ ಒಳಗೆ ಬರಲಿ. ಯಾವ ತನಿಖೆಯಾಗಿದೆ? ನಿಶ್ಚಿತವಾದ ಆದಾಯದಿಂದ ಕೋಟ್ಯಾಂತರ ರೂಪಾಯಿಗಳ ಹೆಚ್ಚು ಸಂಪತ್ತನ್ನು ಗಳಿಸಿದ್ದಾರೆ. ಇವರನ್ನು ಸಸ್ಪೆನ್‌ಷನ್‌ನಲ್ಲಿ ಇಡಬೇಕು. ತನಿಖೆಯಾಗಬೇಕು. ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಈ ಲೋಕಾಯುಕ್ತ ಅಧಿಕಾರಿಗಳು ಕೇಳಿರುವಂಥಾದ್ದು, ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಿಮ್ಮ ಕೊಠಡಿಯಲ್ಲಿ ನಿಮಗೆ ಕೊಡುತ್ತೇನೆ. ನನ್ನ ಒತ್ತಾಯ ಏನೆಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರಾದಂಥ ಚಂದ್ರೇಗೌಡರು ಮತ್ತು ಅಧ್ಯಕ್ಷರು, ಇಲ್ಲಾ ಯಡಿಯೂರಪ್ಪನವರೇ ನೀವು ಕೊಟ್ಟಿರುವಂಥ ದಾಖಲೆ ಸರಿಯಾಗಿದೆ ಯಾವ ಕಾರಣಕ್ಕೂ 'ಬಿ' ರಿಪೋರ್ಟ್ ಕೊಡುವುದಕ್ಕೆ ಸಾಧ್ಯವಿಲ್ಲದಂಥ ದಾಖಲೆಗಳು ಇಲ್ಲಿವೆ ಎಂದು ನಿಮಗೆ ಮನವರಿಕೆಯಾದರೆ, ಅವರು ಯಾವ ಅಧಿಕಾರಿ ಇದ್ದಾರೆ, ಅವರಿಗೆ ಯಾವ ಉನ್ನತ ಸ್ಥಾನ ಕೊಟ್ಟಿದ್ದೀರೋ ಅವರನ್ನು ಸಸ್ಪೆನ್‌ಷನಲ್ಲಿ ಇಡಬೇಕು. ತನಿಖೆ ಮಾಡಿದಂಥ ಅದೇ ಇಲಾಖೆ 'ಬಿ' ರಿಪೋರ್ಟ್‌ನ್ನು ಕೊಟ್ಟಿವೆ? ಆ ಅಧಿಕಾರಿಯನ್ನೂ ಸಸ್ಪೆನ್‌ಷನ್‌ನಲ್ಲಿ ಇಟ್ಟು ಇದರ ಮೇಲೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ರೀತಿ ಮೂರ್ನಾಲ್ಕು ದಾಖಲೆಗಳನ್ನು ಈಗಲೇ ಇನ್ನು 10 ನಿಮಿಷದಲ್ಲಿ ನಿಮಗೆ ಕೊಡಲಿಕ್ಕೆ ಸಿದ್ಧನಿದ್ದೇನೆ. ಏತಕ್ಕೆಂದರೆ' ಬಹಳ ವ್ಯವಸ್ಥಿತವಾಗಿ ಈ ಸರ್ಕಾರ ಕೆಲವು ಭ್ರಷ್ಟ ಅಧಿಕಾರಿಗಳನ್ನು ಉನ್ನತ ಆಯಕಟ್ಟಿನ ಸ್ಥಾನಕ್ಕೆ ತಂದು ಕೂಡಿಸಿಕೊಂಡು ಅವರ ಮನ ಬಂದಂತೆ ಅಧಿಕಾರ ನಡೆಸುತ್ತಿದ್ದು, ಅದಕ್ಕೆ ಬೆಂಬಲ ಕೊಟ್ಟು ಅವರನ್ನು ಇಟ್ಟುಕೊಳ್ಳುವಂಥ ಪ್ರಯತ್ನ ಮಾಡಿದೆ. ಅನೇಕ ಸಂದರ್ಭಗಳಲ್ಲಿ ಈ ಭ್ರಷ್ಟ ಅಧಿಕಾರಿಗಳು ಲೋಕಾಯುಕ್ತರಿಂದ ತನಿಖೆಯಾಗಿ ಶಿಕ್ಷೆ ಕೊಡಬೇಕಾಗಿತ್ತೋ ಅಂಥ ಅಧಿಕಾರಿಗಳನ್ನು ಉನ್ನತ ಸ್ಥಾನಕ್ಕೆ ತರುವಂಥ ಪ್ರಯತ್ನ ಮಾಡಿದೆ. ಇಂಥ ಒಂದು ಸಂದರ್ಭದಲ್ಲಿ ಜನತೆಯ ಸೇವಕರು ಆಗಬೇಕಾಗಿದ್ದಂಥ ಇಂಥಾ ಭ್ರಷ್ಟ ಅಧಿಕಾರಿಗಳಿಗೆ ಸರಿಯಾದಂಥ ಶಿಕ್ಷೆ ವಿಧಿಸಬೇಕಾದಂಥ ಸರ್ಕಾರ, ಅವರ ಜೊತೆ ಶಾಮೀಲಾಗಿ ಬೆಂಬಲ ಕೊಟ್ಟು ಅವರನ್ನು ಉನ್ನತ ಸ್ಥಾನಕ್ಕೆ ಏರಿಸಿರತಕ್ಕಂಥ ಅನೇಕ ದಾಖಲೆಗಳು, ಪ್ರಕರಣಗಳು ನಮ್ಮಲ್ಲಿ ಇದ್ದಾವೆ. ನಿಮ್ಮ ಕೊಠಡಿಯಲ್ಲಿ ಈ ದಾಖಲೆಗಳನ್ನು ತಂದು ಕೊಡುತ್ತೇನೆ. ಈ ಉನ್ನತ ಅಧಿಕಾರಿಗಳು ಲೋಕಾಯುಕ್ತದಲ್ಲಿ ತನಿಖೆಯಾಗಿ ಜೈಲಿನಲ್ಲಿ ಇಡಬೇಕಾದ ಅಧಿಕಾರಿಗಳನ್ನು ಸಸ್ಪೆನ್‌ಷನಲ್ಲಿ ಇಟ್ಟು ಅವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ಆ 3 ಜನ ಉನ್ನತ ಅಧಿಕಾರಿಗಳ ಬಗ್ಗೆ ಲೋಕಾಯುಕ್ತ ಮಾಡಿರುವಂಥ ದಾಖಲೆಗಳನ್ನು ಜೆರಾಕ್ಸ್ ಕಾಪಿ ಮಾಡಿ ಪ್ರಧಾನಿಯವರಿಗೆ, ರಾಷ್ಟ್ರಪತಿಯವರಿಗೆ, ಇಲ್ಲಿರುವಂಥ ರಾಜ್ಯಪಾಲರಿಗೆ, ಈ ನಾಡಿನಲ್ಲಿರುವಂಥ ಎಲ್ಲಾ ಪ್ರಮುಖರಿಗೆ ಈ ಸರ್ಕಾರ ಯಾವ ರೀತಿ ಲೋಕಾಯುಕ್ತದಲ್ಲಿ ತನಿಖೆಗೆ ಒಳಗಾಗಿದ್ದ ಅಧಿಕಾರಿಗಳು ಕೋಟಿ ಗಟ್ಟಲೆ ಅಕ್ರಮ ಸಂಪಾದನೆ ಮಾಡಿದ್ದರೂ ಆ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ, ಭ್ರಷ್ಟ ಅಧಿಕಾರಿಗಳಿಗೆ ಬೆಂಬಲಕ್ಕೆ ನಿಂತಿದ್ದಾರೆ ಎನ್ನುವುದನ್ನು ಜಗಜ್ಜಾಹಿರು ಮಾಡುವಂಥ ಅನಿವಾರ್ಯ ಪ್ರಸಂಗ ನಮಗೆ ಬರುತ್ತದೆ. ದಯಮಾಡಿ ತಮ್ಮ ಕೊಠಡಿಯಲ್ಲಿ ಬಂದಾಗ ಆ ದಾಖಲೆಗಳನ್ನು ನೋಡಿ. ನಿಮ್ಮ ಆ ಒರಿಜನಲ್ ಡಾಕ್ಯುಮೆಂಟ್‌ಗಳನ್ನು ನೋಡಿ ಪರಿಶೀಲನೆ ಮಾಡಿ ತಕ್ಷಣ ಆ ಅಧಿಕಾರಿಗಳನ್ನು ಸಸ್ಪನ್‌ಷನ್‌ನಲ್ಲಿ ಇಡಬೇಕೆಂದು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಇನ್ನು ಸನ್ಮಾನ್ಯ ಮಂತ್ರಿಗಳೂ ಇಲ್ಲ, ಮುಂದಿನ ಬೆಂಚಿನಲ್ಲಿ ಸಂಬಂಧಪಟ್ಟ ಅಧಿಕಾರಿಗೂ ಇಲ್ಲ, ಯಾರಿಗೂ ಬೇಡ. ನಿಮಗೆ ಸಮಾಧಾನವಾಗುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಅವರೆಲ್ಲಾ, ನೀವು ಹೇಳಿದರಲ್ಲಾ ಆ ಕೆಲಸಕ್ಕೆ ಹೋಗಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ನೀವು ಮಾತನಾಡುತ್ತಿರುವುದು ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ. ನಿಮ್ಮ ಕಿನ್ನರಿ ಹೊಡೆದುಕೊಂಡರೆ ಅಲ್ಲಿ ಕೇಳುವವರೂ ಇಲ್ಲಾ ಹೇಳುವವರೂ ಇಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ:- ಅಲಿಗೇಷನ್ ಇದ್ದಾಗ ಅದರ ಬಗ್ಗೆ ಏನಾದರೂ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:- ನಾನು ಒಂದು ಪ್ರಮುಖವಾದ ಸಂಗತಿಯನ್ನು ಹೇಳುತ್ತೇನೆ. ಗ್ರ್ಯಾನೈಟ್ ಕಲ್ಲಿನ ಹಗರಣದ ಬಗ್ಗೆ 2-9-1991 ರಂದು ದೊಡ್ಡ ಗೊಂದಲವಾಯಿತು. ಶುಕ್ರವಾರ ಧರಣಿ ಕುಳಿತುಕೊಂಡು

ಅವನ್ನು ಸೋಮವಾರಕ್ಕೂ ಮುಂದುವರಿಸಿದೆವು. ಈ ಕಡೆ ಕುಳಿತಂಥವರು ಅದಕ್ಕೆ ವಿರೋಧ ಮಾಡಿ 210 ಜನಕ್ಕೆ ಕಾನೂನು ಬಾಹಿರವಾಗಿ ಲೈಸನ್ಸ್ ಕೊಟ್ಟ ಬಗ್ಗೆ ತನಿಖೆ ಆಗಬೇಕೆಂದು ಆಗ್ರಹ ಮಾಡಿದೆವು. ಒಳಗಡೆ ಹೋದಾಗ ಸನ್ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಒಂದು ಸಮ್ಮತಿಗೆ ಬಂದು ಸದನದ ಸಮಿತಿ ಮಾಡಿ ತನಿಖೆ ಮಾಡುತ್ತೇವೆಂದು ಹೇಳಿದರು. ಮಾನ್ಯ ಅಧ್ಯಕ್ಷಣಿಯವರೇ, ಅದಕ್ಕೆ ಸಂಬಂಧಪಟ್ಟಂತೆ ಆ ಸಮಿತಿಯ ಅಧ್ಯಕ್ಷರಿಗೆ ಮೊದಲನೇಯ ದಿವಸವೇ ಪತ್ರ ಬರೆದೆ. ಈ ಸಮಿತಿಯನ್ನು ಏನು ಮಾಡಿದ್ದೀರಿ, ಅಲ್ಲಿ ಬಹುಶಃ ಅಧ್ಯಕ್ಷರಿಗೆ ಸರಿಯಾದಂಥ ಮಾಹಿತಿ ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಯಾವ 210 ಜನಕ್ಕೆ ಕಾನೂನು ಬಾಹಿರವಾಗಿ ಲೈಸನ್ಸ್ ಕೊಟ್ಟು ಒಂದೇ ದಿವಸದಲ್ಲಿ ಲೈಸನ್ಸ್ ಕೊಟ್ಟಿದ್ದಾರೋ ಅವರ ಬಗ್ಗೆ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಇದ್ದರೆ ಅಲ್ಲಿ ಆ ಟರ್ಮ್ಸ್ ಆಫ್ ರೆಫರೆನ್ಸ್‌ಗೆ ಸಂಬಂಧಪಟ್ಟಿದ್ದುದು ಯಾವುದೂ ಇಲ್ಲ. ಆದ್ದರಿಂದ, ಆ ಸಮಿತಿ ಸಭೆಗಳಲ್ಲಿ ನಾನು ಭಾಗವಹಿಸುವುದಿಲ್ಲವೆಂದು ಮೊದಲನೇ ದಿವಸವೇ ಪತ್ರ ಬರೆದು ಕಳುಹಿಸಿದ್ದೇನೆ. ಇದುವರೆಗೂ ನಾನು ಯಾವುದೇ ಸಭೆಯಲ್ಲಿ ಭಾಗವಹಿಸಲಿಲ್ಲ. ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ? ನಿಜವಾಗಿಯೂ ಈ ಗ್ರ್ಯಾನೈಟ್ ಹಗರಣದಲ್ಲಿ 210 ಜನಕ್ಕೆ ಒಂದೆ ದಿನ ಲೈಸನ್ಸ್ ಕೊಟ್ಟು, ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಸುಮಾರು 500 ಕೋಟಿ ರೂಪಾಯಿಗಳ ಹಣ ಲೂಟಿ ಮಾಡುವಂಥ ಪ್ರಯತ್ನ ಸರ್ಕಾರ ಏನು ಮಾಡಿದೆ ಅದರ ಬಗ್ಗೆ ಆರೋಪ ಇದೆ. ಅನೇಕ ಶಾಸಕರ ಹೆಸರಿಗೆ ಲೈಸನ್ಸ್ ಕೊಟ್ಟಿದ್ದಾರೆಂದು ಇದೆ. ಮಂತ್ರಿಗಳ ಹೆಸರಿನಲ್ಲೂ ಇದೆ ಎಂದು ಹೇಳುತ್ತಾರೆ. ಮಂತ್ರಿಗಳ ಸಂಬಂಧಿಕರ ಹೆಸರಿನಲ್ಲೂ ಇದೆಯೆಂದು ಹೇಳುತ್ತಾರೆ. ನೀವು ಈ ಆರೋಪದಿಂದ ಮುಕ್ತವಾಗಬೇಕು. ಯಾರು ಯಾರಿಗೆ ಕೊಟ್ಟಿದ್ದೀರಿ? ಏಕೆ ಕೊಟ್ಟಿದ್ದೀರಿ? ಇದರ ಬಗ್ಗೆ ತನಿಖೆಯಾಗಬೇಕೆಂದು ಈ ಒತ್ತಾಯವನ್ನು ತಂದೆ.

ಶ್ರೀ ಕೆ.ಹೆಚ್. ರಂಗನಾಥ್:- ಸದನದ ಕಮಿಟಿ ಕಾನ್ಸಟಿಟ್ಯೂಟ್ ಆಗಿದೆ. ಅದು ರೆಫರೆನ್ಸ್ ಆಗದೆ ಹೋದರೆ ಕಾಗದ ಬರೆದು ಏನು ಬೇಕಾದರೂ ಮಾಡಿ. ಸಮಿತಿ ಇನ್ನು ಕೆಲಸ ಮಾಡುತ್ತಾ ಇರುವುದರಿಂದ ನಾವು ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ನಿಮ್ಮ ಗಮನಕ್ಕೆ ತರತಕ್ಕಂಥದು ಏನೆಂದರೆ, ಈ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಏನು ಹೇಳಿದ್ದಾರೆ ಎಂದರೆ to suggest measures for the comprehensive perspective.....

ಶ್ರೀ ಕೆ.ಹೆಚ್. ರಂಗನಾಥ್:- ಇದು ಅಧ್ಯಕ್ಷರಿಗೆ ಬಿಟ್ಟಿದ್ದುದು. What is the point of questioning here now?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಪ್ರಶ್ನೆ ಮಾಡುತ್ತಾ ಇಲ್ಲ. ಸಜೆಷನ್ಸ್ ಕೊಡುತ್ತಾ ಇದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್:- ಇದು ಒಳ್ಳೆಯ ಸಂಪ್ರದಾಯ ಆಗುವುದಿಲ್ಲ. ಇದು ಅಧ್ಯಕ್ಷರಿಗೆ ಬಿಟ್ಟಿದ್ದುದು. ಅವರು ಕಮಿಟಿಯನ್ನು ಕಾನ್ಸಟಿಟ್ಯೂಟ್ ಮಾಡಿದ್ದಾರೆ ಇದನ್ನು ರೆಫರ್ ಮಾಡಿದ್ದಾರೆ. ನನಗೆ ಡೀಟೈಲ್ಸ್ ಎಲ್ಲಾ ಗೊತ್ತಿಲ್ಲ. ಒಂದು ವೇಳೆ ಏನಾದರೂ ಇದ್ದರೆ ಮಾನ್ಯ ಸದಸ್ಯರು ಅವರ ಜೊತೆಯಲ್ಲಿ ಪ್ರಸ್ತಾಪ ಮಾಡಿದರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ 210 ಜನಕ್ಕೆ ಲೈಸನ್ಸ್ ಏನು ಕೊಟ್ಟಿದ್ದೀರಿ ಅದನ್ನು ತನಿಖೆ ಮಾಡತಕ್ಕ ಹಕ್ಕಿಲ್ಲ. ಅಧಿಕಾರವನ್ನು ಕೊಡುವುದಕ್ಕೆ ತಾವು ಗಮನವನ್ನು ಕೊಡಬೇಕು ಎನ್ನತಕ್ಕಂಥ ವಿನಂತಿಯನ್ನು ಮಾತ್ರ ಈ ಸಂದರ್ಭದಲ್ಲಿ ಮಾಡುತ್ತಾ ಇದ್ದೇನೆ, ಇಲ್ಲದೆ ಹೋದರೆ ಈ ಭ್ರಷ್ಟಚಾರ ಹೊರಗೆ ಬರುವುದಿಲ್ಲ. ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ಶ್ರೀ ನಾಗರಾಜ್‌ರವರು ಹೇಳುತ್ತಾರೆ. ಇನ್ನು ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯತಿಗಳ ಚುನಾವಣೆಗಳ ಬಗ್ಗೆ ನಾನು ಒತ್ತಾಯ ಮಾಡತಕ್ಕದ್ದು ಏನೆಂದರೆ ನಿಮಗೆ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ನಂಬಿಕೆ ಇದ್ದರೆ....

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್:- ತಾವು ಇದೇ ಮನೆಯ ಸದಸ್ಯರು ಇದ್ದೀರಿ. ಅಧ್ಯಕ್ಷರಿಗೆ ಏತಕ್ಕೆ ವಹಿಸಿಕೊಟ್ಟಿದ್ದೇವೆ? ನಾವೇ ಮಾಡಬಹುದಾಗಿತ್ತಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರತಕ್ಕವರು ಹಿರಿಯರು ಇದ್ದಾರೆ....

(ಗೊಂದಲ)

ಉಪಾಧ್ಯಕ್ಷಣಿಯವರು:- ಎಲ್ಲರೂ ಮಾತನಾಡಿದರೆ ಹೇಗೆ?

ಶ್ರೀ ಸಿ. ಬೈರೇಗೌಡ:- ಆ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದೇನೆ, ಸಿಂಧ್ಯಾರವರು ಇದ್ದಾರೆ, ಚಂದ್ರೇಗೌಡರು ಇದ್ದಾರೆ, ಇತ್ತೀಚಿನ ಸಭೆಯಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂತು. ಇತ್ತೀಚಿನ ಸಮಿತಿಯ ಅಭಿಪ್ರಾಯದ ಪ್ರಕಾರ ಆ ಸಮಿತಿಗೆ ಎಲ್ಲಾ ವಿಚಾರಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡತಕ್ಕ ಅಧಿಕಾರ ಇದೆ ಎನ್ನತಕ್ಕ ಅಭಿಪ್ರಾಯಕ್ಕೆ ಆ ಸಮಿತಿ ಈಗಾಗಲೆ ಬಂದಿದೆ. ಆ ಸಮಿತಿಯಲ್ಲಿ ನಾನು ಸದಸ್ಯನಾಗಿ ಇರುವುದರಿಂದ ಅದನ್ನು ಇಲ್ಲಿ ಹೇಳದೆ ಹೋದರೆ ನನ್ನ ಕರ್ತವ್ಯಕ್ಕೆ ಚ್ಯುತಿ ಬರುತ್ತದೆ. ಆದ್ದರಿಂದ ಇದನ್ನು ತಮ್ಮ ಗಮನಕ್ಕೆ ಹಾಗೂ ಈ ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ನಾನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಬಗ್ಗೆ ಮಾತನಾಡುತ್ತಿದ್ದೆ, ಅಧಿಕಾರ ವಿಕೇಂದ್ರಿಕರಣದಲ್ಲಿ ನಿಮಗೆ ನಂಬಿಕೆ ಇದ್ದರೆ ದಯಮಾಡಿ ಕೂಡಲೆ ಚುನಾವಣೆಗಳನ್ನು ನಡೆಸಿ, ಈ ಸಂಸ್ಥೆಗಳ ಮೂಲಕ ಶ್ರೀಸಾಮಾನ್ಯನ ಸಮಸ್ಯೆಗಳನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೀರ? ಅಲ್ಲಿ ಲೋಪದೋಶಗಳು ಇರಬಹುದು, ಆದರೆ ಏಕಾಏಕಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ ಪರಿಣಾಮವಾಗಿ ಅಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗತಕ್ಕ ಸಂದರ್ಭ ಬಂದಿದೆ. ಈಗ ಬರಗಾಲ ಬಂದಿದೆ. ಕುಡಿಯಲು ನೀರಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಇನ್ನು ಆರು ತಿಂಗಳೊಳಗೆ ಈ ಚುನಾವಣೆಗಳನ್ನು ಮಾಡಬೇಕು. ನಿಮಗೆ ಚುನಾವಣೆಯಲ್ಲಿ ಗೆಲ್ಲಲು ಆಗದೇ ಇರತಕ್ಕ ಪರಿಸ್ಥಿತಿ ಈಗ ಬಂದಿರುವುದರಿಂದ ನಿಮಗೆ ಅಧಿಕಾರ ವಿಕೇಂದ್ರಿಕರಣದಲ್ಲಿ ನಂಬಿಕೆ ಇಲ್ಲ, ಆದ್ದರಿಂದ ಈ ಚುನಾವಣೆಗಳನ್ನು ಮುಂದೂಡುತ್ತಿದ್ದೀರಿ ಎಂಬ ಅಭಿಪ್ರಾಯಕ್ಕೆ ಜನ ಬರಬೇಕಾಗುತ್ತದೆ. ಆದ್ದರಿಂದ ತಕ್ಷಣ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮಾಡಬೇಕು ಎಂದು ನಾನು ಒತ್ತಾಯ ಪಡಿಸುತ್ತೇನೆ ಇನ್ನು ಅಕ್ಟ್ರಾಯಿ ತೆರಿಗೆ ಬಗ್ಗೆ ದಯಮಾಡಿ ಮತ್ತೊಮ್ಮೆ ಈ ತೆರಿಗೆಯನ್ನು ಹೊಸದಾಗಿ ಹಾಕುವ ಕೆಲಸ ಮಾಡಬೇಡಿ. ಇದು ಒಂದು ಪಾಳೆಗಾರಿಕೆ ವ್ಯವಸ್ಥೆ ಹಿಂದಿನ ಕಾಲದಲ್ಲಿ ಇತ್ತು. ಪ್ರತಿ ಊರಿನಲ್ಲಿ ಅಕ್ಟ್ರಾಯಿ ಕೊಡಬೇಕು. ಗೇಟ್‌ನಲ್ಲಿ ನಿಲ್ಲಬೇಕು. ಅವನು ಪರಿಶೋಧನೆ ಮಾಡಬೇಕು. ದುಡ್ಡು ಕೊಟ್ಟರೆ ಬಿಡುತ್ತಾರೆ ಇಲ್ಲದೆ ಹೋದರೆ ಬಿಡುವುದಿಲ್ಲ, ಇದರಿಂದ ಮತ್ತೊಮ್ಮೆ ಭ್ರಷ್ಟಚಾರಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಬಹುತೇಕ ಸದಸ್ಯರ ಅಭಿಪ್ರಾಯ ಇದಾಗಿರುವುದರಿಂದ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡತಕ್ಕದ್ದು ದಯಮಾಡಿ ಈ ಆಕ್ಟ್ರಾಯಿ ತೆರಿಗೆಯನ್ನು ಮತ್ತೆ ಜಾರಿಗೆ ಕೊಡಲು ಹೋಗಬೇಡಿ. 1976ರ ಜನವರಿಯಲ್ಲಿ ದೆಹಲಿಯಲ್ಲಿ ಸೇರಿದ್ದ ಮುಖ್ಯಮಂತ್ರಿಗಳ ರಾಷ್ಟ್ರೀಯ ಪರಿಷತ್ತಿನ ಸಭೆಯಲ್ಲಿ ಈ ಆಕ್ಟ್ರಾಯ್ ತೆರಿಗೆಯನ್ನು ಹಂತ ಹಂತವಾಗಿ ರದ್ದು ಮಾಡಬೇಕೆಂದು ಬದಲಿ ಸಂಪನ್ಮೂಲವನ್ನು ರೂಪಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಪುರಸಭೆ, ನಗರಸಭೆಗಳಿಗೆ ದುಡ್ಡು ಕೊಡಬೇಕಾದರೆ ಆ ಬಗ್ಗೆ ಮರುಚಿಂತನೆ ಮಾಡಿ ಬೇರೆ ಒಂದು ವ್ಯವಸ್ಥೆಯನ್ನು ಮಾಡಬೇಕು, ಈ ತೆರಿಗೆಯನ್ನು ಬೇರೆ ರೂಪದಲ್ಲಿ ಹಾಕಲು ಯೋಚನೆ ಮಾಡ ಬೇಕೆಂದು ಹೇಳುತ್ತೇನೆ. ಎಲ್ಲರ ಅಭಿಪ್ರಾಯಕ್ಕೆ ವಿರುದ್ಧವಾಗಿ ಇದನ್ನು ತರಬೇಡಿ.

ಮಾನ್ಯ ಅಧ್ಯಕ್ಷರೇ, ದೇಶದಲ್ಲಿಯೇ ಮೊದಲ ಬಾರಿಗೆ ಇಲ್ಲಿ ಇದ್ದಕ್ಕಿದ್ದ ಹಾಗೆ ಒಂದು ಆರ್ಡಿನೆನ್ಸನ್ನು ಈ ಸರಕಾರ ಹೊರಡಿಸಿ 500 ಕೋಟಿ ರೂಪಾಯಿಗಳನ್ನು ಪಡೆಯುವಂಥ ಒಂದು ಅಧಿಕಾರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಪಡೆದಿದ್ದಾರೆ. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮನೆಗಳಲ್ಲಿ ವಯಸ್ಸಾದಂಥ ಜನರು ತಮ್ಮ ಮಗನನ್ನು ಕೇಳುತ್ತಾರೆ, ನನಗೆ ಒಂದು ಸಾವಿರ ಕೊಟ್ಟು ಬಿಡು, ನಾನು ಅದನ್ನು ಯಾರಿಗಾದರೂ ಕೊಡುತ್ತೇನೆ, ಯಾರಿಗಾದರೂ ದಾನ ಮಾಡುತ್ತೇನೆ, ನನ್ನನ್ನು ಕೇಳಬೇಡ ಎಂದು ಹೇಳುತ್ತಾರೆ. ಹಾಗೆ ಇದು ಆಗುತ್ತದೆ. ಆತುರ ಪಟ್ಟರೆ ಹೀಗೆ ಆಗುತ್ತದೆ. ಈ ರೀತಿಯಾಗಿ ಹಣಪಡೆಯುವ ಅಧಿಕಾರವನ್ನು ಪಡೆಯುವಂಥ ಕೆಲಸವನ್ನು ಯಾವುದೇ ಮುಖ್ಯಮಂತ್ರಿಗಳು ಮಾಡಿಲ್ಲ. ಅಗತ್ಯವಿಲ್ಲದ ಪ್ರಚಾರಕ್ಕೋಸ್ಕರ ಹೋದ ಕಡೆಗಳಲ್ಲಿ ಕೆಲವು ಗೋಷ್ಠಿಗಳನ್ನು ಮಾಡುವುದಕ್ಕೆ ಅನುಕೂಲವಾಗಲಿ ಎಂದು ಹೇಳಿ, ಈ ರೀತಿಯ ಅಧಿಕಾರವನ್ನು ತಾವುಗಳು ಏನು ಪಡೆದಿದ್ದೀರಾ ಇದು ನಿಜವಾಗಿಯೂ ತಮಗೆ ಗೌರವವನ್ನು ತರುವಂಥ ಸಂಗತಿ ಆಗುವುದಿಲ್ಲ. ಹಣಕಾಸಿನ ಚೌಕಟ್ಟಿಗೆ ಒಂದು ಕೆಟ್ಟ ಹೆಸರು ತರುವಂಥ ಕೆಲಸವನ್ನು ತಾವುಗಳು ಮಾಡುತ್ತಾ ಇದ್ದೀರಿ, ಹಿಂದೆ

ಯಾವುದೇ ಮುಖ್ಯಮಂತ್ರಿಯು ಇದನ್ನು ಮಾಡಿರಲಿಲ್ಲ, ದಯಮಾಡಿ ಇಂಥ ಅಧಿಕಾರವನ್ನು ಏನು ಪಡೆದಿದ್ದೀ ಅದನ್ನು ಕೈಬಿಡಬೇಕೆಂದು ಒತ್ತಾಯವನ್ನು ನಾವು ಮಾಡುತ್ತೇವೆ.

ರೈತರ ಪ್ರಶ್ನೆ ಬಂದಾಗ ಹೇಳಬೇಕಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಕಬ್ಬಿನ ಬೆಳೆ ಬಂದು ಕಟಾವು ಮಾಡುವುದಕ್ಕೆ 2-3 ತಿಂಗಳು ಸಮಯ ಮುಗಿದಿದ್ದರೂ ಕೂಡ ಕಬ್ಬನ್ನು ಕಟಾವು ಮಾಡುವುದಕ್ಕೆ ಪರ್ಮಿಷನ್ ಕೊಡುತ್ತಾ ಇಲ್ಲ. ಇನ್ನೂ ಕೆಲವು ವೇಳೆ ನಾವು ಕಬ್ಬು ಕೊಟ್ಟು ಎರಡು ತಿಂಗಳು ಆದರೂ ಕೂಡ ನಮಗೆ ದುಡ್ಡು ಕೊಡುತ್ತಾ ಇಲ್ಲ. ಈ ಪರಿಸ್ಥಿತಿ ಇದ್ದರೂ ಕೂಡ ಸರಕಾರ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದೆ. ಅವಕ್ಕೋಸ್ಕರ ಈ ಕಬ್ಬು ಬೆಳೆಗಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಗೊಬ್ಬರದ ಬೆಲೆಗಳು ಗಗನಕ್ಕೇರಿರುವ ಸಂದರ್ಭದಲ್ಲಿ ಕನಿಷ್ಟ ಟನ್‌ಗೆ 550 ರೂಪಾಯಿಗಳನ್ನು ಕೊಡದಿದ್ದರೆ ನಾವು ಬದುಕುವುದಕ್ಕೆ ಸಾಧ್ಯವಿಲ್ಲ. ಮತ್ತು ಅಲ್ಲಿ ಸಕ್ಕರೆ ಕಾರ್ಖಾನೆಯಿಂದ ಪೇಮೆಂಟ್ ಆಗುತ್ತಾ ಇಲ್ಲ, ಪೇಮೆಂಟ್ ಆಗುವ ರೀತಿ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಈ ಲಂಬಾಣಿ ತಾಂಡಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾಗಬೇಕೆಂದು ಸರಕಾರ ಕೂಡ ಇದರ ಬಗ್ಗೆ ಆಶ್ವಾಸನೆಯನ್ನು ವ್ಯಕ್ತಪಡಿಸಿತ್ತು. ಆದ್ದರಿಂದ ದಯಮಾಡಿ ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ 140 ಖಾಸಗಿ ಐಟಿಐಗಳು ಇವೆ. ಅದರಲ್ಲಿ ಸುಮಾರು 15 ಸಾವಿರ ವಿದ್ಯಾರ್ಥಿಗಳಿಗೆ ತರಬೇತು ಕೊಡುತ್ತಾ ಇದ್ದಾರೆ. ಈ ಕೈಗಾರಿಕಾ ತರಬೇತು ಸಂಸ್ಥೆಯಲ್ಲಿ ಯುವಕರು ಉದ್ಯೋಗಾವಕಾಶವನ್ನು ಒದಗಿಸುಕೊಳ್ಳುವ ವ್ಯವಸ್ಥೆ ಇರುತ್ತದೆ. ಆದರೆ ಇವೊತ್ತು ಆ ಸಂಸ್ಥೆಗಳಿಗೆ ಸರಕಾರದವರು ಅನುದಾನವನ್ನು ಕೊಡುತ್ತಾ ಇಲ್ಲ. ಇದು ತುಂಬಾ ಅನುಕೂಲಕರವಾಗಿರತಕ್ಕಂಥ ಹಾಗೂ ಯುವಕರು ತಮ್ಮ ಕಾಲ ಮೇಲೆ ತಾವು ನಿಲ್ಲಲೂ ಮತ್ತು ಅಭಿವೃದ್ಧಿ ಕೆಲಸಗಳನ್ನು ಮಾಡಲು ಯೋಗ್ಯ ಯೋಜನೆಯಾಗಿದ್ದು ಇದಕ್ಕೆ ಅನುದಾನವನ್ನು ಕೊಡಬೇಕು. ಸರಕಾರದವರು ಐಟಿಐಗಳನ್ನು ಹೆಚ್ಚು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಲಾರದ ಸ್ಥಿತಿಯಲ್ಲಿ ಇರುವುದರಿಂದ ಖಾಸಗೀಯವರು ಏನು ನಡೆಸುತ್ತಿದ್ದಾರೆ ಅವರಿಗೆ ಅನುದಾನವನ್ನು ಕೊಡಬೇಕೆಂದು ಹೇಳುತ್ತೇನೆ.

ಹಾಗೆಯೇ ನಮ್ಮ ಸರಕಾರದವರು ಹಿಂದೆ ಬೆಂಗಳೂರಿನ ಅಭಿವೃದ್ಧಿಗಾಗಿಯೇ ಒಂದು ನೂರು ಕೋಟಿ ರೂಪಾಯಿಗಳ ಶಾಶ್ವತ ನಿಧಿಯೊಂದನ್ನು ಇಡುತ್ತೇವೆ ಎಂದು ಹೇಳಿದ್ದರು. ಆದರೆ ಆ ಬಗ್ಗೆ ಇದುವರೆಗೂ ಒಂದು ಹೆಜ್ಜೆಯನ್ನು ಕೂಡ ಇಟ್ಟಿಲ್ಲ. ದಯಮಾಡಿ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು 100 ಕೋಟಿ ರೂಪಾಯಿಗಳ ಶಾಶ್ವತ ನಿಧಿಯೊಂದನ್ನು ಇಡಬೇಕೆಂದು ಒತ್ತಾಯ ಮಾಡಬಯಸುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷಿಣಿಯವರೇ, ಭದ್ರಾ ಬಲದಂಡೆ ನಾಲೆಯು ಬಿದ್ದು ಹೋಗಿರುವುದು ತಮಗೆ ಗೊತ್ತಿದೆ. ದಾವಣಗೆರೆ ಮತ್ತು ಇತರ ಭಾಗಗಳಲ್ಲಿ ರೈತರು ಉಳಿಯಲಾಗದಂಥ ಪರಿಸ್ಥಿತಿ ಬಂದುಬಿಟ್ಟಿದೆ. ಯಾವ ಮೂಲ ಗೋಡೆ ಬಿದ್ದಿದೆ ಅದನ್ನು ರಿಪೇರಿ ಮಾಡತಕ್ಕಂಥ ಕೆಲಸ ಅಲ್ಲಿ ಆಗಲಿಲ್ಲ. ಇನ್ನೂ ಅದು ಇನ್‌ವೆಸ್ಟಿಗೇಶನ್ ಹಂತದಲ್ಲಿಯೇ ಇದೆ. ಸುಮಾರು 25 ಸಾವಿರ ಜನ ರೈತರನ್ನು ಕೂಡಿಸಿ ಧರಣಿ, ಸತ್ಯಾಗ್ರಹದ ಮೂಲಕ ಸರಕಾರದ ಗಮನಸೆಳೆಯುವ ಪ್ರಯತ್ನವನ್ನು ಮಾಡಿದೆ. ಒಂದು ವಾರದ ಹಿಂದೆ ಅಧಿಕಾರಿಗಳ ಜೊತೆ ಮಾತನಾಡಿದ್ದರೂ ಸಹ ಇವೊತ್ತಿನವರೆಗೂ ಮೂಲ ಗೋಡೆಯನ್ನು ರಿಪೇರಿ ಮಾಡತಕ್ಕಂಥ ಕೆಲಸ ಪ್ರಾರಂಭವಾಗಿಲ್ಲ. ಇದು ಇನ್ನೂ ಇನ್ವೆಸ್ಟಿಗೇಶನ್ ಹಂತದಲ್ಲಿಯೇ ಇದೆ. ದಯಮಾಡಿ ಅದನ್ನು ರಿಪೇರಿ ಮಾಡುವಂಥ ಕೆಲಸವನ್ನು ಸರಕಾರ ತತ್‌ಕ್ಷಣವೇ ಕೈಗೆತ್ತಿಕೊಳ್ಳಬೇಕು.

ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ರಾಜ್ಯದ ಕೋಟ್ಯಾಂತರ ಜನತೆ ಏನಿದ್ದಾರೆ ಅವರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಆಗುತ್ತಾ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತಾ ಪ್ರತಿನಿಧಿಗಳಾಗಿ ಕೆಲಸ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಆದರೆ ಆಡಳಿತ ಪಕ್ಷದವರು ಜನಹಿತವನ್ನು ಸಂಪೂರ್ಣವಾಗಿ ಮರೆತು ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ಕೊಡದೆ ವ್ಯಾಪಕ ಭ್ರಷ್ಟಾಚಾರದಲ್ಲಿ ಸಿಕ್ಕಿರುವ ವಿಚಿತ್ರವಾದಂಥ ಪರಿಸ್ಥಿತಿಯಲ್ಲಿ ಇರುವುದರಿಂದ ನನ್ನ ಕ್ಷೇತ್ರದ ಜನ ನಮ್ಮ ರಾಜ್ಯದ ಜನ ನನ್ನನ್ನು ಕ್ಷಮಿಸುತ್ತಾರೆ ಎಂದು ನಾನು ಭಾವಿಸಿದ್ದೇನೆ. ನನ್ನ ನಾಲ್ಕು ಪ್ರಮುಖ ಬೇಡಿಕೆಗಳು ಅಂದರೆ ರೈತರ ಸಾಲ ಮನ್ನಾ ಮಾಡಲು 300 ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು, ಕೃಷ್ಣಾ ಮತ್ತು ಕಾವೇರಿ ಬೇಸಿನ್‌ಗಳಿಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು, ಎಕ್ಸೈಜ್ ರೂಲ್ಸ್ ಅಮೆಂಡ್‌ಮೆಂಟನ್ನು ವಿಥ್‌ಡ್ರಾ ಮಾಡಿಕೊಳ್ಳಬೇಕು, ಮಾತುಕತೆ ಮೂಲಕವೇ ಕಾವೇರಿ ಸಮಸ್ಯೆಯನ್ನು

ಬಗೆಹರಿಸಬೇಕೆಂಬ ಒತ್ತಾಯವನ್ನು ಸರ್ಕಾರಕ್ಕೆ ಸಲ್ಲಿಸುತ್ತೇನೆ. ನಾಳೆಯಿಂದ ನಾನು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಬೇಕಾಗಿರುವುದರಿಂದ ಈ ಸಭೆಯ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳುವ ಸ್ಥಿತಿಯಲಿಲ್ಲ. ಬಹುಮತ ಇದೆಯೆಂದು ಮನಬಂದಂತೆ ಸರ್ಕಾರ ನಡೆಸುತ್ತಿರುವ ಈ ಸಂದರ್ಭದಲ್ಲಿ ಜನರಲ್ಲಿ ಜಾಗೃತಿ ಉಂಟು ಮಾಡುವ ದೃಷ್ಟಿಯಿಂದ ಸಭೆಯಲ್ಲಿ ಭಾಗವಹಿಸಿದರೆ ಈ ರಾಜ್ಯದ ಜನ ಇದನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬ ಭಾವನೆಯಿಂದ ನನಗೆ ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಪಕ್ಷದ ಉಳಿದ ಸದಸ್ಯರು ಇಲ್ಲಿ ಕುಳಿತು ಕಾರ್ಯಕಲಾಪದಲ್ಲಿ ಭಾಗವಹಿಸುತ್ತಾರೆ.

ಶ್ರೀ ಎಸ್. ಚಿಕ್ಕಮಾದು (ಹುಣಸೂರು) :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ತಿಂಗಳ 21-2-1992ರಂದು ಈ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಜಂಟೀ ಅಧಿವೇಶನದಲ್ಲಿ ಮಾಡಿದ ಭಾಷಣದ ಪೂರ್ಣ ಅಂಶವನ್ನು ಸ್ವಾಗತಿಸಿ ಅವರನ್ನು ಅಭಿನಂದಿಸುತ್ತೇನೆ. ಈ ಭಾಷಣದ ಪೂರ್ಣ ಸಾರಾಂಶ ಅತಿ ಮುಖ್ಯವಾಗಿ ರಾಜ್ಯದ ಗ್ರಾಮಾಂತರ ಪ್ರದೇಶದ ಎಲ್ಲಾ ಜಾತಿ ವರ್ಗಗಳ ಕಡುಬಡವರ ಸರ್ವತೋಮುಖ ಅಭಿವೃದ್ಧಿಗಾಗಿ ಕೈಗೊಂಡಂತಹ ಒಂದು ಕಾರ್ಯಕ್ರಮವಾಗಿವೆ. ಇದು ರಾಜ್ಯದ ಜನತೆ ಮೆಚ್ಚುವ ವಿಚಾರ. 40 ವರ್ಷಗಳ ನಂತರ ರಾಜ್ಯದಲ್ಲಿ ಪ್ರಥಮಬಾರಿಗೆ ಹಿಂದುಳಿದ ವರ್ಗದಲ್ಲಿ ಜನಿಸಿ ಆ ವರ್ಗಗಳ ಕಷ್ಟಸುಖಗಳನ್ನು ಅರಿತು ಆ ಜನತೆಯ ಏಳಿಗೆಗಾಗಿ ಕಾರ್ಯಕ್ರಮ ಹಮ್ಮಿಕ್ಕೊಂಡಿರುವ ಧೀಮಂತ ನಾಯಕ ಶ್ರೀ ಬಂಗಾರಪ್ಪನವರ ನೇತೃತ್ವದಲ್ಲಿ ಈ ಸರ್ಕಾರದ ಕಾರ್ಯಕ್ರಮಗಳು ಕಡುಬಡವರಿಗೆ ಕೊಡುಗೆಯಾಗಿವೆ. ಅದರಲ್ಲೂ ಮುಖ್ಯಮಂತ್ರಿಗಳ ಐದು ಅಂಶಗಳ ಆಶ್ರಯ, ಅಕ್ಷಯ, ಆರಾಧನ ವಿಶ್ವ ಮತ್ತು ಶುಶ್ರೂಷಾ ಕಾರ್ಯಕ್ರಮಗಳು ನಿಜವಾಗಿಯೂ ಗ್ರಾಮೀಣ ಪ್ರದೇಶದ ಜನರಿಗಾಗಿಯೇ ಇರುವ ಕಾರ್ಯಕ್ರಮಗಳಾಗಿವೆ. ಉದಾ: ಆಶ್ರಯ ಯೋಜನೆ ಮೂಲಕ ಇದುವರೆಗೆ ವಾಸ ಮಾಡುವುದಕ್ಕೆ ಮನೆಯಿಲ್ಲದೆ ಬಿಸಿಲು ನೆರಳು ಛಳಿಯಿಂದ ಒಣಗುತ್ತಿದ್ದ ಕಡುಬಡವರಿಗೆ ಸೂರು ಕೊಡುವ ಕಾರ್ಯಕ್ರಮ ಹಾಕಿಕೊಂಡಿರುವುದು ಮೆಚ್ಚಬೇಕಾದದ್ದು. 1983-89ರವರೆಗೆ ರಾಜ್ಯದಲ್ಲಿ ಅಧಿಕಾರ ನಡೆಸಿ ಜನತಾ ಪಕ್ಷ ಮನಬಂದಂತೆ ಮನೆ ಕಟ್ಟುವ ಯೋಜನೆ ಮರೆತು ಒಂದು ನಿವೇಶನವನ್ನು ಕೊಡಲೂ ಸಾಧ್ಯವಾಗಲಿಲ್ಲ. ಹೀಗಿರುವಾಗ ನಮ್ಮ ಸರ್ಕಾರ ಕಡುಬಡವರಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಸಾವಿರ ಮನೆ ಕಟ್ಟಿಸಿಕೊಡುವ 'ಆಶ್ರಯ' ಅನ್ನುವ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದೆ. ಇಂದು ರಾಜ್ಯದಲ್ಲಿ ನಿವೇಶನರಹಿತರಾದ ಕಡುಬಡವರನ್ನು ಗುರುತಿಸಿ 90,000 ಜನ ನಿವೇಶನರಹಿತರಿಗೆ ನಿವೇಶನ ಕೊಡುವ ಕಾರ್ಯಕ್ರಮವಿದು. ನನ್ನ ಕ್ಷೇತ್ರವಾದ ಹುಣಸೂರಿನಲ್ಲಿ ಈಗಾಗಲೇ 3ರಿಂದ 4 ಸಾವಿರವರೆಗಿನ ನಿವೇಶನಗಳನ್ನು ಕಡು ಬಡವರಿಗೆ ವಿತರಣೆ ಮಾಡಿ ಹಕ್ಕು ಪತ್ರ ಕೊಟ್ಟಿದ್ದೇವೆ. ಈ ನಾಲ್ಕು ಸಾವಿರ ನಿವೇಶನಗಳಲ್ಲಿ 1ಸಾವಿರ ಮನೆ ಕಟ್ಟಿಸುವ ಸಲುವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು ಇಂಥ ಬೃಹತ್ ಯೋಜನೆ ಆಶ್ರಯ ಕಡುಬಡವರಿಗಾಗಿದೆ. ಆಮೇಲೆ ವಿಶ್ವ ಯೋಜನೆ, ಇದು ವಿಶ್ವಕ್ಕೆ ಮಾದರಿಯಾದ ಯೋಜನೆ. ಇದರಲ್ಲಿ ಯಾವ ಜನ ತಮ್ಮ ಕುಲಕಸುಬನ್ನೇ ನಂಬಿ ಬದುಕುತ್ತಿದ್ದರೋ ಅವರು ವೈಜ್ಞಾನಿಕ ಯುಗದ ದೆಸೆಯಿಂದ ಸಣ್ಣ ಗುಡಿ ಕೈಗಾರಿಕೆಗಳನ್ನು ಮರೆತು....

ಶ್ರೀ ಬಸವರಾಜ ರಾಯರೆಡ್ಡಿ:- ಅಧ್ಯಕ್ಷಿಣಿಯವರೇ ಕೋರಂ ಇಲ್ಲ, ಮಂತ್ರಿಗಳೂ ಇಲ್ಲ ಹೇಗೆ ಸಭೆ ನಡೆಸುತ್ತೀರಿ? ಯಾವ ಕಾನೂನು ಪ್ರಕಾರ ಸಭೆ ನಡೆಯಬೇಕು ದಯವಿಟ್ಟು ಹೇಳಿ.

ಉಪಾಧಕ್ಷಣಿಯವರು:- ಮಂತ್ರಿಗಳಿದ್ದಾರಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ಈಗ ಕಾನೂನು ಸಚಿವರಿದ್ದಾರೆ, ನಾನಿದ್ದೇನೆ ನಿನ್ನೆ ನಮ್ಮ ಮುಖ್ಯಮಂತ್ರಿಯವರು ಮಾತಾಡುವಾಗ ನಿಮ್ಮ ಕಡೆ ಯಾರೂ ಇರಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:- ಯಾವ ರೀತಿ ಸಭೆಯನ್ನು ನಡೆಸುತ್ತೀರಿ. ದಯವಿಟ್ಟು.....

ಶ್ರೀ ವಾಟಾಳ್ ನಾಗರಾಜ್:- ಎಣಿಕೆ ಮಾಡುವುದೇನೂ ಬೇಡಿ. ನೀವು ಹೋಗಿ ಸ್ವಾಮಿ. ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ:- ಕೋರಂ ಇಲ್ಲ, ಸಭೆಯನ್ನು ನಡೆಸಬೇಕೇ ಬೇಡವೇ ಎನ್ನುವ ಬಗ್ಗೆ ತಾವು ರೂಲಿಂಗನ್ನು ಕೊಡಿ. ಇಲ್ಲದಿದ್ದರೆ ಸಭೆಯನ್ನು ಮುಂದಕ್ಕೆ ಹಾಕಿ.

ಡಾ. ಹೆಚ್. ಡಿ. ಲಮಾಣಿ:- ಇದಕ್ಕೇನೂ ಕೋರಂ ಅವಶ್ಯಕತೆ ಇಲ್ಲ. ಅವರು ಮಾತನಾಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ:- ಯಾರು ಹೇಳಿದ್ದುದು ನಿಮಗೆ?

ಶ್ರೀ ಡಿ. ಕೆ. ಶಿವಕುಮಾರ್:- ರಾಯರೆಡ್ಡಿಯವರೇ, ನಿಮಗೆ ಪ್ರಚಾರ ಬೇಕು. ನನಗೆ ಅರ್ಥವಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ:- ಇದಕ್ಕೆ ಪ್ರಚಾರವೆಂದು ಹೇಳುತ್ತಾರೇಯೇ? ಹೇಗೆ ಸಭೆಯನ್ನು ತಾವು ನಡೆಸುತ್ತೀರಿ?

(ಗೊಂದಲ)

ಶ್ರೀ ಎಸ್. ಚಿಕ್ಕ ಮಾದು:- ಏನು ಇವತ್ತು ನಮ್ಮ ಸರ್ಕಾರ ಗ್ರಾಮಾಂತರ ಪ್ರದೇಶದಲ್ಲಿ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದೆ, ಇದು ವಿಶ್ವಕ್ಕೇ ಮಾದರಿಯಾದಂಥ ಒಂದು ಕಾರ್ಯಕ್ರಮ.

(ಗೊಂದಲ)

ಡಾ|| ಹೆಚ್. ಡಿ. ಲಮಾಣಿ:- ಇದಕ್ಕೇನೂ ಕೊರಂನ ಅಗತ್ಯ ಇಲ್ಲ. ಅವರು ಕಂಟಿನ್ಯೂ ಮಾಡಲಿ. ಬಿ. ಎ. ಸಿ. ಕಮಿಟಿಯಲ್ಲೂ ಕೂಡ ಇದರ ತೀರ್ಮಾನವಾಗಿದೆ.

(ಗೊಂದಲ)

MR. CHAIRMAN:- Whether you want quorum or you want to follow the decision of the Business Advisory Committee rule.

ಒಬ್ಬ ಮಾನ್ಯ ಸದಸ್ಯರು:- ಎಲ್ಲರೂ ಊಟಕ್ಕೆ ಹೋಗಿದ್ದಾರೆ. ಅದಕೋಸ್ಕರವಾಗಿ ಅಡ್ಜರ್ನ್ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ:- ತಾವು ಇದರ ಬಗ್ಗೆ ಒಂದು ರೂಲಿಂಗನ್ನು ಕೊಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈ ಸಭೆಗೆ ಕೋರಂ ಇರಬೇಕು. ಅದನ್ನು ನಾವು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಈಗ ಅದನ್ನು ನಾವು ಒತ್ತಾಯ ಮಾಡುತ್ತಿಲ್ಲ. ಚಿಕ್ಕಮಾದು ಅವರು ಮಾತನಾಡಲಿ. ತಾವೆಲ್ಲಾ ಹೋಗಿ ಸ್ವಾಮಿ. ನಾವು ನಾಲ್ಕೂ ಜನ ಮಾತ್ರ ಕುಳಿತಿರುತ್ತೇವೆ. ನಾವೇ ಕೇಳುತ್ತೇವೆ.

ಶ್ರೀ ಸಿ. ಬೈರೇಗೌಡ:- ತಮ್ಮ ಗಮನಕ್ಕೆ ತರುವುದೇನೆಂದರೆ ಆ ಕಡೆ ಮುಖ್ಯ ಸಚೇತಕರಾಗಿರತಕ್ಕಂಥವರು ಒಂದು ಮಾತನ್ನುಹೇಳಿದ್ದಾರೆ. ಕೋರಂ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಅದು ದಾಖಲೆಗೆ ಹೋಗಿದೆ. ಅದು ಸರಿಯಾದುದಲ್ಲ. ಕೋರಂ ಇಲ್ಲದೇ ಸಭೆಯು ನಡೆಯುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಆದುದರಿಂದ ನಾವು ಕೆಲಸ ಮಾಡತಕ್ಕಂಥದ್ದು ಬೇರೆ ವಿಚಾರ. ಅದು ದಾಖಲೆಗೆಹೋಗಿದೆ. ಅದು ದಾಖಲೆಗೆ ಹೋಗತಕ್ಕಂಥದ್ದು ಅದು ಯಾವತ್ತಿಗೂ ಕೂಡ ಉಳಿದುಕೊಳ್ಳುತ್ತದೆ. ಆ ದಾಖಲೆಯಲ್ಲಿ ಹೋಗಿರತಕ್ಕಂಥ ಮಾತುಗಳನ್ನು ಕೋರಂ ಇಲ್ಲದೇ ಸಭೆಯನ್ನು ನಡೆಸಬಹುದು ಎಂದು ಯಾರು ಹೇಳಿದರು, ಅದನ್ನು ದಯವಿಟ್ಟು ದಾಖಲೆಯಿಂದ ತೆಗೆಸಬೇಕು ಎಂದು ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಛೇರ್ಮನ್:- ಈಗ ಕೋರಂ ಆಯಿತು ರೆಡ್ಡಿಯವರೇ.

ಶ್ರೀ ಡಿ.ಕೆ. ಶಿವಕುಮಾರ್:- ಅವರ ಕಡೆಯಿಂದಲೂ ಯಾವ ರೀತಿ ಊಟಕ್ಕೆ ಹೋಗಿದ್ದಾರೋ ನಮ್ಮ ಕಡೆಯಿಂದಲೂ ಅದೇ ರೀತಿ ಊಟಕ್ಕೆ ಹೋಗಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇ ಗೌಡ:- ನಾವು ಜವಾಬ್ದಾರಿಯಿಂದ ಇಲ್ಲಿ ಕುಳಿತುಕೊಂಡಿದ್ದೇವೆ.

ಛೇರ್ಮನ್:- ಚಿಕ್ಕಮಾದು ಅವರು ಈಗ ಕಂಟಿನ್ಯೂ ಮಾಡಲಿ.

ಶ್ರೀ ವಾಟಾಳ್ ನಾಗರಾಜ್:- ನಿಯಮಾವಳಿ ಪ್ರಕಾರ ಕೋರಂ ಇರಲೇಬೇಕು. ಕೋರಂ ಇರಬೇಕಾದದ್ದು ನ್ಯಾಯಬದ್ಧವಾಗಿರಬೇಕು. ಮತ್ತು ಈ ಸಭೆಯ ಗೌರವ ಘನತೇ ಬಗ್ಗೆ ಸದಸ್ಯರಿಗಾಗಲಿ, ಮಂತ್ರಿಗಳಿಗಾಗಲಿ ಅದನ್ನು ನೋಡಬೇಕಾದ್ದು ಕರ್ತವ್ಯ. ಮಾನ್ಯ ಮುಖ್ಯಮಂತ್ರಿಗಳಿಗೂ ಈ ಸಭೆಯ ಬಗ್ಗೆ ಜವಾಬ್ದಾರಿ ಇಲ್ಲ, ಮಂತ್ರಿಗಳಿಗೂ ಜವಾಬ್ದಾರಿ ಇಲ್ಲ, ಸದಸ್ಯರುಗಳಿಗೂ ಜವಾಬ್ದಾರಿ ಇಲ್ಲ, ಇದನ್ನೆಲ್ಲಾ ನೋಡಿದರೆ ನಮ್ಮ ಈ ಇವರು ಎಷ್ಟು ಗೌರವವನ್ನು ಕೊಡುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಈ ಸಭೆ ಒಂದು ಮಹತ್ತರವಾದ ಸಭೆ. ಅದರಲ್ಲಿ ಪ್ರಾರಂಭಿಕವಾಗಿ ಈ ಒಂದು ರಾಜ್ಯಪಾಲರ ಭಾಷಣ ಎಂದು ಹೇಳಿದರೆ ಭಾಷಣದ ಎರಡು-ಮೂರು ದಿವಸ ಮತ್ತು ಕೊನೆಯ ದಿವಸ ಹೇಗೆ ಇರಬೇಕು ಎಂದರೆ ಇಡೀ ಸಭೆಯು ತುಂಬಿದಂತೆ ಇರಬೇಕು. ಈ ಸಭೆಯನ್ನು ನೋಡಿದರೆ ಯಾರ ಮುಂದೆ ನಾವು ಕಣ್ಣೀರನ್ನು ಸುರಿಸೋಣ ಯಾರಲ್ಲಿ ಹೇಳೋಣ. ಈ ಸದನವನ್ನು ಈ ಮಟ್ಟಕ್ಕೆ ತಂದಿಟ್ಟಿದ್ದೀರಿ. 185 ಜನ ಇದ್ದೇವೆ. ಒಳ್ಳೆಯ ಆನೆಯ ಬಲ ಇರತಕ್ಕಂಥ ಸಭೆಯನ್ನು ಈ ಮಟ್ಟಕ್ಕೆ ತಂದಿಟ್ಟಿದ್ದೀರಲ್ಲಾ, ಈ ಗೌರವ ನಿಮಗೆ ಬರುತ್ತದೆಯೇ? ಈ ರಾಜ್ಯದ ಜನತೆ ನಿಮ್ಮನ್ನು ಶಪಿಸುತ್ತಾರೆ. ಅಷ್ಟು ಸುಲಭವಾಗಿ ನೀವು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ.

ಛೇರ್ಮನ್:- ಮಾನ್ಯ ನಾಗರಾಜ್‌ರವರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ಮಾನ್ಯ ಚಿಕ್ಕಮಾದು ಅವರು ಕಂಟಿನ್ಯೂ ಮಾಡಲಿ.

ಶ್ರೀ ವಾಟಾಳ್ ನಾಗರಾಜ್:- ಪ್ರಜಾಪ್ರಭುತ್ವದಲ್ಲಿ ಈ ಮಟ್ಟದಲ್ಲಿ ಬಲ ಬಂತಲ್ಲಾ ಆನೆ ಬಲ, ಅದು ಬರಬಾರದು. ಪ್ರಜಾಪ್ರಭುತ್ವಕ್ಕೆ ಇದು ಕಳಂಕ. ಇದು ಎಷ್ಟಿದ್ದರೂ ನಮಗೂ ನಿಮಗೂ 10-15ರಲ್ಲಿ ವ್ಯತ್ಯಾಸ ಇರಬೇಕೇ ಹೊರತು ಇಷ್ಟು ವ್ಯತ್ಯಾಸ ಇರುವುದು ಛೇರ್ಮನ್ ಇದರಿಂದ ನೀವುಗಳು ತಲೆ ಮೀರಿ ನಡೆಯುತ್ತಿದ್ದೀರಿ.

ಶ್ರೀ ಡಿ.ಕೆ. ಶಿವಕುಮಾರ್:- ಮುಂದಕ್ಕೆ ಅದರ ಬಗ್ಗೆ ಯೋಚನೆ ಮಾಡಿ. ಸಧ್ಯಕ್ಕೆ ಇನ್ನು ಎರಡೂವರೆ ವರ್ಷ ಅದರ ಬಗ್ಗೆ ಯೋಚನೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಇದೇ ರೀತಿ ನಡೆಸುತ್ತೀರಾ ಎರಡುವರೆ ವರ್ಷ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷಣೆಯವರೆ, ಇದು ರಾಜ್ಯಪಾಲರ ಭಾಷಣ ಅಲ್ಲ, ರಾಜ್ಯಪಾಲರ ಆಳ್ವಿಕೆ ಕಂಡ ಹಾಗೆ ಕಾಣುತ್ತಿದೆ. ಇದೊಂದು ತುರ್ತುಪರಿಸ್ಥಿತಿ ಎನ್ನುವ ನೆನಪು ಬರುತ್ತದೆ. ಈ ಸಭೆಯನ್ನು ನೋಡಿದರೆ ನಮಗೆ ಒಂದು ರೀತಿಯ ನೋವಾಗುತ್ತಿದೆ. ಯಾರು ನಮಗೆ ಮತವನ್ನು ಕೊಟ್ಟು ಈ ಶಾಸನ ಸಭೆಗೆ ಕಳುಹಿಸಿದ್ದಾರೆ ಅವರು ಶಾಸಕರು ಎಲ್ಲಿಗೆ ಹೋಗಿದ್ದಾರೆ ಏನು ಪರಿಸ್ಥಿತಿಯಾಗಿದೆ, ಯಾವ ಸ್ಥಳಕ್ಕೆ ಹೋಗಿದ್ದಾರೆ ಯಾರನ್ನು ಭೇಟಿ ಮಾಡುವುದಕ್ಕೆ ಹೋಗಿದ್ದಾರೆ, ಇದೆಲ್ಲಾ ಪ್ರಶ್ನೆ ಬರುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕುಳಿತಿರುವವರ ಬಗ್ಗೆ ನನಗೆ ಆಕ್ಷೇಪಣೆ ಇಲ್ಲ, ನಿಮ್ಮಗಳ ಬಗ್ಗೆ ನನಗೆ ಬಹಳ ಗೌರವವಿದೆ. ನಮ್ಮ ನ್ಯಾಯಮಂತ್ರಿಗಳು ಗಂಭೀರವಾಗಿ ಎಷ್ಟು ಚೆನ್ನಾಗಿ ಕುಳಿತಿದ್ದಾರೆ. ಅವರದೇನು ತಕರಾರೇ ಇಲ್ಲ, ನಮ್ಮ ಜೈಲು ಮಂತ್ರಿಗಳು ಆಗಾಗ್ಗೆ ಎದ್ದೆದ್ದು ನಿಲ್ಲುತ್ತಾರೆ ಅವರು ನಮ್ಮ ಸ್ನೇಹಿತರೇ ಇರಲಿ, ಒಟ್ಟಿನಲ್ಲಿ ಈ ಸಭೆಯನ್ನು ಕಾಂಗ್ರೆಸ್ ಪಕ್ಷದವರು ಅಗೌರವ ರೀತಿಯಾಗಿ ಕಂಡಿದ್ದಾರೆ, ಈ ಸಭೆಯನ್ನು ಕಡೆಗಾಣಿಸಿದ್ದಾರೆ, ಶಾಸನಸಭೆಗೆ ಅಪವಾದ ಮಾಡಿದ್ದಾರೆ. ಇದು ಒಳ್ಳೆಯದಲ್ಲ, ಇದು ಪ್ರಜಾಪ್ರಭುತ್ವದಲ್ಲಿ ಖಂಡಿತ ಒಳ್ಳೆಯದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದನ್ನು ಸಾಬೀತುಮಾಡಿಕೊಂಡು ಈಗ ನಡೆಯುತ್ತಿರುವುದು ಸರಿ ಎಂದು ಹೇಳುವಂತಹ ಮಾತು ಮೊದಲನೆಯ ಸಾಲಿನಲ್ಲಿ ಒಬ್ಬ ಹಿರಿಯ ಸಚಿವರು ಇಲ್ಲದೆ ಇರುವಂಥದ್ದು. ನಾನು ಪ್ರತಿಭಟನೆ ಮಾಡಿ ವಾಕ್‌ಔಟ್ ಮಾಡಿ ಹೊರಗೆ ಹೋಗುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- 180 ಜನಕ್ಕೆ 18 ಜನನೂ ಇಲ್ಲ. ಹೇಗೆ ಸಭೆಯನ್ನು ನಡೆಸುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಂದು ಸಾಲಿನಲ್ಲಿ ಒಬ್ಬ ಹಿರಿಯ ಸಚಿವರು ಯಾರೂ ಇಲ್ಲ.

ಛೇರ್ಮನ್:- ಸಚಿವರು ಇದ್ದಾರೆ. 5 ಜನ ಇದ್ದಾರೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಎಲ್ಲರೂ ಇರಬೇಕೆಂದು ಇಲ್ಲ, ಈಗ ಎಲ್ಲರೂ ಊಟಕ್ಕೆ ಹೋಗಿದ್ದಾರೆ.

(ಗೊಂದಲ).

ಶ್ರೀ ಕೆ. ಎಸ್. ಈಶ್ವರಪ್ಪ:- 180 ಜನಕ್ಕೆ 18 ಜನ ಇಲ್ಲ, ಶೇಕಡ 10 ರಷ್ಟು ಇಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ:- ಏನೋ ಪ್ರಚಾರ ಬೇಕು ಅಂತ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ನಾವೂ ಸಹ ಬಹಳ ನೋವಿನಿಂದ ಈ ಸಭೆಗೆ ಈ ಸರ್ಕಾರ ಮತ್ತು ಈ ಪಕ್ಷ ತೋರಿಸುತ್ತಿರತಕ್ಕಂಥ ಅಗೌರವವನ್ನು ವಿರೋಧಿಸಿ ನಾವು ಧರಣಾ ಕುಳಿತುಕೊಳ್ಳುತ್ತಿದ್ದೇವೆ. ಈ ಸಭೆಗೆ ಅಗೌರವವಾಗಿದೆ. ಈ ಸಭೆಗೆ ಅಪಮಾನ ಮಾಡಿದ್ದಾರೆ ಎನ್ನುವ ನೋವು ನನಗೆ ಇದೆ.

ಶ್ರೀ ಸಿ. ಬೈರೇಗೌಡ:- ಒಂದು ಅರ್ಧ ಗಂಟೆಯನ್ನು ಸಭೆಯನ್ನು ಮುಂದೂಡಿ.

ಛೇರ್ಮನ್ :- ಈಗ ಕೋರಂ ಇದೆ ತಾವು ಕುಳಿತುಕೊಳ್ಳಿ. ಚಿಕ್ಕಮಾದುರವರೆ ತಾವು ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಕಡೆ ಯಾರೂ ಇಲ್ಲ, ಆ ಬಗ್ಗೆ ನನಗೂ ನೋವಾಗಿದೆ. ವಿರೋಧ ಪಕ್ಷದವರೂ ಸಹ ಎಲ್ಲಿ ಹೋಗಿದ್ದಾರೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇವರಿಬ್ಬರೂ ಸರಿಯಿಲ್ಲ ಎಂದು ನಾನು ಧರಣಾ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಉಪಾಧ್ಯಕ್ಷಣೆಯವರೆ, ಕೋರಂ ಇದೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೆಲವು ಜವಾಬ್ದಾರಿ ಹೊಂದಿರುವ ಮಂತ್ರಿಗಳು ಮೊದಲನೆಯ ಸಾಲಿನಲ್ಲಿ ಯಾರೂ ಇರಲಿಲ್ಲ. ಈಗ ಪುಟ್ಟಸ್ವಾಮಿಗೌಡರು ಬಂದಿದ್ದಾರೆ, ಒಪ್ಪಿಕೊಳ್ಳುತ್ತೇನೆ. ಎರಡನೆಯದಾಗಿ ಅಧಿಕಾರಿಗಳನ್ನು ನೋಡಿದರೆ ಯಾವ ಅಧಿಕಾರಿಗಳೂ ಇಲ್ಲ, ಎಲ್ಲಾ ಅದಿಕಾರಿಗಳು ಊಟಕ್ಕೆ ಹೋಗುತ್ತಾರೆ. ನಾವು ಬೆಳಿಗ್ಗೆಯಿಂದ ಕುಳಿತಿದ್ದೇವೆ. ನಾನು ಹತ್ತು ನಿಮಿಷದ ಹಿಂದೆ ಹೋಗಿ ಬಂದೆ. ನಮ್ಮ ಗೌಡರು ಇಲ್ಲಿಯ ತನಕ ಇದ್ದರು. ಅವರು ಈಗ ಊಟಕ್ಕೆ ಹೋದರು. ನಮ್ಮ ವಾಟಾಳ್ ನಾಗರಾಜ್‌ರವರು ಯಾರೂ ಇಲ್ಲ ಅಂತ ಹೇಳಿದರು. ಮಾನ್ಯ ಚಂದ್ರೇಗೌಡರಾಗಲಿ, ಸಿಂಧ್ಯರವರಾಗಲಿ, ಏಕಾಂತಯ್ಯರವರಾಗಲಿ ಇಲ್ಲೇ ಇದ್ದರು. ಐದು ನಿಮಿಷದ ಹಿಂದೆ ಊಟಕ್ಕೆ ಹೋಗಿದ್ದಾರೆ. ಇವತ್ತು ಈ ಸದನದ ಘನತೆ ಗೌರವವನ್ನು ನಾವು ಕಾಪಾಡಿಕೊಂಡು ಹೋಗಬೇಕು. ಅಧಿಕಾರಿಗಳಿಗೆ ಏನೂ ಭಯ ಇಲ್ಲ. ಇಲ್ಲಿ ಬರಲಿಲ್ಲ ಅಂದರೂ ನಡೆಯುತ್ತದೆ. ಹಾಗಾಗಿ ಕಾರ್ಯ ಕಲಾಪಗಳನ್ನು ನಡೆಸಬೇಕಾದರೆ ಮಂತ್ರಿಗಳು ಇರಬೇಕಾಗುತ್ತದೆ. ವಿರೋಧ ಪಕ್ಷದವರು ಇರಬೇಕಾಗುತ್ತದೆ ಮತ್ತು ಅಧಿಕಾರಿಗಳು ಇರಬೇಕಾಗುತ್ತದೆ. ಯಾರೂ ಇಲ್ಲ ಅಂದರೆ ಹೇಗೆ?

ಛೇರ್ಮನ್:- ಮಂತ್ರಿಗಳು ಇದ್ದಾರಲ್ಲಾ? ಐದು ಜನರು ಇದ್ದರು. ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಈಗ ಇಬ್ಬರು ಬಂದಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:- ಮಂತ್ರಿಗಳು ಬಂದಿದ್ದಾರೆ ನಾನು ಒಪ್ಪಿಕೊಳ್ಳುತ್ತೇನೆ. ಇದು ಸರಿಯಲ್ಲ ಅಧಿಕಾರಿಗಳೂ ಬರಬೇಕು. ಮಂತ್ರಿಗಳೂ ಬರಬೇಕು.

ಛೇರ್ಮನ್:- ಈಗ ಏಳು ಜನ ಮಂತ್ರಿಗಳು ಇದ್ದಾರೆ. ತಾವು ಮುಂದುವರಿಸಿ.

ಶ್ರೀ ಸಿ. ಬೈರೇಗೌಡ:- ಅವರು ಆದ ತಕ್ಷಣ ನಾನು ಮಾತನಾಡಬೇಕಾಗಿದೆ. ಅನೇಕ ವಿಚಾರಗಳನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ಯಾರೂ ಇಲ್ಲ ಅಂದರೆ ಹೇಗೆ? ಖಾಲಿ ಕುರ್ಚಿಗೆ ನಾನು ಏನು ಮಾತನಾಡತಕ್ಕದ್ದು?

೨.೩೫ ಪಿ.ಎಂ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಎಲ್ಲಾ ಮಂತ್ರಿಗಳು ಇದ್ದು, ಕೋರಂ ಇರುವಾಗ ನೀವು ಈ ರೀತಿ ಧರಣಿ ಮಾಡಲು ಹೋಗುವುದು ಸರಿಯಲ್ಲ. ನಿಮ್ಮ ಪ್ರಶ್ನೆಗೆ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ. ಆದುದರಿಂದ, ಗೌರವಾನ್ವಿತ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ತಮ್ಮ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ:- ಈಗ ನಾನು ಅನಿವಾರ್ಯವಾಗಿ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರ ಜೊತೆ ಧರಣಿ ಮಾಡಬೇಕಾಗುತ್ತದೆ. ಮಂತ್ರಿಗಳು ಯಾರಿದ್ದೀರಿ ?

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಸಿ. ಬೈರೇಗೌಡರು, ಶ್ರೀ ವಾಟಾಳ್ ನಾಗರಾಜ್‌ರವರ ಜೊತೆ ಧರಣಿ ಕುಳಿತರು)

(ಗೊಂದಲ)

ಶ್ರೀ ಎಸ್. ಚಿಕ್ಕಮಾದು (ಹುಣಸೂರು):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಹಲವಾರು ವರ್ಷಗಳಿಂದ ಈ ಸದನದ ಸಾರ್ವಜನಿಕರ, ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಸದನ ನಡೆಯುವಾಗ ಆಸೆಯಿಂದ ವೀಕ್ಷಿಸುತ್ತಿದ್ದೆ. ನಾನು, ನನ್ನ ಜೀವನದಲ್ಲಿ ಒಂದು ಆಸೆ ಇಟ್ಟುಕೊಂಡಿದ್ದೆ. ಈ ಸದನದಲ್ಲಿ ನಾನು ಕೂಡ ಭಾಗವಹಿಸಿ ಮಾತನಾಡತಕ್ಕಂಥ ಕಾಲ ಯಾವಾಗ ಬರುತ್ತದೆಯೋ ಎಂದು ನಿರೀಕ್ಷೆ ಮಾಡುತ್ತಿದ್ದೆ. ಹುಣಸೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಆ ತಾಲ್ಲೂಕಿನ ಜನತೆ ನನ್ನನ್ನು ಈ ಸದನದ ಸದಸ್ಯನನ್ನಾಗಿ ಆಯ್ಕೆ ಮಾಡಿ ಕಳುಹಿಸಿ ಕೊಟ್ಟರು. ಮೊದಲನೇಯ ಅಧಿವೇಶನದಲ್ಲಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಪ್ರಾರಂಭದಲ್ಲಿ ಇಂತಹ ಒಂದು ತೊಡಕು ಬಂದಿದ್ದಕ್ಕಾಗಿ ನಾನು ವಿಷಾದಿಸುತ್ತೇನೆ. ಏಕೆಂದರೆ, ನಾನು ಹಿರಿಯ ಸದಸ್ಯರ ಮೇಲೆ ಅಪಾರವಾದಂಥ ಗೌರವವನ್ನು ಇಟ್ಟುಕೊಂಡಿದ್ದೇನೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಉಪಾಧ್ಯಕ್ಷಿಣಿಯವರೇ, ಸಭೆಯನ್ನು ದಯವಿಟ್ಟು 15 ನಿಮಿಷ ಮುಂದಕ್ಕೆ ಹಾಕಿರಿ.

ಶ್ರೀ ಎಸ್. ಚಿಕ್ಕಮಾದು:- ಐದು ಅಂಶಗಳ ಕಾರ್ಯಕ್ರಮದಲ್ಲಿ ಈ ಒಂದು ವಿಶ್ವ ಯೋಜನೆ, ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಕಸುಬನ್ನೆ ನಂಬಿ ಸಾವಿರಾರು ಕುಟುಂಬಗಳು ಇವೊತ್ತು ಬದುಕುತ್ತಿವೆ. ಈ ಆಧುನಿಕ ವೈಜ್ಞಾನಿಕ ಯುಗದಲ್ಲಿ ಅಂತಹ ಸಣ್ಣ ಗುಡಿ ಕೈಗಾರಿಕೆಗಳನ್ನು ಬದಿಗೊತ್ತಿದರು. ಇಂತಹ ಒಂದು ಸಂದರ್ಭದಲ್ಲಿ ರಾಜ್ಯ ಮುಖ್ಯಮಂತ್ರಿಗಳಾದ ಮತ್ತು ಧೀಮಂತ ನಾಯಕರಾದ ಶ್ರೀಮಾನ್ ಬಂಗಾರಪ್ಪನವರು ಈ ಒಂದು ವಿಶೇಷ ಕಾರ್‍ಯಕ್ರಮವನ್ನು ತಂದುಕೊಟ್ಟಿರತಕ್ಕಂಥಾದ್ದು, ತಮ್ಮ ಕಸುಬನ್ನೆ ನಂಬಿ ಬದುಕುತ್ತಿರುವ ಗ್ರಾಮಾಂತರ ಪ್ರದೇಶದ ಬಡವರಿಗೆ ಒಂದು ಕೊಡುಗೆಯಾಗಿದೆ. ಉದಾಹರಣೆಗೆ: ಕುಂಬಾರ ಜನಾಂಗ, ಚಮ್ಮಾರ ಜನಾಂಗ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾನು ಹಿರಿಯ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಬೈರೇಗೌಡರಲ್ಲಿ ಮತ್ತು ವಾಟಾಳ್ ನಾಗರಾಜ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಿಮ್ಮ ಅಳಲು ಸರ್ಕಾರಕ್ಕೆ ಅರ್ಥವಾಗಿದೆ. ಆದುದರಿಂದ, ತಾವು ದಯವಿಟ್ಟು ನಿಮ್ಮ ಸ್ಥಾನಗಳಿಗೆ ಬನ್ನಿ. ಮಾತನಾಡಲು ಅವಕಾಶ ಮಾಡಿಕೊಡಿ.

ಡಾ: ಹೆಚ್.ಡಿ. ಲಮಾಣಿ:- ನಾನು ಹಿರಿಯ ಸದಸ್ಯರಾದಂಥ ಶ್ರೀ ವಾಟಾಳ್ ನಾಗರಾಟ್‌ರವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸಾಕಷ್ಟು ಶಾಸಕರು ಬಂದಿದ್ದಾರೆ. ಕೋರಂ ಇದೆ. ಅಲ್ಲದೆ, ಸಾಕಷ್ಟು ಜನ ಸಚಿವರೂ ಸಹ ಇದ್ದಾರೆ. ಬೇಕಾದರೆ ಇತರ ಸಚಿವರನ್ನು ಕರೆಯಿಸುತ್ತೇವೆ ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಬಂದರೆ ಅನುಕೂಲವಾಗುತ್ತದೆ. ಏಕೆಂದರೆ, ನಂತರ ತಾವು ಮಾತನಾಡುವವರಿದ್ದೀರಿ. ತಮಗೆ ಅವಕಾಶ ಸಾಕಾಗುವುದಿಲ್ಲ, ಆದುದರಿಂದ, ದಯಮಾಡಿ ತಮ್ಮ ಸ್ಥಾನಕ್ಕೆ ಬರಬೇಕು.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಬೈರೇಗೌಡರು ಮತ್ತು ವಾಟಾಳ್ ನಾಗರಾಜ್‌ರವರು ಧರಣಿಯನ್ನು ಕೈಬಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಕುಳಿತರು)

ಶ್ರೀ ಎಸ್. ಚಿಕ್ಕಮಾದು:- ಈ ವಿಶ್ವ ಯೋಜನೆಯಲ್ಲಿ ನಮಗೆ ನಿಮಗೆಲ್ಲರಿಗೂ ಕೂಡ ರಕ್ಷಣೆ ಮಾಡತಕ್ಕಂಥದ್ದು ಇದೆ. ಚಮ್ಮಾರ ಜನಾಂಗದವರು ಒಂದು ವೃತ್ತಿಯನ್ನು ಮಾಡಿಕೊಂಡು ಬಾಳತಕ್ಕ ಜನರು. ಕುಂಬಾರ ಜನಾಂಗದವರು ಮಡಿಕೆಯನ್ನು ಮತ್ತು ನಾಡಹೆಂಚನ್ನು ತಯಾರು ಮಾಡಿ ಮಾರಾಟ ಮಾಡಿ ಜೀವನವನ್ನು ಮಾಡತಕ್ಕವರು. ಸಣ್ಣ ಸಣ್ಣ ಹಾಗೂ ಗುಡಿಕೈಗಾರಿಕೆಯನ್ನು ಮಾಡಿಕೊಂಡು ಬದುಕತಕ್ಕ ಈ ಗ್ರಾಮಾಂತರ ಪ್ರದೇಶದ ಕುಂಬಾರ ಜನಾಂಗ, ಆಚಾರಿ ಜನಾಂಗ, ಕಮ್ಮಾರ ಜನಾಂಗ, ಚಮ್ಮಾರ ಜನಾಂಗ, ಮಡಿವಾಳ ಜನಾಂಗ ಇವರುಗಳು ಆ ಒಂದು ವೃತ್ತಿಯನ್ನು ಅನುಸರಿಸಿ ಬದುಕಬೇಕಾಗಿತ್ತು. ಇಂತಹ ಒಂದು ಸಂಧರ್ಭದಲ್ಲಿ ವಿಶ್ವ ಯೋಜನೆಯನ್ನು ಈ ರಾಜ್ಯದಲ್ಲಿ ಜಾರಿಗೆ ತಂದು ಮಾನ್ಯ ಮುಖ್ಯಮಂತ್ರಿಗಳು ಅವರ ಬದುಕನ್ನು ಹೊಸ ರೂಪಕ್ಕೆ ತರಲು ಪ್ರಯತ್ನಿಸಿರತಕ್ಕ ವಿಚಾರ ನಿಜವಾಗಿಯೂ ಮೆಚ್ಚತಕ್ಕ ವಿಚಾರ. ಇನ್ನು ಮೂರನೆಯದಾಗಿ 'ಆರಾಧನ' ಯೋಜನೆ. ಈ ದೇಶದಲ್ಲಿ ಶ್ರೀಮಂತರಿಗೆ ಮಾತ್ರ ತಿರುಪತಿ ತಿಮ್ಮಪ್ಪ, ಮಂತ್ರಾಲಯದ ರಾಘವೇಂದ್ರ, ಧರ್ಮಸ್ಥಳದ ಮಂಜುನಾಥ ಕೈಗೆಟಕುವ ದೇವಾಲಯಗಳು. ಗ್ರಾಮಾಂತರ ಪ್ರದೇಶದ ದೀನದಲಿತರ, ಕಡುಬಡವರ, ಹರಿಜನಗಿರಿಜನರ ಕೇರಿಗಳಲ್ಲಿ ಇವತ್ತಿನ ದಿವಸ ದೇವಾಲಯಗಳು ನಿರ್ಮಾಣವಾಗದಿರತಕ್ಕ ಸಂದರ್ಭದಲ್ಲಿ, ಇಲ್ಲಿಯ ಜನರು ಯಾವ ರೀತಿ ದೇವರನ್ನು ಪೂಜೆ ಮಾಡುತ್ತಿದ್ದಾರೆಂದರೆ, ಊರಿನ ಮುಂಭಾಗದಲ್ಲಿ ಒಂದು ಅರಳಿಮರವನ್ನು ಮತ್ತು ಬೇವಿನ ಮರವನ್ನು ಸೃಷ್ಟಿ ಮಾಡಿ ಆ ಕಡೆ ಒಂದು ಚಪ್ಪಡಿ, ಈ ಕಡೆ ಒಂದು ಚಪ್ಪಡಿ ಮೇಲೊಂದು ಚಪ್ಪಡಿ ಈ ರೀತಿ ನಾಲ್ಕು ಚಪ್ಪಡಿಯನ್ನು ಹಾಕಿ ಮಧ್ಯದಲ್ಲಿ ಒಂದು ಕಲ್ಲನ್ನಿಟ್ಟು ಪೂಜೆ ಮಾಡುತ್ತಿರತಕ್ಕ ಸಂಧರ್ಭವನ್ನು ಇವತ್ತು ಕೂಡ ಕಣ್ಣಾರೆ ಕಾಣುತ್ತಿದ್ದೇವೆ. ಇಂಥ ಒಂದು ಸಂದರ್ಭದಲ್ಲಿ ನಮ್ಮ ಧೀಮಂತ ನಾಯಕರಾದ ಬಂಗಾರಪ್ಪನವರು ಇವರಿಗೂ ಕೂಡ ಒಂದು ದೇವಾಲಯವನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಲಂಬಾಣಿ, ತಾಂಡಾಗಳಲ್ಲಿ ಹರಿಜನಗಿರಿಜನರ ಕೇರಿಗಳಲ್ಲಿ, ಹಿಂದುಳಿದವರ ಕೇರಿಗಳಲ್ಲಿ ಇಂಥ ಒಂದು ದೇವಾಲಯವನ್ನು ಆರಾಧನ ಯೋಜನೆಯ ಅಡಿಯಲ್ಲಿ ಕಟ್ಟಿಸಿಕೊಡಲು ಹೊರಟಿರತಕ್ಕ ಈ ಸಮರ್ಥ ನಾಯಕತ್ವರವನ್ನು ಮೆಚ್ಚಬೇಕಾಗುತ್ತದೆ. ನಿಜಕ್ಕೂ ಕೂಡ ಎಲ್ಲಾ ಹಿಂದುಳಿದ ವರ್ಗಗಳಿಗೆ ಇವತ್ತು ದೇವಾಲಯಕಟ್ಟಿ ನಾವು ಕೂಡ ದೇವಾಲಯದಲ್ಲಿ ಪೂಜೆ ಮಾಡುತ್ತೇವೆ ಎನ್ನತಕ್ಕ ಭಾವನೆ ಬರಲು ಸಾಧ್ಯವಾಗಿದೆ. ಈ ಯೋಜನೆ ಇಡೀ ರಾಜ್ಯದ ಜನತೆ ಮೆಚ್ಚಿಕೊಳ್ಳತಕ್ಕ ವಿಚಾರವಾಗಿದೆ.

ಮತ್ತೊಂದು ಮುಖ್ಯವಾದುದೆಂದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಸಂವಿಧಾನಾತ್ಮಕವಾಗಿ ಮತ್ತು ಶಾಸನಾತ್ಮಕವಾಗಿ ಎಷ್ಟೇ ಸವಲತ್ತುಗಳು ಇದ್ದರೂ ಕೂಡ ಆ ಒಂದು ವರ್ಗದ ಮೇಲೆ ಇದುವರೆಗೂ ಆಗಿಂದಾಗೆ, ಅಲ್ಲಲ್ಲಿ ಕಗ್ಗೊಲೆ, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಮ್ಮ ರಾಜ್ಯದಲ್ಲಿ ನಡೆದುಕೊಂಡು ಬರುತ್ತಿದೆ. ನಮ್ಮ ರಾಷ್ಟ್ರದಲ್ಲಿಯೂ ಕೂಡ ನಡೆಯುತ್ತಿದೆ. ಈ ಕೆಳವರ್ಗದವರ ಮೇಲೆ ನಡೆಯುತ್ತಿರತಕ್ಕ ದೌರ್ಜನ್ಯವನ್ನು ತಡೆಹಿಡಿಯಬೇಕೆಂದು ಒಂದು ಉನ್ನತಮಟ್ಟದ ಸಮಿತಿಯನ್ನು ರಚಿಸಲು ತೀರ್ಮಾನ ಮಾಡಿರತಕ್ಕ ಸರ್ಕಾರದ ಕಾರ್ಯಕ್ರಮ, ಮೆಚ್ಚತಕ್ಕದ್ದಾಗಿದೆ. ಈ ಒಂದು ವಿಚಾರದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ 16-8-1984ಮತ್ತು 28-11-1984ರಲ್ಲಿ ಈ ರಾಜ್ಯದಲ್ಲಿ ಇದ್ದಂಥ ಅಂದಿನ ಜನತಾ ಸರ್ಕಾರ ಈ ರಾಜ್ಯದಲ್ಲಿರತಕ್ಕ 6 ಪಂಗಡಗಳಾದ ನಾಯಕ, ವಾಲ್ಮೀಕಿ, ಬೇಡ, ಪರಿವಾರ, ತಳವಾರಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಅಂದಿನ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಕೇಂದ್ರ ಸರ್ಕಾರ ಇದನ್ನು ಪೂರ್ಣವಾಗಿ ಗಮನಿಸಿ 19-4-1988ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಆ ಆಜ್ಞೆಯನ್ನು ಹೊರಡಿಸತಕ್ಕ ಹಂತದಲ್ಲಿ ಮೊದಲನೆಯದಾಗಿ ಇರತಕ್ಕ ಪರಿವಾರ ಮತ್ತು ತಳವಾರ ಜನಾಂಗಗಳನ್ನು ಕೈಬಿಟ್ಟಿದೆ. ಈ ಪರಿವಾರ ಜನಾಂಗದ ಜನರು ಇಂದು ಮೈಸೂರಿನಲ್ಲಿ ಸುಮಾರು 3 ರಿಂದ 4 ರಷ್ಟು ಇದ್ದಾರೆ. ಈ ಜನರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ದಿಸೆಯಿಂದ ಇದರ ಬಗ್ಗೆ ರಾಜ್ಯ ಸರ್ಕಾರ ಕೂಲಂಕುಷವಾಗಿ ಪರಿಶೀಲನೆ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಆದರೂ ಕೂಡ ಕೇಂದ್ರ ಸರ್ಕಾರ ಯಾವುದೋ ಕಾರಣಕೋಸ್ಕರ ಇವೆರಡನ್ನು ಕೈಬಿಟ್ಟಿರುವುದರಿಂದ ಮತ್ತೆ ತಮ್ಮ ಮುಖಾಂತರ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ, ಈ ಪರಿವಾರ ಮತ್ತು ತಳವಾರ ಎನ್ನತಕ್ಕಂಥ ಎರಡು ಪದಗಳನ್ನು ಶಿಫಾರಸು ಮಾಡಿ, ಕೇಂದ್ರ ಸರ್ಕಾರ ಈ ಎರಡೂ ಪದಗಳನ್ನು ಅನುಮೋದಿಸುವವರೆಗೂ ಈ ವರ್ಗದ ಜನರು ಏನು ಒಂದು ಸವಲತ್ತುಗಳನ್ನು ಪಡೆದು ಕೊಂಡಿದ್ದರೋ ಅದನ್ನು ಮುಂದುವರೆಸಿಕೊಂಡು ಹೋಗತಕ್ಕಂಥದ್ದು. ಮತ್ತು ಆ ಸವಲತ್ತುಗಳನ್ನು ಪಡೆದ ವ್ಯಕ್ತಿಯ ಮೇಲೆ ಯಾವುದೇ ರೀತಿಯ ಕಾನೂನಿನ ಕ್ರಮವನ್ನು ತೆಗೆದುಕೊಳ್ಳಬಾರದು ಎಂದು ಹೇಳಿ ರಾಜ್ಯ ಸರ್ಕಾರದವರು ಸಂಬಂಧಪಟ್ಟ ಇಲಾಖೆಗೆ ಆದೇಶವನ್ನು ಹೊರಡಿಸಬೇಕೆಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳತ್ತೇನೆ. ಅತಿ ಮುಖ್ಯವಾಗಿ ಸಾಮಾಜಿಕವಾಗಿ ಹಿಂದುಳಿತಿರತಕ್ಕ ಹಿಂದುಳಿದ ವರ್ಗದವರಿಗೆ ಇವತ್ತು ಹಾವನೂರ್

ಆಯೋಗವನ್ನು ಬಿಟ್ಟರೆ ಮತ್ತೊಂದು ಇಂಥ ಆಯೋಗ ರಚನೆಯಾಗಲು ಸಾಧ್ಯವಾಗಲಿಲ್ಲ. ಹಿಂದಿನ ಸರ್ಕಾರ ವೆಂಕಟಸ್ವಾಮಿ ಆಯೋಗವನ್ನು ಜಾರಿಗೆ ತರತಕ್ಕಂಥ ಹಂತದಲ್ಲಿ, ಈ ಸದನಕ್ಕೆ ಮಂಡಿಸಿದೆ, ವೆಂಕಟಸ್ವಾಮಿ ಆಯೋಗವನ್ನು ತಿರಸ್ಕರಿಸಿದ ಸಂಧರ್ಭ ಕೂಡ ಇದೆ. ನ್ಯಾಯ ಮೂರ್ತಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ರಾಜ್ಯಪಾಲರು ಭಾಷಣದಲ್ಲಿ ಮಾಡಿದ್ದಾರೆ. ದಯಮಾಡಿ ಇದ್ದನ್ನು ಆದಷ್ಟು ಶೀಘ್ರವಾಗಿ ಪರಿಶೀಲನೆ ಮಾಡಿ ಜಾರಿಗೆ ಕೊಟ್ಟರೆ, ಗೊಂದಲಮಯದಲ್ಲಿರತಕ್ಕ ಈ ಹಿಂದುಳಿದ ವರ್ಗದವರು ಯಾವುದಾದರೊಂದು ಪಂಗಡಕ್ಕೆ ಸೇರಿ ಸೌಲಭ್ಯವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಕೊನೆಯದಾಗಿ ಪಂಚಾಯತ್‌ರಾಜ್ ವ್ಯವಸ್ಥೆ ಬಗ್ಗೆ ನಾನು ಐದು ವರ್ಷ ಜಿಲ್ಲಾಪರಿಷತ್ತಿನ ಸದಸ್ಯನಾಗಿ ನನ್ನ ಅನುಭವವನ್ನು ಈ ಸದನದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. 1971ರ ಜನ ಗಣತಿಯ ಆಧಾರದ ಮೇಲೆ ಈ ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ಕೊಟ್ಟರು. ಇದು ಸ್ವಲ್ಪ ಬದಲಾವಣೆ ಆಗಬೇಕಾದಂತ ಪರಿಸ್ಥಿತಿಯೊಳಗಡೆ ಇವತ್ತಿನ ರಾಜ್ಯಸರ್ಕಾರ ಇದಕ್ಕೆ ಒಂದು ತಿದ್ದುಪಡಿಯನ್ನು ತಂದು ಕೇಂದ್ರದ ಸಂವಿಧಾನ ತಿದ್ದುಪಡಿ ಜೊತೆಗೆ ರಾಜ್ಯದಲ್ಲಿಯೂ ಕೂಡ ಹೊಸ ವ್ಯವಸ್ಥೆಯನ್ನು ಮಾಡುವುದು ಮೆಚ್ಚತಕ್ಕಂಥ ವಿಚಾರವಾಗಿದೆ. ಇದನ್ನು 1991ರ ಜನ ಗಣತಿಯ ಆಧಾರದ ಮೇಲೆ ಕೇಂದ್ರ ವಿಂಗಡಣೆ ಮಾಡಿ ಚುನಾವಣೆ ಆಗತಕ್ಕಂಥದ್ದು ಸೂಕ್ತವಾಗಿದೆ. ಆದಷ್ಟು ಬೇಗ ಈ ಚುನಾವಣೆ ಆಗತಕ್ಕಂಥ ವ್ಯವಸ್ಥೆ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಮೊದಲ ಬಾರಿಗೆ ಈ ಅಧಿವೇಶನದಲ್ಲಿ ಮಾತನಾಡಲು ಅವಕಾಶ ಮಾಡಿ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಅಧ್ಯಕ್ಷಿಣಿಯವರೇ, ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಮಾಡಿಕೊಡಬೇಕು. ಅದಕ್ಕೆ ಟೈಮ್ ಫಿಕ್ಸ್ ಮಾಡಿ, ಟೈಮ್ ಪ್ರಕಾರ ಮಾಡಿಕೊಟ್ಟರೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವಾಗುತ್ತದೆ.

ಛೇರ್ಮನ್:- ಸದಸ್ಯರೆಲ್ಲರೂ ಸಹಕರಿಸಿದರೆ ಮಾತ್ರ ಅದು ಸಾಧ್ಯ. ಒಬ್ಬರು ಮಾತನಾಡುವಾಗ ಬೇರೆಯವರು ಇಂಟರ್‌ಅಪ್ಟ ಆದರೆ ಹೇಗೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ:- ದಯವಿಟ್ಟು ತಾವು ನಮಗೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್):- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ಈ ಸದನದಲ್ಲಿ ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರು ನಮ್ಮನ್ನು ಕುರಿತು ಮಾಡಿದಂಥ ಭಾಷಣಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಸಾಮಾನ್ಯವಾಗಿ ಈ ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರ ಭಾಷಣವೆಂದರೆ ಮುಂದಿನ ಕಾರ್ಯಕ್ರಮ ಗಳನ್ನು ಯಾವ ರೀತಿ ರೂಪಿಸುತ್ತೇವೆ, ಏನೆಲ್ಲಾ ಕಾರ್ಯಕ್ರಮಗಳನ್ನು ಹಾಕುತ್ತಾರೆ ಎನ್ನುವ ಒಂದು ನೀಲಿ ನಕ್ಷೆ ಮತ್ತು ಹಿಂದೆ ನಡೆದಂಥ ಕಾರ್ಯಕ್ರಮಗಳು ಏನಾಗಿವೆ ಇವುಗಳನ್ನು ಸೂಕ್ಷ್ಮವಾಗಿ ಇದರಲ್ಲಿ ವಿಮರ್ಶೆ ಮಾಡತಕ್ಕದ್ದು ಸಂಪ್ರದಾಯವಾಗಿದೆ. ಆದರೆ ನಾನು ಹಲವಾರು ಬಾರಿ ಸನ್ಮಾನ್ಯ ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕಂಥ ಭಾಷಣವನ್ನು ಮೊದಲನೆ ಪುಟದಿಂದ ಕೊನೆಯ ಪುಟದವರೆಗೆ ಅನೇಕ ಸಾರಿ ಓದಿದ್ದೇನೆ. ಆದರೆ ನನಗೆ ಭಾಸವಾಗಿದ್ದುದು ಏನೆಂದರೆ ಈ ಸರ್ಕಾರಕ್ಕೆ ಯಾವ ರೀತಿ ಲಂಗು ಲಗಾಮು ಇಲ್ಲದೆ ಆಡಳಿತ ನಡೆಯುತ್ತಿದೆ ಅದರ ಪ್ರತಿಬಿಂಬ ಬಹಳ ಸ್ಪಷ್ಟವಾಗಿ ಈ ರಾಜ್ಯಪಾಲರ ಭಾಷಣದಲ್ಲಿ ಆಗಿದೆ. ದಿಕ್ಕು ಇಲ್ಲದೆ ಏನು ನಡೆದಿದೆ ಎನ್ನುವ ಪರಿಚಯವಿಲ್ಲದೆ, ಯಾವ ದಿಕ್ಕಿನಲ್ಲಿ ಸರ್ಕಾರ ಹೋಗಬೇಕು ಎನ್ನುವಂತಹ ದಿಕ್ಕಸೂಚಿಯೂ ಇಲ್ಲದೆ ನಡೆದಿರತಕ್ಕಂಥ ಸರ್ಕಾರವೆಂದರೆ ಅದು ಅತಿಶಯೋಕ್ತಿಯಲ್ಲ ಎಂದು ನನ್ನ ಭಾವನೆ. ಮಾನ್ಯ ಅಧ್ಯಕ್ಷಿಣಿಯವರೆ ಇವತ್ತಿನ ದಿವಸ ಈ ರಾಜ್ಯವನ್ನು ಮತ್ತು ಇಡೀ ದೇಶದ ಜನತೆಯನ್ನು ಕಾಡಿ ತಿನ್ನತಕ್ಕಂತಹ ಸಮಸ್ಯೆಯೆಂದರೆ ಬೆಲೆ ಏರಿಕೆ. ಪ್ರತಿಯೊಂದು ಸಾಮಾನುಗಳ ಬೆಲೆ ಏರಿಕೆಯಾಗಿದೆ. ಅದನ್ನು ಹಿಂದೆ ಮಾತನಾಡಿದಂಥ ಹಿಂದಿನ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಈ ಬೆಲೆ ಏರಿಕೆಯನ್ನು ತಡೆಗಟ್ಟುವ ಕಾರ್ಯಕ್ರಮ ಕೇಂದ್ರಸರ್ಕಾರಕ್ಕೆ ಒಳಪಡುತ್ತದೆಂದು ಹೇಳಿದರು. ಹೌದು, ನಿಜ. ಕೆಲವು ಯೋಜನೆಗಳ ಪ್ರಕಾರ ಕೇಂದ್ರ ಸರ್ಕಾರದ

ಅನೇಕ ತೀರ್ಮಾನಗಳ ಪ್ರಕಾರ ಈ ಬೆಲೆ ಏರಿಕೆಯಾಗಿದೆ. ಅದು ನಿಜ. ಆದರೆ ಅದನ್ನು ಕಾರ್ಯಗತ ಮಾಡತಕ್ಕಂಥ ರಾಜ್ಯ ಸರ್ಕಾರ ಈ ಬೆಲೆ ಏರಿಕೆಯನ್ನು ಪರಿಣಾಮಕಾರಿಯಾಗಿ ತಡೆಕಟ್ಟಬೇಕಾಗಿರತಕ್ಕಂಥದ್ದು ಕೇಂದ್ರ ಸರ್ಕಾರದಲ್ಲಿ ಅಲ್ಲ, ಇದು ರಾಜ್ಯ ಸರ್ಕಾರದ ಕರ್ತವ್ಯ ಕೂಡ ಹೌದು.

ಈ ದೇಶದಲ್ಲಿರತಕ್ಕ ಕಪ್ಪು ದಾಸ್ತಾನುಗಾರರಿಗೆ, ಕಾಳಸಂತೆಕೋರರಿಗೆ, ಇವರು ಶಾಮೀಲಾಗಿರತಕ್ಕ ಸ್ಪಷ್ಟ ಉದಾಹರಣೆಗಳಿವೆ. ತಾವೇ ನೋಡಬಹುದು. ಕಳೆದ ವರ್ಷ ಒಂದು ಕಡೆಯಾದರೂ ಈ ಸರ್ಕಾರದವರು ಕಳ್ಳ ದಾಸ್ತಾನುಗಾರರ ಮೇಲೆ, ಕಳ್ಳ ವ್ಯಾಪಾರಗಾರರ ಮೇಲೆ ಎಷ್ಟು ಕೇಸುಗಳನ್ನು ದಾಖಲು ಮಾಡಿದ್ದಾರೆಂಬುದನ್ನು ಅಂಕಿಅಂಶಗಳ ಮೂಲಕ ಹೇಳಬೇಕು. ತಮಗೂ ಗೊತ್ತಿರಬಹುದು, ಮೊನ್ನೆ ಒಂದು ದೊಡ್ಡ ಅಘಾತವನ್ನುಂಟು ಮಾಡತಕ್ಕ ಸುದ್ದಿಯನ್ನು ಈ ರಾಜ್ಯದ ಜನತೆ ಓದಿರಬಹುದು. ಪತ್ರಿಕೆಗಳಲ್ಲಿ ಫೋಟೋ ಸಹಿತ ಬಂದಿದೆ. ಅದೇನೆಂದರೆ ತೊಗರಿ ಬೇಳೆಯನ್ನು ಬದಲಾಯಿಸಿ ಕೇಸರಿ ಬೇಳೆ ಬರುತ್ತಿದೆ. ಕಾನೂನು ಪ್ರಕಾರ ಈ ಕೇಸರಿ ಬೇಳೆ ಮಾರಾಟಕ್ಕೆ ನಿಷೇಧವಾಗಿದೆ. ಇದು ಒಂದು ವಿಷ ವಸ್ತು. ಇದನ್ನು ಯಾರು ತಿನ್ನುತ್ತಾರೆ ಅವರಿಗೆ ಪೆರಾಲಿಸಿಸ್ ಹೊಡೆಯುತ್ತದೆ. ಹಿಂದೆ ಇಂಥ ಅನೇಕ ಕೇಸುಗಳು ಈ ಕೇಸರಿ ಬೇಳೆಯನ್ನು ಮಾರಾಟ ಮಾಡುವವ ವಿರುದ್ಧ ಕೇರಳ ಹೈಕೋರ್ಟ್‌ನವರೆಗೂ ಹೋಗಿ ಇದನ್ನು ಮಾರಿದವರಿಗೆ ಶಿಕ್ಷೆ ಕೂಡ ಆಗಿದೆ. ಪತ್ರಿಕೆಗಳಲ್ಲಿ ಇದು ಫೋಟೋ ಸಹಿತ ಬಂದಿದ್ದರೂ ಕೂಡ, ಅದರ ಪರಿಣಾಮ ಏನಾಗುತ್ತದೆಂಬುದು ಗೊತ್ತಿದ್ದರೂ, ಮತ್ತು ಇದು ಕಾನೂನು ಬಾಹಿರ ಎಂದು ಆಗಿದ್ದರೂ ಕೂಡ ಈ ಕೇಸರಿ ಬೇಳೆಯನ್ನು ಬೀದಿ ಬೀದಿಯಲ್ಲಿ ಇವತ್ತೂ ಕೂಡ ಮಾರಾಟ ಮಾಡುತ್ತಿದ್ದಾರೆ. ಅವರ ವಿರುದ್ಧ ಈ ಸರ್ಕಾರ ಯಾವುದೇ ಕ್ರಮವನ್ನು ಇದುವರೆಗೂ ತೆಗೆದುಕೊಂಡಿಲ್ಲ. ಇದಕ್ಕೆ ಬದಲಾಗಿ ನಾವು ಏನು ನೋಡುತ್ತಿದ್ದೇವೆ ಎಂದರೆ, ಈ ಬೇಳೆಯನ್ನು ಕೊಂಡುಕೊಳ್ಳಬೇಡಿ ಎಂದು ಟಿ. ವಿ. ಯಲ್ಲಿ ಜಾಹಿರಾತುಬರುತ್ತಿದೆ. ಇದು ಬಹಳ ಶೋಚನೀಯ. ಈ ಕೇಸರಿ ಬೇಳೆ ಯಾವ ರೀತಿ ಮಾರ್ಕೆಟ್‌ಗೆ ಬರುತ್ತದೆ, ಕಾನೂನು ಬಾಹಿರವಾಗಿದ್ದರೂ, ಕಾನೂನಿನಲ್ಲಿ ಸಿಷಿದ್ಧವಾಗಿದ್ದರೂ ಇವತ್ತಿನ ದಿವಸ ರಾಜಾರೋಷವಾಗಿ ಬೀದಿ ಬೀದಿಯಲ್ಲಿ ಈ ಕೇಸರಿ ಬೇಳೆ ಮಾರಾಟವಾಗುತ್ತಿದೆ. ಅಂದಮೇಲೆ ಈ ಸರ್ಕಾರದವರು ಕಳ್ಳ ದಾಸ್ತಾನುಗಾರರಿಗೆ ಶಾಮೀಲಾಗಿದ್ದಾರೆಂಬುದಕ್ಕೆ ಇದೊಂದೇ ಸ್ಪಷ್ಟ ನಿದರ್ಶನ ಸಾಕು. ಬೆಲೆ ಏರಿಕೆಯ ಬಗ್ಗೆ ಇಷ್ಟು ಮಾತ್ರ ನಾನು ಹೇಳಬಯಸುತ್ತೇನೆ.

ಇನ್ನು ಬಹಳ ಪ್ರಮುಖವಾದ ವಿಚಾರ ಎಂದರೆ ನಿರುದ್ಯೋಗ ಸಮಸ್ಯೆ. ಜನತೆಯನ್ನು ಅದರಲ್ಲೂ ಯುವ ಜನತೆಯನ್ನು ಕಚ್ಚಿ ಕಾಡುತ್ತಿರುವುದು ಎಂದರೆ ಈ ನಿರುದ್ಯೋಗ ಸಮಸ್ಯೆ. ಉದ್ಯೋಗ ಎಂದರೆ ನಮ್ಮ ಅನೇಕ ಜನ ಮಾನ್ಯ ಸ್ನೇಹಿತರು ಏನು ತಿಳಿದುಕೊಂಡಿದ್ದಾರೆಂದರೆ ಸರ್ಕಾರದ ಕೆಲಸವೇ ಉದ್ಯೋಗ ಎಂದು. ಇದಕ್ಕೆ ನನ್ನ ವಿರೋಧ ಇದೆ. ಉದ್ಯೋಗ ಎಂದರೆ ಒಬ್ಬ ವ್ಯಕ್ತಿ ತನ್ನ ಶಕ್ತ್ಯಾನುಸಾರ ಹೊಲದಲ್ಲಾಗಲಿ, ಗದ್ದೆಯಲ್ಲಾಗಲಿ, ಕಾರ್ಖಾನೆಗಳಲ್ಲಾಗಲಿ, ಕಛೇರಿಗಳಲ್ಲಾಗಲಿ ದುಡಿಯಬೇಕು. ದುಡಿಯುವವರಿಗೆ ಒಂದು ಅವಕಾಶವನ್ನು ಒದಗಿಸಿಕೊಡಬೇಕು. ಅದು ಉದ್ಯೋಗ. ಇಲ್ಲಿ ಉದ್ಯೋಗ ಎಂದರೆ ಸರ್ಕಾರದ ಎಲ್ಲಾ ಕಛೇರಿಗಳಲ್ಲೂ ಜನರನ್ನೇ ತುಂಬಿಸಿ ಕೇವಲ ಸಂಬಳ ಕೊಡುವುದಕ್ಕಾಗಿಯೇ ನೀವು ಉದ್ಯೋಗಗಳನ್ನು ಇಟ್ಟುಕೊಳ್ಳಿ ಎಂದು ಹೇಳತಕ್ಕ ವಾದವನ್ನು ನಾನು ಒಪ್ಪುವುದಿಲ್ಲ, ಉದ್ಯೋಗ ಎಂದರೆ, ನಾನು ಈಗಾಗಲೇ ಹೇಳಿದಂತೆ ಉತ್ಪಾದನೆ ಮಾಡಬೇಕು. ಅದು ವ್ಯವಸಾಯ ರಂಗದಲ್ಲಿರಬಹುದು, ಕೈಗಾರಿಕಾ ರಂಗದಲ್ಲಿರಬಹುದು. ಈ ರೀತಿಯ ಉದ್ಯೋಗವನ್ನು ನಿಜವಾಗಿಯೂ ಉದ್ಯೋಗ ಎಂದು ತಿಳಿದುಕೊಂಡಿರುವವರಲ್ಲಿ ನಾನೂ ಒಬ್ಬ. ಆದರೆ ಇವತ್ತಿನ ದಿವಸ ಉದ್ಯೋಗವನ್ನು ಕೊಡತಕ್ಕ ನೀತಿ ಏನಿದೆ ಎಂದರೆ ಮಾತೆತ್ತಿದರೆ ವಿಶ್ವ, ವಿಶ್ವ ಎಂದು ಹೇಳುತ್ತಿದ್ದಾರೆ. ನಾನು ಹಳ್ಳಿಯಿಂದ ಬಂದಿರುವುದರಿಂದ ನನಗೂ ಕೂಡ ಗೊತ್ತಿದೆ. ನಿಜವಾಗಿಯೂ ಹೇಳುವುದಾದರೆ, ನಾನು ಹುಡುಗನಾಗಿದ್ದಾಗ ನಾನು ಹೊದಿಯುತ್ತಿದ್ದ ಬಟ್ಟೆ ನನ್ನ ಊರಿನಲ್ಲೇ ತಯಾರಾಗುತ್ತಿತ್ತು, ನಾನು ತೊಡುತ್ತಿದ್ದ ಅಂಗಿ ನನ್ನ ಊರಿನಲ್ಲೇ ತಯಾರಾಗುತ್ತಿತ್ತು, ನಾನು ಹಾಕಿಕೊಳ್ಳುತ್ತಿದ್ದ ಚಪ್ಪಲಿ ನನ್ನ ಊರಿನಲ್ಲೇ ತಯಾರಾಗುತ್ತಿತ್ತು. ಇವತ್ತು ಅವು ಯಾವುವೂ ಕೂಡ ನಮ್ಮ ಊರಿನಲ್ಲಿ ತಯಾರಾಗುತ್ತಿಲ್ಲ, ಬಹುರಾಷ್ಟ್ರಗಳು ಉತ್ಪಾದನೆ ಮಾಡುತ್ತಿರುವ ವಸ್ತುಗಳನ್ನು ನಾವು ಇಂದು ಉಪಯೋಗಿಸುತ್ತಿದ್ದೇವೆ. ಬಾಟಾ ಚಪ್ಪಲಿ ಸಿಕ್ಕುತ್ತಿವೆ. ಬಹಳ ಮುಂದುವರಿದ ಟೆಕ್ನಾಲಯಿಂದ ತಯಾರಿಸುತ್ತಿರುವ ಬಟ್ಟೆಯನ್ನು ನಾವು ಹಾಕಿಕೊಳ್ಳುತ್ತಿದ್ದೇವೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗವನ್ನು ಕೊಡತಕ್ಕ ಕೆಲಸಕ್ಕೆ ಬಹಳ ಪೆಟ್ಟು ಬಿದ್ದಿದೆ. ಇವತ್ತು ಕೇಂದ್ರದ ನೀತಿ ಕೂಡ ಇದೇ ಆಗಿದೆ. ಹೊರದೇಶಗಳಿಂದ ತಂತ್ರಜ್ಞಾನವನ್ನು ತಂದು ನಮ್ಮ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕೈಗಾರಿಕೆಗಳು ಜನರಿಗೆ ಕೈತುಂಬ ಉದ್ಯೋಗವನ್ನು ಒದಗಿಸುತ್ತಿದ್ದುವು. ಇವತ್ತು ಆ

ಉದ್ಯೋಗಗಳಿಗೂ ಕೂಡ ಕುಂದು ಬಂದಿದೆ. ನೀವು ನಮ್ಮವರನ್ನು ಒಂದು ಕಡೆ ನಿರುದ್ಯೋಗಿಗಳನ್ನಾಗಿ ಮಾಡುತ್ತಿದ್ದೀರಿ. ಇನ್ನೊಂದು ಕಡೆ ಹೊರದೇಶಗಳ ತಂತ್ರಜ್ಞಾನದ ಜೊತೆಗೆ ಅಲ್ಲಿನ ಬಂಡವಾಳವನ್ನೂ ಕೂಡ ತಂದು ಈ ದೇಶವನ್ನು ದಿನೇ ದಿನೇ ಪಾಪರ್ ಆಗಿ ಮಾಡುವುದಕ್ಕೆ ತೀವ್ರವಾದ ಪ್ರಯತ್ನ ಮಾಡುತ್ತಿದ್ದೀರಿ.

ಒಂದು ಕಡೆ ದೇಶವನ್ನು ಆರ್ಥಿಕವಾಗಿ ದಿವಾಳಿ ಮಾಡುತ್ತಿದ್ದರೆ, ಇನ್ನೊಂದು ಕಡೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಕೈತುಂಬ ಏನು ಕೆಲಸ ಸಿಕ್ಕುತ್ತಿತ್ತು ಅದನ್ನು ನಿರ್ನಾಮ ಮಾಡುತ್ತಿದ್ದೀರಿ. ಇವತ್ತು ವಿಶ್ವ ಯೋಜನೆಯ ಅನೇಕ ಕಾರ್ಯಕ್ರಮಗಳನ್ನು ನಾವು ಜಾರಿಗೆ ತಂದಿದ್ದೇವೆಂದು ಹೇಳುತ್ತಿದ್ದೀರಿ. ಇದರ ಬಗ್ಗೆ ಇವತ್ತು ಬಹಳ ಜನರು ಮಾತನಾಡಿಕೊಳ್ಳುತ್ತಿರುವುದರಿಂದ ಒಂದು ಸಮಗ್ರ ತನಿಖೆಯೇ ಆಗಬೇಕಾಗಿದೆ. ಕಾರಣ ಏನೆಂದರೆ ಇದರ ಬಗ್ಗೆ ಬಹಳ ಪ್ರಚಾರ ನಡೆಯುತ್ತಿದೆ. ಇಲ್ಲಿ ಒಂದು ವಸ್ತು ಪ್ರದರ್ಶನವನ್ನೂ ಕೂಡ ಮಾಡಿದ್ದರು. ನಾನೂ ಕೂಡ ಆ ವಸ್ತು ಪ್ರದರ್ಶನವನ್ನು ಒಂದು ಸುತ್ತು ತಿರುಗಾಡಿ ನೋಡಿಕೊಂಡು ಬಂದೆ.

ನನ್ನ ಮಾಹಿತಿ ಪ್ರಕಾರ ಅದರಲ್ಲಿ ಶೇಕಡಾ 50 ಕ್ಕಿಂತ ಮೇಲ್ಪಟ್ಟು ಉತ್ಪನ್ನಗಳು ಏನಿದೆ ಆ ಉತ್ಪನ್ನಗಳು ಈ ಯೋಜನೆಯಲ್ಲಿ ತಯಾರು ಮಾಡಿದ್ದಲ್ಲ. ಬೇರೆ ಕಡೆ ತಯಾರು ಮಾಡಿ ಅದನ್ನು ಇಲ್ಲಿ ಪ್ರದರ್ಶನಕ್ಕೆ ಮಾತ್ರ ತಂದಿಟ್ಟಿರತಕ್ಕಂಥದ್ದು ಎಂದು ನನಗೆ ಅರ್ಥವಾಯಿತು. ಆದ್ದರಿಂದ ಇವತ್ತಿನ ದಿವಸ ಇದಕ್ಕೆ ಹೆಚ್ಚು ಪ್ರಚಾರವನ್ನು ಕೊಟ್ಟು ಉದ್ಯೋಗವನ್ನು ಕೊಡುತ್ತೇವೆನ್ನುವ ಮಾತು ಏನು ನಡೆಯುತ್ತಿದೆ ಇದು ನಿಜವಲ್ಲ, ಇದರ ಬಗ್ಗೆ ಒಂದು ತನಿಖೆಯಾಗಬೇಕಾಗಿದೆ. ಸರ್ಕಾರದವರು ಇದರ ಬಗ್ಗೆ ಒಂದು ನಿಜ ಚಿತ್ರವನ್ನು ಮೂಡಿಸಬೇಕಾದದ್ದು ಅತ್ಯಂತ ಅವಶ್ಯಕತೆ ಇದೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ ಈ ಪ್ರಚಾರಕ್ಕಾಗಿ ನಡೆಯುತ್ತಿರತಕ್ಕಂಥ ಯೋಜನೆ ಏನು ಇದೆ ಇದು ನಿಜವಾಗಿಯೂ ಜನತೆಯ ಕೈಗೆ, ಯುವಕರ ಕೈಗೆ ಉದ್ಯೋಗವನ್ನು ಕೊಡತಕ್ಕಂಥ ಯೋಜನೆ ಖಂಡಿತವಾಗಿಯೂ ಅಲ್ಲ. ಇದರ ಬಗ್ಗೆ ತನಿಖೆಯಾಗಬೇಕಾದದ್ದು ಅವಶ್ಯಕತೆ ಇದೆ. ಈ ಯೋಜನೆಯಲ್ಲಿ ತಯಾರು ಮಾಡದಿರತಕ್ಕಂಥ ವಸ್ತುಗಳನ್ನು ತಂದು ಜನರಿಗೆ ಮರೆಮಾಚತಕ್ಕಂಥ ಪ್ರಯತ್ನ ನಡೆಯುತ್ತಿದೆ. ಇದರ ಬಗ್ಗೆ ತನಿಖೆಯಾಗಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರದಲ್ಲಿ ಆಗ್ರಹಪಡಿಸುತ್ತೇನೆ.

ಮಾನ್ಯ ಅಧ್ಯಕ್ಷಣಿಯವರೇ, ವ್ಯವಸಾಯದಲ್ಲಿ ಇವತ್ತು ಬಹಳ ದುಃಖದಿಂದ ಈ ಮಾತನ್ನು ಹೇಳಬೇಕಾಗಿದೆ. ವ್ಯವಸಾಯರಂಗದಲ್ಲಿ ಉಪಯೋಗಿಸತಕ್ಕಂಥ ಪ್ರತಿಯೊಂದು ಸಾಮಾನಿನ ಬೆಲೆ ಜಾಸ್ತಿಯಾಗುತ್ತಿದೆ. ಟ್ರಾಕ್ಟರುಗಳ ಬೆಲೆ, ಪವರ್‌ಟಿಲ್ಲರ್ ಬೆಲೆಯಾಗಲಿ, ಡೀಸಲ್ ಬೆಲೆಯಾಗಲಿ ಅಥವಾ ಗೊಬ್ಬರದ ಬೆಲೆಯಾಗಲಿ ಮತ್ತು ಉಪಯೋಗಿಸತಕ್ಕಂಥ ಔಷಧಿಗಳ ಬೆಲೆಯಾಗಲಿ ಪ್ರತಿಯೊಂದರ ಬೆಲೆಯೂ ಜಾಸ್ತಿಯಾಗಿದೆ. ಈ ಸಾಮಾನುಗಳು ಇವೆಲ್ಲವೂ ಕೂಡ ಮಲ್ಟಿನ್ಯಾಶನಲ್ ಕಂಪನಿಗಳಿಂದ ಉತ್ಪಾದನೆ ಮಾಡತಕ್ಕಂಥ ಟ್ರಾಕ್ಟರುಗಳಿಂದಾಗಲಿ, ಔಷಧಿಗಳಿಂದಾಗಲಿ ಅನೇಕ ವಸ್ತುಗಳಿಂದ ಗ್ರಾಮ ಮಟ್ಟದಲ್ಲಿ ಪರಿಪೂರ್ಣವಾದಂಥ ಜೀವನವನ್ನು ನಡೆಸುತ್ತಿದ್ದಾರೆ. ಗ್ರಾಮೀಣ ಜೀವನ ನಾಶವಾಗಿ ಇವತ್ತಿನ ದಿವಸ ಬಹುರಾಷ್ಟ್ರೀಯ ಸಂಸ್ಥೆಗಳ ಕೈಗೆ ಗ್ರಾಮಜೀವನವನ್ನು ಕೊಡತಕ್ಕಂಥ ಒಂದು ಪ್ರಯತ್ನ ನಡೆದಿದೆ. ಅದನ್ನು ಈಗಾಗಲೇ ಒಪ್ಪಿಕೊಂಡು ಬಿಟ್ಟಿದ್ದೇವೆ. ಗೊಬ್ಬರವಿಲ್ಲದೆ ವ್ಯವಸಾಯ ಮಾಡಲಿಕ್ಕೆ ಸಾಧ್ಯವಿಲ್ಲ, ಔಷಧಿಗಳು ಇಲ್ಲದೆ ವ್ಯವಸಾಯ ಮಾಡಲಿಕ್ಕೆ ಸಾಧ್ಯವಿಲ್ಲ. ನಾವು ಪರಾವಲಂಬಿಗಳಾಗಿರುವುದರಿಂದ ವ್ಯವಸಾಯರಂಗದಲ್ಲಿ ಪ್ರತಿಯೊಂದರ ಬೆಲೆಯೂ ಕೂಡ ಜಾಸ್ತಿಯಾಗಿದೆ. ರೈತ ವ್ಯವಸಾಯರಂಗದಲ್ಲಿ ಉತ್ಪಾದನೆ ಮಾಡತಕ್ಕಂಥ ಸಾಮಾನುಗಳು ಅದರಲ್ಲೂ ಪ್ರಮುಖವಾಗಿ ತೋಟಗಾರಿಕೆಯಿಂದ ಇವತ್ತಿನ ದಿವಸ ರೈತರು ಯಾವ ಪರಿಸ್ಥಿತಿಗೆ ಬಂದಿರುತ್ತಾರೆಂಬುದನ್ನು ನೋಡಬೇಕಾಗಿದೆ. ಮಾನ್ಯ ತೋಟಗಾರಿಕೆಯ ಸಚಿವರು ಇಲ್ಲಿಯೇ ಇದ್ದಾರೆ. ತೋಟಗಾರಿಕೆಯ ಬೆಳೆಗೆ ಇವತ್ತಿನ ದಿವಸ ಏನಾಗಿದೆ ಎಂಬುದನ್ನು ಅವರೇ ಹೇಳಬೇಕು. ಟೊಮ್ಯಾಟೋ ಬೆಲೆಯಾಗಲಿ, ಆಲೂಗೆಡ್ಡೆಯ ಬೆಲೆಯಾಗಲಿ ಅವುಗಳನ್ನು ಬೆಳೆದಂಥ ರೈತರು ಕಣ್ಣೀರನ್ನು ಸುರಿಸುತ್ತಿರುತ್ತಾರೆ. ಬೆಳೆದಂಥ ಆಲೂಗಡ್ಡೆಗೆ ಬೆಲೆ ಇಲ್ಲ. ದ್ರಾಕ್ಷಿ ಬೆಳೆಯತಕ್ಕಂಥ ಜನರು ಕೈಸುಟ್ಟಿಕೊಂಡಿರುತ್ತಾರೆ. ಕಾರಣವೇನೆಂದರೆ ಬೆಳೆ ಬೆಳೆದದ್ದಕ್ಕೆ ಆದಾಯ ಏನು ಬರಬೇಕಾಗಿತ್ತೋ ಅದು ರೈತರ ಕೈಗೆ ಸಿಕ್ಕುತ್ತಿಲ್ಲ.

ಈ ಕಾರಣದಿಂದ ರೈತರು ವ್ಯವಸಾಯ ಮಾಡತಕ್ಕಂಥದ್ದೇ ಒಂದು ಶಾಪ ಎನ್ನತಕ್ಕಂಥ ಮಟ್ಟಕ್ಕೆ ಹೋಗಿದ್ದಾರೆ. ವ್ಯವಸಾಯಗಾರನಾಗಿ ಹುಟ್ಟಿದ್ದೇ ಒಂದು ಶಾಪವೆಂಬ ಪರಿಸ್ಥಿತಿಗೆ ರೈತರು ಬಂದಿದ್ದಾರೆ. ಈ ವಿಚಾರದಲ್ಲಿ ನಾನು ನಮ್ಮ ಮಾನ್ಯ ಬಿಜೆಪಿ ಸದಸ್ಯರು ಇದ್ದರೆ ಬಹಳ ಚೆನ್ನಾಗಿತ್ತೆಂದು ತಿಳಿದುಕೊಂಡಿದ್ದೆ. ಇದಕ್ಕೆಲ್ಲಾ ಕಾರಣ ವ್ಯವಸಾಯ ರಂಗದಲ್ಲಿ ಉತ್ಪಾದನೆಯಾಗತಕ್ಕಂಥದ್ದಕ್ಕೆ ಅವಶ್ಯಕವಾದ ಬೆಲೆಗಳು ಏರಿಕೆಯಾಗದಿರುವುದೇ ಆಗಿದೆ. ಸ್ವಾಮಿ, ಗೊಬ್ಬರದ

ಬೆಲೆ ಏರಿಕೆಯಾಗಿರುವ ಬಗ್ಗೆ ನಾನು ಹೋದಸಲ ಹೇಳಿದ್ದೆ. ಕಳೆದ ವಿಧಾನಸಭಾ ಅಧಿವೇಶನದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಕೇಂದ್ರ ಸರ್ಕಾರದ ತಪ್ಪು ಆರ್ಥಿಕ ನೀತಿಯಿಂದ ಈ ದುರಂತಕ್ಕೆ ಕಾರಣವಾಗಿದೆ, ಪತ್ರಿಕೆಗಳಲ್ಲೂ ಸಹ ಬಂದಿರತಕ್ಕಂಥದ್ದನ್ನು ಓದಿ ನೋಡಿ ಆಶ್ಚರ್ಯ ಪಡತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಉಂಟಾಗಿದೆ. ಇದನ್ನು ವಿರೋಧ ಮಾಡುತ್ತೇವೆನ್ನುವ ಮಾತನ್ನು ಮಾನ್ಯ ಬಿ. ಜೆ. ಪಿ. ಸದಸ್ಯರು ಹೇಳಿದರು. ಆದರೆ ಅವರು ಕೈ ಎತ್ತಿದ್ದೇ ಬೇರೆ. ಇದು ಜನರಿಗೆ ಒಂದು ಕಡೆ ವಂಚನೆ ಮಾಡಿದಂತಾಗುತ್ತದೆ. ಸರ್ಕಾರದವರು ಹೇಳುವುದು ಒಂದಾದರೆ ವಂಚನೆ ಮಾಡುವುದು ಒಂದಾಗಿದೆ ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ನಮ್ಮ ಪಾರ್ಟಿಯವರು ಪಾರ್ಲಿಮೆಂಟ್‌ನಲ್ಲಿ ವಿರೋಧ ಮಾಡುತ್ತೇವೆನ್ನತಕ್ಕಂಥ ಮಾತನ್ನು ಹೇಳಿದರು. ಆದರೆ ಅವರು ವಿರೋಧ ಮಾಡಲೇ ಇಲ್ಲ. ಅದಕ್ಕೆ ಪರವಾಗಿ ಅವರು ನಿಂತಿರತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತರಕಾರಿ ಮತ್ತಿತರ ಬೆಳೆಗಳಿಗೆ ಸಾಲ ಮನ್ನಾ ಮಾಡುವ ಬಗ್ಗೆ ಬಹಳ ಜನ ಮಾತನಾಡಿದರು. ಈ ಸಾಲ ಮನ್ನಾ ಮಾಡತಕ್ಕದ್ದು ಕೆಲವರಿಗೆ ಒಂದು ಉದ್ಯೋಗ ಎಂದು ತಿಳಿದುಕೊಂಡಿದ್ದೇನೆ. ಆ ಬಗ್ಗೆ ನನಗೆ ನಂಬಿಕೆ ಇಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕಾರಣವೇನೆಂದರೆ ಯಾವುದೇ ಸರ್ಕಾರ ನಡೆಸಲಿ, ಯಾರೇ ಸರ್ಕಾರ ನಡೆಸಲಿ ಸಾಲವನ್ನು ವಜಾ ಮಾಡುತ್ತೇವೆಂದು ಹೇಳುವುದು ಸಾಧ್ಯವಿಲ್ಲದ ಮಾತು. ಅದು ಆಗುವುದಿಲ್ಲ. ಈ ರೀತಿಯಾಗಿ ಪಾಲಿಟಿಕ್ಸ್ ನಡೆಯುತ್ತಿರುವ ಕಾರಣ ನಮ್ಮ ದೇಶದಲ್ಲಿರತಕ್ಕ ಬಂಡವಾಳ ಕರಗಿ ಹೋಗಿ ಹೊರದೇಶದಿಂದ ಹಣ ತರುತ್ತಿದ್ದೇವೆ. ನಾವು ಇದನ್ನು ಪರಿಶೀಲಿಸಬೇಕಾಗಿದೆ. ನಾವು ಒಂದು ಲಕ್ಷದ 43 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಸಾಲದ ಹೊರೆಯನ್ನು ಹೊತ್ತಿದ್ದೇವೆ. ಈ ರೀತಿ ತಪ್ಪು ಗ್ರಹಿಕೆಯಿಂದ ಉಂಟಾದ ಕೆಲವು ಕಾರ್ಯಕ್ರಮಗಳಿಂದ ಇವತ್ತು ಸಾಲವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಿದೆ. ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ನೋಡಿದರೆ ನಮ್ಮ ದೇಶವನ್ನು ಹೊರದೇಶಗಳಿಗೆ ಅಡ ಇಡಬೇಕಾದ ಪರಿಸ್ಥಿತಿಗೆ ಹೋಗಿದೆ. ನಾನು ಸಾಲವನ್ನು ವಜಾ ಮಾಡಿ ಎಂದು ಹೇಳುವವನಲ್ಲ. ನೀವು ಏನು ಮಾಡುವುದಕ್ಕೆ ಹೊರಟಿದ್ದೀರಿ ಎಂದರೆ ಎಕ್ಸೈಜ್‌ನವರಿಗೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಿ ಸಾಲದ ಕಂತು ಕಟ್ಟುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಹೊರಟಿದ್ದೀರಿ. ನಿಮಗೆ ನಾಚಿಕೆ ಇಲ್ಲ. ನಿಮ್ಮ ಕಾಂಗ್ರೆಸ್ ಸರ್ಕಾರ ಅಂದರೆ ಏಕ್ಸೈಜ್ ನವರಿಗೆ ಮಾತ್ರ. ದಳ್ಳಾಳಿಗಳಿಗೆ, ಸೇಕೆಂಡ್ಸ್ ಮಾರಾಟಗಾರರಿಗೆ ಮಾತ್ರ ಈ ಸರ್ಕಾರ. ರೈತರಿಗಾಗಿ ಸರ್ಕಾರ ಅಲ್ಲ. ನೀವೇನು ಕಾನೂನು ತಿದ್ದುಪಡಿ ಮಾಡುವುದಕ್ಕೆ ಹೊರಟಿದ್ದೀರಿ ಅದೇ ರೀತಿಯಲ್ಲಿ ರೈತರು ಕೊಡಬೇಕಾಗಿರತಕ್ಕ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮಾತ್ರ ವಜಾ ಮಾಡಿ. ಕನಿಷ್ಟ 3-4 ಅಥವಾ ಜೂನ್ ತಿಂಗಳವರೆಗೆ ಅವಕಾಶ ಕೊಡಿ ಸಾಲ ಚುಕ್ತ ಮಾಡುವುದಕ್ಕೆ. ಈ ವರ್ಷದ ಜೂನ್ ಒಳಗೆ ಯಾವ ಯಾವ ರೈತರು ತಮಗೆ ಇರತಕ್ಕ ಸಾಲವನ್ನು ವಾಪಸ್ಸು ಕೊಡುತ್ತಾರೆ ಅಂಥವರಿಗೆ ಬಡ್ಡಿ ಇಲ್ಲ, ಸುಸ್ತಿ ಬಡ್ಡಿ ಇಲ್ಲವೆಂಬ ನೀತಿಯನ್ನು ಜಾರಿಗೆ ತನ್ನಿ. ಈಗ ನೀವು ಒಂದು ನೀತಿಯನ್ನು ಜಾರಿಗೆ ತಂದಿದ್ದರೂ ಶೇಕಡ 5 ರಷ್ಟು ರಿಯಾಯಿತಿ ಕೊಡುವುದನ್ನು ತಂದಿದ್ದೀರಿ. ನೀವು ರಿಯಾಯಿತಿ ಕೊಡುವ ಅಲ್ಪಸ್ವಲ್ಪ ಹಣಕ್ಕೆ ರೈತನನ್ನು ಕಂಬದಿಂದ ಕಂಬಕ್ಕೆ ಏತಕ್ಕೆ ಓಡಾಡಿಸುತ್ತೀರಿ? ಪ್ರತಿಯೊಂದು ಬ್ಯಾಂಕಿಗೆ ಇಂಪ್ರೆಸ್ ಅಮೌಂಟ್ ಆಗಿ ಕೊಡಿ. ರೈತನನ್ನು ಅಲ್ಲಿ ಇಲ್ಲಿ ತಿರುಗಾಡಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಸಹಕಾರ ಸಂಘಗಳಲ್ಲಿ, ಬ್ಯಾಂಕುಗಳಲ್ಲಿ ಎಷ್ಟು ಸಾಲ ಇದೆ ಎಂದು ಸರ್ಕಾರಕ್ಕೆ ಗೊತ್ತಿದೆ. ಅದಕ್ಕೆ ಇಂಪ್ರೆಸ್ ಅಮೌಂಟ್ ಕೊಡಿ. ಯಾವ ರೈತರು ಬ್ಯಾಂಕಿಗೆ, ಸಹಕಾರ ಸಂಘಕ್ಕೆ ಸಾಲ ಕಟ್ಟಲು ಬರುತ್ತಾರೋ ಅದೇ ಸಂದರ್ಭದಲ್ಲಿ ರಶೀತಿ ಹಾಕಲಿ. ರೈತರಿಂದ ಬರಬೇಕಾದ ಅಸಲನ್ನು ಪಡೆಯಲಿ, ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಸರ್ಕಾರದಿಂದ ನಿಮ್ಮ ಲೆಕ್ಕದಲ್ಲಿ ಜಮಾ ಮಾಡಿ. ಅದನ್ನು ಬಿಟ್ಟು ರೈತನನ್ನು ಈ ಕಂಬದಿಂದ ಆ ಕಂಬಕ್ಕೆ, ಒಂದು ಕಛೇರಿಯಿಂದ ಮತ್ತೊಂದು ಕಛೇರಿಗೆ ತಿರುಗಿಸತಕ್ಕ ಯೋಜನೆಯನ್ನು ಏನು ಜಾರಿಗೆ ತಂದಿದ್ದೀರಿ ಅದನ್ನು ದಯವಿಟ್ಟು ತಕ್ಷಣ ಕೈಬಿಟ್ಟು, ಅದನ್ನು ಸರಳಗೊಳಿಸಿ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಈ ವರ್ಷದ ಜೂನ್ ತಿಂಗಳೊಳಗೆ ಅಸಲನ್ನು ಕಟ್ಟುವವರಿಗೆ ವಜಾ ಮಾಡಿದ್ದೇವೆಂದು ಘೋಷಣೆ ಮಾಡಬೇಕು. ಇಲ್ಲದಿದ್ದರೆ ಯಾರು ಪೊಳ್ಳು ಘೋಷಣೆ ಕೂಗುತ್ತಾ ಹೊರಟಿದ್ದಾರೆ ಅವರ ಕೈಗೆ ಸುಲಭವಾಗಿ ಸಿಕ್ಕಿಬೀಳುತ್ತೀರಿ. ಸಾಲ ವಾಪಸ್ಸು ಕೊಡಬೇಕಾಗಿಲ್ಲ, ಸಾಲ ವಜಾ ಆಗುತ್ತದೆಂದರೆ ಖುಷಿ ಆಗುತ್ತದೆ. ಆ ಖುಷಿ ಮಾಡುವುದಕ್ಕೆ ಹೋಗಿ ಏನು ಅಭಿವೃದ್ಧಿ ಕೆಲಸಗಳು ಆಗ ಬೇಕಾಗಿವೆ ಅವನ್ನು ಹಾಳು ಮಾಡಬೇಡಿ. ಸಾಲ ವಜಾ ಮಾಡಿಸುತ್ತೇವೆಂದು ರಾಜಕೀಯ ನಡೆಯುತ್ತಿದೆ. ಏಕೆಂದರೆ ಸಾಲ ವಜಾ ಮಾಡಿಸುತ್ತೇವೆಂದು ಹೇಳಿದರೆ ಜನರು ಸುಲಭವಾಗಿ ನಂಬುತ್ತಾರೆ. ನೀವು ಕೂಡ ಆ ಮಾತನ್ನು ಹೇಳಿದ್ದೀರಿ. ಆಡಳಿತ ಪಕ್ಷದವರು ಅದರಿಂದ ಹೊರಗಿದ್ದೀರೆಂದು ಹೇಳಲಿಲ್ಲ. ಸಾಲ ವಜಾ ಮಾಡಬೇಕೆಂದು ಕೇಂದ್ರ ಸರ್ಕಾರದ ಮುಂದೆ ಹೋಗಿ ಕೇಳುತ್ತೇವೆಂದು ತಮ್ಮ ಮ್ಯಾನಿಫೆಸ್ಟೋದಲ್ಲಿ ಕೂಡ ಹೇಳಿದ್ದೀರಿ. ನಿಮ್ಮದೇ ಸರ್ಕಾರ ಇವತ್ತಿನ

ದಿವಸ ಕೇಂದ್ರದಲ್ಲಿ ಬಂದಿದೆ. ಅದನ್ನು ಜಾರಿಗೆ ಕೊಡಿ ಎಂದು ಕೇಳುವುದರಲ್ಲಿ ಈ ರಾಜ್ಯದ ಜನರಿಗೆ ಹಕ್ಕಿದೆ. ಅದನ್ನು ನೀವು ಮಾಡುವುದಕ್ಕೆ ಆಗದಿದ್ದರೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನಾದರೂ ವಜಾ ಮಾಡಬೇಕು. ಅದರಿಂದ ರೈತರಿಗೆ ಸಾಲ ಕಟ್ಟುವ ಒಳ್ಳೆಯ ಅಭ್ಯಾಸ ಬೆಳೆಯುತ್ತದೆ. ಸಾಲ ವಾಪಸ್ಸು ಕೊಟ್ಟರೆ ಅದರಿಂದ ಲಾಭ ಇದೆ ಎಂಬ ಒಳ್ಳೆಯ ಹವ್ಯಾಸವನ್ನು ರೈತರಲ್ಲಿ ಬೆಳಸಿದಂತಾಗುತ್ತದೆ.

೩.೦೫ ಪಿ.ಎಂ

ಅದು ಬಿಟ್ಟು ನೀವು ರೈತನ ಸತ್ವವನ್ನು ಪರೀಕ್ಷೆ ಮಾಡುವ ಕೆಲಸಕ್ಕೆ ದಯವಿಟ್ಟು ಪ್ರಯತ್ನಪಡಬೇಡಿ. ಅದರ ಬದಲಾಗಿ ಈ ಬಡ್ಡಿ ಮತ್ತು ಸುಸ್ತಿ ಬಡ್ಡಿ ವಜಾ ಮಾಡುವುದರಿಂದ ರೈತನು ಮಾಡಿರತಕ್ಕ ಸಾಲವನ್ನು ಅವನು ವಾಪಸ್ ಕೊಡತಕ್ಕ ಅಭ್ಯಾಸವನ್ನು ಬೆಳೆಸುವುದಕ್ಕೆ ಸಹಕಾರಿಯಾಗುತ್ತದೆ ಇನ್ನೂ ಬಜೆಟ್ ಇಟ್ಟಿಲ್ಲ, ತಾವು ಬಜೆಟ್‌ನಲ್ಲಿ ಇದಕ್ಕೆ ಎಷ್ಟು ಹಣ ನಿಗದಿಯಾಗಬೇಕಾಗಿದೆ ಅಷ್ಟು ಹಣವನ್ನು ನಿಗದಿಪಡಿಸಿ ಈ ಕಾರ್ಯಕ್ರಮವನ್ನು ನೀವು ಜಾರಿಗೆ ತಂದು ದಯವಿಟ್ಟು ಅವರ ಹಣ ವಾಪಸ್ ಕೊಡತಕ್ಕ ಅಭ್ಯಾಸವನ್ನು ರೈತರಲ್ಲಿ ಬೆಳೆಸಬೇಕೆಂದು ಈ ಸಂದರ್ಭ ನಲ್ಲಿ ವಿನಂತಿಸುತ್ತೇನೆ. ಅದರ ಜೊತೆಯಲ್ಲಿ ಇವತ್ತಿನ ದಿವಸ ಅನೇಕ ಕಾರ್ಖಾನೆಗಳನ್ನು ಇವತ್ತು ಖಾಸಗೀಕರಣ ಮಾಡುತ್ತೇವೆ ಎಂಬ ಮಾತು ನಡೆದಿದೆ. ಅದರಲ್ಲೂ ನಮ್ಮ ರಾಜ್ಯದಲ್ಲಿರತಕ್ಕ ಕೆಲವು ಪ್ರಮುಖವಾದ ಕಾರ್ಖಾನೆಗಳು, ಉದಾಹರಣೆಗೆ ಮೈಸೂರು ಸೋಪ್ಸ್ ಮತ್ತು ಡಿಟರ್ಜೆಂಟ್ಸ್. ಇವತ್ತಿನ ದಿವಸ ನಾವು ನೆನೆಯಬೇಕಾಗಿದೆ. ಕಾರಣ ಏನೆಂದರೆ ಕರ್ನಾಟಕ ರಾಜ್ಯದಲ್ಲಿರತಕ್ಕ, ಅನೇಕ ಸಾರ್ವಜನಿಕ ವಲಯದಲ್ಲಿರತಕ್ಕ ಈ ಉದ್ದಿಮೆಗಳನ್ನು ನಮ್ಮ ಜಿಲ್ಲೆಯಲ್ಲೇ ಹುಟ್ಟಿ ಬೆಳೆದಿರತಕ್ಕ ಭಾರತರತ್ನ ವಿಶ್ವೇಶ್ವರಯ್ಯನವರು ಸ್ಥಾಪನೆ ಮಾಡಿರತಕ್ಕದ್ದು. ಯಾವುದೇ ಪಬ್ಲಿಕ್ ಸೆಕ್ಟಾರ್ ತೆಗೆದುಕೊಳ್ಳಿ ಯಾರ ಕಾಲದಲ್ಲಿ ಆಯಿತು ಎಂದರೆ ವಿಶ್ವೇಶ್ವರಯ್ಯನವರ ಕಾಲದಲ್ಲಿ ಆಯಿತು ಎಂಬ ಮಾತು ಜನಜನಿತವಾಗಿದೆ. ಅದನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ, ಅಂಥದ್ದು ಮೈಸೂರು ಸೋಪ್ಸ್ ಮತ್ತು ಡಿಟರ್ಜೆಂಟ್ಸ್. ಇವತ್ತು ಅದು ಏನಾಗಿದೆ? ಸುಮಾರು 80 ಕೋಟಿ ರೂಪಾಯಿ ನಷ್ಟದಲ್ಲಿದೆ. ಯಾರು ಸ್ವಾಮಿ ಅದರ ಆಡಳಿತ ನಡೆಸಿರತಕ್ಕವರು? ಸಾಮಾನ್ಯ ಜನರು ನಡೆಸಿದ್ದಾರಾ? ನಿಮ್ಮ ಐ. ಎ. ಎಸ್. ಅಧಿಕಾರಿಗಳು ನಡೆಸಿರತಕ್ಕದ್ದು. 80 ಕೋಟಿ ರೂಪಾಯಿಗಳ ನಷ್ಟ ಉಂಟು ಮಾಡಿರತಕ್ಕ ನಿಮ್ಮ ಐ. ಎ. ಎಸ್. ದೊರೆಗಳನ್ನು ಮಾತನಾಡಿಸತಕ್ಕ ಧೈರ್ಯ ನಿಮಗಿಲ್ಲ, ಕಾರಣ ಏನೆಂದರೆ ಅವರು ನೀವು ಶಾಮೀಲಾಗಿದ್ದೀರಿ. 30 ಜನ ಅಧಿಕಾರಿಗಳು. ಸಣ್ಣ ಪುಟ್ಟ ಅಧಿಕಾರಿಗಳಲ್ಲ, ಯಾರೋ ವಿಲೇಜ್ ಅಕೌಂಟೆಂಟ್ ಅಥವಾ ಸೆಕೆಂಡ್ ಡಿವಿಷನ್ ಗುಮಾಸ್ತರಲ್ಲ, ದೊಡ್ಡ ದೊಡ್ಡ ಅಧಿಕಾರಿಗಳು. ಅಲೆಗ್ಸಾಂಡರ್ ದಿ ಗ್ರೇಟ್. ಆ ಮಟ್ಟದಲ್ಲಿ ಬಹಳ ಎತ್ತರದಲ್ಲಿ ಬೆಳೆದಿರತಕ್ಕ ಅಧಿಕಾರಿಗಳು. ಮೈಸೂರು ಸೋಪ್ಸ ಮತ್ತು ಡಿಟರ್ಜೆಂಟ್ಸ್‌ನಲ್ಲಿ ನಷ್ಟ ಆಗುವುದಕ್ಕೆ ಯಾರು ಕಾರಣಕರ್ತರಾಗಿದ್ದಾರೋ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದೇ ರೀತಿ ಮೈಸೂರು ಪೇಪರ್ ಮಿಲ್ಸ್. ಈ ಸದನದಲ್ಲಿ ಅದರ ಬಗ್ಗೆ ಸುಮಾರು ಪ್ರಶ್ನೆಗಳನ್ನು ಕೇಳಿದೆ. ಅಲ್ಲಿರತಕ್ಕ ಅಧಿಕಾರಿಗಳ ಬಗ್ಗೆ ಒಂದು ಮಾತು ಉಪಯೋಗಿಸಿದೆ ಆಗ. ಐ. ಎ. ಎಸ್. ಅಧಿಕಾರಿಗಳಲ್ಲಿ ಬಹಳ ಸತ್ಯವಂತರೂ ಇದ್ದಾರೆ. ನಾನು ಅವರ ಕ್ಷಮೆ ಬೇಡುತ್ತೇನೆ. ಸಾರಾಸಗಟಾಗಿ ಎಲ್ಲರ ಬಗ್ಗೆ ಹೇಳುತ್ತಿಲ್ಲ, ಯಾರು ಸತ್ಯವಂತರಾಗಿದ್ದಾರೆ, ಯಾರು ರಾಜ್ಯದ ಬಗ್ಗೆ ಜನತೆ ಬಗ್ಗೆ ಕಳಕಳಿ ತೋರಿಸುತ್ತಾರೆ ಅವರಿಗೆ ಉನ್ನತ ಸ್ಥಾನ ಇಲ್ಲ, ಅವರನ್ನು ತೆಗೆದುಕೊಂಡು ಹೋಗಿ ಮೂಲೆಯಲ್ಲಿ ಬಿಸಾಕಿದ್ದಾರೆ. ಇವರಿಗೆ ಶಾಮೀಲಾಗಿರತಕ್ಕ ಅಧಿಕಾರಿಗಳನ್ನು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಅತೀ ಆಯಕಟ್ಟಿನ ಹುದ್ದೆಗಳಲ್ಲಿ ತಂದು ಹಾಕಿರತಕ್ಕದ್ದು ಇದೆ. ಇದೇ ಪರಿಸ್ಥಿತಿ ಮೈಸೂರು ಸೋಪ್ಸ್ ಮತ್ತ ಡಿಟರ್ಜೆಂಟ್ಸ್‌ನಲ್ಲಿ ಬಂದಿದೆ. 80 ಕೋಟಿ ರೂಪಾಯಿ ನಷ್ಟು ಹಣ ಇವತ್ತು ಅಲ್ಲಿ ಮಾಯವಾಗಿದೆ. ಇದು ಮಾರಾಟ ಮಾಡತಕ್ಕ ಪ್ರಯತ್ನ ಕೂಡ ನಡೆದಿದೆ. ಅದೇ ರೀತಿ ಇನ್ನೂ ಕೆಲವು ಉದ್ದಿಮೆಗಳಲ್ಲಿ ನಡೆದಿದೆ. ಈ ಕಾರ್ಖಾನೆಗಳನ್ನು ನಷ್ಟ ಮಾಡಬೇಕೆಂಬ ಉದ್ದೇಶದಿಂದಲೇ ಅಲ್ಲಿಗೆ ಕೆಲವು ಅಂಥ ಅಧಿಕಾರಿಗಳನ್ನು ಹಾಕಿರತಕ್ಕದ್ದು. ಕಾರಣ ಏನೆಂದರೆ ಅದರಲ್ಲೂ ಪ್ರಮುಖವಾಗಿ ಬೆಂಗಳೂರಿನಲ್ಲಿ ಇರತಕ್ಕ ಕೆಲವು ಕಾರ್ಖಾನೆಗಳಿವೆ. ಆ ಕಾರ್ಖಾನೆಗಳದು ಬೆಂಗಳೂರಿನಲ್ಲಿ ಭೂಮಿ ಇದೆ. ಅರ್ಬನ್ ಲ್ಯಾಂಡ್ ಅದು. ಒಂದೊಂದು ಎಕರೆಗೆ ಒಂದೊಂದು ಕೋಟಿ ರೂಪಾಯಿವರೆಗೆ ಮಾರಾಟವಾಗತಕ್ಕ ಭೂಮಿ ಇದೆ. ಆ ಭೂಮಿಯ ಮೇಲೆ ಕಣ್ಣು ಬಿದ್ದಿರತಕ್ಕದ್ದು.

ಒಂದು ಕಡೆ ವಿಶ್ವ ಯೋಜನೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ನಾವು ಬೆಳೆಸುತ್ತೇವೆ ಎಂದು ಹೇಳತಕ್ಕ ಸರ್ಕಾರ ತನ್ನ ಬಂಡವಾಳವನ್ನು ಹೂಡಿದ್ದರೂ ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಿರುವ ಕೈಗಾರಿಕೆಗಳನ್ನು ಮುಚ್ಚಲಿಕ್ಕೆ ಹೋಗುತ್ತಿದೆ. ಈ ಕಾರ್ಖಾನೆಗಳಿಗೆ ಒಂದು ಹಿನ್ನೆಲೆ ಇದೆ, ಚರಿತ್ರೆ ಇದೆ. ಈ ಚರಿತ್ರೆ ಇರತಕ್ಕ ಕಾರ್ಖಾನೆಗಳನ್ನು

ವ್ಯವಸ್ಥಿತವಾಗಿ ಮುಚ್ಚತಕ್ಕಂಥ ಕೆಲಸ ಈ ಸರ್ಕಾರದಿಂದ ನಡೆಯುತ್ತಿದೆ. ಅವುಗಳನ್ನು ದಿವಾಳಿಯಾಗಿ ಮಾಡತಕ್ಕದ್ದು, ಆ ಕಾರ್ಖಾನೆಯವರೊಡನೆ ಶಾಮೀಲಾಗಿರತಕ್ಕದ್ದನ್ನು ನೋಡುತ್ತಿದ್ದೇವೆ. ಅದು ಕಿಯೋನಿಕ್ಸ್ ಇರಬಹುದು ಅಥವಾ ಮೈಸೂರು ಇಲೆಕ್ಟ್ರಿಕಲ್ ಇಂಡಸ್ಟ್ರೀಸ್ ಇರಬಹುದು ಅಥವಾ ಮೈಸೂರು ಪೇಪರ್ ಮಿಲ್ಸ್ ಅಥವಾ ಮೈಸೂರು ಸೋಪ್ ಅಂಡ್ ಡಿಟರ್ಜೆಂಟ್ ಇರಬಹುದು. ಇದರ ದೊಡ್ಡ ಪಟ್ಟಿಯೇ ಇದೆ. ಆ ಪಟ್ಟಿಯನ್ನು ನಾನು ಈ ಇಲಾಖೆಗಳ ಬೇಡಿಕೆ ಬಂದ ಸಂದರ್ಭದಲ್ಲಿ ವಿವರವಾಗಿ ಹೇಳುವುದಕ್ಕೆ ಹೋಗುತ್ತೇನೆ. ಈ ಉದ್ದೇಶ ಏನೆಂದರೆ ಅಲ್ಲಿರತಕ್ಕ ಭೂಮಿಯ ಮೇಲೆ ಇನ್ನೂ ಅನೇಕ ದಾಖಲೆಗಳು ನನ್ನ ಹತ್ತಿರ ಇವೆ. ಈ ಸಂದರ್ಭದಲ್ಲಿ ನಾನು ಆ ವಿವರಗಳಿಗೆ ಹೋಗುವುದಿಲ್ಲ. ಒಂದು ಕಡೆ ವಿಶ್ವ ಯೋಜನೆ ಮೂಲಕ ನಾವು ಉದ್ಯೋಗವನ್ನು ಕೊಡುತ್ತೇವೆ ಎಂದು ಹೇಳತಕ್ಕಂಥ ಸರ್ಕಾರ ಈ ಕಾರ್ಖಾನೆಗಳನ್ನು ದಿವಾಳಿ ಮಾಡಿ ಮುಚ್ಚತಕ್ಕಂಥ ಪ್ರಯತ್ನ ನಡೆಯುತ್ತಾ ಇದೆ. ಆದ್ದರಿಂದ ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕು ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ಮಾತು ವಿದ್ಯುಚ್ಛಕ್ತಿ ಬಗ್ಗೆ. ತಾವು ನಮ್ಮ ಜಿಲ್ಲೆಗೆ ಯಾವಾಗಲಾದರೂ ಒಂದು ಸಲ ಪ್ರವಾಸ ಬರಬೇಕು. ಆಗ ತಮಗೆ ಅರ್ಥ ಆಗುತ್ತದೆ. ಕೆಲವು ಸದಸ್ಯರುಗಳಿಗೆ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡತಕ್ಕ ಅವಕಾಶ ಒದಗಿತ್ತು. ನಾನು ಯಾವಾಗಲೂ ವಿದ್ಯುಚ್ಛಕ್ತಿ ಬಗ್ಗೆ ಮಾತನಾಡುತ್ತಾ ಇರುತ್ತೇನೆ ಎನ್ನುವ ಒಂದು ಪ್ರತೀತಿ ಇದೆ. ನಾನೇನಾದರೂ ವಿದ್ಯುಚ್ಛಕ್ತಿ ಬಗ್ಗೆ ಮಾತನಾಡಿದರೆ, ನೀವು ಎಷ್ಟು ಸಲ ಅದರ ಬಗ್ಗೆ ಮಾತನಾಡುತ್ತೀರಿ ಎಂದು ಎಲ್ಲರೂ ಹೇಳುತ್ತಾರೆ. ಮಾನ್ಯ ರಾಜೂಗೌಡರು ಈ ಸದನದಲ್ಲಿ ಇದ್ದಾರೆ. ಅವರಿಗೆ ನಮ್ಮ ಜಿಲ್ಲೆಯ ಪರಿಸ್ಥಿತಿ ಗೊತ್ತಿದೆ. ಇಡೀ ರಾಜ್ಯದಲ್ಲಿ 6 ಗಂಟೆಗಳ ಲೋಡ್ ಶೆಡ್ಡಿಂಗ್ ಇದೆ. ಆದರೆ ನಮ್ಮ ಜಿಲ್ಲೆಯಲ್ಲಿ 12 ಗಂಟೆಗಳು ಲೋಡ್ ಷೆಡ್ಡಿಂಗ್ ಇದೆ. 6 ಗಂಟೆ ಲೋಡ್ ಷೆಡ್ಡಿಂಗ್ ಮತ್ತು 3 ಗಂಟೆ ಸ್ಟಾಗರಿಂಗ್ ಅಂದರೆ ಸಿಂಗಲ್ ಫೇಸ್ ಮಾಡುತ್ತಾರೆ. ಇದು 3 ಗಂಟೆ ಹೊತ್ತು ಕೂಡ ಮೇಣದ ಬತ್ತಿ, ಊದುಬತ್ತಿ ಉರಿದಹಾಗೆ ಉರಿಯುತ್ತದೆ. ದೀಪ ನಮಗೆ ಬೇಕಾಗಿಲ್ಲ. ನಮಗೆ ಬೇಕಾಗಿರತಕ್ಕಂಥಾದ್ದು ನಮ್ಮ ಪಂಪುಸೆಟ್ಟುಗಳು ನಡೆಯಬೇಕು. ಅದು ವ್ಯವಸಾಯಕ್ಕೆ ಮುಖ್ಯ. ಈ ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ನಮ್ಮ ರಾಜ್ಯಕ್ಕೆ ಅನ್ಯಾಯ ಆಯಿತು. ಆಗ ನಾವು ಕೋಲಾರ ಜಿಲ್ಲೆಯ ಜನ ನಮಗೆ ಸಂಬಂಧವಿಲ್ಲದಿದ್ದರೂ ಸಹ ಪ್ರತಿಭಟನೆ ಮಾಡಿದ್ದೇವೆ. ತುಮಕೂರು ಜಿಲ್ಲೆಯವರಾಗಲೀ, ಬೆಂಗಳೂರು ಗ್ರಾಮಾಂತರ ಜಿಲ್ಲೆಯವರಾಗಲೀ ಅಥವಾ ಚಿತ್ರದುರ್ಗ ಜಿಲ್ಲೆಯವರಾಗಲೀ ಅದಕ್ಕೆ ಸಂಬಂಧವಿಲ್ಲದಿದ್ದರೂ ಕೂಡ ಪ್ರತಿಭಟನೆ ಸೂಚಿಸಿದ್ದಾರೆಯೇ? ನಮ್ಮ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯಕ್ಕೆ ನಾವೂ ಸಹ ಪ್ರತಿಭಟನೆ ಸೂಚಿಸಿದ್ದೇವೆ. ಆದರೆ ನಮಗೆ ನಮ್ಮ ಅವಶ್ಯಕತೆಗೆ ಬೇಕಾಗಿರತಕ್ಕಾಂಥದ್ದು ವಿದ್ಯುತ್. ಅದರ ಬಗ್ಗೆ ವಿಶೇಷವಾಗಿ ಚರ್ಚೆ ಆಗಬೇಕು ಎಂದು ಕೇಳುತ್ತೇನೆ. ಇವತ್ತಿನ ದಿವಸ ರಾಜ್ಯದಲ್ಲಿ ಒಟ್ಟಾರೆ ಎಷ್ಟು ವಿದ್ಯುತ್ ಉತ್ಪಾದನೆ ಆಗಬೇಕಾಗಿತ್ತೋ ಅಷ್ಟು ಆಗುತ್ತಾ ಇಲ್ಲ. ಅದಕ್ಕೆ ಖಾಸಗಿಯಾಗಿ ಬಂಡವಾಳ ತೊಡಗಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಇದನ್ನು ಕಳೆದ ಎರಡು ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ. ಆದರೆ ಇಲ್ಲಿಯವರೆಗೆ ಅದು ಕಾರ್ಯಗತ ಆಗಿಲ್ಲ. ಅದನ್ನು ಖಾಸಗಿ ರಂಗದಲ್ಲಿ ಮಾಡುತ್ತಾರೋ, ಸರ್ಕಾರದವರು ಮಾಡುತ್ತಾರೋ ಅದು ನನಗೆ ಬಿಟ್ಟುದ್ದುದು ಅಲ್ಲ. ಈ ವ್ಯವಸಾಯ ರಂಗಕ್ಕೆ ಬೇಕಾಗಿರತಕ್ಕದ್ದು ವಿದ್ಯುಚ್ಛಕ್ತಿ. ಜನರೇಷನ್ ಇಲ್ಲದೇ ಇರತಕ್ಕ ಕಾರಣದಿಂದ ಅಷ್ಟು ಪ್ರಮಾಣದಲ್ಲಿ ಸರಬರಾಜು ಆಗುತ್ತಾ ಇಲ್ಲ. ತಾವು ಪತ್ರಿಕೆಗಳಲ್ಲಿ ನೋಡಿರಬಹುದು. ವ್ಯವಸಾಯ ರಂಗದಲ್ಲಿ ಇಡೀ ಭಾರತದಲ್ಲಿ ಉತ್ಪಾದನೆ ಕಡಿಮೆ ಆಗುತ್ತಾ ಇದೆ. ನಮ್ಮ ರಾಜ್ಯದಲ್ಲೂ ಕಡಿಮೆ ಆಗುತ್ತಾ ಇದೆ ಎನ್ನತಕ್ಕ ಮಾತನ್ನು ಹೇಳಬೇಕಾಗಿದೆ. ಇಲ್ಲಿಯವರೆಗೆ ನೀವು ವಿಶ್ವಬ್ಯಾಂಕಿನಿಂದ ಹಣವನ್ನು ತೆಗೆದುಕೊಳ್ಳಲು ಹೋಗುತ್ತಿದ್ದೀರಿ. ಈ ವ್ಯವಸಾಯ ರಂಗದಲ್ಲಿ ಉತ್ಪತ್ತಿ ಕಡಿಮೆ ಆದರೆ ಗೋಣಿ ಚೀಲ ಹಿಡಿದುಕೊಂಡು ಪ್ರಪಂಚದಲ್ಲೆಲ್ಲಾ ಓಡಾಡಬೇಕಾಗುತ್ತದೆ. ಗೋಧಿ ಕೊಡಿ, ಧಾನ್ಯ ಕೊಡಿ ಎಂದು ಗೋಣಿ ಚೀಲ ಇಟ್ಟುಕೊಂಡು ಜೋಳಿಗೆ ಇಟ್ಟುಕೊಂಡು ಇಡೀ ವಿಶ್ವವಾದ್ಯಂತ ಹೋಗಬೇಕಾಗುತ್ತದೆ. ಆದ್ದರಿಂದ ಈ ವ್ಯವಸಾಯ ರಂಗಕ್ಕೆ ಏನು ವಿದ್ಯುತ್ ಬೇಕಾಗುತ್ತದೆ ಆ ವಿದ್ಯುತ್‌ನ್ನು ಸರಬರಾಜು ಮಾಡುವುದಕ್ಕೆ ಆದ್ಯತೆ ಕೊಡಬೇಕು. ಈ ವಿದ್ಯುತ್ ವಿತರಣೆಯಲ್ಲಿ ಏನು ನಡೆಯುತ್ತಿದೆ ಎಂದರೆ ವ್ಯವಸಾಯ ರಂಗದಲ್ಲಿ ಏನೇನು ಲೈನ್‌ಗಳಿವೆ ಅವುಗಳನ್ನು ಆಫ್ ಮಾಡುತ್ತಾರೆ. ಆದರೆ ಕೈಗಾರಿಕಾರಂಗದಲ್ಲಿ ಇರತಕ್ಕಂಥ ಲೈನ್‌ಗಳಲ್ಲಿ 24 ಗಂಟೆ ಕರೆಂಟ್ ಆಫ್ ಮಾಡುವುದಿಲ್ಲ. ಅದಕ್ಕೆ ಕೇಳಿದರೆ ಏನು ಹೇಳುತ್ತಾರೆ ಎಂದರೆ ಅವರಿಗೆ ಲೋಡ್ ಷೆಡ್ಡಿಂಗ್ ಇದೆ. ಅವರು ಹೆಚ್ಚು ಉಪಯೋಗಿಸಿ ಹೆಚ್ಚು ಹಣ ಕೊಡುತ್ತಾರೆ ಎಂದು ಹೇಳುತ್ತಾರೆ. ಅವರಿಗೆ ಇಷ್ಟು ಎಂದು ನಿಗದಿ ಮಾಡಿರುತ್ತೇವೆ. ಹಾಗೂ ಅವರಿಗೆ ಪವರ್‌ಕಟ್ ಇದೆ ಎನ್ನತಕ್ಕ ಮಾತನ್ನು ಹೇಳುತ್ತಾರೆ. ಆದರೆ ಇದರಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿವೆ. ಆ ವಿವರಗಳಿಗೆ ನಾನು ಹೋಗುವುದಿಲ್ಲ.

ಉಪಾಧ್ಯಕ್ಷರು:- ಅರ್ಧ ಗಂಟೆ ಆಯಿತು. ತಾವು ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದೆ. ಈ ಹಗರಣಗಳ ಸರಮಾಲೆ ಹೊತ್ತಿರತಕ್ಕ ಸರ್ಕಾರ ಇದು ಎಂದು. ಎಕ್ಸೈಸ್ ಬಗ್ಗೆ ನಾನು ಪ್ರಸ್ತಾಪ ಮಾಡಿ ಮಾಡಿ ಸುಸ್ತಾಗಿದ್ದೇನೆ. ಕಾರಣ ಏನೆಂದರೆ ನಾನು ಇಲ್ಲಿ ಎಷ್ಟು ತೀವ್ರವಾಗಿ ಪ್ರಸ್ತಾಪ ಮಾಡುತ್ತೇನೋ ಅಷ್ಟೇ ತೀವ್ರವಾಗಿ ಅದೆಲ್ಲಾ ಕೂಡ ಶರಾವತಿ ಯೋಜನೆಯ ಫ್ಲಡ್ ಗೇಟ್‌ನಲ್ಲಿ ನೀರು ಹೋಗುವ ಹಾಗೆ ರಭಸದಿಂದ ಹೋಗುತ್ತಿದೆ. ಎಕ್ಸೈಸ್‌ನ ಎಲ್ಲಾ ಫ್ಲಡ್‌ಗೇಟ್‌ಗಳು ಓಪನ್ ಆಗಿವೆ. ಇನ್ನು ಓಪನ್ ಆಗುವುದು ಯಾವುದೂ ಬಾಕಿ ಉಳಿದಿಲ್ಲ. ಒಂದು ಕಾಲದಲ್ಲಿ ಒಂದು ದಿವಸಕ್ಕೆ 1 ಕೋಟಿ ರೂಪಾಯಿ ಹೋಗುತ್ತಾ ಇದೆ ಎಂದು ಹೇಳಿದ್ದೆ. ಅದು ಅಂಕಿಅಂಶಗಳ ಪ್ರಕಾರ ನಿಜ ಎಂದು ಸಾಬೀತು ಆಯಿತು. ಇವತ್ತು ಒಂದು ಕೋಟಿ ಅಲ್ಲ ಕನಿಷ್ಟ 2-3 ಕೋಟಿ ರೂಪಾಯಿಗಳು ಪ್ರತಿ ದಿವಸ ಹೋಗುತ್ತಾ ಇದೆ. ನಾನು ಈ ಬಗ್ಗೆ ಬೇಡಿಕೆಗಳು ಬಂದಾಗ ಹೆಚ್ಚು ಪ್ರಸ್ತಾಪ ಮಾಡುತ್ತೇನೆ. ಆದರೆ ಇದು ಒಂದು ದೊಡ್ಡ ಹಗರಣಗಳಲ್ಲಿ ಹಗರಣ. ಅದರ ಜೊತೆಗೆ ಇನ್ನೂ ಅನೇಕ ಹಗರಣಗಳು ನಡೆಯುತ್ತಿವೆ. ಈ ವಿಧಾನಸೌಧದಲ್ಲಿ ನಾನು ಮಾತನಾಡುತ್ತಿರುವುದು ಕೇಳಿಸುವಷ್ಟು ದೂರದಲ್ಲಿ ಪರಾಗ್ ಹೋಟೆಲ್ ಎದುರು ಒಂದು ದೊಡ್ಡ ಭವ್ಯವಾದ ಕಟ್ಟಡ ಬರುತ್ತಾ ಇದೆ. ಇದರ ಬಗ್ಗೆ ಹಿಂದೆ ನಾವು ಪ್ರಸ್ತಾಪ ಮಾಡಿದೆವು. ಕಾನೂನು ಹೇಗೆ ಜಾರಿಯಾಗುತ್ತದೆಂದರೆ ಹಿಂದೆ ಈ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಪರಾಗ್ ಹೋಟೆಲ್ ಬಗ್ಗೆ ಹೇಳುವವರಿಲ್ಲ, ಕೇಳುವವರು ಇಲ್ಲ. ಅವರು ಅಲ್ಲಿ ತಮ್ಮ ಮನಸ್ಸಿಗ ಬಂದ ಹಾಗೆ ಕಟ್ಟಡ ಕಟ್ಟಬಹುದು. ಅಷ್ಟೇ ಅಲ್ಲ, ಆ ಜಾಗವನ್ನು ಸರ್ಕಾರ ತನ್ನ ಕಛೇರಿಗಳನ್ನು ಕಟ್ಟುವುದಕ್ಕೆ ಉಪಯೋಗಿಸಿಕೊಳ್ಳಬೇಕೆಂದು ಇತ್ತು. ಅದನ್ನು ಕೂಡ ವಾಪಸ್ ಪಡೆದರು. ಮನಸ್ಸು ಬಂದ ರೀತಿಯಲ್ಲಿ ಇವತ್ತು ಅಲ್ಲಿ ಕಟ್ಟಡ ಏಳುತ್ತಿದೆ. ಆ ಕಡೆ ರಾಜಭವನ, ಈ ಕಡೆ ವಿಧಾನಸೌಧ. ರಾಜಭವನದಲ್ಲಿ ಬೆಲ್ ಹೊಡೆದರೆ ಅದು ಅಲ್ಲಿ ಕೇಳಿಸುತ್ತದೆ. ನಾನು ಇಲ್ಲಿ ಮಾತನಾಡುವುದು ಅಲ್ಲಿ ಕೇಳಿಸುತ್ತದೆ. ಇಷ್ಟು ಹತ್ತಿರ ಇರುವ ಜಾಗದಲ್ಲಿ ರಾಜಾರೋಷವಾಗಿ ಸರ್ಕಾರ ಇದೆಯೇ ಇಲ್ಲವೇ ಎನ್ನುವ ಪರಿವೆ ಇಲ್ಲದೇ ಕಟ್ಟಡ ಬರುತ್ತಾ ಇದೆ. ಇದನ್ನು ಹೇಳುವವರು ಕೇಳುವವರು ಇಲ್ಲ. ಇಷ್ಟು ಪ್ರಸ್ತಾಪ ಇದರ ಬಗ್ಗೆ ಆಗಿದ್ದರೂ ಸರ್ಕಾರಕ್ಕೆ ಗಮನ ಇಲ್ಲ. ಇನ್ನೊಂದು ವಿಷಯಕ್ಕೆ ಬರುತ್ತೇನೆ. ಬೆಂಗಳೂರು ನಗರದ ಟೌನ್‌ಹಾಲ್ ಎದುರುಗಡೆ ರಾಜಾ ಸೈಕಲ್ ಮಾರ್ಟ್ ಎಂದು ಇದೆ. ಅಲ್ಲಿ ಫ್ಲೈಓವರ್ ಬರಬೇಕೆಂದು ಮೊದಲೇ ತೀರ್ಮಾನ ಆಗಿತ್ತು. ಬೆಂಗಳೂರು ನಗರವನ್ನು ಇವರೇನೊ ಬ್ಯೂಟಿಫೈ ಮಾಡುತ್ತಾರಂತೆ. ಇವರು ಏನು ಮಾಡದೇ ಇದ್ದರೂ ಪರ್ವಾಗಿಲ್ಲ, ಬೆಂಗಳೂರು ನಗರವನ್ನು ಹಾಳುಮಾಡುವುದು ಬೇಡ. ಬೆಂಗಳೂರು ಬೆಂಗಳೂರಾಗೇ ಇರುವುದಕ್ಕೆ ಬಿಡಿ. ನಿಮ್ಮನ್ನು ಕೈಚಾಚಿ ಬೇಡುತ್ತೇನೆ, ಏನೂ ಕೂಡ ಬದಲಾವಣೆ ಮಾಡುವುದ ಬೇಡ. ನಿಮ್ಮ ವಕ್ರದ ಕಣ್ಣು ಇದೆಯಲ್ಲ...

ಶ್ರೀ ಹೆಚ್. ಏಕಾಂತಯ್ಯ:- ಕೇವಲ ಆ ಹಣದಿಂದ ಬೆಂಗಳೂರು ನಗರವಾಸಿಗಳಿಗೆ ಸೌಕರ್ಯ ಒದಗಿಸುವುದು ಅಷ್ಟೇ ಅಲ್ಲ, ಆ ಹಣವನ್ನು ಖರ್ಚು ಮಾಡುವುದರಿಂದಲೂ ಕೆಲವರಿಗೆ ಸೌಲಭ್ಯಗಳಾಗುತ್ತವೆ.

ಶ್ರೀ ಸಿ. ಬೈರೇಗೌಡ:- ತಾವು ನನಗೆ ಸಪೋರ್ಟ್‌ಮಾಡಿದ್ದಕ್ಕೆ ಧನ್ಯವಾದಗಳು. ನಿಮ್ಮ ಈ ಅವಾಂತರಗಳಿಂದ ಬೆಂಗಳೂರನ್ನು ನಿರ್ನಾಮ ಮಾಡತಕ್ಕ ಕೆಲಸ ಮಾಡುತ್ತಿದ್ದೀರಿ. ಚರಂಡಿಗಳ ಮೇಲೆ ಇವತ್ತು ಕಟ್ಟಡಗಳು ಬರುತ್ತಿವೆ. ಚರಂಡಿಗಳ ಮೇಲೆ ಬಿಲ್ಡಿಂಗ್ಸ್ ಬಂದಾಗ ಮತ್ತೆ ನೀರು ಎಲ್ಲಿ ಹೋಗುತ್ತದೆ? ಮಳೆ ಬಂದಾಗ ನೆರೆ ಬಂದು ಮನೆಗಳು ಕೊಚ್ಚಿಹೋಗುತ್ತವೆ. ಆ ನಂತರ ಮತ್ತೆ ರಿಲೀಫ್ ಕೆಲಸ ಬರುತ್ತದೆ. ಮೊನ್ನೆ ನಡೆದ ಗಲಭೆಗಳಲ್ಲಿ ಯಾರು ಅದರಲ್ಲಿ ನೊಂದ ವಿಕ್ಟಿಮ್ಸ್ ಇದ್ದಾರೆ ಅವರಿಗೆ ರಿಲೀಫ್ ಕೊಡುವುದರಲ್ಲೂ ಕೂಡ ಒಂದು ಕಡೆ ಹೋಗಿ ಚೀಟಿ ತೆಗೆದುಕೊಂಡರೆ ಅಲ್ಲಿ 300-400 ರೂಪಾಯಿ ಎಂದು ಬರೆದುಕೊಳ್ಳುತ್ತಾರೆ. ಆದರೆ ಅವರ ಕೈಗೆ ಸಿಕ್ಕುವುದು ಕೇವಲ 50 ರೂಪಾಯಿಗಳು. ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ, ಕಾರಣ ಇದು ನಾನು ಬರೀ ಕೇಳಿರತಕ್ಕ ವಿಷಯ. ಇದು ಒಂದು ಕಡೆ ಇರಲಿ. ಇವತ್ತು ಬೆಂಗಳೂರಿನ ಕೇಂದ್ರ ಸ್ಥಾನ ಪುಟ್ಟಣ್ಣಶೆಟ್ಟಿ ಟೌನ್‌ಹಾಲ್ ಇರುವ ಕಡೆ ಅಲ್ಲಿ ಏನು ನಡೆಯುತ್ತಿದೆ? ಫ್ಲೈಓವರ್ ಕಟ್ಟಬೇಕೆಂದು ಇರತಕ್ಕ ಜಾಗದಲ್ಲಿ ಇರತಕ್ಕ ಕಟ್ಟಡವನ್ನು ಡೆಮಾಲಿಷ್ ಮಾಡಿ ಕಟ್ಟಬೇಕಾದರೆ, ಹೊಸ ಕಟ್ಟಡ ಮಾಡಬೇಕಾದರೆ ಹೊಸ ನಿಯಮಗಳು ಬರುತ್ತವೆ. ಬಿಲ್ಡಿಂಗ್ ಬೈಲಾಸ್ ಬರುತ್ತವೆ. ಬಿಲ್ಡಿಂಗ್ ಬೈಲಾಸ್ ಬಗ್ಗೆ ನನಗೆ ಹೆಚ್ಚಾಗಿ ಪರಿಶ್ರಮವಿಲ್ಲ, ಮಾನ್ಯ ಅನಂತಕೃಷ್ಣಾರವರಿಗೆ ಇದೆ. ದಯವಿಟ್ಟು ಅವರು ಅದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಅವರಲ್ಲಿ ವಿನಂತಿ ಮಾಡುಕೊಳ್ಳುತ್ತೇನೆ. ಅಲ್ಲಿ ಬಿಲ್ಡಿಂಗ್ ಬೈಲಾಸ್‌ನ್ನು ಪಕ್ಕಕ್ಕೆ ಇಟ್ಟು, ಇರತಕ್ಕ ಕಟ್ಟಡವನ್ನು ಡೆಮಾಲಿಷ್ ಸಹ ಮಾಡಲಿಲ್ಲ, ಆದರೆ ಪಕ್ಕದಲ್ಲಿ ಪಿಲ್ಲರ್ಸ್‌ಗಳು ಬರುತ್ತಾ ಇದೆ. ಅಲ್ಲಿ ಆಕಾಶ ಮುಟ್ಟತಕ್ಕ ಕಟ್ಟಡಗಳು ಬರುತ್ತಿವೆಯೋ ಏನೋ ಗೊತ್ತಿಲ್ಲ, ಯಾರೂ ಕೇಳುವವರು ಇಲ್ಲ, ಏನು

ಇದರ ಗುಟ್ಟು? ಬ್ರಿಗೇಡ್‌ರೋಡ್‌ನಲ್ಲಿ ಒಂದು ಕಟ್ಟಡವನ್ನು ಹೊಡೆಸಿದ್ದಾರೆ ಅಲ್ಲಿ ಪೋಲೀಸ್‌ನವರಿಗೆ ಏನು ಕೆಲಸ? ಮೂರು ದಿವಸ ಆ ರಸ್ತೆಯನ್ನು ಬಂದ್ ಮಾಡಿದ್ದಾರೆ. ಒಂದು ತರಹ ಬ್ಲಾಕೇಡ್ ಮಾಡಿದ್ದರು. ಎಮರ್ಜೆನ್ಸಿ ಕಾಲದಲ್ಲಿ ಪೋಲೀಸರನ್ನು ನಾವು ಬ್ಲಾಕೇಡ್ ಎಂದು ಕರೆಯುತ್ತಿದ್ದೆವು. ಆ ರೀತಿ ರಸ್ತೆಯನ್ನು ಮುಚ್ಚಿಸಿ ಕಟ್ಟಡವನ್ನು ಕೆಡವಿಸಿದ್ದಾರೆ. ಏನು ನಿಮಗೂ ಅವರಿಗೂ ನಂಟು? ಏನು ನಂಟುಸ್ಥನ ಎಂಬುದನ್ನು ಅನಂತಕೃಷ್ಣರವರು ಹೇಳಿರಿ, ಏನು ನಿಮಗೂ ಅವರಿಗೂ ನಂಟಸ್ಥನ? ಅದಕ್ಕೆ ಕಾರಣವೇನು?

ಶ್ರೀ ಹೆಚ್. ಏಕಾಂತಯ್ಯ:- ಟೈಮ್ ಕೊಡಿ ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ;- ಬೆಂಗಳೂರಿನಲ್ಲಿರುವ ಕೆಲವು ಸ್ಥಳಗಳ ಮೇಲೆ ನಿಮ್ಮ ಹದ್ದಿನ ಕಣ್ಣು. ಬಹಳ ಸೂಕ್ಷ್ಮವಾಗಿದೆ ನಿಮ್ಮ ಕಣ್ಣು. ಇಲ್ಲಿರುವಂತಹ ಆಸ್ತಿ ಎಲ್ಲಿ ಸಿಗುತ್ತದೆ? ಒಳ್ಳೆಯ ರೀತಿಯಲ್ಲಿ ನಡೆಯತಕ್ಕ ಹೋಟೆಲುಗಳು. ಒಳ್ಳೆಯ ರೀತಿಯಲ್ಲಿ ನಡೆಯತಕ್ಕ ಕಮಿರ್ಷಿಯಲ್ ಕಾಂಪ್ಲೆಕ್ಸ್‌ಗಳು ಎಲ್ಲಿವೆ ಅದರ ಮೇಲೆ ನಿಮ್ಮ ಹದ್ದಿನ ಕಣ್ಣು. ಮಾನ್ಯ ಶಿವರಾಮೇಗೌಡರಿಗೆ ಇದನ್ನು ಹೇಳುವ ಹಕ್ಕು ಇದೆ ಆದರೆ ಧೈರ್ಯ ನಿಮಗೆ ಇಲ್ಲ ಬಿಡಿ. ಅವರಿಗೂ ಗೊತ್ತಿದೆ ಆದರೆ ಧೈರ್ಯ ಮಾತ್ರ ಇಲ್ಲ. ಅದಕ್ಕೆ ನಿಮ್ಮನ್ನು ತಾರೀಫು ಮಾಡುತ್ತೇನೆ. ನಿಮ್ಮ ದರ್ಮ್‌ಲೆಸ್‌ನೆಸ್‌ಗೆ ನಾನು ತಾರೀಫು ಮಾಡುತ್ತೇನೆ. ಜನಸಾಮಾನ್ಯರು ಬೀದಿ ಬೀದಿಯಲ್ಲಿ ಮಾತನಾಡುತ್ತಿದ್ದಾರೆ ಅದರಲ್ಲಿ ಎಷ್ಟು ನಿಜ ಎಷ್ಟು ಸುಳ್ಳು ಅದು ಗೊತ್ತಿಲ್ಲ. ಅನೇಕ ಸಿನಿಮಾ ಥಿಯೇಟರುಗಳ ಬಗ್ಗೆ ಮಾತನಾಡುತ್ತಾರೆ. ಹೋಟೆಲುಗಳ ಬಗ್ಗೆ ಮಾತನಾಡುತ್ತಾರೆ. ನಾನು ಆ ವಿವರಗಳಿಗೆ ಹೆಚ್ಚಾಗಿ ಹೋಗುವುದಿಲ್ಲ. ಆದರೆ ನನ್ನ ಕಣ್ಣಿಗೆ ಕಾಣತಕ್ಕದ್ದು ಈ ಕಡೆ ಪರಾಗ ಹೋಟಲ್ ಮತ್ತು ರಾಜ ಸೈಕಲ್ ಮಾರ್ಟ್ ಆಮೇಲೆ ಬ್ರಿಗೇಡ್ ರಸ್ತೆಯಲ್ಲಿ ಉರುಳಿಸಿರತಕ್ಕ ಕಟ್ಟಡ. ಈ ಮೂರನ್ನು ನಾವು ನಂಬುವುದಾದರೆ ಇದರಲ್ಲಿ ಒಂದು ದೊಡ್ಡ ವ್ಯವಸ್ಥಿತವಾದ ಸಾವಿರಾರು ಕೋಟಿ ರೂಪಾಯಿಗಳು ಒಂದು ಕಡೆ ಸೇರಿದೆ ಎನ್ನುವುದಕ್ಕೆ ಆಧಾರವಿದೆ ಎನ್ನತಕ್ಕದ್ದು ಸಾಬೀತಾಗುತ್ತದೆ ಮತ್ತು ನಂಬಬಹುದು. ಆ ತೀರ್ಮಾನಕ್ಕೆ ನಾವು ಅನಿವಾರ್ಯವಾಗಿ ಬರಬೇಕಾಗಿದೆ. ಅದರ ಜೊತೆಯಲ್ಲಿ ಬೆಂಗಳೂರು ನಗರದ ಅರಮನೆ ಅದನ್ನು ಏನು ಸ್ವಾಮಿ ಇವತ್ತಿನವರೆಗೂ ಕಣ್ಣು ಬಿಟ್ಟು ನೋಡಿದ್ದೀರಾ? ಅದು ಯಾರ ಸ್ವತ್ತು? ಬೀದಿಯಲ್ಲಿ ಹೋಗುವವರ ಸ್ವತ್ತು? ಇಲ್ಲ ರಾಜಮಹಾರಾಜರ ಮನೆತಹಕ್ಕೆ ಸೇರಿದ ಸ್ವತ್ತೇ? ಅಥವಾ ವ್ಯವಸಾಯ ಭೂಮಿಯೆ? ಅಥವಾ ನಗರದ ಭೂಮಿಯೇ? ಅದು ಏನು ಭೂಮಿ? ವ್ಯವಸಾಯದ ಭೂಮಿಯಾಗಿದ್ದರೆ ಲ್ಯಾಂಡ್ ರಿಫಾರ್ಮರ್ಸ್ ಆಕ್ಟ ಪ್ರಕಾರ ಡಿಕ್ಲೆರೇಷನ್ ಕೊಡಬೇಕು, ಫೈಲು ಮಾಡಿದ್ದಾರೇಯೇ? ಮಾಡಿದ್ದರೆ ಯಾರು ಮಾಡಿದ್ದಾರೆ? ಅದು ನಗರ ಪ್ರದೇಶದ ಭೂಮಿಯಾಗಿದ್ದರೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಅದಕ್ಕೊಂದು ಮಿತಿಯಿದೆ. ಅದರ ಪ್ರಕಾರ ಡಿಕ್ಲೇರೇಷನ್ ಕೊಡಬೇಕು. ಡಿಕ್ಲರೇಷನ್ ಕೊಟ್ಟವರು ಯಾರಾದರೂ ಇದ್ದಾರೆಯೇ? ಏತಕ್ಕೆ ನೀವು ಕ್ರಮವನ್ನು ತೆಗೆದುಕೊಂಡಿಲ್ಲ? ಏನಿದರ ಗುಟ್ಟು? ಅಲ್ಲಿ ನೂರಾರು ಎಕರೆ ಭೂಮಿ ಇದೆ. ನೂರಾರು ಕೋಟಿ ರೂಪಾಯಿ ಆಸ್ತಿ ಇದೆ. ಅಂತಹ ಭೂಮಿಯಲ್ಲಿ ಇವತ್ತು ಅಲ್ಲಿ ರಾಜಾರೋಷವಾಗಿ ಕಾನೂನು ಉಲ್ಲಂಘನೆಯಾಗತ್ತಿದ್ದರೆ ಅದನ್ನು ನೋಡಿಕೊಂಡು ಸುಮ್ಮನಿರುವುದರಿಂದ ನೀವು ಶಾಮೀಲಾಗಿದ್ದೀರಿ ಇದಕ್ಕೇನು ಕಾರಣ, ಇದರ ಗುಟ್ಟೇನು? ಇದರ ಮರ್ಮವನ್ನು ತಾವು ಹೇಳಬೇಕೆಂದು ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಐದು ನಿಮಿಷಗಳಲ್ಲಿ ಮುಗಿಸಿಬಿಡಿ.

ಶ್ರೀ ಸಿ. ಬೈರೇಗೌಡ:- ಪ್ರಯತ್ನ ಮಾಡುತ್ತೇನೆ. ಕರ್ನಾಟಕ ರಾಜ್ಯಸಾರಿಗೆ ಸಂಸ್ಥೆಯ ಬಗ್ಗೆ ಜನರ ಅಭಿಪ್ರಾಯವನ್ನು ಕೇಳುವುದಾದರೆ ನೂರಕ್ಕೆ 99.9 ಜನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಡೀನ್ಯಾಷನಲೈಜೇಷನ್ ಮಾಡಿಯೆಂದು ಹೇಳುತ್ತಾರೆ. ನಾನು ಕೂಡ ಇದನ್ನು ಒಪ್ಪುತ್ತೇನೆ. ವಿವರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ ಕಾರಣ ಏನೆಂದರೆ, ಇದು ಹೇಗೆ ನಡೆಯುತ್ತಿದೆ ಎಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಏನಾದರೂ ಒಬ್ಬ ಹಳ್ಳಿ ಪ್ರಯಾಣಿಕ ಟಿಕೇಟು ಕೊಡಪ್ಪ ಎಂದು ಕೇಳಿದರೆ ಆ ಊರಿಗೆ ಮಾರನೇಯ ದಿವಸ ಬಸ್ಸೇ ಇಲ್ಲ. ಟಿಕೆಟ್ಟು ಕೊಟ್ಟರೆ ಬಸ್ಸೇ ಇಲ್ಲ. ಈ ಪರಿಸ್ಥಿತಿ ಇದೆ. ಮಾತೆತ್ತಿದರೆ ಚಳುವಳಿ, ಸ್ಟ್ರೈಕ್. ಬಸ್ಸುಗಳನ್ನು ತಂದು ರಸ್ತೆಯಲ್ಲಿ ನಿಲ್ಲಿಸುತ್ತಾರೆ. ಇತ್ತೀಚೆಗೆ ಅನೇಕ ಬಸ್ಸುಗಳನ್ನು ರದ್ದು ಮಾಡಿದರು. ಹೇಳುವವರು ಇಲ್ಲ, ಕೇಳುವವರು ಇಲ್ಲ. ಈ ಪರಿಸ್ಥಿತಿ ಇವತ್ತಿನ ದಿವಸ ಬಂದಿದೆ. ಶ್ರೀ ಅನಂತಕೃಷ್ಣ ಅವರು ಡೀನ್ಯಾಷನಲೈಸ್ ಮಾಡುವುದನ್ನು ಒಪ್ಪುವುದಿಲ್ಲ ಎಂದು ನನಗೆ ಗೊತ್ತಿದೆ. ಒಂದು ದಿವಸ ಅವರಿಗೂ ನನಗೂ ಚರ್ಚೆ ನಡೆಯಿತು. ಈಗ ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಬಹುದು ಎಂದು ಭಾವಿಸುತ್ತೇನೆ. ವಾಸ್ತವಾಂಶವನ್ನು ಗಮನಿಸಿ ಬದಲಾವಣೆ

ಆಗಬೇಕಾಗುತ್ತದೆ. ಬದಲಾವಣೆ ನನ್ನಲ್ಲಿ ಉಂಟಾಗಿದೆ. ನೀವು ಕೂಡ ಬದಲಾವಣೆ ಆಗಬೇಕೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ:- ಸರ್ಕಾರಿ ಕ್ಷೇತ್ರದ ಕಾರ್ಖಾನೆಗಳನ್ನು ಮಾರಾಟ ಮಾಡಬಹುದು ಎನ್ನುತ್ತೀರಾ?

ಶ್ರೀ ಸಿ. ಬೈರೇಗೌಡ:- ಅವನ್ನು ಲಾಭದಾಯಕವಾಗಿ ನಡೆಸುವುದಕ್ಕೆ ಸಾಧ್ಯವಿದೆ.

ಶ್ರೀ ಎಚ್. ಏಕಾಂತಯ್ಯ:- ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು. ತಪ್ಪಿತಸ್ತರ ಮೇಲೆ ಕ್ರಮ ತೆಗೆದುಕೊಳ್ಳುವ ಇಚ್ಚೆ ಸರ್ಕಾರಕ್ಕೆ ಇದ್ದರೆ ನಡೆಸಬಹುದು. ಅದು ಬಿಟ್ಟು ಒಬ್ಬ ಕಂಡಕ್ಟರ್ ಡಿಸ್‌ಮಿಸ್ ಆದರೆ ಅವನನ್ನು ಪುನರ್ ನೇಮಕ ಮಾಡಲು ನಮ್ಮಂಥವರು ಶಿಫಾರಸ್ಸು ಮಾಡುವಂಥ ವ್ಯವಸ್ಥೆ ಇದ್ದರೆ, ಇದಕ್ಕೆ ನಾವೇ ಕಾರಣರು ಅಲ್ಲವೇ?

ಶ್ರೀ ಸಿ. ಬೈರೇಗೌಡ:- ಒಂದೇ ಔಷಧಿ ಎಲ್ಲಾ ಕಾಯಿಲೆಗಳಿಗೂ ಆಗುವುದಿಲ್ಲ.

ಶ್ರೀ ಎಚ್. ಏಕಾಂತಯ್ಯ:- ರಾಷ್ಟ್ರೀಕರಣ ನೀತಿ ಬಗ್ಗೆ ಮಾತನಾಡುವುದಾದರೆ ದ್ವಂದ್ವವಾದ ಅಭಿಪ್ರಾಯವನ್ನು ಹೇಳಬೇಕಾದದ್ದಿಲ್ಲ. ಹಾಗೆ ಹೇಳಿದರೆ ಅದು ನಿಮ್ಮ ಅಭಿಪ್ರಾಯ. ಇದು ಒಂದು ಕಡೆ ಮಾತ್ರ ಸೀಮಿತವಾಗಬೇಕು, ಮತ್ತೊಂದು ಕಡೆ ಆಗಬಾರದು ಎಂದು ಹೇಳಿದರೆ, ಇವೆರಡನ್ನೂ ಹೇಗೆ ಸರಿದೂಗಿಸುತ್ತೀರಿ?

ಶ್ರೀ ಸಿ. ಬೈರೇಗೌಡ:- ಇದನ್ನು ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಮಾತ್ರ ಡಿನ್ಯಾಷನಲೈಸೇಶನ್ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರಿನ ಸುತ್ತ ಮುತ್ತಲೂ ಅಂಡರ್ ವ್ಯಾಲ್ಯುಯೇಶನ್‌ಗೆ ಒಂದು ಇಲಾಖೆ ಇದೆ. ಡಿಟೆನ್‌ಶನ್ ಆಫ್ ಅಂಡರ್ ವ್ಯಾಲ್ಯೂಯೇಶನ್ ಅಂತ. ದಿವಸಕ್ಕೆ ಒಂದ ಕೋಟಿಗಿಂತ ಮೇಲೆ ಸರ್ಕಾರಕ್ಕೆ ಬರಬೇಕಾದಂಥ ಹಣ ಅಲ್ಲಿ ಸೋರಿಹೋಗುತ್ತಿದೆ. ಸ್ಟಾಂಪ್ ವಾಲ್ಯು ಪ್ರಕಾರ, ಮತ್ತು ರಿಜಿಸ್ಟ್ರೇಶನ್ ಫೀ ಎಲ್ಲಾ ಸೇರಿ ಒಂದು ದಿವಸಕ್ಕೆ ಒಂದು ಕೋಟಿಗಿಂತ ಮೇಲೆ ಹಣ ಹೋಗುತ್ತಿದೆ. ನನ್ನ ಹತ್ತಿರ ಇದರ ಬಗ್ಗೆ ಎಲ್ಲಾ ಅಂಕಿಅಂಶಗಳು ಇವೆ, ದಾಖಲೆಗಳು ಕೂಡ ಇವೆ. ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲವನ್ನೂ ಸದನದ ಮುಂದಿಡುತ್ತೇನೆ. ಆದರೆ ಸೂಕ್ಷ್ಮವಾಗಿ ಹೇಳಬೇಕಾದರೆ ಹಿಂದೆ ಒಂದು ಸಾರಿ ನಾನು ಪ್ರಸ್ತಾಪ ಮಾಡಿದ್ದೆ. ಒಂದು ತನಿಖೆ ನಡೆಯಿತು. ಆ ತನಿಖೆಯ ವರದಿ ಕೂಡ ಇದೆ. ಪಿ. ಬಿ. ರಾಮಮೂರ್ತಿ ಎನ್ನತಕ್ಕವರಿಂದ ತನಿಕೆ ಮಾಡಿಸಿದ್ದಾರೆ. 'ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ದಿನಾಂಕ........ ರಂದು ಮುದ್ರಾಂಕ ಅಪಮೌಲ್ಯ ತನಿಖೆ; ಶಿವಾಜಿನಗರ, ಬೆಂಗಳೂರು ಕಛೇರಿಯ ಪರಿಕ್ಷಿಸಿ ವರದಿ' - ಎನ್ನತಕ್ಕಂಥಾದ್ದು ಇದ್ದು ಇದರಲ್ಲಿ ವಿವರವಾಗಿ ಹೇಳಿದ್ದಾರೆ. ಆ ವಿವರಕ್ಕೆ ಪ್ರತಿಯೊಂದಕ್ಕೂ ನನ್ನಲ್ಲಿ ದಾಖಲೆ ಇದೆ. ಇದರಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ಹೇಳಿದ್ದಾರೆ. ಎಲ್ಲವೂ ಅದರಲ್ಲಿ ಇಲ್ಲ. ಈ ರೀತಿ ನಡೆದಿದೆ. ಇಂತಿಂಥ ಕೇಸುಗಳಲ್ಲಿ ಈ ರೀತಿ ನಡೆದಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಏನು ಸ್ವಾಮಿ ಇದು. ಇದರಲ್ಲಿ ಏನು ನಡೆಯುತ್ತಿದೆ? ದಿವಸಕ್ಕೆ ಇಲ್ಲಿ ಒಂದು ಕೋಟಿಗಿಂತ ಮೇಲೆ ಹಣ ಸೋರಿಹೋಗುತ್ತಿದೆ. ಅದನ್ನು ಹೇಳತಕ್ಕವರು ಇಲ್ಲ, ಕೇಳತಕ್ಕವರು ಇಲ್ಲ. ಇವರ ಜೊತೆಗೆ ನೀವು ಕೂಡ ಶಾಮೀಲಾಗಿದ್ದೀರಿ. ಶ್ರೀ ವೀರೇಂದ್ರ ಪಾಟೀಲರ ಒಂದು ಮಾತನ್ನು ಜ್ಞಾಪಕ ಮಾಡಿಕೊಳ್ಳಬೇಕಾಗುತ್ತದೆ. ಅಧಿಕಾರಿಗಳ ಹತ್ತಿರ ಹೋಗಿ ಹೇಳಿದರೆ ನಾವು ಅಲ್ಲಿ ಕೊಟ್ಟು ಬಂದಿದ್ದೇವೆ, ನೀವು ಇಲ್ಲಿ ಕೊಟ್ಟು ಹೋಗಿ ಎನ್ನುವ ಮಾತನ್ನು ಹೇಳುತ್ತಾರೆ. ಅದೇ ಇಲ್ಲಿ ನಡೆಯುತ್ತಿರತಕ್ಕಂಥಾದ್ದು. ಬೆಂಗಳೂರು ನಗರದಲ್ಲಿ ಸಬ್‌ರಿಜಿಸ್ಟ್ರಾರ್‌ಗಳು ಇದ್ದಾರೆ. ಒಬ್ಬೊಬ್ಬ ಸಬ್‌ರಿಜಿಸ್ಟ್ರಾರ್ ಒಂದೊಂದು ದಿವಸಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಮನೆಗೆ ತೆಗೆದುಕೊಂಡು ಹೋಗುತ್ತಾನೆ. ನಾನು ಈ ಸರ್ಕಾರಕ್ಕೆ ಸವಾಲು ಹಾಕುತ್ತಿದ್ದೇನೆ. ಅವರ ಹೆಸರುಗಳನ್ನು ಬೇಕಾದರೆ ಹೇಳುತ್ತೇನೆ. ಇಂತಹ 11 ಜನರ ಸಬ್ ರಿಜಿಸ್ಟ್ರಾರ್‌ರವರು ಪೈಕಿ, 3-4 ಜನ ಸಸ್ಪಂಡ್ ಆಗಿದ್ದಾರೆ. 3-4 ಸಾರಿ ಸಸ್ಪೆಂಡ್ ಆಗಿದ್ದಾರೆ. ಯಾರು ಹೆಚ್ಚಿಗೆ ಸಸ್ಪೆಂಡ್ ಆಗಿದ್ದಾರೋ ಅಂತಹವರೇ ಇಲ್ಲಿದ್ದಾರೆ. ಲೋಕಾಯುಕ್ತದವರು ಎರಡೆರಡು ಸಾರಿ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಎರಡೆರಡು ಸಾರಿ ಮನೆ ರೈಡ್ ಮಾಡಿದ್ದಾರೆ, ಹೊಡೆದಿದ್ದಾರೆ, ಟ್ರ್ಯಾಪ್ ಮಾಡಿದ್ದಾರೆ. ಅಂತಹವರನ್ನು, ಎಲ್ಲಿ ಹೆಚ್ಚಿಗೆ ವ್ಯವಹಾರ ನಡೆಯುತ್ತಿದೆ, ಅಂತಹ ಕಡೆಗಳಲ್ಲಿ ಹಾಕಿದ್ದಾರೆ. ಅವರ ಹೆಸರುಗಳು, ಯಾರು ಯಾರು, ಅವರಿಗೆ ಎಷ್ಟೆಷ್ಟು ಸರ್ವೀಸ್ ಆಗಿದೆ ಎಂಬ ಎಲ್ಲಾ ವಿವರಗಳೂ ನನ್ನ ಹತ್ತಿರ ಇವೆ.

ಶ್ರೀ ಆರ್.ವಿ. ದೇಶಪಾಂಡೇ:- ಆ ಒಂದು ಲಕ್ಷ ರೂಪಾಯಿಗಳು ದಿಸ್ಟ್ರಿಬ್ಯೂಟ್ ಯಾವ ರೀತಿ ಆಗುತ್ತಿದೆ....

ಶ್ರೀ ಸಿ. ಬೈರೇಗೌಡ:- ಅದಕ್ಕೋಸ್ಕರವೇ ನಾನು ಹೇಳಿದ್ದು. ಮಾನ್ಯ ವೀರೇಂದ್ರ ಪಾಟೀಲರು ಹೇಳಿರತಕ್ಕಂಥ ಮಾತನ್ನು ಜ್ಞಾಪಿಸಿದ್ದುದು. ನಾವು ಅಲ್ಲಿ ಕೊಟ್ಟು ಬಂದಿದ್ದೇವೆ, ನೀವು ಇಲ್ಲಿ ಕೊಡಿ ಎನ್ನುವ ಮಾತನ್ನು ಹೇಳುತ್ತಾರೆ. ಇವತ್ತಿನ ದಿವಸ ಅದೇ ಗುಟ್ಟು. ಇವತ್ತು ಒಬ್ಬ ಸಬ್ ರಿಜಿಸ್ಟ್ರಾರ್ ಅವರನ್ನು ಪೋಸ್ಟ್‌ಮಾಡಬೇಕಾದರೆ, 10-15 ಲಕ್ಷ ಇದೆ. ಎಲ್ಲಿ ಹೆಚ್ಚಿಗೆ ವ್ಯವಹಾರ ನಡೆಯುತ್ತಿದೆ ಅಂತಹ ಕಡೆಗಳಲ್ಲಿ ಒಬ್ಬ ಸಬ್‌ರಿಜಿಸ್ಟ್ರಾರ್‌ರವರನ್ನು ಪೋಸ್ಟ್ ಮಾಡಬೇಕಾದರೆ, 10-15 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ರೀತಿ ಕೊಟ್ಟು ವರ್ಗವಾಗಿ ಬರತಕ್ಕಂತಾದ್ದರ ಜೊತೆಗೆ ಪ್ರತಿ ತಿಂಗಳೂ ಪೊಗದಿ ಒಪ್ಪಿಸಬೇಕು. ಹಿಂದೆ ರಾಜ ಮಹಾರಾಜರಿಗೆ ಸಲ್ಲಿಸುತ್ತಿದ್ದರು ಅದಕ್ಕೆ ಬದಲಾಗಿ ಇವತ್ತು ಆಳುವ ಮಹಾನ್ ನಾಯಕರಿಗೆ ಪೊಗದಿಯನ್ನು ಒಪ್ಪಿಸುವುದು ಇವತ್ತಿನ ರೀತಿನೀತಿ ಆಗಿದೆ. ನಾನು ಹೇಳಿರತಕ್ಕಂಥ ಮಾತು ನಿಜವೇ ಅಲ್ಲವೇ ಎನ್ನುವುದಕ್ಕೆ ಒಂದು ಸದನದ ಸಮಿತಿ ಮಾಡಿ, ಆ ಸಮಿತಿಗೆ ಇವೆಲ್ಲವನ್ನೂ ಒಪ್ಪಿಸಿರಿ ಪರಿಶೀಲಿಸಿದರೆಗೊತ್ತಾಗುತ್ತದೆ. ನಾನು ಹೇಳಿರತಕ್ಕಂಥ ವಿಚಾರ ಸರಿಯೇ ಅಥವಾ ಸರ್ಕಾರ ಸರಿಯೇ ಎನ್ನುವುದಕ್ಕೆ ಒಂದು ಸಮಿತಿ ಮಾಡಿ.

ಉಪಾಧ್ಯಕ್ಷರು:- ಶ್ರೀಯುತ ಬೈರೇಗೌಡರೇ, 45 ನಿಮಿಷ ಆಯಿತು, ಇನ್ನೂ ಮಾತನಾಡುವವರು ಬೇಕಾಗುವವರು ಇದ್ದಾರೆ, ದಯಮಾಡಿ ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ:- ಬೆಂಗಳೂರು ನಗರದಲ್ಲಿ ಫ್ಲಾಟ್ಸ್ ಕಟ್ಟುತ್ತಿದ್ದಾರೆ, ಇದರದೊಂದು ಆಶ್ಚರ್ಯ. ಒಂದು ಜಾಗದಲ್ಲಿ 70-80 ಫ್ಲಾಟ್ಸ್ ಬರುತ್ತಿವೆ. ಇದರಲ್ಲಿ ಯಾವರೀತಿ ನಡೆಯುತ್ತಿದೆ ಎನ್ನುವುದಕ್ಕೆ ಒಂದು ಉದಾಹರಣೆ. ಎಷ್ಟು ಸೈಟ್ ಇದೆ, ಆ ಸೈಟ್‌ನಲ್ಲಿ ಒಂದು ಭಾಗ ಡೀಮ್ಡ್ ಪಾರ್ಟೀಷಿಯನ್ ಎಂದು ಮಾಡಿಕೊಂಡು, ಒಂದು ಎಕರೆ ಜಮೀನಿನಲ್ಲಿ 80 ಫ್ಲಾಟ್ಸ್ ಕಟ್ಟುತ್ತಾ ಇದ್ದರೆ, ಪೇಪರಿನಲ್ಲಿ ಬೆಲೆ ತೋರಿಸುವುದೇ ಬೇರೆ. ಅದರ ಮೇಲೆ ವಾಸ್ತವವಾಗಿ ಕಟ್ಟಡಗಳು ಬರುತ್ತಿವೆ. ಒಂದು ಫ್ಲಾಟ್ಸ್ ಬೆಲೆ 15-20 ಲಕ್ಷ ಆಗುತ್ತದೆ. ರಿಜಿಸ್ಟ್ರೇಷನ್ ಆಗುವಾಗ ಇದನ್ನು ತೋರಿಸುವುದಿಲ್ಲ, ಇವರೆಲ್ಲರೂ ಅದಕ್ಕೆ ಶಾಮೀಲಾಗಿದ್ದಾರೆ. ಒಂದು ದಿವಸಕ್ಕೆ ಒಂದು ಲಕ್ಷ ಬರುತ್ತಿದೆ ಎನ್ನುವುದಕ್ಕೆ ಇದೇ ಕಾರಣ. ಬೆಂಗಳೂರು ನಗರುವಲ್ಲಿ ಇದು ಯಥೇಚ್ಛವಾಗಿ ನಡೆಯುತ್ತಿದೆ. ಇದು ಫ್ಲಾಟ್ಸ್ ಒಂದೇ ಅಲ್ಲ, ಇನ್ನೂ ಅನೇಕ ದುರ್ವ್ಯವಹಾರಗಳು ನಡೆಯುತ್ತಿವೆ. ಇದರ ಜೊತೆಗೆ ಬೆಂಗಳೂರು ಸುತ್ತಮುತ್ತಲೂ ರೆವಿನ್ಯೂ ಭೂಮಿಯಲ್ಲಿ ದೊಡ್ಡ ವ್ಯವಹಾರ ನಡೆಯುತ್ತಿದೆ. ನಮ್ಮ ಸ್ನೇಹಿತರನೇಕರಿಗೆ ಈ ವಿಚಾರದ ಪರಿಚಯ ಇದೆ. ರೆವಿನ್ಯೂ ಭೂಮಿ ವ್ಯವಹಾರ ಯಾವ ರೀತಿಯಲ್ಲಿ ನಡೆಸುತ್ತಿದ್ದಾರೆಂದರೆ, ಗ್ರಾಮಠಾಣದಲ್ಲಿ ಖಾನೇಷುಮಾರಿ ಎಂದು ಕರೆಯುತ್ತಾರೆ. ಫಾರಂ ನಂ.10 ಎಂದು ಹೇಳಿದರೆ, ಆ ಸೈಟ್ ಎಲ್ಲಿದ್ದರೂ ಅದು ಫಾರಂ ನಂ,10 ಎಂದೇ ಬರುತ್ತದೆ. ಒಬ್ಬ ವಿಲೇಜ್ ಅಕೌಂಟೆಂಟ್ ಇರುತ್ತಾನೆ. ವಿಲೇಜ್ ಅಕೌಂಟೆಂಟ್ ಇಂದು ಮಾರುತಿ ಕಾರಿನಲ್ಲಿ ಓಡಾಡುತ್ತಿದ್ದಾನೆ. ನಾನೂ ಕಾರಿನಲ್ಲಿ ಓಡಾಡುತ್ತಿದ್ದೇನೆ. ನಾನು ಓಡಾಡುತ್ತಿರತಕ್ಕ ಕಾರು ನಮ್ಮ ಕ್ಷೇತ್ರದ ಜನ ಕೊಟ್ಟಿರುತ್ತಾರೆ. ನನಗೆ ಕಾರು ಕೊಂಡು ಕೊಳ್ಳತಕ್ಕ ಯೋಗ್ಯತೆ ಇಲ್ಲ. ಆದರೆ ಈ ವಿಲೇಜ್ ಅಕೌಂಟೆಂಟ್ ಅನೇಕರು ಮಾರುತಿ ಕಾರಿನಲ್ಲಿ ಓಡಾಡುತ್ತಿದ್ದಾರೆ. ಫಾರಂ ನಂ.10 ಎಂದು ಹೇಳಿದರೆ, ಅವನಿಗೆ ಇಷ್ಟು ಎಂದು ಕೊಟ್ಟರೆ, ಎಲ್ಲಾ ರೆಕಾರ್ಡ, ಎಲ್ಲಾ ವಿಶಿಷ್ಟ ಭೂಮಿ ಗ್ರಾಮಠಾಣವಾಗುತ್ತದೆ. ಗ್ರಾಮಠಾಣ ಆದರೆ, ಅದಕ್ಕೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಇಲ್ಲ, ಕನ್‌ವರ್ಷನ್ ಫೀ ಇಲ್ಲ, ಇದಕ್ಕೆ ಏನೂ ಇಲ್ಲ. ಎಷ್ಟು ಬೇಕಾದರೂ ಫ್ಲಾಟ್ಸ್ ಕಟ್ಟಿಕೊಂಡು ಹೋಗಬಹುದು. ಒಂದು ಎಕರೆ ಜಮೀನನ್ನು ಫಾರಂ ನಂ.10ನಲ್ಲಿ ತೆಗೆದುಕೊಂಡು, ಅದಕ್ಕೆ ಗ್ರಾಮಠಾಣ ಎಂದು ಸರ್ಟಿಫಿಕೇಟ್ ತೆಗೆದುಕೊಂಡು, ಪಕ್ಕಾ ರೆಕಾರ್ಡ ಮಾಡಿಕೊಂಡು, ಎಷ್ಟು ಬೇಕಾದರೂ ಫ್ಲಾಟ್ಸ್ ಕಟ್ಟಿಕೊಂಡು ಹೋಗಬಹುದು. ಇವೆಲ್ಲಾ ಕೆಲವೇ ದಿನಗಳಲ್ಲಿ ಪಕ್ಕಾ ರೆಕಾರ್ಡ ಆಗುತ್ತವೆ. ಬಿ. ಡಿ. ಎ. ಪ್ರದೇಶ ಬಿಟ್ಟು ಬೇರೆ ಕಡೆ ಈ ಫ್ಲಾಟ್ಸ್ ಬರುತ್ತಿವೆ. ಇದನ್ನು ಯಾರೂ ಹೇಳುವವರು ಕೇಳುವವರು ಇಲ್ಲ, ಈ ರೀತಿ ನಡೆಯುತ್ತಿದೆ.

ಉಪಾಧ್ಯಕ್ಷರು:- ತಾವು ಬೇರೆಯವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಸಿ. ಬೈರೇಗೌಡ:- ರಾಜಕೀಯ ಕಾರಣಗಳಿಂದ ಅನೇಕ ಸಂಘ ಸಂಸ್ಥೆಗಳನ್ನು ಸೂಪರ್ ಸೀಡ್ ಮಾಡುತ್ತಿದ್ದಾರೆ. ನಮ್ಮ ಕೋಲಾರ ಜಿಲ್ಲಾ ಬ್ಯಾಂಕ್‌ನ್ನು ಸೂಪರ್‌ಸೀಡ್ ಮಾಡಿದರು. ಹಿಂದೆ ಸೂಪರ್ ಸೀಡ್ ಆಗಿ ಮತ್ತೆ ಆಡಳಿತವರ್ಗ ಬಂದಮೇಲೆ ಅಂಕಿ ಅಂಶಗಳ ಪ್ರಕಾರವೇ ಅದರಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಲಾಗಿದೆ. ಅಂತಹ

ಬ್ಯಾಂಕನ್ನು ಸೂಪರ್ ಸೀಡ್ ಮಾಡಿದರು. ಇದು ಕೋರ್ಟಿಗೆ ಹೋಯಿತು. ಕೋರ್ಟಿನಲ್ಲಿ ಇವರು ಮಾಡಿರತಕ್ಕಂಥ ಆಜ್ಞೆ ಸರಿಯಿಲ್ಲ ಎಂದು ಛೀಮಾರಿ ಹಾಕಿ ಕಳುಹಿಸಿದ್ದಾರೆ. ಡಿ. ಸಿ. ಸಿ. ಬ್ಯಾಂಕ್ ದೊಡ್ಡ ಸಂಸ್ಥೆ ರಾಜಕೀಯವಾಗಿ ಉಪಯೋಗಿಸಿಕೊಂಡರು ಎಂದು ಇಟ್ಟುಕೊಳ್ಳೋಣ. ಆದರೆ ಹಳ್ಳಿ ಮಟ್ಟದಲ್ಲಿರತಕ್ಕಂಥ ಸಹಕಾರ ಸಂಘಗಳನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡತಕ್ಕದ್ದು ನಡೆದಿದೆ. ಇವತ್ತೂ ಸಹ ಪತ್ರಿಕೆಯಲ್ಲಿ ಈ ಒಂದು ವಿಚಾರ ಬಂದಿದೆ. ಹೈಕೋರ್ಟಿಗೆ ಹೋಗಿ, ಹೈಕೋರ್ಟಿನಲ್ಲಿ ಇವರು ಮಾಡಿರತಕ್ಕಂಥಾದ್ದು ಸಿಂಧು ಅಲ್ಲ ಎನ್ನತಕ್ಕಂಥ ತೀರ್ಪು ಬಂದಿದ್ದು, ಅದು ಇವತ್ತು ಪತ್ರಕೆಗಳಲ್ಲಿ ಬಂದಿದೆ. ಎಲ್ಲಿಯವರೆಗೆ ತಮ್ಮ ರಾಜಕೀಯವನ್ನು ಈ ರೀತಿಯಾಗಿ ಇವರು ಉಪಯೋಗಿಸುತ್ತಿದ್ದಾರೆ ಎಂದರೆ, ಬಹಳ ಕ್ಷುಲ್ಲಕಮಟ್ಟಕ್ಕೆ ಹೋಗಿದ್ದಾರೆ. ಯಾವತ್ತೂ ಕೂಡ ಹಳ್ಳಿ ಮಟ್ಟದಲ್ಲಿರತಕ್ಕಂಥ ಸಹಕಾರ ಸಂಘಗಳಿಗೆ ನಾಮಿನೇಷನ್ ಮಾಡಿರಲಿಲ್ಲ. ಇವತ್ತು ಹಳ್ಳಿಯ ಸಹಕಾರ ಸಂಘಗಳಿಗೂ ನಾಮಿನೇಷನ್ ಮಾಡಿರುತ್ತಾರೆ. ಅಲ್ಲಿ ವಾಸ್ತವವಾಗಿ ಜನಗಳಿಂದ ಚುನಾಯಿತರಾಗಿರತಕ್ಕಂಥವರು ಇಲ್ಲ. ಆದರೆ ಕೇವಲ ಇಲ್ಲಿಂದ ನಾಮಿನೇಷನ್ ಆಗಿರತಕ್ಕಂಥವರಿಂದ ಅನೇಕ ಸಹಕಾರ ಸಂಘಗಳು ಇವತ್ತು ನಡೆಯುತ್ತಿದೆ. ಸಹಕಾರ ಸಂಘಗಳ ಪ್ರತಿನಿಧಿಗಳು ಜನಗಳಿಂದ ಬರಬೇಕಾಗಿತ್ತು, ಯಾರು ಷೇರ್ ಹೋಲ್ಡರ್ಸ್ ಆಗಿರತಕ್ಕಂಥವರು ಇದ್ದಾರೆ ಅವರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಬೇಕು, ಆದರೆ ಆ ಪರಿಸ್ಥಿತಿ ಇಲ್ಲ. ಅದಕ್ಕೆ ಬದಲಾಗಿ, ಬೆಂಗಳೂರಿನ ವಿಧಾನಸೌಧದಿಂದ ಸಹಕಾರ ಸಂಘಗಳನ್ನು ನಡೆಸುತ್ತಿದ್ದಾರೆ. ಅಷ್ಟೇ ಅಲ್ಲ, ಮೊನ್ನೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ನಮ್ಮ ಜಿಲ್ಲೆಯಲ್ಲಿ ನಡೆದ ಕೆಲವು ಘಟನೆಗಳನ್ನು ಪ್ರಸ್ತಾಪ ಮಾಡಿದರು. ಅಲ್ಲಿನ ಜಿಲ್ಲಾಪರಿಷತ್ ಸದಸ್ಯರಾಗಿರತಕ್ಕಂಥ ಶ್ರೀಮತಿ ಜ್ಯೋತಿ ರೆಡ್ಡಿ ಎಂಬುವವರನ್ನು, ರಾತ್ರಿ ಹನ್ನೆರಡು ಗಂಟೆ ಮೇಲೆ ಅವರ ಮನೆಗೆ ಹೋಗಿ, ಅವರ ತಲೆ ಒಡೆದಿದ್ದಾರೆ. ಅವರಿಗೆ ಗಾಯವಾಗಿದೆ. ಅವರು ಒಬ್ಬ ಮಹಿಳೆ. ತಾವು ದಯವಿಟ್ಟು ಇದನ್ನು ಆಲೋಚನೆ ಮಾಡಬೇಕು. ರಾಜಕೀಯ ಕಾರಣಗಳಿಂದ ಅವರನ್ನು ಮುಗಿಸಬೇಕೆಂಬ ಉದ್ದೇಶದಿಂದ ತಲೆ ಒಡೆದಿದ್ದಾರೆ. ತಲೆ ಒಡೆಯಲು ಹೋದವರ ದುರಾದೃಷ್ಟ, ಇವರ ಅದೃಷ್ಟ, ಅದು ಆಗಲಿಲ್ಲ. ಇವರಿಗೆ ಅದೃಷ್ಟ ಇತ್ತು, ಬದುಕಿದ್ದಾರೆ. ಅಷ್ಟೇ ಅಲ್ಲ ಇವತ್ತು ನಮ್ಮ ಕೋಲಾರ ತಾಲ್ಲೂಕಿನಲ್ಲಿ ಇದೇ ಪರಿಸ್ಥಿತಿ ನಡೆಯುತ್ತಿದೆ. ಇಲ್ಲಿ ನನ್ನ ಹತ್ತಿರ ಎಲ್ಲಾ ದಾಖಲೆಗಳೂ ಇವೆ. ಒಂದು ಸೈಟ್ ಬಗ್ಗೆ ಎಲ್ಲಾ ದಾಖಲೆಗಳೂ ನನ್ನ ಹತ್ತಿರ ಇದೆ. ಇವತ್ತು ಎಲ್ಲಾ ದಾಖಲೆಗಳು ಇದ್ದರೂ, ಕೋರ್ಟಿನಿಂದ ಇಂಜಕ್ಷನ್ ಆರ್ಡರ್ ತೆಗೆದುಕೊಂಡು ಬಂದಿದ್ದರೂ ಕೂಡ ಅದು ಅವರ ಲೆಕ್ಕಕ್ಕೆ ಬರುತ್ತಿಲ್ಲ, ಎಲ್ಲಾ ದಾಖಲೆಗಳು ಇದ್ದರೂ ಸಹಿತ ಇವತ್ತು ಅಲ್ಲಿರತಕ್ಕಂಥವರನ್ನು ಹೊರಗಡೆ ಕಳಹಿಸಿದ್ದಾರೆ. ಹೊರಗಡೆ ಕಳುಹಿಸಬೇಕೆಂಬ ಪ್ರಯತ್ನ ಯಾರು ಮಾಡಿದರು ಅಂತಹವನ್ನು ರಕ್ಷಣೆ ಮಾಡತಕ್ಕ ಕೆಲಸ ಮಾಡುತ್ತಿದ್ದಾರೆ. ಆ ದಾಖಲೆಗಳೆಲ್ಲಾ ಇವತ್ತಿನ ದಿವಸ ಇಲ್ಲಿ ಇದೆ. ಮಂಡಲ್ ಪಂಚಾಯಿತ್‌ನಿಂದ ಲೈಸೆನ್ಸ್ ಪಡೆದಿದ್ದಾರೆ, ಹಿಂದೆ ಯಾವಾಗ ಸೈಟ್ ಮಂಜೂರಾಯಿತು, ಆ ಪತ್ರ, ಯಾರಿಂದ ಖರೀದಿ ಮಾಡಿರುತ್ತಾರೆ, ಆ ಪತ್ರ ಮತ್ತು ಇತರ ಎಲ್ಲಾ ದಾಖಲೆಗಳೂ ಇದೆ, ಇದನ್ನು ಯಾರಿಗೆ ಕೊಡಬೇಕೋ ನನಗೆ ಗೊತ್ತಾಗುತ್ತಿಲ್ಲ. ಏತಕ್ಕೆಂದರೆ ಇಲ್ಲಿ ಒಬ್ಬರೂ ಹೇಳುತ್ತಿಲ್ಲ. (ಸಚಿವರುಗಳನ್ನು ಉದ್ದೇಶಿಸಿ)

ಶ್ರೀ ವಾಟಾಳ್ ನಾಗರಾಜ್:- ಸರಕಾರಕ್ಕೆ ಕೊಟ್ಟು ಬಿಡಿ.

ಶ್ರೀ ಸಿ. ಬೈರೇಗೌಡ:- ನಿಮ್ಮ ರಾಜಕೀಯ ಅಟ್ಟಹಾಸ ಈ ರೀತಿ ಇದೆ. ಯಾರೇ ಇದನ್ನು ಮಾಡಿದರೂ ನಾನು ಒಪ್ಪುವುದಿಲ್ಲ. ನಮ್ಮವರೇ ಮಾಡಿದರೂ ನಾನು ಒಪ್ಪುವುದಿಲ್ಲ. ಅಲ್ಲೇ ನೀವು ತಪ್ಪು ಮಾಡಿರುತ್ತೀರಿ ಎಂಬ ಮಾತನ್ನು ಹೇಳುತ್ತೇನೆ. ಆ ರೀತಿಯ ಧೋರಣೆ ನಿಮಗಿಲ್ಲ ಎನ್ನಕ್ಕಂಥಾದ್ದೆ ನನ್ನ ವೇದನೆ, ಅದನ್ನು ನೀವು ಉಪಯೋಗಿಸಿಕೊಳ್ಳುತ್ತಿದ್ದೀರಿ ಎಂಬುದು ನನ್ನ ವೇದನೆ. ಯಾರೇ ತಪ್ಪು ಮಾಡಿದರೂ ಅದು ತಪ್ಪು ಎಂದು ಹೇಳತಕ್ಕವನು ನಾನು. ಅದುದರಿಂದ ಮಾನ್ಯ ಅಧ್ಯಕ್ಷರೇ ನಾನು ಅನೇಕ ವಿಚಾರಗಳನ್ನು ಹೇಳಬೇಕೆಂದು ಇದ್ದರೂ.

ಉಪಾಧ್ಯಕ್ಷರು:- ನೀವು ಮುಗಿಸದೇ ಹೋದರೆ ನಾನು ಬೇರೆಯವರನ್ನು ಕರೆಯುತ್ತೇನೆ. ಪ್ಲೀಸ್ ಕೋ ಆಪರೇಟ್. ಇವತ್ತು ಡಿಸ್ಕಷನ್ ಮುಗಿಯಬೇಕು. ಆರೂವರೆ ಏಳು ಗಂಟೆಯಾದರೂ ಡಿಸ್ಕಷನ್ ಮುಗಿಸಲೇಬೇಕಾಗುತ್ತದೆ. ಬೇರೆಯವರಿಗೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಸಿ. ಬೈರೇಗೌಡ:- ಅದಕೋಸ್ಕರವೇ ವಿಶೇಷವಾದ ಚರ್ಚೆ ನಡೆಯಬೇಕೆಂದು ಬಿ.ಎ.ಸಿ. ಸಮಿತಿಯಲ್ಲಿ ತೀರ್ಮಾನವಾಗಿದೆ. ಆ ಕಾರಣದಿಂದ ಅದನ್ನು ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದೇ ರೀತಿಯಲ್ಲಿ ಅಬಕಾರಿ ಬಗ್ಗೆಯೂ ಕೂಡ ಸಾಕಷ್ಟು ಮಾಹಿತಿಗಳು ನನ್ನಲ್ಲಿವೆ. ನಾನು ಎಲ್ಲರಿಗಿಂತ ಒಂದು ಹೆಚ್ಚೆ

ಮುಂದೆ ಹೋಗಿ ಮಾತನಾಡಬಲ್ಲೆ. ಮತ್ತು ನನ್ನಲ್ಲಿರತಕ್ಕಂಥ ದಾಖಲೆಗಳು ಏನಿವೆ ಆ ದಾಖಲೆಗಳನ್ನು ಸಮಯ ಬಂದಾಗ ನಾನು ಅವುಗಳನ್ನು ಬಳಸಿಕೊಳ್ಳುತ್ತೇನೆ. ಒಟ್ಟಾರೆ ಮಾನ್ಯ ಅಧ್ಯಕ್ಷರೇ ಜನರ ಪರಿಸ್ಥಿತಿ ಏನಾಗಿದೆ ಅಂದರೆ ಏತಕ್ಕೆ ಬಂತೋ ಈ ಸರ್ಕಾರ ಎಂದು ಜನರ ಮನಸ್ಸಿನಲ್ಲಿದೆ. ನಾವು ತಪ್ಪು ಮಾಡಿದೆವು....

ಶ್ರೀ ಟಿ.ಎಂ. ಮಂಜುನಾಥ್:- ನಮ್ಮ ಕಡೆ ಬಂದರೆ ಹೇಳುತ್ತಾರೆ ಜನ ನಿಮ್ಮನ್ನು ಎತಕ್ಕೆ ಎಂ. ಎಲ್. ಎ. ಮಾಡಿದೆವೋ ಎಂದು.

ಶ್ರೀ ಸಿ. ಬೈರೇಗೌಡ:- ಒಬ್ಬರೂ ಸಹ ನನ್ನ ಬಗ್ಗೆ ನನ್ನ ಮತಕ್ಷೇತ್ರದಲ್ಲಿ ಹೇಳುವುದಿಲ್ಲ. ಈ ಸರ್ಕಾರ ಏತಕ್ಕೆ ಬಂತೋ ಎನ್ನತಕ್ಕಂಥ ಮಾತನ್ನು ಇಡೀ ರಾಜ್ಯದಲ್ಲಿ ಬಹು ಮಂದಿ ಜನ ಇವತ್ತಿನ ದಿವಸ ಹೇಳುತ್ತಿದ್ದಾರೆ. ಜನರು ತಪ್ಪು ಮಾಡಿದ್ದಾರೆ. ಇನ್ನೂ ಎರಡೂವರೆ ವರ್ಷ ನಿಮ್ಮ ಅವಧಿ ಇದೆ. ಆ ಅವಧಿಯಲ್ಲಿ ನೀವು ಹೋಗತಕ್ಕಂಥ...

ಶ್ರೀ ಎಲ್.ಆರ್. ಶಿರಾಮೇಗೌಡ:- ಹುಣಸೂರಿನಲ್ಲಿ ಜನ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಉಪಾಧ್ಯಕ್ಷಣಿಯವರು:- ಅವರು ಮುಗಿಸುತ್ತಾರೆ, ತಾವು ಸುಮ್ಮನೆ ಇರಿ.

ಶ್ರೀ ಸಿ. ಭೈರೇಗೌಡ:- ತಾವು ಯಾವ ದಾರಿಯಲ್ಲಿ ಹೋಗುತ್ತಿದ್ದೀರಿ. ಬೆಂಗಳೂರಿನಲ್ಲಿ ಇರತಕ್ಕಂಥ ಭೂಮಿಯ ಮೇಲೆ ಕಣ್ಣು ಇಟ್ಟಿರತಕ್ಕಂಥಾದ್ದು, ಹೋಟೆಲ್‌ಗಳ ವ್ಯವಹಾರ ಬಿಜಿನೆಸ್ ಕಾಂಪ್ಲೆಕ್ಸ್ ಇದನ್ನು ಬಿಟ್ಟು, ಇರುವ ಎರಡೂವರೆ ವರ್ಷಗಳಲ್ಲಿ ಒಳ್ಳೆಯ ದಾರಿಯಿಂದ ಹೋಗಿ. ಜನಗಳಿಗೆ ರಕ್ಷಣೆ ಸಿಗಲಿ ಎನ್ನುವ ಮಾತನ್ನು ಹೇಳಿ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- (ಧಾರವಾಡ ಗ್ರಾಮಾಂತರ):- ಮಾನ್ಯ ಉಪಾಧ್ಯಕ್ಷಣೀಯವರೇ, ನಾನು ಬಹಳ ಹೆಚ್ಚು ಮಾತನಾಡುವುದಿಲ್ಲ. ನಾನು ಹೆಚ್ಚು ಮಾತನಾಡದೇ ಇರುವುದಕ್ಕೆ ಎರಡು ತಿದ್ದುಪಡಿಗಳನ್ನು ಕಳುಹಿಸಿದ್ದೇನೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ. ಹಲವಾರು ವಿಷಯಗಳು ಮಾತನಾಡುವುದು ಇದ್ದರೂ ತಾವು ಕಾಲಾವಕಾಶ ಕೊಡುವುದಿಲ್ಲವೆನ್ನುವುದು ಮುಂಚಿತವಾಗಿ ಗೊತ್ತಿರುವುದರಿಂದ ನಾನು ಈ ಕ್ರಮವನ್ನು ಅನುಸರಿಸಿದ್ದೇನೆ. ಭ್ರಷ್ಟಾಚಾರದ ಮೇಲೆ ಮಾತನಾಡಬೇಕಾದರೆ ಅದಕ್ಕೋಸ್ಕರ ಎಷ್ಟು ಕಾಲಾವಕಾಶ ಬೇಕೋ ಅಷ್ಟು ಕಾಲಾವಕಾಶ ನೀವು ನನಗೆ ನಿಜವಾಗಿಯೂ ಕೋಡುವುದಿಲ್ಲವೆಂದು, ಗೊತ್ತಿದೆ. ಆ ಕಾರಣಕೋಸ್ಕರ ನಾನು ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಿಲ್ಲ, ಇನ್ನು ಕಾವೇರಿ ಸಮಸ್ಯೆಯ ಬಗ್ಗೆ ನಾನು ಮಾತನಾಡುವುದಿಲ್ಲ. ಅದಕ್ಕೆ ಕಾರಣ ಇಷ್ಟೇ. ನ್ಯಾಯ ಮಂಡಲಿ ಯಾವುದೇ ತೀರ್ಪು ಕೊಡಲಿ ನಮ್ಮ ನೀರಿನ ಹಕ್ಕು ಏನಿದೆ ಅದನ್ನು ನಾವು ಯಾವುದೇ ಕಾರಣಕ್ಕೂ ಬಿಟ್ಟು ಕೊಡುವುದಿಲ್ಲ ಎನ್ನುವ ಒಂದು ಅಚಲ ನಿರ್ಧಾರಕ್ಕೆ ನಾವು ಮೇಲ್ದಂಡೆ ರಾಜ್ಯವಾಗಿರುವುದರಿಂದ ಬಂದಿರುತ್ತೇವೆ. ಇನ್ನು ರೈತರ ಸಾಲ ಬಗ್ಗೆ ಮಾತನಾಡುವುದಿಲ್ಲ. ಏಕೆಂದರೆ ಈಗಾಗಲೇ ನಾವು ಘೋಷಣೆ ಮಾಡಿದ್ದೇವೆ. ನಾವು ಸಾಲಗಾರರಲ್ಲ. ನಾವು ಸಾಲ ಕೊಡಬೇಕಾಗಿಲ್ಲ. ನಾವು ಸಾಲ ಕೊಡುವುದಿಲ್ಲ. ಅದಕೋಸ್ಕರ ನಾನು ಸದನದ ಕಾಲಹರಣ ಮಾಡುವುದಿಲ್ಲ. ಈ ಕಾರಣದಿಂದ ನಾನು ಎರಡು ತಿದ್ದುಪಡಿಗಳನ್ನು ಕಳುಹಿಸಿದ್ದೇನೆ ಮತ್ತೆ ಇವತ್ತು ನಾನು ತಮಗೆ ಒಂದು ಪತ್ರ ಕಳುಹಿಸಿದ್ದೇನೆ ಆ ಎರಡು ತಿದ್ದುಪಡಿಗಳನ್ನು deemed to have been moved... ಅಂತ ಪರಿಗಣಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು. ತಾವು ಅಪ್ಪಣೆ ಕೊಟ್ಟಿದ್ದೀರಿ. ನಾನು ನನ್ನ ತಿದ್ದುಪಡಿಗಳನ್ನು ಓದುತ್ತೇನೆ. ನನಗೆ ಇಂಗ್ಲೀಷ್ ಪ್ರತಿ ಸಿಕ್ಕಿದ್ದರಿಂದ ನಾನು ತಿದ್ದುಪಡಿಯನ್ನು ಇಂಗ್ಲೀಷ್‌ನಲ್ಲೇ ಬರೆದಿದ್ದೇನೆ. ಆಗಲೇ ಮಾನ್ಯ ವಾಟಾಳ್ ನಾಗಲಾಜ್‌ರವರು ನನ್ನನ್ನು ನೋಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಪ್ರೊಫೆಸರ್ ನಂಜುಂಡಸ್ವಾಮಿಯವರು ಏಕೆ ತಪ್ಪು ದಾರಿ ಹಿಡಿದರೆಂದು ನನಗನಿಸ್ತು. ಅವರು ತಪ್ಪು ದಾರಿ ಹಿಡಿದರೂ ನಾನು ನೇರವಾಗಿ ಹೇಳುವುದು ಬೇಡ ಅನಿಸಿತು.

ಪ್ರೊ: ಎಂ. ಡಿ. ನಂಜುಂಡಸ್ವಾಮಿ: ಕನ್ನಡದಲ್ಲಿ ಮಾಡುವುದಕ್ಕೆ ಕಾಲಾವಕಾಶ ಸಿಗದೇ ಇದ್ದುದರಿಂದ ಇಂಗ್ಲೀಷ್‌ನಲ್ಲೆ ಈಗ ಓದುತ್ತೇನೆ.

" but regret to note that your Government

a) do not have a determined and clear programme to mobilise financial resources to complete the on-going and pending irrigation projects in the Cauvery and Krishna basins.

b) but regret to note that your Government

have failed to recognise that our State is a Socialist State besides being a welfare State and have failed to realise that the continuous losses in public-sector undertakings have been due to the lack of legal public accountability of the bureaucracy, which lacuna this same Government is proposing to introduce into the system through the Karnataka Administrative Procedure Bill, and have failed to recognise that providing professional management rather than privatisation could save these undertakings and the Socialist State".

ಇದು ನನ್ನ ಎರಡನೇಯ ತಿದ್ದುಪಡಿ.

MADAM DEPUTY SPEAKER:- It should have been moved earlier..

ಅದು ಆಗುವುದಿಲ್ಲವೆಂದು ಅನಿಸುತ್ತದೆ. ಇದನ್ನು ಮೂವ್ ಮಾಡಲಿಕ್ಕೆ ನಿಮ್ಮ ಕನ್ಸೆಂಟ್ ಇರಲಿಲ್ಲ ನಾನೇ ಛೇರ್‌ನಲ್ಲಿ ಇದ್ದೆ. ಇದನ್ನು ಸ್ಪೆಷಲ್ ಕೇಸ್ ಆಗಿ ಕನ್ಸಿಡರ್ ಮಾಡಲಿಕ್ಕೆ ಸ್ಪೀಕರ್‌ಗೇ ಅಧಿಕಾರ ಇದೆ. ಅದು ಪರಿಶೀಲನೆಯಲ್ಲಿ ಇದೆ.

PROF. M.D. NANJUNDASWAMY:- Even without getting these two amendments moved, I will just speak on this..

Madam Speaker, ರಾಜ್ಯಪಾಲರ ಭಾಷಣದಲ್ಲಿ ಕಾವೇರಿ ಜಲಾನಯನ ಮತ್ತು ಕೃಷ್ಣ ಜಲಾನಯನ ಪ್ರದೇಶದ ಎಲ್ಲಾ ಯೋಜನೆಗಳನ್ನು ಬಹಳ ತೀವ್ರಗತಿಯಲ್ಲಿ ಮುಗಿಸುವಂಥ ವಿಷಯ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದ ಲೆಕ್ಕಾಚಾರದ ಪ್ರಕಾರವೇ ಕಾವೇರಿ ಜಲಾನಯನ ಕೆಲಸವನ್ನು ಮುಗಿಸುವುದಕ್ಕೆ 1600 ಕೋಟಿ ರೂಪಾಯಿಗಳು ಬೇಕು. ಕೃಷ್ಣಾ ಜಲಾನಯನದ ಎಲ್ಲಾ ಕೆಳಸವನ್ನು ಮುಗಿಸುವುದಕ್ಕೆ ಸುಮಾರು 3600 ಕೋಟಿ ರೂಪಾಯಿಗಳು ಬೇಕು. ಇದನ್ನು, ಯಾವ ಮೂಲಗಳಿಂದ ಇದಕ್ಕೆ ಬೇಕಾದಂಥ ಹಣ ಸಂಗ್ರಹಣೆ ಮಾಡಿ. ಕಾವೇರಿ ವಿವಾದದಲ್ಲಿ, ತಜ್ಞರಾದ ಶ್ರೀಮಾನ್ ವೀರಪ್ಪಮೊಯಿಲಿಯವರು,

ಶ್ರೀ ಎಂ. ವೀರಪ್ಪಮೊಯಿಲಿ: ನಾವು ಬೇರೆ ವಿಷಯ ಮಾತನಾಡುತ್ತಿದ್ದೆವು.

ಶ್ರೀ ಆರ್. ವಿ. ದೇಶಪಾಂಡೆ: ಆ ಕೆಲಸ ಮಾಡಿದರೆ ನೀವು ಹೊರಟುಹೋಗುತ್ತೀರಿ.

PROF. M.D. NANJUADASWAMY:- Madam Speaket, I was really just satisfied with whatever little attendance, but even those present were not hearing to the bebate..

MADAM D EPUTY SPEAKER:- They are taking down the notes...

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಕೃಷ್ಣಾ ಜಲಾನಯನಕ್ಕೆ 3600 ಕೋಟಿ ರೂಪಾಯಿಗಳು ಬೇಕು. ಕಾವೇರಿ ಜಲಾನಯನಕ್ಕೆ 1600 ಕೋಟಿ ರೂಪಾಯಿಗಳು ಬೇಕು. ಆ ಹಣವನ್ನು ಎಲ್ಲಿಂದ ಸಂಗ್ರಹಣೆ ಮಾಡುತ್ತೀರಿ? ಯಾವಾಗ ಈ ಕೆಲಸವನ್ನು ಮುಗಿಸುತ್ತೀರಿ? ಇದರ ಬಗ್ಗೆ ಸ್ಪಷ್ಟವಾದ ಕಾರ್ಯಕ್ರಮ ನಮ್ಮ ರಾಜ್ಯಪಾಲರ ಭಾಷಣದಲ್ಲಿ

ಇಲ್ಲ. ಕಾವೇರಿ ಜಲಾನಯನದ ಯೋಜನೆಗಳಿಗೆ ಕೇಂದ್ರದ ಪರವಾನಿಗೆ ಸಿಕ್ಕಿಲ್ಲ. ಎಂದರೆ ಏನು ಅರ್ಥ? ನಮ್ಮಲ್ಲಿ ಏನು ಹಣ ಇದೆ, ಆ ಹಣವನ್ನು ಉಪಯೋಗಿಸಿ ಅದನ್ನು ಪೂರೈಸಬೇಕು. ಈ ಕೃಷ್ಣಾ ಜಲಾನಯನಕ್ಕೆ ನಮಗೆ ವಿಶ್ವ ಬ್ಯಾಂಕ್‌ನಿಂದ ಎಷ್ಟು ಹಣ ಬರುತ್ತದೆಯೋ ಅದು ಸಾಲುವುದಿಲ್ಲ. ಮತ್ತೆ ನೀವು ವಿಶ್ವಬ್ಯಾಂಕ್‌ನ್ನು ಸಂಪರ್ಕ ಮಾಡಿ ಅವರಿಂದ ಹಣಪಡೆಯುವಂಥಾದು ಬಹಳ ವಿಳಂಬವಾದ ವಿಚಾರ. ಆ ಕಾರಣ ಈ 8 ವರ್ಷದೊಳಗೆ ಈ ಯೋಜನೆಗಳನ್ನು ಯಾವ ರೀತಿ ಸಂಪನ್ಮೂಲ ಸಂಗ್ರಹಣೆ ಮಾಡಿ ಪೂರೈಕೆ ಮಾಡಬೇಕೆಂಬುದರ ಬಗ್ಗೆ ಸ್ಪಷ್ಟವಾದ ಕಾರ್ಯಕ್ರಮ ಸರ್ಕಾರ ಹಾಕುತ್ತದೆಯೇ? ಅದಕ್ಕಾಗಿ ಸದನದ ಹೊರಗಡೆ ಕೆಲವು ಸಲಹೆಗಳನ್ನು ಕೊಟ್ಟೆ. ಇವೇನು ಹೊಸ ವಿಚಾರ ಅಲ್ಲ. ಹಳೆಯ ವಿಚಾರಗಳೇ.

ಹಿಂದೆ ನಮ್ಮದೇ ಸರ್ಕಾರ ಮಾಡಿದೆ. ಅದನ್ನು ನಾನು ನೆನಪು ಮಾಡಿಕೊಡುತ್ತೇನೆ. 1957ನೇ ಇಸವಿಯಲ್ಲಿ ರಾಜ್ಯದ ಪುನರ್ ವಿಂಗಡಣೆ ಆದ ಸ್ವಲ್ಪ ಕಾಲದಲ್ಲಿ ಕರ್ನಾಟಕದಲ್ಲಿ ಬರಗಾಲ ಇತ್ತು. ಆಗ ಸನ್ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಬರಗಾಲ ಬಂದ ಕೂಡಲೇ ಒಂದು ಪ್ರಕಟಣೆ ಮಾಡಿದರು. ಎಲ್ಲಾ ಸರ್ಕಾರೀ ನೌಕರರ ವೇತನದಲ್ಲಿ ಶೇಕಡಾ 10 ಭಾಗ ಕಡಿತ ಮಾಡಿದರು. ಮಾಡುವಂಥ ಧೈರ್ಯ ಅವರಿಗೆ ಇತ್ತು. ಈಗ ಪ್ರಧಾನ ಮಂತ್ರಿಗಳು ಪ್ರಕಟಣೆ ಮಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳೂ ಪ್ರಕಟಣೆ ಮಾಡಿದ್ದಾರೆಂದು ನೆನಪು. ನಮ್ಮ ಸಂಬಳದಲ್ಲೂ 10 ಪರ್ಸೆಂಟ್ ಕಡಿತ ಮಾಡಿಕೊಳ್ಳಬೇಕು. ಸಚಿವರುಗಳೂ ಕಡಿತ ಮಾಡಿ ಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದಾರೆ ಎಂದು ಕಾಣುತ್ತದೆ. ಇದೇ ಸಲಹೆಯನ್ನು ನಾನು ಮಾಡಿದ್ದುದು. ಎಲ್ಲಾ ಶಾಸಕರ ಸಂಬಳದಲ್ಲಿ ಶೇಕಡಾ 10 ಭಾಗ ಕಡಿತ ಮಾಡಬೇಕು. ಅದೇ ರೀತಿಯಾಗಿ, ಸರ್ಕಾರೀ ನೌಕರರ ಸಂಬಳ ಮತ್ತು ವಿಶ್ರಾಂತಿ ವೇತನದಲ್ಲೂ ಕಡಿಮೆ ಮಾಡಬೇಕು. ವಿಶ್ರಾಂತಿ ವೇತನದಲ್ಲಿ ಕಡಿತ ಮಾಡಬೇಕೆಂದು ಆಗ ಹೇಳಿರಲಿಲ್ಲ, ಏಕೆ ಸೇರಿಸಿದೆ ಎಂದು ಆ ನಂತರ ಹೇಳುತ್ತೇನೆ. ವಿಶ್ರಾಂತಿ ವೇತನದಲ್ಲೂ ಕಡಿತ ಮಾಡಬೇಕು. ನಾನು ಕೊಡುತ್ತಾ ಇರುವ ಸಲಹೆ ಕಡಿತ ಮಾಡುವುದು. ಈ ಕಡಿತ ಆದ ಹಣವನ್ನು ನೀರಾವರಿ ಬಾಂಡ್ ಎಂದು ಪರಿಗಣಿಸಬಹುದು. ಇದನ್ನು ನಾನು ಸದನದ ಹೊರಗಡೆ ಹೇಳಿದ ಕೂಡಲೇ ಸರ್ಕಾರೀ ನೌಕರರ ಸಂಘದವರು ಪ್ರತಿಭಟಿಸಿದರು. ಆ ಕಾರಣ ಸರ್ಕಾರಿ ನೌಕರರ ಸಂಘದವರಿಗೆ ಸಭಾಧ್ಯಕ್ಷರು ಅನುಮತಿ ಕೊಟ್ಟರೆ ಸ್ವಲ್ಪ ಕಿವಿ ಮಾತು ಹೇಳಬೇಕಾದ ಅವಶ್ಯಕತೆ ಇದೆ. ಈ ಸರ್ಕಾರಿ ನೌಕರರು ಯಾರು ಇದ್ದಾರೆ ಅವರೂ ಈ ರಾಜ್ಯದ ಜನ ಅಲ್ಲವೇ ಎಂಬುದು ಮೊದಲು ತೀರ್ಮಾನ ಆಗಬೇಕು. ಈ ಸರ್ಕಾರಿ ನೌಕರರು ಸಮಾಜದ ಒಂದು ಭಾಗ ಹೌದೋ ಅಲ್ಲವೋ ಎಂದು ತೀರ್ಮಾನ ಆಗಬೇಕು. ಏಕೆಂದರೆ ನೀರಾವರಿಯ ಫಲಾನುಭವಿಗಳು ಕೇವಲ ರೈತರು ಅಲ್ಲ, ನೀರಾವರಿಯ ಫಲಾನುಭವಿಗಳು ಇಡೀ ರಾಜ್ಯದ ಜನ. ಇದು ನಾನು ಒಬ್ಬ ರೈತನಾಗಿ ನರ್ಕಾರಿ ನೌಕರರಿಗೆ ಹೇಳುವ ಮಾತು. ಸರ್ಕಾರಿ ನೌಕರರು ಏನು ಊಟ ಮಾಡುತ್ತಿದ್ದಾರೆ, ಏನು ಅನ್ನ ತಿನ್ನುತ್ತಿದ್ದಾರೆ ಅದರಲ್ಲಿ ಪ್ರತಿ ಒಂದು ಕೆ. ಜಿ. ಅಕ್ಕಿಯಲ್ಲಿ ನಾನೂರು ಗ್ರಾಮ್ ಅಕ್ಕಿ ಲೆವಿ ಅಕ್ಕಿ ರೈತರು ಕೊಡುತ್ತಾರೆ. ಆ ಲೆವಿ ಅನ್ನವನ್ನು ನೀವು ಊಟ ಮಾಡುತ್ತೀರಿ. ಅದೇ ರೀತಿ ಪ್ರತಿ ಕೆ. ಜಿ. ಸಕ್ಕರೆಯಲ್ಲಿ 450 ಗ್ರಾಮ್ ಲೆವಿ ಸಕ್ಕರೆ ತಿನ್ನುತ್ತಿದ್ದೀರಿ. ಇದನ್ನು ಸರ್ಕಾರಿ ನೌಕರರು ನೆನಪು ಇಟ್ಟು ಕೊಳ್ಳಬೇಕು. ಅದೇ ರೀತಿ ವಿಶ್ರಾಂತಿ ವೇತನದಲ್ಲಿ ಶೇಕಡ 10 ಭಾಗ ಕಡಿತ ಮಾಡಬೇಕು ಎಂದು ಹೇಳುತ್ತಿದ್ದೇನೆ ಒಬ್ಬ ರೈತನಾಗಿ. ನನಗೂ ಸಂವಿಧಾನ ಗೊತ್ತಿದೆ. ಸಂವಿಧಾನದ ಅಡಿಯಲ್ಲಿ ನನಗೆ ಏನು ವಿಶ್ರಾಂತಿ ವೇತನವನ್ನು ಕೊಟ್ಟಿದ್ದೀರಿ, ನಮಗೆ ಏನು ವಿಶ್ರಾಂತಿ ವೇತನ ಸಿಗುತ್ತದೆ ಅಂದರೆ ಓಲ್ಡ್ ಏಜ್ ಪೆನಷನ್. ಅದನ್ನು ನಾನು ಓದಿ ಹೇಳುತ್ತೇನೆ. ನೀವು ನನಗೆ ವೃದ್ಧಾಪ್ಯ ವೇತನ ಕೊಡುವುದು 60 ವರ್ಷಕ್ಕೆ. 55 ವರ್ಷ ಈ ದೇಶಕ್ಕೆ ಸೇವೆ ಸಲ್ಲಿಸಿರುತ್ತೇನೆ. ನನಗೆ ಎಷ್ಟು ಪೆನ್‌ಷನ್ ಕೊಡುತ್ತೀರಿ? ಈಚೆಗೆ 75 ರೂಪಾಯಿ ಕೊಡುತ್ತೀರಿ. ಅದು ಯಾವಾಗ ಕೊಡುತ್ತೀರಿ? He or She should have no relations of the following category:-

1) Son or son's, son who is 20 years or more in age.

2) He or she should have no husband or wife.

ನನಗೆ ಗಂಡ ಇದ್ದರೆ ವಿಶ್ರಾಂತಿ ವೇತನ ಇಲ್ಲ. ಹೆಂಡತಿ ಇದ್ದರೆ ವಿಶ್ರಾಂತಿ ವೇತನ ಇಲ್ಲ, ಅಥವಾ ಮಗ ಇದ್ದರೆ ವಿಶ್ರಾಂತಿ ವೇತನ ಇಲ್ಲ, ಮಗನ ಮಗ ಇದ್ದರೆ ವಿಶ್ರಾಂತಿ ವೇತನ ಇಲ್ಲ, ನನಗೆ ಸಿಗುವ 75 ರೂಪಾಯಿಗಳ ವಿಶ್ರಾಂತಿ ವೇತನವು ಮೇಲಿನ ಕಾರಣಗಳಿಗಾಗಿ ನನಗೆ ಸಿಗುವುದಿಲ್ಲ. ನಾನು ಈ ಕಾನೂನನ್ನು ಕೆಟ್ಟ ಕಾನೂನು ಎಂದು ಹೇಳುವುದಿಲ್ಲ. ಪಾಪ, ತಮಗೂ ಹಣಕಾಸಿನ ತೊಂದರೆ ಇದೆ. ಆ ಕಾರಣಕ್ಕಾಗಿ ಇಂಥ ಒಂದು ವೃದ್ಧಾಪ್ಯ ವೇತನದ ನೀತಿಯನ್ನು ತಂದಿದ್ದೀರಿ. ನಾನು ಇದನ್ನು ಬಹಳ ಅತ್ಯುತ್ತಮವಾದ ವ್ಯವಸ್ಥೆ ಎಂದು ಕರೆಯುತ್ತೇನೆ. ಆದರೆ ನನಗೆ ನಮ್ಮ ಸಂವಿಧಾನದಲ್ಲಿ ಆರ್ಟಿಕಲ್ 14 ಇದೆ ಎಂಬುದು ಗೊತ್ತಿದೆ. There is Article 14 in the Indian Constitution. This law should be applied to all citizens in India. ಸರಕಾರಿ ನೌಕರರಿಗೂ ಇದೇ ವಿಶ್ರಾಂತಿ ವೇತನದ ನಿಯಮವನ್ನು ಜಾರಿಗೆ ತರಬೇಕು. ಒಬ್ಬ ಸರಕಾರಿ ನೌಕರನಿಗೆ ಹೆಂಡತಿ ಇದ್ದರೆ ಪೆನ್‌ಶನ್ ಇಲ್ಲ, ಒಬ್ಬ ಸರಕಾರಿ ನೌಕರನಿಗೆ ಮಗ ಇದ್ದರೆ ಪೆನ್‌ಶನ್ ಇಲ್ಲ. ಹೀಗೆ ಆರ್ಟಿಕಲ್ 14 ರ ಪ್ರಕಾರ ನಿಮಗೆ ಧೈರ್ಯ ಇದ್ದರೆ ಈ ಕಾನೂನನ್ನು ಮಾಡಿ. ಇಲ್ಲವಾದರೆ ನನಗೇನು ವೃದ್ಧಾಪ್ಯ ವೇತನವನ್ನು ಕೊಟ್ಟಿದ್ದೀರಲ್ಲ ಅದನ್ನು ಕಸಿದು ಬಿಡಿ. ಹೀಗೆ ಎರಡರಲ್ಲಿ ಒಂದನ್ನು ತಾವುಗಳು ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರೊ: ನಂಜುಂಡಸ್ವಾಮಿಯವರು ಸರಕಾರಿ ನೌಕರರ ಬಗ್ಗೆ ಮಾತನಾಡುತ್ತಾ ವೇತನದಲ್ಲಿ 10 ಪರ್ಸೆಂಟ್‌ನಷ್ಟು ಕಡಿತ ಮಾಡಬೇಕೆಂದು ಹೇಳುತ್ತಾ ಇದ್ದಾರೆ. ತಾವುಗಳು ಹೇಳುವುದು ನಿಜ. ಸಾಮಾನ್ಯ ರೈತರು ಬಡವರು ಇಂದು ಸರಕಾರಿ ಕಚೇರಿಗಳಲ್ಲಿ ಹೋದರೆ ಸರಿಯಾಗಿ, ಪ್ರಾಮಾಣಿಕವಾಗಿ ಅವರ ಕೆಲಸ ಅಲ್ಲಿ ಆಗುತ್ತಾ ಇಲ್ಲ, ಇದು ನಿಜ. ಸರಕಾರಿ ನೌಕರರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು, ಇಲ್ಲವಾದರೆ ಜನ ಸಾಮಾನ್ಯರಿಗೆ ಕಷ್ಟವಾಗುತ್ತದೆ. ಈ ಬಗ್ಗೆ ಅವರುಗಳಿಗೆ ಎಚ್ಚರಿಕೆಯನ್ನು ಕೊಡಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಸಾಮಾನ್ಯ ಅಧಿಕಾರಿಗಳು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಮೂರು ಸಾವಿರ ರೂಪಾಯಿಗಳ ವೇತನವನ್ನು ಪಡೆದುಕೊಂಡು ಕೂಡ ಜೀವನ ಮಾಡುವುದು ಕಷ್ಟವಾಗಿರುವಾಗ ಅವರ ವೇತನದಲ್ಲಿ ಕಡಿತ ಮಾಡುವುದರಿಂದ ಅವರು ಜೀವನ ಮಾಡುವುದಾದರೂ ಹೇಗೆ? ಅದೇ ಕಳೆದ ಒಂದೂವರೆ ವರ್ಷದಲ್ಲಿ ಕಾಂಟೆಸ್ಸಾ ಕಾರುಗಳಿಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಈ ಜನರು, ಕೆಲವು ಕಡೆಗಳಲ್ಲಿ ಕೋಟಿಗಟ್ಟಲೆ ಲೂಟಿಯಾಗಿ ಹೋಗುವುದಕ್ಕೆ ಬಿಟ್ಟಿದ್ದಾರೆ ಅಂಥವರನ್ನು ಸ್ವಲ್ಪ ಬಿಗಿ ಮಾಡಿದ್ದರೆ ಸಾಕಾಗುತ್ತದೆ. ಸರಕಾರಿ ನೌಕರರ ವೇತನ ಕಡಿತ ಮಾಡಬೇಕಾಗಿಲ್ಲ. ಅದರ ಬದಲು ಪ್ರಾಮಾಣಿಕವಾಗಿ ಕೆಲಸ ಮಾಡಲು ಆಗ್ರಹ ಮಾಡಬಹುದು. ಎಲ್ಲೊ ಒಂದೈದು ಪರ್‌ಸೆಂಟ್‌ನಷ್ಟು ದೊಡ್ಡ ಭ್ರಷ್ಟ ಅದಿಕಾರಿಗಳು ಅಪ್ರಮಾಣಿಕತೆಯಿಂದ, ಅದಕ್ಷತೆಯಿಂದ ಭ್ರಷ್ಟರಾಗಿದ್ದರೆ ಅಂಥವರನ್ನು ಪತ್ತೆ ಹಚ್ಚಿ ಚಾವುಟಿ ಏಟು ಕೊಟ್ಟು ದಾರಿಗೆ ತರಬೇಕು. ಆ ಕೆಲಸವನ್ನು ಇವೊತ್ತು ಮಾಡಬೇಕು, ಎಲ್ಲಾ ಸರಕಾರಿ ನೌಕರರ ವೇತನ ಕಡಿತ ಮಾಡುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ನಮ್ಮ ಬಿಜೆಪಿ ನಾಯಕರಿಗೆ ಸರಕಾರಿ ನೌಕರರ ಮೇಲೆ ಬಹಳ ಅನುಕಂಪ ಇದೆ. ಸರಕಾರಿ ನೌಕರರ ಸಂಘದವರೂ ಕೂಡ ಕನ್‌ಸೂಮರ್ಸ್ ಪ್ರೈಸ್ ಇಂಡೆಕ್ಷನ್ ಮಾತನ್ನು ಆಡಿದ್ದಾರೆ. ಅವರು ನನ್ನ ಹೇಳಿಕೆಗೆ ವಿರುದ್ಧವಾಗಿ ಮಾತನಾಡುವಾಗ 1983-84ರ ಕನ್‌ಸೂಮರ್ಸ್ ಪ್ರೈಸ್ ಇಂಡೆಕ್ಷನ್ ಆಧಾರದ ಮೇಲೆ ಅವರಿಗೆ ಸಂಬಳ ಸಿಗುತ್ತಾ ಇದೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ನನಗೆ ಕನ್‌ಸೂಮರ್ಸ್ ಪ್ರೈಸ್ ಇಂಡೆಕ್ಸ್ ಅಪ್ಲೈ ಆಗುತ್ತಾ ಇದೆಯೇ? ನಾನು ಆರ್ಟಿಕಲ್ 14 ರ ಮೇಲೆ ಮಾತನಾಡುತ್ತಾ ಇದ್ದೇನೆ. Article 14 talks of equality. ನನಗೆ ಯಾರ ಕನ್‌ಸೂಮರ್ಸ ಪ್ರೈಸ್ ಇಂಡೆಕ್ಸ್ ಅನ್ವಯವಾಗುತ್ತಾ ಇದೆ? ನಾನು ಈ ದೇಶದಲ್ಲಿ ಕನ್‌ಸೂಮರ್ ಎಂದು ಪರಿಗಣಿಸುತ್ತಾ ಇಲ್ಲ. ಹಾಗೆ ಈ ಸರಕಾರಗಳು ಮಾಡಿವೆ. ನಾನು ಬೆಳೆದುದಕ್ಕೆ ಯಾವ ಇಂಡೆಕ್ಸ್ ಇದೆ? ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್ ಇದೆ. ಅದು ದಲ್ಲಾಳಿ ಇಂಡೆಕ್ಸ್. ಇಂಥ ವಿಚಾರಗಳನ್ನು ಎಷ್ಟು ಸಾರಿ ಹೇಳಿದರೂ ಈ ಸರಕಾರಗಳ ತಲೆಗೆ ಹೋಗುವುದಿಲ್ಲ. ಇಂಥ ವಿಚಾರಗಳನ್ನು ಈ ಸರಕಾರಗಳು ಮಾಡುತ್ತಿಲ್ಲ. ಆ ಕಾರಣ ನಾನು ಹೇಳುತ್ತಿರುವುದು, ಈ ಸರಕಾರಗಳಿಗೆ ಬೇರೆ ಎಲ್ಲಾ ವಿಚಾರಗಳೂ ಗೊತ್ತಾಗುತ್ತದೆ, ನಾನು ಬೆಳೆದ ಕೂಡಲೇ ಒಂದು ಕಾನೂನು ಮಾಡಿ ನಾನು ಬೆಳೆದ ಮೇಲೆ ಒಂದು ಭಾಗವನ್ನು ಅರ್ಧ ಭಾಗವನ್ನು ಹಾರಿಸಿಕೊಂಡು ಹೋಗುವುದಕ್ಕೆ ಬರುತ್ತದೆ. ಅಂಥ ಕಾನೂನನ್ನು ಮಾಡುವುದಕ್ಕೆ ಬರುತ್ತದೆ. Levyprocurement of Foodgrains Act. ನಾನು ಕೆಲವು ವರ್ಷಗಳ ಹಿಂದೆ ಇದರ ಬಗ್ಗೆ ಹೇಳುತ್ತಾ ಇದ್ದೆ. ಕಳೆದ ನಲವತ್ತು ವರ್ಷಗಳಿಂದ ಲೆವಿ ಅನ್ನವನ್ನು ಸರಕಾರಿ ನೌಕರರು ತಿನ್ನುತ್ತಾ ಇದ್ದೀರಿ, ಆ ಕಾರಣಕ್ಕಾಗಿಯಾದರೂ ನೀವು ಅವರ

ಋಣ ತೀರಿಸಬೇಕು. ಆದ್ದರಿಂದ ನಾವು ಸರಕಾರ ಮಾಡಿದರೆ, ಅಥವಾ ಅಂಥ ವಿವೇಚನೆಯುಳ್ಳ ಸರಕಾರವು ಅಧಿಕಾರಕ್ಕೆ ಬಂದರೆ Levy Procuremet of Salaries Act ಕಾನೂನನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದೇನೆ. ಈಗ ನನಗೆ ಸ್ವಲ್ಪ ವಯಸ್ಸು ಆಗಿರುವುದರಿಂದ ಆ ಮಾತನ್ನು ಆಡುತ್ತಾ ಇಲ್ಲ. ಈಗ 10ಪರ್‌ಸೆಂಟ್ ಕಡಿತ ಮಾಡಿ ಏಕೆಂದರೆ ಅವರ ಹಣ ಎಲ್ಲಿಯೂ ಹೋಗುವುದು ಬೇಡ, ಅವರಿಗೆ ವಾಪಸ್ ಕೊಡೋಣ. 10% of it, convert it into irrigation bonds.

ಈ ಒಂದೇ ಕ್ರಮದಿಂದ 1600 ಕೋಟಿ ರೂ ಬರುತ್ತದೆ. ಅನಂತರ ನಾನು ಕೊಟ್ಟ ಎರಡನೆಯ ಸಲಹೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಎಂದು ಒಂದಾಗಿದೆ. ಅದಕ್ಕೆ ಹೋದ ವರ್ಷ 80 ಕೋಟಿ ಸರ್ಕಾರ ಕೊಟ್ಟಿತ್ತು. 80 ಕೋಟಿಯ ಪೈಕಿ ಕನಿಷ್ಟ 75 ಕೋಟಿ ಕಾಗದದ ಮೇಲೆ ಖರ್ಚಾಗಿದೆ. ಕಣ್ಣಿಗೆ ಕಾಣುವ ಯಾವುದೇ ಕಾರ್ಯಕ್ರಮ ಅಲ್ಲಿ ಆಗಿಲ್ಲ ಅದೇ ಕೆಲಸ ಈ ವರ್ಷವೂ ಆಗುತ್ತದೆ, ಹಾಗಾಗಬಾರದು. ನೀವೇನೂ ಮಾಡಬೇಡಿ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಾಡಬೇಕೆಂದು ನಿಮಗೆ ಮನಸಿದ್ದರೆ 80 ಕೋಟಿ ರೂ ಏನು ತೆಗೆದಿಟ್ಟಿದ್ದೀರಿ ಅದನ್ನು ಸಂಪೂರ್ಣ ನೀರಾವರಿಗಾಗಿ ಖರ್ಚುಮಾಡಿ. 60 ಇತ್ತು, ಬಳ್ಳಾರಿ ಸೇರಿದ ಮೇಲೆ ಅದು 80 ಆಯಿತು. ನಮ್ಮ ಸರ್ಕಾರದ ಮಂತ್ರಿಗಳೇ ಹೇಳಿದ್ದು. ಪೂರ್ಣ ನೀರಾವರಿಗೆ 80 ಕೋಟಿ ಬಳಸುವ ಮೂಲಕ ಬರುವ 8 ವರ್ಷದಲ್ಲಿ 640 ಕೋಟಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಯೊಜನೇಗಳನ್ನು ಮುಗಿಸುವುದಕ್ಕೆ ತಾವು ಬಳಸಬಹುದು. ಮೂರನೆಯದು ನಾವು ಯಾವ್ಯಾವುದೋ ಅನಾವಶ್ಯಕ ಕಟ್ಟಡ ಕಟ್ಟುತ್ತಿದ್ದೀರಿ. ಅವೇನು ತಕ್ಷಣಕ್ಕೆ ಬೇಕಾದ ಕಟ್ಟಡಗಳೇನಲ್ಲ. ಉದಾ: ಪ್ರವಾಸಿ ಮಂದಿರಗಳನ್ನು ಪ್ರತಿವರ್ಷ ಕಟ್ತಾರೆ. ಏಕೆ ಬೇಕು ಅವು ನನಗಂತೂ ಗೊತ್ತಿಲ್ಲ. ನೀವು ಬಿಲ್ಡಿಂಗ್ಸ್‌ಗಾಗಿ ಏನೇನು ಹಣ ಇಡಬೇಕೆಂದಿದ್ದೀರಿ ಮುಂದಿನ ಬಜೆಟ್‌ನಲ್ಲಿ inspection bunglows, including quarters to Government servants ಗ್ರಾಮಲೆಕ್ಕಿಗರಿಗೆ ವಸತಿ, ವೈದ್ಯರಿಗೆ ವಸತಿ ಅಂತ ಕಟ್ಟಿಸಿದೀರಲ್ಲ, ಅದರಲ್ಲಿ ಯಾರಾದರೂ ಇದ್ದಾರೆ ಎಂದು ತಿಳಿದಿದ್ದೀರಾ? ಅವುಗಳಲ್ಲಿ ಒಬ್ಬರೂ ವಾಸ ಮಾಡುತ್ತಿಲ್ಲ. ಅವನ್ನು ಏಕೆ ಕಟ್ಟಿಸ್ತೀರಿ ಮತ್ತೆ? ಕಟ್ಟಡಗಳಿಗಾಗಿ ಆಯವ್ಯಯದಲ್ಲಿ ಏನು ಇಡಬೇಕೂಂತಿದ್ದೀರಿ ಆ ಎಲ್ಲ ಹಣವನ್ನು ನೀರಾವರಿಗೆ ಅಂತ ತೆಗೆದಿಟ್ಟರೆ ಈ ಕೆಲಸವನ್ನು ಬೇಗ ಮುಗಿಸಬಹುದು. ಆಮೇಲೆ ಎಂತೆಂತಹುದೋ ಕಾರ್ಯ ಕ್ರಮಗಳನ್ನು ಹೋದ ವರ್ಷ ಹಾಕಿಕೊಂಡಿರಿ. ಈಗಾಗಲೇ ಅವುಗಳ ಬಗ್ಗೆ ಚರ್ಚೆಯಾಗಿದೆ, ಶುಶ್ರೂಷ ಬಗ್ಗೆ ಅಕ್ಷಯ ಬಗ್ಗೆಯೂ ಚರ್ಚೆಯಾಯಿತೆಂದು ಕಾಣುತ್ತದೆ, ಆರಾಧನಾ ಬಗ್ಗೆಯೂ ಚರ್ಚೆಯಾಯಿತು ಇವನ್ನು ಕಾರ್ಯಕ್ರಮಗಳು ಎಂದು ಏಕೆ ಕರೆಯಬೇಕೋ ನನಗಂತೂ ಗೊತ್ತಾಗ್ತಾಇಲ್ಲ. ಜೊತೆಗೆ ಆರಾಧನಾ ಅನ್ನುವ ಕಾರ್ಯಕ್ರಮ ರಾಜ್ಯದ ಹಣದ ಮೂಲಕ ಆಗಬೇಕೇ ಎನ್ನುವುದು ಪ್ರಶ್ನೆ ತೀರ್ಮಾನವಾಗಬೇಕು. ತಮ್ಮ ಡೆಫಿನಿಷನ್ ಆಫ್ ಸೆಕ್ಯುಲರಿಸಂ ಏನು ಅನ್ನೋದು ನನಗೆ ಗೊತ್ತಾಗ್ತಾ ಇಲ್ಲ, ಅನಂತಕೃಷ್ಣಾರಿಗೆ ಗೊತ್ತಿದ್ದರೆ ಹೇಳಬೇಕು. ಈ ಸರ್ಕಾರದ there should be a strict wall of separation between the State and religion, that is the definition of secularism. ಧರ್ಮಾತೀತತೆ ಎಂದು ಏನು ಹೇಳುತ್ತೇವೆ ಅದರ ವಿಶ್ಲೇಷಣೆ ಏನು? 'ಆರಾಧನಾ' ಸರ್ಕಾರದ ಹಣದಿಂದ ನಡೆಯಬೇಕೇ? ಅಥವಾ I know, there should be a strict wall of separation betweeen religion and the State ಎಲ್ಲ ಧರ್ಮದವರಿಗೂ ಬೇಜಾರಾಗಬಹುದು ನಾನು ಮಾತನಾಡಿದರೆ. Scrap this Aradhana programme. ಖಮರುಲ್ ಇಸ್ಲಾಂ ನಗುತ್ತಿದ್ದಾರೆ. ಅವರೇನು ಬೇಜಾರು ಮಾಡಿಕೊಂಡಿಲ್ಲ, ಸ್ಕ್ರಾಪ್ ಮಾಡಬಹುದಲ್ಲ. ಸ್ಕ್ರಾಪ್ ಮಾಡಬೇಕು. ನಮ್ಮ ಮನೆ ಮೊದಲು ನಾವು ತೊಳ್ಕೋಳೋಣ.

SRI QUAMARUL ISLAM:- As per law, secularism means, we should do justice to all the religions.

೪.೦೫ ಪಿ.ಎಂ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮತ್ತೆ ಈ ಕಾವೇರಿ ಕೃಷ್ಣ ಬೇಸಿನ್‌ನಿಂದ ಕರ್ನಾಟಕಕ್ಕೆ ಬಂದಿರುವಂಥ ಖಾಸಗಿ ಕ್ಷೇತ್ರದ ಕೈಗಾರಿಕೋದ್ಯಮಗಳು ಮತ್ತೆ ವಾಣಿಜ್ಯೋದ್ಯಮಿಗಳು ಈ ರಾಜ್ಯದ ಒಂದು ಭಾಗವೋ ಅಲ್ಲವೋ ಎನ್ನುವುದು ಒಂದು ತೀರ್ಮಾನವಾಗಬೇಕು. ಇರಿಗೇಷನ್ ಬಾಂಡ್‌ಗಳನ್ನು ತಾವು ಕೇವಲ ರೈತರಿಂದ ಪಡೆಯುತ್ತೇವೆ ಎಂದರೆ ನಿಮಗೆ ಒಂದು ಭ್ರಮೆ ಎಂದು ನಾನು ಹೇಳಬೇಕಾಗುತ್ತದೆ. ಈ ಖಾಸಗೀ ಕ್ಷೇತ್ರದ ಕೈಗಾರಿಕೋದ್ಯಮಿಗಳು

ಮತ್ತೆ ವಾಣಿಜ್ಯೋದ್ಯಮಿಗಳು ಏನು ಇದ್ದಾರೆ, ಅವರಿಂದ ನಾವು ನೀರಾವರಿ ಬಾಂಡ್‌ಗಳನ್ನು ಖರೀದಿ ಮಾಡುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. They are also beneficiaries of these irrigation projects and hydro electric projects. ಇಷ್ಟನ್ನು ಮಾಡಿದಮೇಲೆ ನಾನು ಒಬ್ಬ ರೈತನಾಗಿ ನನಗೆ ವಿಶ್ವಾಸ ಬರುತ್ತದೆ. ಈ ಸರ್ಕಾರ ಏನು ನನ್ನನ್ನು ನೀರಾವರಿ ಬಾಂಡನ್ನು ಕೊಂಡುಕೊ ಎಂದು ಕೇಳುತ್ತಿದೆ, ಕೊಂಡುಕೊಳ್ಳೋಣ ಎನ್ನುವ ಮನಸ್ಸು. When these Government servants identifies themselves with the people of this State. ಈ ಸರ್ಕಾರಿ ನೌಕರರು ಯಾವುದೋ ಲೋಕದ ಜನ ಎಂದು ತಿಳಿದಿದ್ದಾರೆ. ಆದರೆ ಅವರಿಗೆ ಮತ್ತೆ ನೆನಪು ಮಾಡಿಕೊಡುತ್ತಿದ್ದೇನೆ, ಇವತ್ತು ಬೆಳಿಗ್ಗೆ ನೀವು ತಿಂದ ಊಟ ಲೆವಿ ಊಟ. ಇವತ್ತು ಬೆಳಿಗ್ಗೆ ಕುಡಿದ ಕಾಫಿ ಲೆವಿ ಸಕ್ಕರೆಯಲ್ಲೇ ಮಾಡಿದ್ದುದು. ಆ ಕಾರಣ ಸರ್ಕಾರಕ್ಕೆ ನಾನು ಮಾಡಿಕೊಳ್ಳುವ ವಿನಂತಿ ಎಂದರೆ ಈ ಸರ್ಕಾರಿ ನೌಕರರ ಸಂಘದವರನ್ನು ಕರೆಯಿಸಿ ಅವರಿಗೆ ನನ್ನ ಭಾಷೆಯಲ್ಲಿ ತಿಳುವಳಿಕೆಯನ್ನು ಕೊಡುವುದಕ್ಕೆ ನಿಮಗೆ ಸಾಧ್ಯವಾಗದಿದ್ದರೆ ನಿಮ್ಮ ಭಾಷೆಯಲ್ಲೇ ತಿಳುವಳಿಕೆಯನ್ನು ಕೊಟ್ಟು ಅವರ ಸಂಬಳದಲ್ಲಿ ಹತ್ತು ಪರ್‌ಸೆಂಟ್ ಕಡಿತ ಮಾಡಿ ಇರಿಗೇಷನ್ ಬಾಂಡ್‌ಗೆ ತೆಗೆದುಕೋಳ್ಳುತ್ತೇವೆ. ಮತ್ತೆ ವಾಪಸ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ತಾವು ಹೇಳಿ ಅವರ ಮನ ಒಲಿಸಬೇಕು ಎಂದು ನಾನು ವಿನಂತಿ ಮಾಡುತ್ತೇನೆ. ಎರಡನೆಯ ವಿಷಯ ಬಹಳ ಮುಖ್ಯವಾದ ವಿಷಯ. ನಮ್ಮ ಸರ್ಕಾರದವರು ರಾಜ್ಯಪಾಲರ ಭಾಷಣದ ಮೂಲಕ ಸಂವಿಧಾನಕ್ಕೆ ಅಪಚಾರವನ್ನು ಎಸಗಿದ್ದಾರೆ. Who told that our State is only a welfare State. It is a socialist State and also a welfare State.This Government has failed to recognise that our State is a socialist State besides a welfare State.

ತಾವು ವೆಲ್‌ಫೇರ್ ಎಂದು ಒಂದು ನೆಪವನ್ನು ಹೂಡಿ ಸಮಾಜವಾದಿ ರಾಷ್ಟ್ರ ಎಂದು ನಾವು ಏನು ಹೇಳುತ್ತೇವೆ, ಅದನ್ನು ಸೋಲಿಸುವಂಥ ಪ್ರಯತ್ನವನ್ನು ತಾವು ಮಾಡಬಾರದು. ಆ ನೆಪವನ್ನು ಹೂಡಿ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂಥ ಉದ್ಯಮಗಳನ್ನು ಖಾಸಗೀಕರಣ ಮಾಡುವಂಥ ಪ್ರಯತ್ನವನ್ನು ತಾವು ಮಾಡಬೇಡಿ. ಸಾರ್ವಜನಿಕ ಉದ್ಯಮಗಳಿಗೆ ಖಾಯಿಲೆ ಬರುವುದಕ್ಕೆ ಕಾರಣ ಮತ್ತೇನೂ ಅಲ್ಲ, ಹೊಣೆಗಾರಿಕೆ ಇಲ್ಲದಂಥ ಅಧಿಕಾರಿಗಳಿಗೆ ನೀವು ಈ ಉದ್ಯಮಗಳನ್ನು ವಹಿಸುವುದು, ಆಡಳಿತ ಕ್ರಮದಲ್ಲಿ ಹೊಣೆಗಾರಿಕೆಯ ಅಂಶವನ್ನು ಸೇರಿಸದೇ ಇರುವಂಥದ್ದು ಮೂಲ ಕಾರಣ. ಆ ಕಾರಣಕ್ಕಾಗಿ ಈಚೆಗೆ ಮಂಗಳೂರು ಫರ್ಟಿಲೈಜರ್ಸನ್ನು ಮಾರಿದಿರಿ. ಅದೇನು ಮಲ್ಯರವರು ತೆಗೆದುಕೊಂಡ ಕೂಡಲೇ ಅದು ಲಾಭದಾಯಕವಾಯಿತು. ಏಕೆ? ವಿಶ್ವೇಶ್ವರಯ್ಯ ಸ್ಟೀಲ್ ಇಂಡಸ್ಟ್ರೀಸ್‌ನ್ನು ಮಾರಿದಿರಿ. ಒಂದು ವರ್ಷದೊಳಗೆ ಸ್ಟೀಲ್ ಅಥಾರಿಟಿ ತೆಗೆದುಕೊಂಡು ಮೇಲೆ 30 ಕೋಟಿ ರೂಪಾಯಿ ಲಾಭ ಮಾಡಿದೆ, ಏಕೆ? ಇದಕ್ಕೆ ಕಾರಣವೇನು? ಇದು ತಕ್ಷಣ ಗುಣವಾಗುವುದಕ್ಕೆ ಕಾರಣವೇನು? ಈ ಕಾರ್ಖಾನೆಗಳು ಗುಣವಾಗುವುದಕ್ಕೆ ಕಾರಣಗಳೇನು? ಆರೋಗ್ಯವಂತ ಆಡಳಿತ ಬಂದಿದ್ದಕ್ಕೆ ಆ ಘಟಕಗಳಿಗೆ ಆರೋಗ್ಯ ಬಂತು. ನೀವು ರೋಗ ಪೀಡಿತ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಟ್ಟರೆ ಆ ಘಟಕಗಳಿಗೂ ರೋಗ ಬರುತ್ತದೆ. ಇದರ ಬಗ್ಗೆ ನಾವು ಕೂಲಂಕಷವಾಗಿ ಅಧ್ಯಯನವನ್ನು ಮಾಡುತ್ತಿದ್ದೇವೆ. ಒಂದು ಜಂಟಿ ಸಮಿತಿಯನ್ನು ಮಾಡಿದ್ದಾರೆ. ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಬಿಲ್ ಬಗ್ಗೆ ತಾವೇ ಒಂದು ಜಂಟಿ ಸಮಿತಿಯನ್ನು ಮಾಡಿದ್ದೀರಿ. ಎರಡೂ ಸದನದ್ದು, ಅದರಲ್ಲಿ ಯಾವ ರೀತಿ ಇದನ್ನು ಮಾರ್ಪಾಡು ಮಾಡಬೇಕು, ಸರ್ವೀಸ್ ರೂಲ್ಸ್‌ಗೆ ಯಾವ ರೀತಿ ಬದಲಾವಣೆ ಮಾಡಬಹುದು, ಅದೆಲ್ಲಾ ಚರ್ಚೆ ಇನ್ನೂ ನಡೆಯುತ್ತಿದೆ. ಆ ಎಲ್ಲಾ ಕೆಲಸ ನಡೆದಮೇಲೆ ನಾವು ಮಾಡಬೇಕಾಗಿರುವ ಹೊಣೆಗಾರಿಕೆಯ ಅಂಶವನ್ನು ಕರ್ನಾಟಕ ಸರ್ಕಾರಿ ನೌಕರರ ಸೇವಾ ನಿಯಮಾವಳಿಗಳಲ್ಲಿ ಅಳವಡಿಸಬೇಕು. The solution for the sick public sector undertakings is not privatisation. It is introducing professional management. Because VISL was professionally managed during the last year, with the result it could make a profit of Rs.30 crore. ಆ ಕೆಲಸವನ್ನು ದಯವಿಟ್ಟು ಮಾಡಿ. ನಮ್ಮ ರಾಷ್ಟ್ರ ಬರೀ ಕಲ್ಯಾಣ ರಾಜ್ಯ ಅಲ್ಲ. ನಾವಿನ್ನು ಸಮಾಜವಾದಿ ರಾಜ್ಯವಾಗಿಯೇ ಉಳಿದಿದ್ದೇವೆ. ನೀವು ಇನ್ನೊಂದು ನೆಪ ಹೇಳಬಹುದು. ರಷ್ಯಾದಲ್ಲಿ ಸಮಾಜವಾದ ಸೋಲಿತು ಅಂತ. ರಷ್ಯದಲ್ಲಿ ಇದ್ದಿದ್ದು ಸಮಾಜವಾದ ಅಲ್ಲ. There is a lot of difference between communism and socialism.

ಆ ಚರ್ಚೆ ಮಾಡುತ್ತಾ ಹೋದರೆ ನಮ್ಮ ಸಭಾಧ್ಯಕ್ಷಣಿಯವರು ಬೆಲ್ ಹೊಡೆಯುತ್ತಾರೆ. ಆ ಚರ್ಚೆಗೆ ನಾನು ಹೋಗುವುದಿಲ್ಲ. ಮಾನ್ಯ ಅನಂತಕೃಷ್ಣರವರು ಹೊರಟುಹೋಗಿದ್ದಾರೆ. ಅವರು ಇದ್ದಿದ್ದರೆ ಅವರು ಚರ್ಚೆಗೆ ಸೇರಬಹುದಾಗಿತ್ತು. But the failure of socialism in Russia was because of various other reasons, because of the over-centralisation and the resultant inefficeincy. ಆ ಕಾರಣಕ್ಕೆ ಸಮಾಜವಾದದ ತತ್ವದಲ್ಲಿ ದೋಷ ಇದೆ ಅಂತ ಅಲ್ಲ ಸಮಾಜವಾದದ ಅನುಷ್ಠಾನದಲ್ಲಿ ದೋಷ ಇತ್ತಲ್ಲಾ ಅಷ್ಟೆ. ಆ ಕಾರಣ ಈ ನೆಪ ಮಾಡಿ ಖಾಸಗೀಕರಣಕ್ಕೆ ಕೈ ಹಾಕಬೇಡಿ ಎಂದು ನಾನು ಈ ಸಂದರ್ಭದಲ್ಲಿ ಎಚ್ಚರಿಕೆಯನ್ನು ಕೊಡುತ್ತೇನೆ. ಸಾರ್ವಜನಿಕ ಉದ್ದಿಮೆಗಳಲ್ಲಿ, ಈ ಸಾರಿಗೆ ಸಂಸ್ಥೆಯನ್ನು ರಾಷ್ಟ್ರೀಕರಣ ಮಾಡುವಂತೆ ಮಾತನಾಡುತ್ತಿದ್ದಾರೆ. ಇಲ್ಲಿ ನಮ್ಮ ಸದಸ್ಯರು ಮಾಡಿ ಎಂದು ಸಲಹೆ ಕೊಡುತ್ತಿದ್ದಾರೆ. ಅಲ್ಲಿ ಕೂಡ ಅಷ್ಟೆ. Professional management of KSRTC and decentralization of KSRTC, ಇವು ಪರಿಹಾರ ಆಗುತ್ತವೇ ಹೊರತು ಖಾಸಗೀಕರಣ ಅಲ್ಲ. ನೀವು ಏನಾದರೂ ಖಾಸಗೀಕರಣಕ್ಕೆ ಕೈಹಾಕಿದರೆ ಕೆಎಸ್ಆರ್‌ಟಿಸಿ ನೌಕರರು ಮತ್ತೆ ರಾಜ್ಯದ ರೈತರು ಒಟ್ಟು ಸೇರಿ ನಿಮ್ಮ ಸರ್ಕಾರವನ್ನು ಉರುಳಿಸುತ್ತಾರೆನ್ನತಕ್ಕ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಖಾಸಗೀಕರಣದ ಬದಲು ಸರ್ಕಾರೀಕರಣ ಅಲ್ಲ, ನಾನು ಹೇಳುತ್ತಿರುವುದು ಸಹಕಾರೀಕರಣ. Nationalistion with people's participation is co-operation. ಈ ರೀತಿಯಾಗಿ ಜನ ಭಾಗವಹಿಸುವ ಮೂಲಕ ನಾವು ನಮ್ಮ ಆರ್ಥಿಕ ಚಟುವಟಿಕೆಯ್ನು ಮುಂದುವರಿಸೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಅಧ್ಯಕ್ಷಣಿಯವರೆ, ನಾನು ತಾವು ಕೊಟ್ಟ ಸಮಯವನ್ನು ಗಮನದಲ್ಲಿಟ್ಟುಕೊಂಡು ರಾಜ್ಯಪಾಲರ ಭಾಷಣಕ್ಕೆ ನಾನು ನನ್ನ ಸಂಪೂರ್ಣ ವಿರೋಧವನ್ನು ಸೂಚಿಸುತ್ತಾ ಕೆಲವು ವಿಚಾರಗಳನ್ನು ಈ ಸಭೆಯ ಮುಂದಿಡಲು ಪ್ರಯತ್ನ ಮಾಡುತ್ತೇನೆ. ರಾಜ್ಯಪಾಲರ ಭಾಷಣಕ್ಕೆ ಯಾವುದೇ ದಿಕ್ಕಿಲ್ಲ. ಕೇವಲ ಪೊಳ್ಳು ಘೋಷಣೆಗಳು ಮತ್ತು ಕಳೆದ ವರ್ಷ ಯಾವ ವಿಚಾರ ಈ ಸರ್ಕಾರ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಲಿಕ್ಕೆ ಪ್ರಯತ್ನ ಮಾಡಿತ್ತು, ಅದೇ ವಿಚಾರ ಪುನಃ ಪ್ರಸ್ತಾಪವಾಗಿದೆ. ಈ ಸರ್ಕಾರಕ್ಕೆ ಅಧಿಕಾರದಲ್ಲಿರುವ ಅಧಿಕಾರ ಯಾವುದೂ ಇಲ್ಲ, ನೈತಿಕವಾಗಿ ಸಂಪೂರ್ಣ ಅಧಿಕಾರವನ್ನು ತಾವು ಕಳೆದುಕೊಂಡಿದ್ದೀರಿ. ಇವತ್ತು ತಮ್ಮ ಆಡಳಿತ ಸಂಪೂರ್ಣ ಕುಸಿದು ಬಿದ್ದಿದೆ. ಅಧಿಕಾರಿಗಳಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವ ನೈತಿಕ ಧೈರ್ಯ ಉಳಿದಿಲ್ಲ. ಇವತ್ತು ಬೀದಿ ಬೀದಿಯಲ್ಲಿ ಪೇಟೆ ಪೇಟೆಯಲ್ಲಿ ಅಷ್ಟೆ ಅಲ್ಲ ರಾಜ್ಯದ ಅಷ್ಟೇ ಅಲ್ಲ ಈ ದೇಶದ ಪ್ರತಿಯೊಂದು ಮೂಲೆಯಲ್ಲಿ ಸಹ ಇವತ್ತು ಜನ ಮಾತನಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇಷ್ಟೊಂದು ಭ್ರಷ್ಟಾಚಾರದ ಸರ್ಕಾರ ಯಾವುದೂ ಹಿಂದೆ ಬಂದಿರಲಿಲ್ಲ. ಇದರ ಮುಂದೆ ಯಾರೂ ಫೈಟ್ ಮಾಡಿದರೂ ಬರಲಿಕ್ಕೆ ಸಾಧ್ಯವಿಲ್ಲ.

ಅಂಗಡಿಗಳನ್ನು ತೆರೆದಿದ್ದೇವೆ. ಅಲ್ಲಿ ಪ್ರತಿಯೊಂದಕ್ಕೂ ಒಂದು ದರ ನಿಗದಿಯಾಗಿದೆ. ವರ್ಗಾವಣೆಗೆ ಒಂದು ದರ, ಒಬ್ಬ ಅಧಿಕಾರಿ ಒಂದು ಸ್ಥಾನಕ್ಕೆ ಬರಬೇಕಾದರೆ ಒಂದು ದರ, ಆ ಅಧಿಕಾರಿ ಅಲ್ಲಿಯೇ ಉಳಿಯಬೇಕಾದರೆ ಒಂದು ದರ, ವರ್ಷ ಮುಗಿದಾಗ ಅವನನ್ನು ವರ್ಗಾವಣೆ ಮಾಡಬೇಕಾದರೆ ಒಂದು ದರ, ಪ್ರೊಮೋಷನ್ ಕೊಡುವುದಕ್ಕೆ ಒಂದು ದರ. ಹೀಗಾಗಿ ಇವೊತ್ತು ಸಂಪೂರ್ಣವಾಗಿ ಆಡಳಿತ ಕುಸಿದು ಬಿದ್ದಿದೆ. ಭ್ರಷ್ಟಾಚಾರ ಗಗನಕ್ಕೇರಿದೆ. ನನ್ನ ಮಿತ್ರರು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅದನ್ನೆ ಪುನಃ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುತ್ತಿಲ್ಲ. ಅಬ್ಕಾರಿ ದೊರೆಗಳು ಸರ್ಕಾರವನ್ನು ನಡೆಸುತ್ತಿದ್ದಾರೆ. ಕೇವಲ 17ಜನರಿಗೆ ಸಹಾಯ ಮಾಡಬೇಕೆಂದು, ಅವರಿಂದ 38ಕೋಟಿ ರೂಪಾಯಿಗಳ ಬಡ್ಡಿಯನ್ನು ಪಡೆಯುತ್ತಿದ್ದೀರಿ. 42ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಇದರಿಂದ ಸರ್ಕಾರಕ್ಕೆ ನಾಚಿಕೆಯಾಗಬೇಕು. ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಬ್ಯಾಂಕ್ ಗ್ಯಾರಂಟಿಯನ್ನು ಎನ್‌ಕ್ಯಾಷ್ ಮಾಡುವುದು ಬಹಳ ಕಷ್ಟವಾಗುತ್ತದೆ ಎಂದು ಹೇಳಿದರು. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಬ್ಯಾಂಕ್ ಗ್ಯಾರಂಟಿಗಳನ್ನು ಎನ್‌ಕ್ಯಾಷ್ ಮಾಡಿ ಖರ್ಚು ಮಾಡುವುದು ಕಷ್ಟವಾದರೆ, ಬ್ಯಾಂಕಗಳು ದಿವಾಳಿಯಾಗಿವೆಯೇ? ಏನು ಕಷ್ಟವಾಗುತ್ತದೆ? ಕಷ್ಟ ಒಂದೇ, ಏನೆಂದರೆ, ಈ ಸರ್ಕಾರಕ್ಕೆ ಯಾವುದೇ ರೀತಿಯ 'ವಿಲ್' ಇಲ್ಲ ಎನ್ನುವುದು. ಹಾಗಾಗಿ ಇವೊತ್ತು ಈ ಸರ್ಕಾರ ಒಂದು ಕ್ಷಣವೂ ಅಧಿಕಾರದಲ್ಲುಳಿಯುವ ನೈತಿಕ ಅಧಿಕಾರ ಇಲ್ಲ, ಆದರೆ, ನಿಮ್ಮ ಕಡೆಯಲ್ಲಿರುವ ಒಂದು 'ದೈತ್ಯ ಶಕ್ತಿ'ಯಿಂದ ಇವೊತ್ತು ನೀವು ಅಧಿಕಾರದಲ್ಲಿದ್ದೀರಿ. ಸನ್ಮಾನ್ಯ ವೀರೇಂದ್ರ ಪಾಟೀಲ್ ರವರು ಕೆಲವು ಮಾತುಗಳನ್ನು ಆಡಿದ್ದಾರೆ. ಆ ಮಾತನ್ನು ಕೇಳಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕಾಗಿತ್ತು. ಕೇವಲ ನಿಮ್ಮ ಪಕ್ಷದವರು ಎಂದು ನಾನು

ಹೇಳುತ್ತಿಲ್ಲ. ಮತ್ತು ಯಾವುದೇ ಒಂದು ಪಕ್ಷದವರು ಎಂದು ಹೇಳುತ್ತಿಲ್ಲ. ಅವರು ಈ ರಾಜ್ಯದ ಹಿರಿಯ ನಾಯಕರು. ನೀವು ರಾಜಿನಾಮೆ ಕೊಡುವುದಿಲ್ಲ, ಅದು ಅಸಾಧ್ಯವೆಂದು ಗೊತ್ತು. ನಿಮ್ಮನ್ನು ಜನರೇ ಓಡಿಸಬೇಕಾಗುತ್ತದೆ, ಅದು ನಮಗೂ ಗೊತ್ತು.

ಶ್ರೀ ಬಸವರಾಜ ರಾಯರೆಡ್ಡಿ:- ಜನರು ನಿಮಗೆ ಅಧಿಕಾರ ಕೊಟ್ಟಿರುವುದು, ಒಳ್ಳೆಯ ಕೆಲಸ ಮಾಡಲಿಕ್ಕೆ ವಿನಹ ಈ ತರಹದ ಕೆಲಸ ಮಾಡುವುದಕ್ಕಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನೀವು ಅಧಿಕಾರಕ್ಕೆ ಬಂದು ಎರಡು ವರ್ಷ ನಾಲ್ಕು ತಿಂಗಳುಗಳಾಗಿವೆ. ನೀವು ಪ್ರಾಮಾಣಿಕವಾಗಿ ಹೇಳಿ ನೋಡೋಣ. ಜಿಲ್ಲಾ ಪರಿಷತ್‌ನಿಂದ ಆದ ಕೆಲವು ಕೆಲಸಗಳನ್ನು ಬಿಟ್ಟರೆ, ಬೇರೆ ಹೊಸದಾಗಿ ಒಂದು ಅಭಿವೃದ್ಧಿ ಕೆಲಸ ನೀವು ಮಾಡಿರುವುದನ್ನು ತೋರಿಸಿ. ನಮ್ಮ ಜಿಲ್ಲೆಯಲ್ಲಿ ಯಾವುದೇ ರೀತಿಯ ಕೆಲಸವಾಗಿಲ್ಲ.

ನಾನು ಮಾನ್ಯ ಶಿವಣ್ಣನವರನ್ನು ಕೇಳುತ್ತಿದ್ದೇನೆ. ನಮ್ಮ ಜಿಲ್ಲೆಗೆ ಹಾಸ್ಟಲ್‌ಗಳನ್ನು ಮಂಜೂರು ಮಾಡಿದ್ದೀರಾ? ಮಂಜೂರು ಮಾಡಿಲ್ಲ. ಕರ್ನಾಟಕ ರಾಜ್ಯದಲ್ಲಿ ಮಾಡಿರಬಹುದು. ನಿಮ್ಮ ಸರ್ಕಾರಕ್ಕೆ ಅಭಿವೃದ್ಧಿ ಬಗ್ಗೆ ಚಿಂತನೆ ಇಲ್ಲ, ಬಡವರ ಬಗ್ಗೆ ಚಿಂತನೆ ಇಲ್ಲ ಮತ್ತು ಜನಸಾಮಾನ್ಯರ ಬಗ್ಗೆ ಚಿಂತನೆ ಇಲ್ಲ. ದೇವರು ಯಾವ ನ್ಯಾಯ ಮಾಡಿದ್ದಾನೋ ಗೊತ್ತಿಲ್ಲ, ನಿಮಗೆ ದೈತ್ಯಶಕ್ತಿ ಕೊಟ್ಟಿದ್ದಾನೆ, ಅಧಿಕಾರ ಬಂದಿದೆ. ಅದನ್ನು ಹೇಗೋ ನಡೆಸಿಕೊಂಡು ಹೋಗುವುದನ್ನು ಈ ಪ್ರಜಾಪ್ರಭುತ್ವದಲ್ಲಿ ಒಪ್ಪಿ ಕೊಳ್ಳಬೇಕಾಗುತ್ತದೆ. ಇದರಲ್ಲಿ ನೀವು ಎಷ್ಟು ಪಾಲು ಇದ್ದೀರಿ ಸ್ವಾಮಿ? ಸಾಕಷ್ಟು ಅಪಾದನೆಗಳನ್ನು ಮಾಡಿದ್ದರೂ ಎನ್. ಆರ್. ಐ. ಪಿ. ವರದಿ ಕೊಟ್ಟಿಲ್ಲ, ಅದಕ್ಕೋಸ್ಕರ ಬಹಳಷ್ಟು ಗಲಾಟೆಯಾಯಿತು. ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆಯುತ್ತಿದೆ. ಇವೊತ್ತು ಏನಾಗುತ್ತಿದೆ ಯೆಂದರೆ, ನೀವು ವಿನಾಯಿತಿ ಕೊಡುತ್ತಿಲ್ಲ, ಛೇಂಜ್ ಆಫ್ ಲ್ಯಾಂಡ್ ಯೂಸ್ ಮಾಡುತ್ತಿಲ್ಲ. ಏನೂ ಮಾಡುತ್ತಿಲ್ಲವೆಂದು ಹೇಳಿ. ಗ್ರಾನೈಟ್ಸ್ ಲೀಸ್ ಕೊಡುತ್ತಿಲ್ಲವೆಂದು ಹೇಳಿ. ನಾನು ಇಲ್ಲಿ ಕುಳಿತು ಆಪಾದನೆ ಮಾಡುತ್ತಿದ್ದೇನೆ. ನಿಮ್ಮ ಕರ್ತವ್ಯ ನೀವು ಮಾಡಿದ್ದೀರಿ. ಒಂದೂ ಇಂಚು ಜಮೀನು ಕೊಡದೆ ಸಾಕಷ್ಟು ಪ್ರಚಾರ ತೆಗೆದುಕೊಂಡಿದ್ದೀರಿ.

ಶ್ರೀ ಕೆ.ಜಿ. ಜಾರ್ಜ್:- ನಾವು ಎಲ್ಲವನ್ನೂ ಲೀಗಲ್ ಆಗಿ ಮಾಡುತ್ತಿದ್ದೇವೆ. ನೀವು ಮಾಡಿದಾಗ ಲೀಗಲಿಟಿ ಬಿಟ್ಟು ಮಾಡಿದ್ದೀರಿ. ಅದಕೋಸ್ಕರ ಆಪಾದನೆ ಮಾಡಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಎಂ. ಎಸ್. ರಾಮಯ್ಯನವರಿಗೆ ಕೊಟ್ಟಿರುವುದು ಲೀಗಲ್ಲೇ?

(ಗೊಂದಲ)

ಶ್ರೀ ಹೆಚ್. ವಿಕಾಂತಯ್ಯ:- ಅದರ ಬಗ್ಗೆ ವಿಚಾರಣೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಲು ಅವರಿಗೆ ಸಾಧ್ಯವಿದೆಯೇ? ಅವರು ಏನು ಕಾನೂನಿನ ಪ್ರಕಾರ ಮಾಡಿಲ್ಲವೆಂದು ಹೇಳಿದ್ದಾರೆ ಅದನ್ನು ಸಾಬೀತು ಮಾಡಿದರೆ ಅವರ ಸರ್ಕಾರ ಏನಾದರೂ ರಿಸೈನ್ ಮಾಡುತ್ತದೆಯೆ? **I am ready to take up a challenge.**

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ನಿಮ್ಮ ಕಾಲದಲ್ಲಿಯೂ ಕೂಡ ಲೂಟಿ ಮಾಡಿದಂಥದ್ದು ಇಲ್ಲವೆ?

(ಗೊಂದಲ)

ಉಪಾಧ್ಯಕ್ಷಣಿಯರು:- ಅವರು ಉತ್ತರ ಕೊಡುತ್ತಾರೆ. ದಯಮಾಡಿ ನೀವು ಕುಳಿತುಕೊಳ್ಳಿ.

ಶ್ರೀ ಹೆಚ್. ವಿಕಾಂತಯ್ಯ:- ಉಪಾಧ್ಯಕ್ಷಣಿಯರೆ, ಶಿವರಾಮೇಗೌಡರು ನಾವು ಲೂಟಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ನಾವು ಲೂಟಿ ಮಾಡಿದ್ದರೆ ಅದರ ಮೇಲೆ ವಿಚಾರಣೆ ಮಾಡಿ ನಮ್ಮ ಮೇಲೆ ಶಿಕ್ಷೆಯ ಕ್ರಮವನ್ನು ತೆಗೆದುಕೊಳ್ಳಿ. ಅದಕ್ಕೆ ನನ್ನದೇನೂ ತಕರಾರಿಲ್ಲ. ಅದಕ್ಕೆ ನಾನು ಬೇಡವೆಂದು ಹೇಳುವುದಿಲ್ಲ. ನಮ್ ಸರ್ಕಾರ ಲೂಟಿ ಮಾಡಿದ್ದರೆ, ನಮ್ಮ ಸರ್ಕಾರದ ಯಾವುದೇ ವ್ಯಕ್ತಿ ಮಾಡಿದ್ದರೆ ಅವರ ಮೇಲೆ ಕ್ರಮತೆಗೆದುಕೊಳ್ಳಲಿ, ಅದಕ್ಕೆ ಅಡ್ಡಿ ಇಲ್ಲ. ಆದರೆ ಅದನ್ನು ಈ ಒಂದು ಸದನದಲ್ಲಿ ಹೇಳುವುದಾದರೂ ಸರಿಯೆ?

ಶ್ರೀ ಕೆ.ಜಿ. ಜಾರ್ಜ್:- ಉಪಾಧ್ಯಕ್ಷಣಿಯರೆ, ಕಳೆದ ಬಜೆಟ್ ಅಧಿವೇಶನದ ಸಮಯದಲ್ಲಿ ನನ್ನ ಹೆಚ್. ಯು. ಡಿ. ಇಲಾಖೆಯದು ಚರ್ಚೆಗೆ ಬಂದಾಗ ಶ್ರೀಮಾನ್ ಏಕಾಂತಯ್ಯನವರು ಇದೇ ಪ್ರಶ್ನೆಯನ್ನು ಎತ್ತಿದ್ದರು. ಆಗ ನಾನು ಸಂಪೂರ್ಣವಾಗಿ ಉತ್ತರವನ್ನು ಕೊಟ್ಟು, ಸಂಪೂರ್ಣ ವಿವರಣೆಯನ್ನು ಕೊಟ್ಟು ಎಲ್ಲವನ್ನು ಮಾಡಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:- ಅವರು ಆಗ ಉತ್ತರವನ್ನು ಕೊಡಲಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಅವರು ಪ್ರತಿಯೊಂದು ಸಂದರ್ಭದಲ್ಲೂ ಎಂ. ಎಸ್. ರಾಮಯ್ಯ ಎಂದು ಹೇಳಿದರೆ ಹೇಗೆ? ಇವರ ಮಂತ್ರಿಗಳೆ ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ರಿಪೋರ್ಟನ್ನು ತಂದು ಕೊಟ್ಟಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:- ನಾವು ಎಂ.ಎಸ್. ರಾಮಯ್ಯ ಎಂದು ಹೇಳುವುದೇಕೆಂದರೆ ಅವರಿಗೆ ಕಾನೂನನ್ನು ಅನುಸರಿಸಿ ಕೊಟ್ಟಿದ್ದೀರೋ?

(ಗೊಂದಲ)

ಶ್ರೀ ಬಿ.ಎಸ್. ಎಡಿಯೂರಪ್ಪ:- ಮೊಹನ್ ಮೇಕನ್ಸ ಬಗ್ಗೆ ಏನು ಹೇಳುತ್ತೀರಿ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಉಪಾಧ್ಯಕ್ಷಣಿಯರೆ, ಮಾನ್ಯ ಸಚಿವರು ಕಳೆದ ವರ್ಷ ತಮ್ಮ ಇಲಾಖೆಯ ಬೇಡಿಕೆಗಳ ಮೇಲಿನ ರಿಪ್ಲೆಯನ್ನು ಕೊಡುವಾಗ ರಾಮಯ್ಯ ಬಗ್ಗೆಯಾಗಲಿ, ಮೋಹನ್ ಮೇಕನ್ಸ ಬಗ್ಗೆಯಾಗಲಿ ಉತ್ತರವನ್ನು ಕೊಟ್ಟರೆ ಅವರಿಗೆ ಕಾನೂನು ಬದ್ಧವಾಗಿ ಕೊಟ್ಟಿದ್ದೇವೆಂದು ಏನಾದರೂ ಹೇಳಿದ್ದರೇ? ಅದನ್ನು ಹೇಳಬೇಕಾಗುತ್ತದೆ. ಇವತ್ತು ನಾವು ಅದನ್ನು ಸಾಬೀತು ಮಾಡಲು ತಯಾರಾಗಿದ್ದೇವೆ. ನಿಮ್ಮ ಇಲ್ಲೀಗಲ್ ಆರ್ಡರ್ ಇದೆ. ನೀವು ಅವ್ಯವಹಾರ ಮಾಡಿದ್ದೀರಿ, ರಾಜ್ಯಕ್ಕೆ ಮೋಸ ಮಾಡಿದ್ದೀರಿ, ರಾಜ್ಯಕ್ಕೆ ದ್ರೋಹ ಮಾಡಿದ್ದೀರಿ.

ಶ್ರೀ ಕೆ.ಜಿ. ಜಾರ್ಜ್;- ಉಪಾಧ್ಯಕ್ಷಣೆಯರೆ, ನಾವೇನಾದರೂ ಇಲ್ಲೀಗಲ್ ಆರ್ಡರನ್ನು ಮಾಡಿದ್ದರೆ, ಅದನ್ನು ಕೇಳಬೇಕಾದರೆ ಪ್ರಾಪರ್ ಫೋರಂ ಇದೆ, ಅಲ್ಲಿ ಪ್ರಶ್ನೆ ಮಾಡಲಿ. ಬೆಳಗಿನಿಂದ ಸಂಜೆಯವರೆಗೂ ಇಲ್ಲಿ ನಿಂತುಕೊಂಡು ಈ ರೀತಿ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ;- ನಾವು ಕೋರ್ಟಿಗೆ ಹೋಗುವುದಿಲ್ಲ, ಜನತಾ ನ್ಯಾಯಾಲಯಗಳಿಗೆ ಹೋಗುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ;- ಉಪಾಧ್ಯಕ್ಷಣೆಯರೆ, ಏಕ್ಸೈಸ್ ಇಲಾಖೆಯ ದೊರೆಗಳನ್ನು ತೆಗೆದುಕೊಳ್ಳಿ, ಇವತ್ತು ನಾನು ಕೇಳುತ್ತಿದ್ದೇನೆ ಯಾರು ಈ 15 ಜನ ಎಕ್ಸೈಸ್ ದೊರೆಗಳು, ಅವರುಗಳ ಹೆಸರೇನು? ಎಷ್ಟು ಜನ ಮಂತ್ರಿಗಳಿಗೆ ಮುಖ್ಯಮಂತ್ರಿಗಳಿಗೆ ಅವರೊಂದಿಗೆ ಸಂಬಂಧ ಇದೆ? ಏಕೆ ಅವರಿಗೆ ಕೊಡುತ್ತಿದ್ದೀರಿ? ಏನು ಕಾರಣ?

ಶ್ರೀ ಎಲ್.ಆರ್. ಶಿವರಾಮೇಗೌಡ:- ನಿಮ್ಮ ಕಾಲದಲ್ಲಿ ಕೊಡಲಿಲ್ಲವೆ?

ಶ್ರೀ ಆರ್. ವಿ. ದೇಶಪಾಂಡೆ:- ನಾವು ಆ ರೀತಿ ಕೊಟ್ಟಿದ್ದರೆ ಅದನ್ನು ಈ ಸದನದ ಮುಂದಿಡಿ. ಉಪಾಧ್ಯಕ್ಷಣೆಯರೆ ನನಗೂ 15 ನಿಮಿಷ ಕಾಲಾವಕಾಶವನ್ನು ಕೊಟ್ಟಿರುವ ಪ್ರಕಾರ, ಮಾತನಾಡುತ್ತಿದ್ದೇನೆ.

(ಗೊಂದಲ)

ಮತ್ತೆ ಈ 247 ಕರಿಕಲ್ಲು, ದೊರೆಗಳಾರು? ಯಾವ ಸರ್ಕಾರ ಈ ರೀತಿಯ ಕೆಲಸ ಮಾಡಿದೆ, ಈ ದೇಶದ ಇತಿಹಾಸದಲ್ಲಿ ಯಾವ ಸರ್ಕಾರ ಇಂಥ ಕೆಲಸ ಮಾಡಿದೆ. ಇಂತಹ ಪಾಪದ ಕೆಲಸ ಮಾಡಿದೆ, ಇಂತಹ ಭ್ರಷ್ಟ ಕೆಲಸ ಮಾಡಿದೆ, ನಿಮಗೆ ನಾಚಿಕೆಯಾಗಬೇಕು. ಇವತ್ತು ಲಾ ಅಂಡ್ ಆರ್ಡರ್ ಏನಾಗಿದೆ. ತಾವು ನಗರದಲ್ಲಿ ಇದ್ದೀರಿ, ತಾವು ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ. ಯಾವ ಒಂದು ಚಾಕು ಚೂರಿ ಸಂಸ್ಕೃತಿ ರಾಮಕೃಷ್ಣ ಹೆಗಡೆಯವರ

ಕಾಲದಲ್ಲಿ ಹೋಯಿತು ಅದು ಪುನಃ ನಿಮ್ಮ ಕಾಲದಲ್ಲಿ ಬಂದಿದೆ. ಏನು ಡಕಾಯತಿಗಳು ನಡೆಯುತ್ತಾ ಇದೆ. ನೀವು ಇಲ್ಲ, ಎಂದು ಹೇಳಬಹುದು. ಆದರೆ ನಿಮ್ಮ ಕಾನ್‌ಷಿಯಸ್ ನಿಮಗೆ ಹೇಳುತ್ತದೆ.

(ಗೊಂದಲ)

ಶ್ರೀ ಕೆ. ಜಿ. ಜಾರ್ಜ್:- ಮಾನ್ಯ ರಾಮಕೃಷ್ಣ ಹೆಗಡೆ ಕಾಲದಲ್ಲಿ, ನಿಮ್ಮ ಕಾಲದಲ್ಲಿ ಡಕಾಯಿತಿ ಆಗಲೇ ಇಲ್ಲವೇ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:- ಇವತ್ತು ಜನರು ಸಂಜೆ ಆರು ಗಂಟೆ ಆಗುತ್ತಲೇ ರಸ್ತೆಗಳಲ್ಲಿ ತಿರುಗಾಡುವುದು ಕಷ್ಟವಾಗಿದೆ.

(ಗೊಂದಲ)

ಡಾ: ಜೀವರಾಜ್ ಆಳ್ವ:- ಬೆಂಗಳೂರು ನಗರದ ಪ್ರತಿನಿಧಿಯಾದ ಮಾನ್ಯ ಜಾರ್ಜ್ ಅವರು ತಮ್ಮ ಆತ್ಮಾವಲೋಕನ ಮಾಡಿ ಹೇಳಲಿ. ಇವತ್ತು ಕನ್ನಡಿಗರು, ತಮಿಳರು, ಮಲೆಯಾಳಿಗಳು ಈಗ ನಮ್ಮ ಕನ್ನಡಿಗರಾದರೂ ಬೇರೆ ಭಾಷೆಯ ಮಿತ್ರರು ಅವರು. ಅವರ ಜನಕ್ಕೆ ಅವರು ಇವತ್ತು ಈ ಸರ್ಕಾರದ ಬಗ್ಗೆ ಏನು ಭಾವನೆಗಳು ಇಟ್ಟುಕೊಂಡಿದ್ದಾರೆ ಎಂದು ನೀವೆ ಹೇಳಿದರೆ ಒಳ್ಳೆಯದು.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:- ಮೊನ್ನೆ ನಡೆದಂಥ ಗಲಭೆ ಬಗ್ಗೆ ಇವರೇ ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಕೈಗಾರಿಕೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗೆ ಸಂಬಂಧಪಟ್ಟಂತೆ ಮೊನ್ನೆ ಕಾವೇರಿ ವಿಚಾರದಲ್ಲಿ ಆದ ಗಲಾಟೆಯಲ್ಲಿ 22 ಕೋಟಿ ರೂಪಾಯಿ ಹಾನಿ ಆಗಿದೆ. ಎಷ್ಟೋ ಬಡ ಜನ, ಇನ್ನೋಸೆಂಟ್ ಜನರ ಮೇಲೆ ಅತ್ಯಾಚಾರ ಮಾಡಿದ್ದಾರೆ. ಇದನ್ನು ಯಾರು ಮಾಡಿದ್ದಾರೆ ಎನ್ನುವುದನ್ನು ತಿಳಿಸಬೇಕು. ಈ ಕೇಸ್‌ಗಳಲ್ಲಿ ಸರ್ಕಾರ ಇನ್‌ವಾಲ್ವ್ ಆಗಿದೆ. Your Government is involved. Your Government has instigated.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಾನು ಇದರ ಬಗ್ಗೆ ಬಲವಾದ ವಿರೋಧ ಮಾಡುತ್ತೇನೆ. I take strong objection for this. No where Government is involved. How can you say that our Government is involved?

SHRI R.V. DESHPANDE:- It is a fact.

SHRI K.J. GEORGE:- No. It is not a fact.

ಶ್ರೀ ಆರ್.ವಿ. ದೇಶಪಾಂಡೆ:- ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಯಾವ ರಾಜ್ಯಪಾಲರು ಯಾವ ಮಂತ್ರಿಗಳನ್ನು ಕರೆಯಿಸಿ ವಾರ್‌ನಿಂಗ್ ಕೊಟ್ಟಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನೀವು ಹೇಳಿದರೆ ನಾವು ಒಪ್ಪಬೇಕಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನೀವು ಒಪ್ಪುವುದು ಬಿಡುವುದು ನಿಮಗೆ ಸೇರಿದ್ದುದು, ನಾನು ಸಮಯ ಬಂದಾಗ ಹೇಳುತ್ತೇನೆ.

ಶ್ರೀ ನಜೀರ್ ಅಹಮದ್:- ರಾಜ್ಯಪಾಲರ ಜೊತೆ ಹೋಂ ಮಿನಿಸ್ಟರು ನಾನು ಹೋಗಿ ಬಂದಿದ್ದೇನೆ. ಮಾನ್ಯ ದೇಶಪಾಂಡೆಯವರೆ, ನೀವು ಮಂತ್ರಿಗಳಾಗಿದ್ದವರು ಯಾವುದೇ ಸಂದರ್ಭದಲ್ಲಾದರೂ ರಾಜ್ಯಪಾಲರು ಕರೆದುಬಿಟ್ಟು ಮಂತ್ರಿಗಳಿಗೆ ವಾರ್‌ನಿಂಗ್ ಕೊಡುತ್ತಾರೆಯೇ ಏನಿದು?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ತಾವು ಏನು ಹೇಳುತ್ತಿರಿ ಹೇಳಿ.?

(ಗೊಂದಲ)

ಶ್ರೀ ನಜೀರ್ ಅಹಮದ್:- ಹೋಂ ಮಿನಿಸ್ಟರು ನಾವು ಎಲ್ಲ ಅಫೆಕ್ಟೆಡ್ ಏರಿಯಾಸ್‌ಗೆಲ್ಲಾ ಹೋಗಿ ಬಂದಿದ್ದೇವೆ. We went and saw ourselves, what was the extent of damage and we held Press Conferene in Raj Bhavan. Myself and Home Minister were very much present. My friends were also present on that day. He reacted to the press after visiting that spot. I just say in this august House if you say something, if it carries..

(INTERRUPTIONS)

SHRI R.V. DESHPANDE:- When the Chief Minister went to meet the Prime Minister, he told the Chief Minister " Rehabilitate the persons who have been affected." He did not tell Tamil Nadu Chief Minister. He told the Karnataka Chief Minister. We have to bow our heads in shame.

ಶ್ರೀ ಕೆ.ಜೆ. ಜಾರ್ಜ್:- ಯಾವುದೇ ರೈತರಾಗಲಿ, ಯಾವುದೇ ಗಲಾಟೆ ಆದಾಗ ಅಫೆಕ್ಟೆಡ್ ಪಾರ್ಟಿ ಇರುತ್ತಾರೆ. ಅವರ ರೀಹೆಬಿಲಿಟೇಟ್ ಮಾಡತಕ್ಕದ್ದು ಸರ್ಕಾರದ ಕರ್ತವ್ಯ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದುವರೆಗೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ತರಹ ಗಲಭೆ ಆದಾಗ, ಮುಖ್ಯಮಂತ್ರಿಗಳ ಒಂದು ಸರ್ಕಾರ ಇದ್ದಾಗ, ಗೌರ್‌ನರ್ ಬಂದು ಇನ್ಸಪೆಕ್ಷನ್ ಮಾಡುವಂಥ ಪರಿಸ್ಥಿತಿಯನ್ನು ನೀವು ತಂದಿಟ್ಟಿರಿ.

(ಗೊಂದಲ)

ಉಪಾಧ್ಯಕ್ಷರು:- ತಾವು ತಮ್ಮ ಭಾಷಣವನ್ನು ಮುಂದುವರಿಸಬೇಕು. ಎಲ್ಲರಿಗೂ ನೀವು ಈಲ್ಡ್ ಆದರೆ ನಿಮ್ಮ ಸಮಯ ಹೋಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಹೇಳುತ್ತೇನೆ ಸಂಪೂರ್ಣವಾಗಿ ಆಡಳಿತ ಕುಸಿದಿದೆ.

ಶ್ರೀ ವಾಟಾಳ್ ನಾಗರಾಜ್:- ಈ ರಾಜ್ಯದಲ್ಲಿ ಒಂದೇ ಗಲಾಟೆ ನಡೆದಿರುವುದು. ಬೇರೆ ಈ ದೇಶದಲ್ಲಿ ಗಲಾಟೆ ನಡೆದೇ ಇಲ್ಲ ಎನ್ನತಕ್ಕಂಥ ಮಾತನ್ನು ನೀವು ಹೇಳುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ:- ನಾವು ಇಲ್ಲಿ ಸರ್ಕಾರವನ್ನು ಡಿಫೆಂಡ್ ಮಾಡಲಿಕ್ಕೆ ಇಲ್ಲ. ನನ್ನ ಕರ್ತವ್ಯವನ್ನು ನಾನು ಮಾಡುತ್ತಿದ್ದೇನೆ. They are all my colleagues and friends.

ಶ್ರೀ ವಾಟಾಳ್ ನಾಗರಾಜ್:- ನೀವೂ ಒಂದು ಸರ್ಕಾರದಲ್ಲಿ ಇದ್ದಿರಿ ಎನ್ನುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳಿ.

ಶ್ರೀ ಕೆ.ಜೆ. ಜಾರ್ಜ್:- ಆಧ್ಯಕ್ಷರೆ, ಬಂದ್ ವಿಚಾರದಲ್ಲಿ ಏನಾದರೂ ಸರ್ಕಾರದ ಮೇಲೆ ಹೊಣೆ ಇವರು ಹೊರಿಸುವುದಾದರೆ ಆಕ್ಷುಯಲಿ ಅದು ಸರ್ಕಾರ ಕರೆದಂಥ ಬಂದ್ ಅಲ್ಲ, ಇದು ಎಲ್ಲಾ ಪಾರ್ಟಿಗಳು ಸೇರಿ ಕರೆದಂಥ ಬಂದ್ ಇದು.

ಡಾ: ಜೀವರಾಜ್ ಆಳ್ವ:- ಎಲ್ಲಾ ಪಕ್ಷಗಳು ಸರ್ವ ಪಕ್ಷಗಳ ಕರೆಯಿಂದಾಗಿ ಈ ಬಂದ್ ಆಯಿತು. ಏಕೆಂದರೆ ಒಂದು ಪಕ್ಷದ ಆಧ್ಯಕ್ಷನಾಗಿ ಈ ಮಾತನ್ನು ಹೇಳಬೇಕಾಗುತ್ತದೆ. ಸರ್ವಪಕ್ಷಗಳು, ಸರ್ವ ಜಾತಿಯವರು ಸರ್ವ ಭಾಷೆಯವರು, ಈ ವಿರೋಧ ಮಾಡಿದ್ದಾರೆಯೇ? ಯಾರೂ ವಿರೋಧ ಮಾಡದೆ ಇದ್ದರೆ ಮಾನ್ಯ ಜಾರ್ಜ್ ಮತ್ತು ನಜೀರ್ ಅವರೆ ಪುನಃ ನಿಮ್ಮನ್ನು ನೀವೇ ಕೇಳಿಕೊಳ್ಳಿ ಏಕೆ ಆಯಿತು ಎಂದು. ಈ ತರಹ ಯಾವತ್ತಾದರೂ ಆಗಿದೆಯೇ? ಪ್ರತಿ ಮನೆ ಮನೆ ಬಂದ್ ಆಗಿದೆ, ಸ್ಕೂಲ್ಸ್ ಬಂದ್ ಆಗಿದೆ, ಇನ್ಸಿಟಿಟ್ಯೂಷನ್ಸ್ ಬಂದ್ ಆಗಿದೆ. ಈ ತರಹ ಯಾವತ್ತು ಕಂಡರಿಯದಂಥಹ ಒಂದು ದರೋಡೆ, ಕಗ್ಗೊಲೆ ಕರ್ನಾಟಕದಲ್ಲಿ ನಡೆದಿದೆ. ಮಾನ್ಯ ವಾಟಾಳ್

ನಾಗರಾಜ್‌ರವರು ಬೇರೆ ದೇಶದ ವಿಷಯ ಹೇಳುತ್ತಾರೆ. ನಾನು ಕೇಳುತ್ತಿರುವ ಪ್ರಶ್ನೆ ಪ್ರತಿಯೊಂದು ಪಕ್ಷಗಳವರು ನಾವು ಕರೆಕೊಟ್ಟಿದ್ದಕ್ಕೆ ಯಾರಾದರೂ ವಿರೋಧ ಅಭಿಪ್ರಾಯ ಮಾಡಿದ್ದಾರೆಯೇ? ಬಂದ್‌ಗೆ ವಿರೋಧ ಅಭಿಪ್ರಾಯ ಇದ್ದರೆ ಯಾವುದೇ ಒಂದು ಸಂಸ್ಥೆ ಆ ದಿವಸ ತಮ್ಮ ಬಾಗಿಲನ್ನು ಓಪನ್ ಇಟ್ಟರೆ ಅಥವಾ ಬಂದ್‌ಗೆ ವಿರೋಧವಾಗಿ ಕೆಲಸ ಮಾಡಿದ್ದರೆ, ದರೋಡೆ ಆಗುತ್ತದೆ, ಹಲ್ಲೆ ಆಗುತ್ತದೆ, ಅನ್ಯಾಯ ಆಗುತ್ತದೆ. ಆದರೆ ಇವೊತ್ತು ಆಗಿರುವುದನ್ನು ನೀವು ಮತ್ತು ನಜೀರ್‌ರವರು ಆಲೋಚನೆ ಮಾಡಿಕೊಂಡು ನೋಡಿ ಹೇಗಾಯಿತು ಏನಾಯಿತು ಎಂದು. ಭಾರತೀ ನಗರದಲ್ಲಿ ಏಕೆ ಆಗಲಿಲ್ಲ? Posterity will not pardon it.

ಡಾ: ಜೀವರಾಜ ಆಳ್ವ:- ಏಕೆ ಎಲೆಕ್ಟೆಡ್ ಪಾರ್ಟೀಸ್‌ನಲ್ಲಿ ಆಯಿತು.

The entire thing has been motivated and engineered by the Government.

ಶ್ರೀ ಕೆ.ಜೆ. ಜಾರ್ಜ್:- If you blame the Government...(interruptions)

(ಗೊಂದಲ)

ಡಾ: ಜೀವರಾಜ ಆಳ್ವ:- ಅಧ್ಯಕ್ಷಿಣಿಯವರೇ, ಪುಂಡಗಂದಾಯ ಅಂತ ಹಾಕುತ್ತಾರೆ, ಪುಂಡಗಂದಾಯ...

(ಗೊಂದಲ)

ಉಪಾಧ್ಯಕ್ಷಿಣಿಯವರು:- ನೀವು ಮಾತನಾಡಬೇಕಾದರೆ ಏನು ಬೇಕಾದರೂ ಮಾತನಾಡಿ.

(ಗೊಂದಲ)

MADAM DEPUTY SPEAKER:- Mr. Deshpande, you should continue or I will call some other name. You should conclude within five minutes.

ಶ್ರೀ ಆರ್.ವಿ. ದೇಶಪಾಂಡೆ:- ರಾಜ್ಯಪಾಲರ ಭಾಷಣ.....

ಡಾ: ಜೀವರಾಜ ಆಳ್ವ:- ಯಾರು ಇದನ್ನು ಮಾಡಿದ್ದುದು ಎಂದು ತಮಗೆ ಗೊತ್ತಿದೆಯೆಂದು ಮಂತ್ರಿಗಳು ಬಹಳ ಜವಾಬ್ದಾರಿಯುತವಾಗಿ ಹೇಳಿದ್ದಾರೆ.

ಉಪಾಧ್ಯಕ್ಷಿಣಿಯವರು:- ಸಮಯ ಬಂದಾಗ ತಾವು ತೆಗೆದುಕೊಳ್ಳಿ.

ಶ್ರೀ ಕೆ.ಜೆ. ಜಾರ್ಜ್:- ಅದಕ್ಕೆ ಒಂದು ಎನ್‌ಕ್ವೈರಿ ಕಮಿಷನ್ ಮಾಡಿದ್ದಾರೆ, ಆ ಒಂದು ಕಮಿಷನ್ ರಿಪೋರ್ಟ್ ಬಂದ ಮೇಲೆ ಗೊತ್ತಾಗುತ್ತದೆ ಯಾರು ಮಾಡಿದ್ದಾರೆಂದು.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷಿಣಿಯವರೇ, ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಒಪ್ಪಿಕೊಂಡಿದೆ, ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಯಿತು ಎಂದು ಸರ್ಕಾರ ಒಪ್ಪಿಕೊಂಡಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಅಧ್ಯಕ್ಷಿಣಿಯವರೇ, ದೇಶಪಾಂಡೆಯವರು ಒಳ್ಳೆಯ ನುರಿತ ರಾಜಕಾರಿಣಿಗಳು, ಏಳು ವರ್ಷಗಳ ಕಾಲ ಸತತವಾಗಿ ಸರ್ಕಾರವನ್ನು ನಡೆಸಿಕೊಂಡು ಬಂದಂತಹವರು. ಆಳುವ ಮತ್ತು ವಿರೋಧಪಕ್ಷದ ಎರಡರಲ್ಲೂ ಸಾಕಷ್ಟು ಅನುಭವ ಹೊಂದಿರತಕ್ಕಂತಹವರು. ನಾನು ಅವರ ಭಾಷಣವನ್ನು ಕೇಳಿದೆ, ಸರ್ಕಾರದ ವಿರುದ್ಧ ಆಪಾದನೆಗಳ ಸುರಿಮಳೆಯನ್ನೇ ಮಾಡಿದರು. ಆದರೆ ಸಾಬೀತನ್ನು ಮತ್ತು ಪುರಾವೆಗಳನ್ನು ಒದಗಿಸುವುದಕ್ಕೆ ಅವರು ಪ್ರಯತ್ನ ಮಾಡಲಿಲ್ಲ. ಒಂದಂತೂ ಹೇಳಿದ್ದಾರೆ, ಗೌರ್‍ನರ್ ಕರೆದು ಮಂತ್ರಿಗಳನ್ನು ಚೀಮಾರಿ ಹಾಕಿದರು ಎಂದು ಗೌರ್‍ನರ್ ಈ ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಬಹುಶಃ ಈ ಮಾತುಗಳನ್ನು ತಾವು ಹೇಳುವಂಥದ್ದಲ್ಲ, ಅದನ್ನು ಏನಾದರೂ ನಮ್ಮ ಯಡಿಯೂರಪ್ಪನವರು ಅಥವಾ ಅವರ ಪಾರ್ಟಿಯವರು ಅಥವಾ ರೈತ ಸಂಘದವರು ಹೇಳಿದರೆ ಸ್ವಲ್ಪಮಟ್ಟಿಗಾದರೂ ಕಿಮ್ಮತ್ತು ಇರುತ್ತದೆಂದು ನಾನು ತಿಳಿದುಕೊಂಡಿದ್ದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಿಮ್ಮ ಇಬ್ಬರ ಮಧ್ಯ ಅಗ್ರಿಮೆಂಟ್ ಏನೋ ಎಂದು ನನಗೆ ಅನುಮಾನ ಬರುತ್ತದೆ.

ಉಪಾಧ್ಯಕ್ಷಿಣಿಯವರು:- ದೇಶಪಾಂಡೆಯವರೇ ಮುಂದುವರಿಸಿ ಇನ್ನು 5 ನಿಮಿಷದಲ್ಲಿ ಮುಗಿಸಿ.

ಶ್ರೀ ಆರ್.ವಿ. ದೇಶಪಾಂಡೆ:- ಅಧ್ಯಕ್ಷಿಣಿಯವರೇ ನಾನು ಇನ್ನು ಶುರು ಮಾಡಿಲ್ಲ.

ಉಪಾಧ್ಯಕ್ಷಿಣಿಯವರು:- ನಿಮಗೆ ಟ್ರೈನ್‌ಗೆ ಹೊತ್ತಾಗುತ್ತದಲ್ಲಾ.

ಶ್ರೀ ಆರ್.ವಿ. ದೇಶಪಾಂಡೆ:- ಆಡಳಿತದ ಬಗ್ಗೆ ಹೇಳಿದ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಹೇಳಿದೆ. ಇವತ್ತು ಗೌರ್ನಮೆಂಟ್ ಟ್ರಜರಿ ಏನಾಗಿದೆ. ಏನು ಭರ್ತಿಯಾಗಿದೆಯೆಂದು ಹೇಳುತ್ತೀರಿ ನಾಚಿಕೆ ಬರಬೇಕು. ಕಳೆದ ನಾಲ್ಕು ವರ್ಷದಿಂದ ದುಡ್ಡೆಲ್ಲಾ ಖರ್ಚಾಗಿದೆ. ಅಧಿಕಾರಿಗಳು ಹೇಳುತ್ತಾರೆ ಪೆಟ್ರೋಲ್‌ಗೆ ರೊಕ್ಕ ಇಲ್ಲ ಎಂದು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಕಳೆದ 4-5 ತಿಂಗಳಿಂದ ಜಿಲ್ಲಾಪರಿಷತ್ತುಗಳಿಗೆ ಒಂದು ಪೈಸೆ ಕೂಡ ರಿಲೀಸ್ ಆಗಿಲ್ಲ. ಕೇವಲ ಸ್ಯಾಲರಿ ಬಿಲ್ಲನ್ನು ಬಿಟ್ಟರೆ ಅಭಿವೃದ್ಧಿ ಕಾರ್ಯಗಳಿಗೆ ಒಂದು ಪೈಸೆಯನ್ನೂ ಕೂಡ ಕೊಟ್ಟಿಲ್ಲ. ಅಂಥ ಪರಿಸ್ಥಿತಿ ಬಂದಿದೆ. ನೀವು ಬ್ಯಾಂಕ್ರಪ್ಟ್ ಆಗಿದ್ದೀರಿ. You have become bankrupt. Corruption has reached its heights. Administration has totally collapsed. ಅಂದರೆ ನೀವು ಅಧಿಕಾರದಲ್ಲಿ ಉಳಿಯುವುದಕ್ಕೆ ಏನು ನೈತಿಕ ಹಕ್ಕಿದೆ? ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ, ನೀವು ಅಧಿಕಾರದಲ್ಲಿ ಉಳಿಯುವುದಕ್ಕೆ ನೈತಿಕ ಹಕ್ಕೂ ಇಲ್ಲ, ಶಕ್ತಿಯೂ ಇಲ್ಲ. ಈ ಸರ್ಕಾರ ಕೆಲವು ವೆಲ್‌ಫೇರ್ ಸ್ಕೀಂಗಳನ್ನು ಜಾರಿಗ ತಂದಿದೆ. ಉದಾಹರಣೆಗೆ ಆಶ್ರಯ ಯೋಜನೆ, ಈ ಯೋಜನೆಯನ್ನು ನಾನು ಸ್ವಾಗತ ಮಾಡಿದೆ. ಬಡವರ ಪರವಾಗಿ ಸ್ವಾಗತ ಮಾಡಿದ್ದೇನೆ. ನಮ್ಮ ಶಾಸಕರನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಿ 1 ತಿಂಗಳಿಗೆ 10-15 ಅರ್ಜಿಗಳನ್ನು ಮಾಡಿದ್ದೀರಿ. ಅಂದರೆ ಈ ಸರ್ಕಾರ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ತಾವೇ ಯೋಚನೆ ಮಾಡಿ. ನಮ್ಮಿಂದ ಆದೇಶವನ್ನು ಮಾಡಿಸಿ ಜನರಿಗೆ ಪಟ್ಟಾಗಳನ್ನೂ ಸೈಟುಗಳನ್ನೂ ಹಂಚಿದೆವು. ಅವರಿಗೆ ಮನೆಗಳು ಎಲ್ಲಿವೆ? ಮುಖ್ಯ ಮಂತ್ರಿಗಳು ಹೇಳಿದರು ಬರುವ ಜನವರಿಯೊಳಗೆ 1.75 ಲಕ್ಷ ಮನೆಗಳನ್ನು ಸಿದ್ಧ ಮಾಡುತ್ತೇವೆ ಎಂದು. ಮಾರ್ಚಿಯೊಳಗೆ 1 ಸಾವಿರ ಮನೆಗಳನ್ ಮಾಡಿ. ನಾನು ನಿಮ್ಮ ಹಾಗೆ ಪ್ರವಾಸ ಮಾಡುವುದಿಲ್ಲ. ಆದರೆ ನಾನು ಎಲ್ಲೆಲ್ಲಿ ಪ್ರವಾಸ ಹೋಗಿದ್ದೇನೆ ಅಲ್ಲಿ ಒಂದು ಮನೆಯೂ ಕೂಡ ಇಲ್ಲ. ನಾವು ಟೆಂಡರ್ ಕರೆದಿದ್ದೇವೆಂದು ನೀವು ಹೇಳಬಹುದು, ಆದರೆ ಈ ಮನೆ ಕೆಲಸ ಯಾವಾಗ ಆಗಬೇಕು? ಮನೆಗಳನ್ನು ಯಾವ ರೀತಿ ಕಟ್ಟುತ್ತೀರಿ, ಆ ಮನೆಗಳನ್ನು ಕಟ್ಟಿಸುವುದಕ್ಕೆ ಮುಂಚಿತವಾಗಿ...

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಈ ಕಾರ್ಯಕ್ರಮಗಳನ್ನು ನಾವು ಮೊದಲನೆಯ ಸಾರಿ ಮಾಡುತ್ತಿದ್ದೇವೆ. ಈ ಸಮಿತಿಗಳಿಗೆ ಎಂ. ಎಲ್. ಎ. ಗಳನ್ನೇ ಛೇರ್ಮನ್‌ಗಳಾಗಿ ಮಾಡಿ ಸುಮಾರು 3.51 ಲಕ್ಷ ಸೈಟುಗಳನ್ನು ನಮ್ಮ ಇಡೀ ರಾಜ್ಯದಲ್ಲಿ ಹಂಚಿದ್ದೇವೆ. ಸೈಟ್‌ಗಳನ್ನು ಕೊಟ್ಟಮೇಲೆ ಎಂ.ಎಲ್.ಎ ಕಮಿಟಿಯವರು ನಮಗೆ ಒಂದು ಲಿಸ್ಟನ್ನು ಕೊಡಬೇಕು. ನಾವು ೧ ಸಾವಿರ ಜನ ಇಂತಿಂಥವರನ್ನು ಗುರ್ತಿಸಿದ್ದೇವೆಂದು ಲಿಸ್ಟ್ ಕೊಟ್ಟರೆ ನಾವು ಅದನ್ನು ಪ್ರೊಸೆಸ್ ಮಾಡಿ ಮನೆಯನ್ನು ಕಟ್ಟಿಸಬೇಕಾಗುತ್ತದೆ. ಡಿಲೇ ಆಗಿರುವುದಕ್ಕೆ ಇನ್ನೊಂದು ಕಾರಣ ಎಂದರೆ ಫ್ರೀ ಫ್ಯಾಬ್ರಿಕೇಟೆಡ್ ಹೌಸನ್ನು ಮಾಡುತ್ತಿದ್ದೇವೆ. ಅದರ ಮಾಡೆಲನ್ನು ನೋಡಿ ಡಿಸೈಡ್ ಮಾಡಬೇಕಾಗಿದೆ. ಅನಂತರ ನಾವು ಕಂಟ್ರಾಕ್ಟರ್‌ಗಳನ್ನು ಫಿಕ್ಸ್ ಮಾಡುತ್ತೇವೆ. ಈಗ ನಾವು ಫಲಾನುಭವಿಗಳ ಲಿಸ್ಟನ್ನು ಕೊಟ್ಟರೆ ಕೂಡಲೇ ಆರ್ಡರ್‌ವೈಸ್ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಒಂದೇ ತರಹದ ಮನೆಗಳನ್ನು ಇಡೀ ರಾಜ್ಯದಲ್ಲಿ ಕಟ್ಟುವುದಕ್ಕಾಗುವುದಿಲ್ಲ. ಮಲೆನಾಡಿನಲ್ಲಿ ಬಹಳ ಜಾಸ್ತಿ ಮಳೆ ಬೀಳುತ್ತದೆ. ಅಲ್ಲಿ ಯಾವ ರೀತಿಯ ಮನೆಗಳನ್ನು ಕಟ್ಟಿಸಬೇಕು, ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಯಾವ ರೀತಿಯ ಮನೆಗಳನ್ನು ಕಟ್ಟಿಸಬೇಕು, ಗುಲ್ಬರ್ಗಾದಲ್ಲಿ ಯಾವ ರೀತಿಯ ಮನೆಗಳನ್ನು ಕಟ್ಟಿಸಬೇಕೆಂದು ಯೋಚನೆ ಮಾಡಬೇಕಾಗುತ್ತದೆ. ಸ್ಟೀರಿಯೊ ಟೈಪ್ ಆಗಿ ಹರಿಬಿರಿಯಲ್ಲಿ ಮಾಡಬಾರದು. ಅಧಿಕಾರಿಗಳಿಗೆ ಟೈಂ ಇಲ್ಲ. ತಹಸಿಲ್ದಾರ್‌ರವರಿಗೆ ವೈರ್‌ಲೆಸ್ ಹೋಯಿತು. ಇದಕ್ಕೆ ಕಾರಣ ಏನು? ಸರಿಯಾದ ಪರಿಶೀಲನೆ ಇವರ ಬಗ್ಗೆ ಆಗಬೇಕು. ಫಲಾನುಭವಿಗಳನ್ನು ಸರಿಯಾಗಿ ಐಡೆಂಟಿಫೈ ಮಾಡಬೇಕು. ಆದರೆ ಸರ್ಕಾರಕ್ಕೆ

ಇದರ ಬಗ್ಗೆ ಚಿಂತನೆ ಇಲ್ಲ. ಕೇವಲ ಪಬ್ಲಿಸಿಟಿ ಇದಕ್ಕೆ ಬೇಕಾಗಿದೆ. 3 ಲಕ್ಷ ಸೈಟುಗಳನ್ನು ಹಂಚಿದ್ದೇವೆಂದು ಹೇಳುತ್ತಿದ್ದಾರೆ. 3 ಲಕ್ಷ ಸೈಟುಗಳನ್ನು ಹಂಚಿರಬಹುದು. ಇದನ್ನು ತಾವು ದಯವಿಟ್ಟು ಪರಿಶೀಲಿಸಿ. ಇದರಲ್ಲಿ ಎಷ್ಟು ಜನರು ಅರ್ಹರಿದ್ದಾರೆ? ಎಷ್ಟು ಜನರಿಗೆ ಪಟ್ಟಾ ಸಿಕ್ಕಿದೆ ಎಂಬುದನ್ನು ನೋಡಬೇಕು. ನಾನು ನನ್ನ ಅನುಭವವನ್ನು ಹೇಳುತ್ತಿದ್ದೇನೆ. ಅಧಿಕಾರಿಗಳು ಮೇಲಿನಿಂದ ಬಂದ ಆದೇಶಕ್ಕೆ ರಿಪೋರ್ಟನ್ನು ಕಳುಹಿಸಿದ್ದಾರೆ. ಆದರೆ ನಿಜವಾಗಿ ಅಲ್ಲಿ ಫಲಾನುಭವಿಗಳಿದ್ದಾರೆಯೆ? ನನ್ನ ಜಿಲ್ಲೆಯ ವಿಚಾರದಲ್ಲಿ ನೀವು ಇವತ್ತು ಹರಿಬಿರಿಯಾಗಿ ಮಾಡುವುದಕ್ಕಾಗು ವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಉಪಾಧ್ಯಕ್ಷಿಣಿಯವರೆ,. 2ಅಭಿಪ್ರಾಯವನ್ನು ಇವರು ಹೇಳುತ್ತಿದ್ದಾರೆ. ಮನೆಯನ್ನೂ ಕಟ್ಟಿಲ್ಲ ಎಂತಲೂ ಹೇಳುತ್ತಿದ್ದಾರೆ, ಮತ್ತು ಹರಿಬಿರಿಯಲ್ಲಿ ಮಾಡಬೇಡಿ ಎಂತಲೂ ಹೇಳುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಹಾಗೆ ಹೇಳುತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ:- ಅರ್ಹತೆ ಇಲ್ಲದಿದ್ದರೂ ಕೊಟ್ಟಿದ್ದಾರೆ, ಫಲಾನುಭವಿಗಳ ಲಿಸ್ಟ್ ಕೊಡಿ ಎಂದು ಕೇಳಿದರೆ ಅದು ತಪ್ಪಾಗುತ್ತದೆ. ಇದು ಒಂದು ಒಳ್ಳೆಯ ಕಾರ್ಯಕ್ರಮ. ತಾವು ಅಧ್ಯಕ್ಷರಾಗಿದ್ದೀರಿ. ಇದರಲ್ಲಿ ಏನು ತೊಂದರೆ ಇದೆ ಎಂಬುದನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡೋಣ. ಪ್ರತಿಯೊಂದು ವಿಚಾರದಲ್ಲೂ ನೀವು ಟೀಕೆ ಮಾಡಿಕೊಂಡು ಹೋದರೆ ನಾವು ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಈ ಆಶ್ರಯ ಯೋಜನೆಯನ್ನು ಸ್ವಾಗತಮಾಡಿದ್ದೇನೆಂದು ಮೊದಲೇ ಹೇಳಿದ್ದೇನೆ. ನನ್ನ ಉತ್ತರಕನ್ನಡ ಜಿಲ್ಲೆಯ ಮತ್ತು ಚಿಕ್ಕಮಗಳೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ ನನ್ನ ಮನಸ್ಸಿಗೆ ಬಹಳ ನೋವಾಗುತ್ತಿದೆ. ನಮ್ಮ ಈ ಎರಡೂ ಜಿಲ್ಲೆಯ ಶಾಸಕರಿಗೆ ಏನಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಒಂದೊಂದು ತಾಲ್ಲೂಕಿಗೆ 1000 ದಂತೆ ಮನೆಗಳನ್ನು ಕಟ್ಟಿಸುತ್ತೇವೆಂದು ನೀವು ಹೇಳಿದಿರಿ ತಾವು ಬೇಕಾದರೆ ಆರ್ಡರ್‌ನ್ನು ತೆಗೆದು ನೋಡಿ. ನಮ್ಮ ಕೈಯಿಂದ ಪಟ್ಟಾ ಡಿಸ್ಟ್ರಿಬ್ಯೂಟ್ ಮಾಡಿಸಿದಿರಿ. ಉತ್ತರ ಕನ್ನಡ ಜಿಲ್ಲೆಗೆ 11,600 ಮನೆಗಳನ್ನು ಕಟ್ಟಿಸುವುದಾಗಿ ಹೇಳಿದಿರಿ. ಮತ್ತೊಂದು ಆಜ್ಞೆಯನ್ನು 25 ದಿವಸದ ಹಿಂದೆ ಮಾಡಿದಿರಿ. ಒಂದೊಂದು ಕಾನ್ಸ್ಟಟ್ಯೂಯನ್ಸಿಗೆ 1000 ಮನೆಗಳಂತೆ. ಒಂದೊಂದು ಕ್ಷೇತ್ರಕ್ಕೆ 1 ಸಾವಿರದಂತೆ ಮಾಡಿದರೆ ಬೇರೆ ಜಿಲ್ಲೆಗಳಿಗೆ ಲಾಭವಾಗುತ್ತದೆ. ಆದರೆ ಉತ್ತರ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಇದು ಹಾನಿಯಾಗುತ್ತದೆ. ನಮ್ಮ ಜಿಲ್ಲೆಯಲ್ಲಿ 11ತಾಲ್ಲೂಕು 6ಮತದಾರ ಕ್ಷೇತ್ರಗಳಿವೆ. ಹನ್ನೊಂದೂವರೆ ಸಾವಿರ ಮನೆಗಳನ್ನು ತಾವು ಮೊದಲು ಮಂಜೂರು ಮಾಡಿದಿರಿ. ಅದು ಈಗ 6 ಸಾವಿರಕ್ಕೆ ಬಂತು. ತಾವು ಇದನ್ನು ಪರಿಶೀಲಿಸಬೇಕು, ಮತ್ತು ಬಡವರಿಗೆ ಏನು ಆಶ್ವಾಸನೆಯನ್ನು ಕೊಟ್ಟಿರಿ ಅದನ್ನು ಜಾರಿಗೆ ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ 'ಅಕ್ಷಯ' ಯೋಜನೆ. ಇದು ಯಾವ ಅಕ್ಷಯ ಪಾತ್ರೆಯೋ ಗೊತ್ತಿಲ್ಲ. ಸಣ್ಣ ಮಗುವಿಗೆ ಅದರಲ್ಲಿ ತಾವು ಒಂದು ಸ್ವಾಭಿಮಾನವನ್ನು ಡೆವಲಪ್ ಮಾಡಬೇಕು. ಈ ದೇಶದ ಭವಿಷ್ಯ ಇಂದಿನ ಮಗುವಿನ ಮೇಲೆ ಇದೆ. ಸರ್ಕಾರದವರು ಈ ಯೋಜನೆಯನ್ನು ಜಾರಿ ಮಾಡಿ ವೇಸ್ಟ್ ಮಾಡುತ್ತಿದ್ದಾರೆ. ಒಂದು ದಿನ ಮಗು ಶಾಲೆಗೆ ಹೋದರೆ ಒಂದು ರೂಪಾಯಿ ಒಂದು ಮಗುವಿಗೆ. ಇದು ಯಾವ ಸ್ಕೀಮ್ ಸ್ವಾಮಿ? ಎಷ್ಟು ಜನರಿಗೆ ಇದರಿಂದ ಲಾಭವಾಗಿದೆ. 20 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಟ್ಟು 18 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಇದರಿಂದ ನಿಜವಾಗಿಯೂ ಎಷ್ಟು ಜನರಿಗೆ ಹಣ ಸಿಕ್ಕಿದೆ. ಒಬ್ಬರಿಗೂ ಇಲ್ಲ. ಮೊದಲು ಮಿಡ್‌ಡೇ ಮೀಲ್ಸ್ ವಿಚಾರ ಇತ್ತು. ಎಂ. ಜಿ. ರಾಮಚಂದ್ರನ್ ಅವರು ತಮಿಳುನಾಡಿನಲ್ಲಿ ಮಾಡಿದ್ದರು. ಅದೇ ಒಂದು ಸ್ಕೀಮನ್ನು ಇಲ್ಲಿಯೂ ತರಬೇಕೆಂದು ಇತ್ತು. ಬೆಟರ್‌ಮೆಂಟ್ ಕಮಿಟಿಗೆ ಕಳುಹಿಸಿದರೆ, ನೀವು ಪಾತ್ರೆಗಳನ್ನುಕೊಡಿ, ನೀವು ಉರುವಲು ಕಟ್ಟಿಗೆಯನ್ನು ತನ್ನಿರಿ ಎಂದು ಹೇಳಿ ಅದಕ್ಕೆ ಅವರು ಒಪ್ಪಲಿಲ್ಲ. ಆದರೂ ಇದನ್ನು ಚುನಾವಣೆ ಸ್ಟಂಟ್, ಪಾಪ್ಯುಲಾರಿಟಿ ಸ್ಪೆಷಲ್ ಎಂದು ಇದನ್ನು ಜಾರಿಗೆ ತಂದಿರಿ. ನಾನು ಪ್ರಾಮಾಣಿಕವಾಗಿ ಕೇಳುತ್ತೇನೆ, ಇವತ್ತಿನ ದಿವಸ ಅನೇಕ ಕಡೆ ಶಾಲೆಗಳಲ್ಲಿ ಬೆಂಚ್ ಇಲ್ಲ, ಚಾಕ್‌ಪೀಸ್ ಇಲ್ಲ. ಇಂಥ ಯೋಜನೆಯನ್ನು ಜಾರಿಗೆ ತಂದಿರುತ್ತೀರಿ. ನಾವು ತಂದಂಥ ಪಠ್ಯಪುಸ್ತಕಗಳ ವಿತರಣೆ ಅದನ್ನು ಬಂದ್ ಮಾಡಿದಿರಿ. ಸಮವಸ್ತ್ರಗಳ ವಿತರಣೆಯನ್ನು ಬಂದ್ ಮಾಡಿದಿರಿ. ನಾನು ಇವತ್ತು ಕೇಳುತ್ತೇನೆ, ಈ ಯೋಜನೆಯಿಂದ ಎಷ್ಟು ಜನರಿಗೆ ಲಾಭವಾಗಿದೆ ಎಂದು. ಏತಕ್ಕೆ ಇಂಥದನ್ನು ಮಾಡುತ್ತೀರಿ. ಇದಕ್ಕೆ ಬದಲಾಗಿ ಮಕ್ಕಳಲ್ಲಿ ಸ್ವಾಭಿಮಾನವನ್ನು

ಬೆಳೆಸಿ, ಜನರಲ್ಲಿ ಸ್ವಾಭಿಮಾನವನ್ನು ಬೆಳೆಸಿ ಬ್ಯಾಂಕ್‌ನವರು ನಿಮಗೆ ಸಹಾಯ ಮಾಡಲು ತಯಾರಿಲ್ಲ, ಒಬ್ಬ ಬ್ಯಾಂಕ್ ಮ್ಯಾನೇಜರ್ ಸಹ ಇದನ್ನು ಒಪ್ಪಿಕೊಳ್ಳಲು ಮುಂದೆ ಬರಲಿಲ್ಲ, ಏತಕ್ಕೆಂದರೆ ಇದು ಸಾಧ್ಯವಿಲ್ಲ. 5 ದಿವಸ ಕ್ಲಾಸ್ ಮಾಡಿದರೆ ಹಣ ಅಕೌಂಟ್‌ನಲ್ಲಿ ಜಮಾ ಆಗಬೇಕು. 6ನೇ ದಿನ ಹೋಗಿ ಹಣವನ್ನು ಕೇಳಬೇಕು. ಆಗ 5 ರೂಪಾಯಿಗಳನ್ನು ಕೊಡುತ್ತಾರೆ. ಹೀಗಾಗಿ ನಾನು ಈ ಸರ್ಕಾರವನ್ನು ದಯವಿಟ್ಟು ಈ ಸ್ಕೀಮ್ ಬಿಟ್ಟುಬಿಡಿ ಎಂದು ಒತ್ತಾಯ ಮಾಡುತ್ತಿದ್ದೇನೆ. ಈ ಸ್ಕೀಮ್‌ನಲ್ಲಿ ತೊಡಗಿಸಿದ ಹಣವನ್ನು ಇನ್‌ಫ್ರಾಸ್ಟ್ರಕ್ಚರ್ ಮೇಲೆ ಖರ್ಚು ಮಾಡಿ, ಎಜ್ಯುಕೇಷನ್ ಮೇಲೆ, ಶಾಲಾ ಕೋಣೆಗಳ ನಿರ್ಮಾಣಕ್ಕಾಗಿ, ಬೆಂಚುಗಳಿಗೆ, ಪಠ್ಯಪುಸ್ತಕಗಳ ಮೇಲೆ ಖರ್ಚು ಮಾಡಿ.

ಶ್ರೀ ಕೆ. ಹೆಚ್. ರಂಗನಾಥ್:- ಮಾನ್ಯ ದೇಶಪಾಂಡೆಯವರೇ, ಬಹಳ ದಿವಸಗಳಿಂದ ಶಿಕ್ಷಕರು, ಬೆಂಚು, ಮೇಜು ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ:- ತಾವು ಹಿರಿಯ ಸದಸ್ಯರು ತಾವು ಹೇಳುತ್ತಿರುವುದನ್ನು ನಾವು ಒಪ್ಪಿಕೊಳ್ಳತ್ತೇವೆ. ಆದರೆ ಈ ಧೋರಣೆ ಸರಿಯೇ ಎಂದು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್:- ಯಾವುದು ?

ಶ್ರೀ ಆರ್. ವಿ. ದೇಶಪಾಂಡೆ:-'ಅಕ್ಷಯ' ಎಂದು ಒಂದೊಂದು ರೂಪಾಯಿ ಕೊಡುವುದು ಇದು ಸರಿಯೇ ಹೇಳಿ. ನಾನು ಒಪ್ಪಿಕೊಳ್ಳುತ್ತೇನೆ, ಕೊಡಬಾರದೆಂದು ಹೇಳುತ್ತಿಲ್ಲ, ಬಡವರಿಗೋಸ್ಕರ ಸಹಾಯ ಮಾಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್:- ಅದನ್ನಲ್ಲಾ ನಾನು ಹೇಳಿದ್ದು, ತಾವು ಬೆಂಚ್ ಇಲ್ಲ, ಮಾಸ್ತರ್ ಇಲ್ಲ, ಎಂದು ಹೇಳಿದರಲ್ಲ, ಮಾಸ್ತರ್, ಬೆಂಚ್ ಬಹಳ ದಿವಸಗಳಿಂದ ಇಲ್ಲ ಎಂದು ನಾನು ಹೇಳಿದೆ.

ಶ್ರೀ ಆರ್. ವಿ. ದೇಶಪಾಂಡೆ:- ಮತ್ತೊಂದು 'ಆರಾಧನ' ಬಹಳ ಒಳ್ಳೆಯದು. ಹಿಂದುಳಿದ ಜನಾಂಗಕ್ಕೆ, ಲಂಬಾಣಿ ಜನಾಂಗಕ್ಕೆ ಅವರಿಗೆ ಗುಡಿ ಕಟ್ಟಿಕೊಳ್ಳುವುದಕ್ಕೆ, ಜೀರ್ಣೋದ್ಧಾರ ಮಾಡುವುದಕ್ಕೆ ಎಷ್ಟೋ ಹಣವನ್ನು ಕೊಟ್ಟಿದ್ದೀರಿ. ನನ್ನ ಮತದಾರರ ಕ್ಷೇತ್ರದಲ್ಲಿ ಒಂದು ಗುಡಿಗೂ ಹಣ ಬಂದುದು ನನಗೆ ನೆನಪಿಲ್ಲ, ನಾನೂ ಒಂದು ಸಜೆಸ್ಟ್ ಮಾಡಿದ್ದೆ. ಅದರ ಎಸ್ಟಿಮೇಟನ್ನು ನಮ್ಮ ತಹಸೀಲ್ದಾರರು 18 ಲಕ್ಷ ರೂಪಾಯಿಗಳೆಂದು ಮಾದಿದ್ದಾರೆ. ನಾನು ಅವರಿಗೆ ಹೇಳಿದೆ ಏತಕ್ಕೆ ಇಷ್ಟೊಂದು ಎಸ್ಟಿಮೇಟ್ ಮಾಡಿದ್ದೀರಿ, ಅವರು 18 ರೂಪಾಯಿಗಳನ್ನು ಕೂಡ ಕೊಡುವುದಿಲ್ಲ, ಸರ್ಕಾರ ಆಜ್ಞೆಯಂತೆ ಜಿಲ್ಲೆಗೆ ಒಂದು ಲಕ್ಷ ರೂಪಾಯಿ ಬಂದಿದೆ. ಈ ಪ್ರಕಾರ ತಾವು ಸ್ಕೀಮ್ ತರುವುದಿದ್ದರೆ, ಇನ್ನೂ ಚುನಾವಣೆ ಬಹಳ ದೂರ ಇದೆ. ರಾಜ್ಯದ ಅಭಿವೃದ್ಧಿಯ ಬಗ್ಗೆ, ಬಡತನ ನಿವಾರಣೆಯ ಬಗ್ಗೆ, ರೈತರ ಸಮಸ್ಯೆಯ ಬಗ್ಗೆ ಚಿಂತನೆ ಮಾಡಿ. ರೈತರಿಗೆ ಬಡ್ಡಿಮನ್ನ ಮಾಡಲಿಕ್ಕೆ ರಾಜ್ಯದಲ್ಲಿ ಸಾಲ ಮನ್ನ ಮಾಡಲಿಕ್ಕೆ ತಾವು ಸಿದ್ಧರಿಲ್ಲ, ದಂಡದ ಬಡ್ಡಿಮನ್ನ ಮಾಡಲಿಕ್ಕೆ ತಾವು ಸಿದ್ದರಿಲ್ಲ, ಇಂಥ ಯೋಜನೆಗಳನ್ನು ತಂದು ಯಾವ ಒಳ್ಳೆಯ ಹೆಸರನ್ನು ನೀವು ಪಡೆಯಲಿಕ್ಕೆ ಸಾಧ್ಯವಿಲ್ಲ. ಮತ್ತೊಂದು ವಿವರಣೆ ಕೊಡಬಯಸುತ್ತೇನೆ. ಶುಶ್ರೂಷೆ ಎಂದು ಮುಂಜಾನೆ ಚರ್ಚೆಯಾಯಿತು. ಅದು ಏನು ಶುಶ್ರೂಷೆಯೋ ಗೊತ್ತಿಲ್ಲ, ಮಾನ್ಯ ಬಸವಲಿಂಗಪ್ಪನವರು ಇದರ ಬಗ್ಗೆ ಹೇಳಬೇಕು. ನಿಮ್ಮ ಮತದಾರರ ಕ್ಷೇತ್ರದಲ್ಲಿ ಎಷ್ಟು ಜನರಿಗೆ ಶುಶ್ರೂಷೆಯಾಗಿದೆ ಎಂದು. ಡಾಕ್ಟರುಗಳು ಇಲ್ಲ, ವ್ಯಾನುಗಳಿಲ್ಲ, ಔಷಧಿಗಳು ಇಲ್ಲ, ಜಿಲ್ಲಾಧಿಕಾರಿಗಳನ್ನು ಕೇಳಿದರೆ ಒಂದು ಲಕ್ಷ ರೂಪಾಯಿ ಜಿಲ್ಲೆಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಔಷಧಿಯನ್ನು ಕೇಳಿದರೆ ಔಷಧಿ ಇಲ್ಲ, ಆಯಿತು ಡಾಕ್ಟರುಗಳನ್ನು ಕೇಳಿದರೆ ಡಾಕ್ಟರುಗಳಿಲ್ಲವೆಂದರೆ ಯಾವ ರೀತಿ ಶುಶ್ರೂಷೆ ಮಾಡುವುದು.

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ದವಾಖಾನೆಯಲ್ಲಿ ಕೆಲಸ ಬಿಟ್ಟು ಹಳ್ಳಿಗೆ ಹೋಗಬೇಕು ಶುಶ್ರೂಷೆ ಮಾಡುವುದಕ್ಕೆ. ಯಾರಾದರೂ ರೋಗಿಗಳು ಆಸ್ಪತ್ರೆಗೆ ಬಂದರೆ ಅವರಿಗೆ ಔಷಧಿ ಇಲ್ಲವೆಂದು, ಚೀಟಿ ಬರೆದುಕೊಟ್ಟು ದುಡ್ಡು ಕೊಟ್ಟು ಔಷಧಿ ತೆಗೆದುಕೊಳ್ಳಿ ಎಂದು ಹೇಳುವುದು. ಆದಷ್ಟು ಜಾಗ್ರತೆ ಈ ಯೋಜನೆಯನ್ನು ಕೈ ಬಿಟ್ಟರೆ ಒಳ್ಳೆಯದಾಗಬಹುದೆಂದು ನನ್ನ ಅನಿಸಿಕೆ. ಇನ್ನು ಕೃಷ್ಣ ಬೇಸಿನ್ ಬಗ್ಗೆ ಹೇಳಿದ್ದೀರಿ. ಮಾಡಿ ಸಂತೋಷ, ಆದರೆ ಕೇವಲ ಡೆವಲಪ್‌ಮೆಂಟ್ ಅಥಾರಿಟಿ

ಮಾಡಿದರೆ ಯಾವ ಕೆಲಸವು ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಕಾವೇರಿ ವಿಚಾರದಲ್ಲಿ ಯಾವ ಸಮಸ್ಯೆ ನಿರ್ಮಾಣವಾಗಿದೆ ಅದೇ ಸಮಸ್ಯೆ ಕೃಷ್ಣದಲ್ಲೂ ನಿರ್ಮಾಣವಾಗುತ್ತದೆ. ಅಲ್ಲಿ ಪ್ರೈಯಾರಿಟಿ ಮೇಲೆ ಕೆಲಸ ಮಾಡ ಬೇಕಾಗಿದೆ. ಅಲ್ಲಿ ಇಂಜಿನಿಯರ್‌ಗಳು ಇಲ್ಲ. ಯಾರನ್ನಾದರೂ ಪೋಸ್ಟ್ ಮಾಡಿದರೆ ಅವರು ಇನ್‌ಫ್ಲೂಯನ್ಸ್ ತೆಗೆದುಕೊಂಡು ಬಂದು ವರ್ಗ ಮಾಡಿಸಿಕೊಂಡು ಹೋಗುತ್ತಾರೆ. ಈ ಯೋಜನೆಗಾಗಿ ಏನು ಹಣ ಬಂದಿದೆ ಅದು ಡೈವರ್ಟ್ ಆಗುತ್ತಿದೆ. ಹಾಗಾಗಿ ಕೇವಲ ಅಥಾರಿಟಿ ಮಾಡಿ ಅಲ್ಲಿ ಪ್ರಗತಿ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರಕ್ಕೆ ಒಂದು ಕಮಿಟ್‌ಮೆಂಟ್ ಬೇಕಾಗುತ್ತದೆ. ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಆ ಕಾರ್ಯಕ್ರಮವನ್ನು ಜಾರಿಗೆ ತಂದರೆ 2000 ಎ. ಡಿ. ಒಳಗೆ ನೀರು ಉಪಯೋಗ ಮಾಡುವುದಕ್ಕೆ ಸಾಧ್ಯವಾಗಬಹುದು. ಕಾವೇರಿ ವಿಚಾರದಲ್ಲಿ ಪ್ರಸ್ತಾಪ ಮಾಡಬಾರದೆಂದು ತೀರ್ಮಾನ ಆಗಿರುವುದರಿಂದ ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸಮಯ ಬಂದಾಗ ಮಾತನಾಡುತ್ತೇನೆ. ಪವರ್ ಜನರೇಷನ್ ಬಗ್ಗೆ ಹೇಳುವುದಾದರೆ, ಅದನ್ನು ಪ್ರೈವೇಟ್ ಸೆಕ್ಟಾರ್‌ಗೆ ಇನ್‌ವಾಲ್ವ್ ಮಾಡಬೇಕೆಂದು ಹೇಳಿದ್ದೀರಿ, ಮಾಡಿ ಸಂತೋಷ. ನಮ್ಮ ಸರ್ಕಾರ ಇದ್ದಾಗ ಹಣ ಇರಲಿಲ್ಲ. ಆಗ್ರಿಕಲ್ಚರಲ್ ಇಂಡಸ್ಟ್ರೀಸ್ ಡೆವಲಪ್ ಆಗಬೇಕಾದರೆ ಪವರ್ ಬೇಕು. ಇವತ್ತಿನ ದಿವಸ ನಾವು ಯಾವ ರೀಹ್ಯಾಬಿಲಿಟೇಷನ್ ಬಗ್ಗೆಯೂ ಚಿಂತನೆ ಮಾಡುತ್ತಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಕಾವೇರಿ 2 ನೇ ಹಂತದಲ್ಲಿ ರೀಹ್ಯಾಬಿಲಿಟೇಷನ್ ಇನ್ನೂ ನಡೆಯುತ್ತಿಲ್ಲ. ಈ ಬಗ್ಗೆ ವಿಶ್ವ ಬ್ಯಾಂಕಿನವರು ಕೂಡ ವಾರ್ನಿಂಗ್ ಕೊಟ್ಟಿದ್ದಾರೆ. ರೀಹ್ಯಾಬಿಲಿಟೇಶನ್‌ಗೆ ಪ್ರೈಯಾರಿಟಿ ಕೊಡಲಿಲ್ಲವೆಂದರೆ ಏಡ್ ಬಂದ್ ಮಾಡುತ್ತೇವೆಂದು ಹೇಳಿದ್ದಾರೆ. ಇರಥ ಪರಿಸ್ಥಿತಿಗೆ ಸರ್ಕಾರ ಬಂದರೆ ಯಾವ ಜನ ಸಹಕರಿಸಬೇಕು. ಆದ್ದರಿಂದ ಸರ್ಕಾರ ಮೊದಲು ಈ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಇತ್ತೀಚಿಗೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದರು. ಆ ಸಂದರ್ಭದಲ್ಲಿ ಬೇಡ್ತಿ ಯೋಜನೆಯನ್ನು ಜಾರಿಗೆ ತರುತ್ತೇವೆಂದು ಘೋಷಣೆ ಮಾಡಿ ಹೋದರು. ಅದಕ್ಕೆ ನಾವು ಹೇಳುತ್ತಿದ್ದೇವೆ; ಈ ಯೋಜನೆಯಿಂದ ನಮ್ಮ ಜಿಲ್ಲೆಯ ಬ್ಯಾಲೆನ್ಸ್ ತಪ್ಪಿ ಹೋಗುತ್ತದೆ ಎಂದು. ನಿಜವಾಗಿ ಬೇಡ್ತಿ ಯೋಜನೆಯ ಪ್ರಾಜೆಕ್ಟ್ ರಿಪೋರ್ಟ್ ತೆಗೆದು ನೋಡಿದರೆ ನಿಜವಾಗಿ ತೊಂದರೆಯಾಗುವುದು ಬಡವರಿಗೆ, ಹಿಂದುಳಿದವರಿಗೆ, ಅಲ್ಪ ಸಂಖ್ಯಾತರಿಗೆ. ಹಾಗಾಗಿ ಮುಖ್ಯ ಮಂತ್ರಿಗಳಿಗೆ ವಿನಂತಿಸುತ್ತೇನೆ, ದಯಮಾಡಿ ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಇದು ಇವತ್ತು ನಮ್ಮ ಬಡ್ಜೆಟ್‌ನಲ್ಲಿ ಇಲ್ಲ, ಪ್ಲಾನಿಂಗ್ ಕಮಿಷನ್‌ನ ಅಪ್ರೂವಲ್ಲ್ ಇಲ್ಲ, ಅಪ್ಪರ್ ತುಂಗಾ ಪ್ರಾಜೆಕ್ಟ್‌ಗೂ ಕೂಡ ಮುಖ್ಯ ಮಂತ್ರಿಗಳು ಹೋಗಿ ಅಡಿಗಲ್ಲು ಹಾಕಿ ಬಂದಿದ್ದಾರೆ. ಚುನಾವಣೆಯನ್ನು ಕಣ್ಮುಂದೆ ಇಟ್ಟುಕೊಂಡು ಈ ಪ್ರಕಾರದ ಕೆಲಸವನ್ನು ಇವತ್ತು ರಾಜ್ಯದ ಮುಖ್ಯ ಮಂತ್ರಿಗಳು ಮಾಡುತ್ತಾ ಹೋದರೆ ಯಾವ ರೀತಿ ಆಗಬಹುದು? ಪ್ಲಾನಿಂಗ್ ಕಮಿಷನ್ ಕ್ಲಿಯರೆನ್ಸ್ ತೆಗೆದುಕೊಂಡು ಅಡಿಗಲ್ಲು ಹಾಕಿದರೆ ಏನು ತೊಂದರೆಯಾಗುತ್ತದೆ? ಪ್ರತಿ ಹಂತದಲ್ಲಿಯೂ ಸರ್ಕಾರಕ್ಕೆ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಯಾವುದೇ ಯೋಜನೆ ಮಾಡುವಾಗ ಎಲ್ಲಾ ರೀತಿಯ ಮನ್ನಣೆ ತೆಗೆದುಕೊಂಡು ಜಾರಿಗೆ ತಂದರೆ ರೈತರಿಗೆ, ಜನರಿಗೆ, ಸರ್ಕಾರಕ್ಕೆ ಒಳ್ಳೆಯದಾಗುತ್ತದೆಂದು ನನ್ನ ಭಾವನೆ.

ಈ ವಿಶ್ವ ಯೋಜನೆ. ಮೊನ್ನೆ ಒಂದು ಎಗ್ಸಿಬಿಷನ್ ಮಾಡಿದರು ನಮ್ಮ ನಸೀರ್ ಸಾಹೇಬರು. ನಾನು ನೋಡುವುದಕ್ಕೆ ಮುದ್ದಾಂ ಹೋಗಿದ್ದೆ ಏನು 'ವಿಶ್ವ' ಇದು ಎಂದು. ವಿಶ್ವದಲ್ಲಿ ಇನ್ನೊಂದು ವಿಶ್ವ ನಮ್ಮ ನಜೀರ್ ಸಾಹೇಬರು ನಿರ್ಮಾಣ ಮಾಡಿದ್ದಾರೆ ಏನಿದೆ ಎಂದು ನೋಡಿದೆ. ಅವರು ಸಿಂಗಪುರ್‌ಗೆ ಹೋಗಿ ಬಂದಿದ್ದಾರೆ, ಸಂತೋಷ. 65 ಸಾವಿರ ರೂಪಾಯಿ ಸಿಂಗಪುರ್ ಡಾಲರ್ಸ್ ಆರ್ಡರ್ಸ್ ತಂದಿದ್ದಾರೆಂದು ಹೇಳಿದರು. ನಾನು ನೋಡಲಿಕ್ಕೆ ಹೋಗಿದ್ದೆ. ಸಣ್ಣ ಕೈಗಾರಿಕೆ ಮಂತ್ರಿಯಾಗಿ 65 ಸಾವಿರ ರೂಪಾಯಿ ಡಾಲರ್ಸ್ ಆರ್ಡರ್ಸ್ ಸಿಂಗಪುರ್‌ನಿಂದ ತಂದಿದ್ದಾರೆ. ನಾನು ನೋಡಿದೆ. ಏನಿದೆ ಅಲ್ಲಿ? ಲಿಡ್ಕರ್ ಷೂಗಳು, ಬ್ಯಾಗ್‌ಗಳು, ಹ್ಯಾಂಡ್‌ಲೂಂ ಡೆವಲಪ್ಮೆಂಟ್ ಕಾರ್ಪೋರೇಷನ್ ಫ್ಯಾಬ್ರಿಕ್ಸ್, ಹ್ಯಾಂಡಿಕ್ರಾಫ್ಟ್ ಆರ್ಟಿಕಲ್ಸ್. ಹೊಸದು ಏನು ಮಾಡಿದ್ದಾರೆ? ನಾವಿದ್ದಾಗ ಕೂಡ ಅದೇ ಇತ್ತಲ್ಲ. ಅದೇ ಲಿಡ್ಕರ್ ಅದೇ ಮಾಡುತ್ತಿದ್ದರು. ಹ್ಯಾಂಡಿಕ್ರಾಫ್ಟ್ ಡೆವಲಪ್ಮೆಂಟ್ ಕಾರ್ಪೋರೇಷನ್ ಅದೇ ಮಾಡುತ್ತಿತ್ತು. ಹ್ಯಾಂಡ್‌ಲೂಂ ಕಾರ್ಪೋರೇಷನ್ ಅದೇ ಮಾಡುತ್ತಿತ್ತು. ಹೊಸದಾಗಿ ಏನು ಮಾಡಿದಿರಿ? ನಜೀರ್ ಸಾಹೇಬರಿಗೆ ಅಷ್ಟೇ ಅಲ್ಲ, ನನ್ನ ಮಾನ್ಯ ಶಾಸಕ ಮಿತ್ರರಿಗೆ ಕೇಳುತ್ತೇನೆ. ನಿಮ್ಮ ಮತದಾರ ಕ್ಷೇತ್ರದಲ್ಲಿ ಒಂದಾದರೂ ವಿಶ್ವ ಯೋಜನೆ ಆಗಿದೆಯೇ ಹೇಳಿ. ಎಷ್ಟು ಜನರಿಗೆ ಕೆಲಸ ಸಿಕ್ಕಿದೆ ಹೇಳಿ. ಮಾನ್ಯ ಪ್ರಧಾನ ಮಂತ್ರಿಯವರು ಬರುತ್ತಾರೆ. ಪಾಪ ಅವರು ಒಳ್ಳೆಯವರು. ಕರೆದಾಗ ಬರಬೇಕಾಗುತ್ತದೆ. ಉದ್ಘಾಟನೆ ಮಾಡಿ ಹೋಗಿದ್ದಾರೆ. ಆದರೆ ಜಾಣರು. ಬರುತ್ತೇನೆ ಎಂದು ಪುನಃ ಬರಲಿಲ್ಲ. ಅವರಿಗೆ ರಿಪೋರ್ಟ್ ಹೋಗಿರಬಹುದು ಇದು ಪಕ್ಕಾ ಮೋಸ

ಎಂದು. ಎಂಪ್ಲಾಯ್ಮೆಂಟ್ ಜನರೇಷನ್ ಇಲ್ಲ, ಹೊಸದು ಯಾವುದೂ ಇಲ್ಲ. ಕೇವಲ ಪಬ್ಲಿಸಿಟಿ ಸಲುವಾಗಿ ಹೊಸ ವಿಶ್ವ ನಿರ್ಮಾಣ ಮಾಡುವುದಕ್ಕೆ ಹೋದಿರಿ. ಸ್ವಾಮಿ ಅಲ್ಲಿ ಏನಿದೆ? ಎಷ್ಟು ಕೈಗಾರಿಕೆಗಳು ನಿರ್ಮಾಣ ಆಗಿವೆ? ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡಬೇಕು. ಎಷ್ಟು ಕೈಗಾರಿಕೆ ನಿರ್ಮಾಣ ಮಾಡಿದ್ದೀರಿ? ಎಷ್ಟು ಜನರಿಗೆ ಸಹಾಯ ಆಗಿದೆ? ಎಷ್ಟು ಎಂಪ್ಲಾಯ್ಮೆಂಟ್ ಜನರೇಟ್ ಆಗಿದೆ.?

ಶ್ರೀ ನಸೀರ್ ಅಹಮದ್:- ಅದರ ಬಗ್ಗೆ ಡಿಮ್ಯಾಂಡ್ಸ್ ಬಂದಾಗ ಹೇಳುವುದಕ್ಕೆ ಸುಮಾರು I need nearly one hour to explain this programme. ತಾವು ದಯವಿಟ್ಟು ನನ್ನ ಕಚೇರಿಗೆ ಬಂದರೆ ಎಷ್ಟು ಜನರಿಗೆ ಎಂಪ್ಲಾಯ್ಮೆಂಟ್ ಸಿಕ್ಕಿದೆ ಎಷ್ಟು ಯೂನಿಟ್ಸ್ ಬಂದಿದೆ ಎಂಬುದನ್ನು ತೋರಿಸುತ್ತೇನೆ.

I am prepared to take a team of legislators if the Hon'ble Speaker permits, to the places where this programme is going on and how many people are benefited and what are the products and all that. In fact, I am going to inaugurate a Showroom in Singapore on 1st May.

ಶ್ರೀ ಆರ್. ವಿ. ದೇಶಪಾಂಡೆ:- ಸಿಂಗಪುರ್‌ಗೆ ಕರೆದುಕೊಂಡು ಹೋಗಿ.

(INTERRUPTIONS)

ಶ್ರೀ ಆರ್. ವಿ. ದೇಶಪಾಂಡೆ:- ವೆರಿ ಗುಡ್. ಒಳ್ಳೆಯ ಕೆಲಸ ಮಾಡಿದರೆ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಇಲ್ಲಿಯವರೆಗೆ ಮಾಡಿಲ್ಲ. ಬಹಳ ಜನರಿಗೆ ಐ. ಆರ್. ಡಿ. ಪಿ. ಸಾಲ ಕೊಟ್ಟು ಅಸೆಟ್ಸ್ ಕ್ರಿಯೇಟ್ ಮಾಡಿದೆ ಎಂದು ಹೇಳುತ್ತೀರಿ. ನನ್ನ ಕ್ಷೇತ್ರದಲ್ಲಿ ಮೂರು ತಾಲ್ಲೂಕಿನಲ್ಲಿ ಮಾಡಿದೆ ಎಂದು ಹೇಳಿದ್ದಾರೆ. ನಾನು ಇಂಡಸ್ಟ್ರೀಸ್ ಸೆಕ್ರಟರಿಯವರಿಗೆ ಕೇಳಿದೆ ಏನು ಕಾರ್ಯಕ್ರಮ ಎಂದು. ನಿಮ್ಮ ತಾಲ್ಲೂಕಿನಲ್ಲಿ ಒಂದು ಷಾಪ್ ಯೂನಿಟ್ ಹಾಕುತ್ತೇವೆ, ನೀವು ಹೋಗಿ ಇನ್ನಾಗುರೇಟ್ ಮಾಡಿ ಎಂದು ಹೇಳಿದರು. ಏನು ಷಾಪ್ ಯೂನಿಟ್ ಎಂದರೆ ಒಂದು ಸಣ್ಣ ಮೆಷನ್, ಚಾಕು ತಯಾರು ಮಾಡುವುದು. ಒಂದು ಸಾವಿರ ರೂಪಾಯಿ ಅದು. ಅದೇ ಕಥೆ. ಯಾವ ಯೋಜನೆ ಇಲ್ಲ, ಯಾವ ಕಾರ್ಯಕ್ರಮ ಇಲ್ಲ. ಲಕ್ಷಾವಧಿ ರೂಪಾಯಿ ಪಬ್ಲಿಸಿಟಿಗೋಸ್ಕರ ಖರ್ಚು ಮಾಡಿದ್ದೀರಿ. ಪಬ್ಲಿಸಿಟಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಅವಶ್ಯಕತೆ ಏನಿತ್ತು? ಏನೇನೂ ಅವಶ್ಯಕತೆ ಇರಲಿಲ್ಲ. ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಗ್ರಾಮಾಂತರ ಪ್ರದೇಶದಲ್ಲಿ ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆ ಬೆಳೆಸಿ. ಸಣ್ಣ ಕೈಗಾರಿಕೆ ಬೆಳೆಸಿ. ಇದರಲ್ಲಿ ಯಾವ ಯೂನಿಟ್ಗಳು ಹೊಸದಲ್ಲ. ನಾನು ಕಣ್ಣಿನಿಂದ ನೋಡಿದ್ದೇನೆ. ನಾನು ಜಾರ್ಜ್ ಅವರಿಗೆ ಹೇಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ಗುಲ್ಬರ್ಗ ಜಿಲ್ಲೆಯಲ್ಲಿ 115 ಮಂದಿಗೆ ಸಾಲ ಕೊಟ್ಟಿದ್ದೀರಿ. ರಾಯಚೂರಿನಲ್ಲಿ 300 ಮಂದಿಗೆ ಸಾಲ ಕೊಟ್ಟಿದ್ದೀರಿ. ಒಟ್ಟು 7 ಕೋಟಿ ರೂಪಾಯಿ ವಿಶ್ವ ಪ್ರೋಗ್ರಾಂನಲ್ಲಿ ಈ ವರ್ಷ ಖರ್ಚು ಮಾಡಿದ್ದೀರಿ. ನೀವೇ ಉತ್ತರ ಕೊಟ್ಟಿದ್ದೀರಿ ಐದುನೂರು ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಎಂದು ಹೇಳಿ ಖರ್ಚು ಮಾಡಿರುವುದು ಬರೀ 7 ಕೋಟಿ ರೂಪಾಯಿ.

ಡಾ. ಜೀವರಾಜ ಆಳ್ವ:- ವಿಶ್ವದ ಜನಕ ಬೇರೆ. ಅವರನ್ನು ಕೇಳಿ. You are very uncharitable to Sri Nazir.

SRI R. V. DESHAPANDE:- Mr. Nazir is not to be blamed here. It is the brainchild of somebody-else. He has been made the scapegoat.

Sri NAZIR AHAMED:- I have not been made a scapegoat. It is the vision of the Chief Minister. It is his dream. He wanted that our industries have to be developed. That is the vision. It has been implemented with all earnestness and sincerity. You please come, I am prepared to take you to the villages where this

programme is implemented and how many people are benefited. You must have seen that so many editorials have been written in leading newspapers about this programme. At the same time, you should also appreciate about the quality and praise the same. This is the first time this kind of a programme is implemented.

SRI R. V. DESHAPANDE:- I am talking about the scheme. What is the rate of interest ? Can you tell me ? I am putting a clear cut question ? There are organised loans...

SRI NAZIR AHMED:- All those details will be given when it comes for discussion at the time of demands. I am prepared to answer now also if the Hon'ble Speaker permits,

ಶ್ರೀ ಆರ್. ವಿ. ದೇಶಪಾಂಡೆ:- ವಿಶ್ವದ್ದು ರೇಟ್ ಆಫ್ ಇಂಟರೆಸ್ಟ್ ಏನು?

ಡಾ. ಜೀವರಾಜ ಆಳ್ವ:- 'ವಿಶ್ವ' ಬಹಳ ದೊಡ್ಡ ವಿಷನ್, ಡ್ರೀಮ್ ಎಂದು ಹೇಳುತ್ತಿದ್ದೀರಲ್ಲವೇ? ಹಾಗಾದರೆ 'ವಿಶ್ವ' ಬಗ್ಗೆಯೇ ಅರ್ಧ ಗಂಟೆ ಚರ್ಚೆ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಮ್ಮ ಊರಿನಲ್ಲಿ ವಿಶ್ವಾ ಪ್ರೋಗ್ರಾಮ್ ಅಡಿಯಲ್ಲಿ ಏನು ನಡೆಯಿತು ಎನ್ನುವುದು ಸಚಿವ ಶಿವಕುಮಾರ್‌ರವರಿಗೆ ಗೊತ್ತಿದೆ. ನಮ್ಮ ಊರಿನಲ್ಲಿ ಒಬ್ಬ ಶೆಟ್ಟರ ಹುಡುಗ ಜಿಲೇಬಿ ಅಂಗಡಿ ಇಟ್ಟಿದ್ದ. ಅದು ಬಹಳ ಚೆನ್ನಾಗಿ ನಡೆಯುತ್ತಾ ಇತ್ತು. ವಿಶ್ವ ಅಡಿಯಲ್ಲಿ ಅವನಿಗೆ ಸಾಲ ಕೊಡಿಸುತ್ತೇವೆಂದು ನನ್ನನ್ನು ಕರೆದುಕೊಂಡು ಹೋಗಿ ಅಕ್ಟೋಬರ್ 3ನೇ ತಾರೀಖು ಸರ್ಟಿಫಿಕೇಟ್ ಕೊಡಿಸಿದರು. ಆದಾದಮೇಲೆ ಖಾರಾಸೇವೆ ಅಂಗಡಿಗೆ ಸಾಲ ಕೊಡಿಸುತ್ತೇವೆಂದರು. ಅದಕ್ಕೂ ಸಾಲದ ಲೆಟರ್ ಕೊಡಿಸಿದರು. ಅವರು ಖಾರಾಸೇವೆ ಅಂಗಡಿ, ಜಿಲೇಬಿ ಅಂಗಡಿ ಮುಚ್ಚಿಬಿಟ್ಟು ಬೆಂಗಳೂರಿಗೆ 3 ತಿಂಗಳಿಂದ ಓಡಾಡುತ್ತಿದ್ದಾರೆ. ಇನ್ನೂ ಒಂದು ರೂಪಾಯಿ ಬಿಡುಗಡೆ ಆಗಿಲ್ಲ. ಖಾರಾಸೇವೆ ಅಂಗಡಿ, ಜಿಲೇಬಿ ಅಂಗಡಿ ಕ್ಲೋಸ್ ಆಯಿತು. ಆಕ್ಚುಯಲ್ಲಿ ಅವರು ಈಗ ನಿರುದ್ಯೋಗಿಗಳು ಆಗಿದ್ದಾರೆ. ಕಡೇ ಪಕ್ಷ ಅವರಿಗೆ ಸಾಲ ರಿಲೀಸ್ ಮಾಡಿಸಬೇಕು.

ಶ್ರೀ ನಜೀರ್ ಅಹಮದ್:- ಸಿಂಧ್ಯಾ ಅವರು ಈ ವಿಷಯವನ್ನು ಇವತ್ತು ಪ್ರಸ್ತಾಪ ಮಾಡುತ್ತಿದ್ದಾರೆ. I would have been happy if you had brought it to my notice earlier. I would have taken action.

Sri P. G. R. SINDHYA:- Everything cannot be brought to your notice. I just now brought to the notice of the Director. ನೋಡಿ ಸ್ವಾಮಿ, ಈಗಾಗಲೇ 6 ತಿಂಗಳು ಓಡಾಡಿ ಕಾಲು ಚಪ್ಪಲಿ ಸವೆಸಿದ್ದಾರೆ. ಮತ್ತೆ ಇನ್ನೊಂದು ಯಾವುದಕ್ಕೆ ಕೊಟ್ಟಿದ್ದಾರೆಂದರೆ ಪಂಕ್ಚರ್ ಹಾಕುವ ಅಂಗಡಿಗೆ ಕೊಟ್ಟಿದ್ದಾರೆ. ಅವರಿಗೆ ಹಣ ರಿಲೀಸ್ ಮಾಡಿಲ್ಲ. ಏನು ವಿಶ್ವ? ಜಿಲೇಬಿ, ಖಾರಸೇವೆ, ಕಲ್ಯಾಣ ಸೇವೆ ಅಂಗಡಿಗೇ?

ಡಾ. ಜೀವರಾಜ ಆಳ್ವ:- ಗರೀಬೀ ಹಟಾವ್ಹೋ, 20 ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಮಾಡಿ ಸ್ವಾಮಿ. 'ವಿಶ್ವ' ಎಂದು ಹೇಳಿ ಸಿಂಗಾಪುರಕ್ಕೆ ಹೋಗಲಿಕ್ಕೆ....

(ಗೊಂದಲ)

ಶ್ರೀ ನಜೀರ್ ಅಹಮದ್:- ಜೀವರಾಜ ಆಳ್ವರು ಒಂದು ಪ್ರಶ್ನೆ ಹಾಕಿದರು. ವಿಶ್ವ ಎಂದು ಹೇಳಿ ಫಾರಿನ್ ಕಂಟ್ರೀಗೆಲ್ಲಾ ಹೋಗಿದ್ದರು ಎಂದು....

Dr. JEEVARAJ ALVA:- We appreciate your efforts. Whatever cottage industries are there, permit them; they could be done.

Sri R. V. DESHPANDE:- I have no personal objection for that.

ಆದರೆ ನಾವು ಇದರ ಆಳ ತಿಳಿದುಕೊಳ್ಳಬೇಕು. ಲಿಮಿಟೇಷನ್ಸ್ ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

ಶ್ರೀ ನಜೀರ್ ಅಹಮದ್:- ತಾವು ಅರ್ಥ ಮಾಡಿಕೊಳ್ಳಬೇಕು. ಕೆಲವು ಕಡೆ ವಿಲೇಜರ್ಸ್ ಟೌನ್‌ಗೆ ಬರುತ್ತಾರೆ. There will be no cycle shops, no provision or place for motor repairs. We wanted to identify people and we wanted to give tools and everything likewise.

ಒಂದು ಎಲೆಕ್ಟ್ರಿಕ್ ಮೋಟರ್ ರಿಪೇರಿ ಮಾಡುವುದಕ್ಕೆ ಜನರು ಪಟ್ಟಣಕ್ಕೆ ಬಂದು ಕರೆದುಕೊಂಡು ಹೋಗಬೇಕು. We are identifying electricians in rural areas and we are going to give them tool kit so that in villages motors can be repaired. This is our Scheme. ಅಲ್ಲಿ ಏನು ಮೋಟರ್ಸ್ ಇವೆ ಅವನ್ನು ಅವರು ಅಲ್ಲೇ ರಿಪೇರಿ ಮಾಡಿಕೊಳ್ಳಬಹುದು, ಇದು ಸ್ಕೀಮ್. ಜೊತೆಗೆ ಸಿಂಗಾಪುರ್ ಬಗ್ಗೆ ತಾವು ಹೇಳಿದಿರಿ. ಅಲ್ಲಿಗೆ ಹೋದಾಗ we could able to get some orders. Sri J. H. Patel when he was the Minister he had gone there. How many times other Ministers have gone? ಜೆ. ಹೆಚ್. ಪಟೇಲ್ ಅವರು ಮಂತ್ರಿಗಳಾಗಿದ್ದಾಗ ಹೋಗಿಲ್ಲವೇ? How many time others have gone ?

(INTERRUPTIONS)

Dr. JEEVARAJ ALVA:- I do appreciate. I swear. There is nothing wrong in it. Please don't mistake me.

ಶ್ರೀ ಆರ್. ವಿ. ದೇಶಪಾಂಡೆ:- ಫಾರಿನ್‌ಗೆ ಹೋಗುವ ಬಗ್ಗೆ ತಕರಾರು ಇಲ್ಲ. ನಾನು ಹೇಳುವ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ತಪ್ಪು ತಿಳಿದುಕೊಳ್ಳಬಾರದು. ನಿಮ್ಮ 'ಅಕ್ಷಯ' ಏನು ಬೋಗಸ್ ಯೋಜನೆ ಇದೆ ಅದೇ ಪ್ರಕಾರ 'ವಿಶ್ವ' ಕೂಡ ಬೋಗಸ್. ಯಾರಿಗೂ ಲಾಭ ಇಲ್ಲ. ಈ ಬಗ್ಗೆ ನಿಮ್ಮ ಆತ್ಮಕ್ಕೆ ನೀವೇ ಪ್ರಶ್ನೆ ಮಾಡಿಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ದೇಶಪಾಂಡೆಯವರೇ, ಬೋಗಸ್ ಎಂದು ಯಾವಾಗ ಗೊತ್ತಾಗುತ್ತದೆ ? ವಿಶ್ವಕ್ಕೂ ನಮ್ಮ ಅಕ್ಷಯಕ್ಕೂ ವ್ಯತ್ಯಾಸ ಇದೆ. ವಿಶ್ವ ಈಗಾಗಲೆ ಲಾಂಚ್ ಆಗಿದೆ. ಅಕ್ಷಯ it is yet to be launche.

ಲಾಂಚ್ ಆದ ಮೇಲೆ whether it is bogus or otherwise, ಎಂದು ಆಮೇಲೆ ಅಸೆಸ್‌ಮೆಂಟ್ ಮಾಡಿ. ಅಕ್ಷಯದ ಬಗ್ಗೆ ಹೇಳಿಬಿಡುತ್ತೇನೆ. From November it is effective. We have to operate through banks. ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಹಣ ಏನಿದೆ ಅದನ್ನು ನಾವು ನಮ್ಮ ಡಿಡಿಪಿಐಗಳಿಗೆ ರಿಲೀಸ್ ಮಾಡಿದ್ದೇವೆ. 18 ಕೋಟಿ ಹಣ ಅದು, ಸುಮಾರು 20 ಕೋಟಿ ರಿಲೀಸ್ ಮಾಡಿದ್ದೇವೆ. ಅದು ಎರಡು ತಿಂಗಳ ಹಣ. ಜನವರಿ ಮತ್ತು ಫೆಬ್ರುವರಿ ತಿಂಗಳ ಹಣವನ್ನು ರಿಲೀಸ್ ಮಾಡಬೇಕು. ನಮ್ಮ ಸ್ಕೀಮ್ will be operated by opening accounts in the banks. It will be credited to mother's account preferably or else guardians' account.

ಮದರ್ ಅಕೌಂಟ್ಸ್, ತಾಯಿ ಇಲ್ಲದಿದ್ದರೆ ಪೋಷಕರು ಅವರ ಬ್ಯಾಂಕ್ ಅಕೌಂಟ್ಸ್‌ನಲ್ಲಿಟ್ಟು ಅಲ್ಲಿ ಡಿಪಾಸಿಟ್ ಮಾಡಬೇಕೆಂದು ಹೇಳಿ ನಮ್ಮ ಸ್ಕೀಮ್ ಇದೆ. It has gone half-way through in the implementation. ಪ್ರತಿ ಜಿಲ್ಲೆಗೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾವು ಏನು ಹೇಳಿದ್ದೇವೆಂದರೆ we have given instructions to go ahead. Banks have their own limitations. ಬ್ಯಾಂಕ್‌ನವರು ಏನು ಹೇಳುತ್ತಾರೆಂದರೆ 35-40 ಲಕ್ಷ ಅಕೌಂಟ್ಸ್ ಮೆಂಟೇನ್ ಮಾಡುವುದಕ್ಕೆ ಕಷ್ಟವಾಗುತ್ತದೆ. ನಮ್ಮ

ಬ್ಯಾಂಕ್‌ನಲ್ಲಿ ಸಿಕ್ ಆದರೆ ಅದು ತಾಪತ್ರೆಯಾಗುತ್ತದೆಂದು ಹೇಳಿದರು. ಅದಕ್ಕೆ ನಾವೀಗ ಡೈರೆಕ್ಷನ್ ಕೊಟ್ಟಿದ್ದೇವೆ, ಎಲ್ಲೆಲ್ಲಿ ಅಕೌಂಟ್ಸ್ ಈಗಾಗಲೇ ಇದೆ ಅದು ತಮಗೆ ಗೊತ್ತಿದೆ. ಐಆರ್‌ಡಿಪಿ ಈ ತರಹ ಬೇರೆ ಬೇರೆ ಕಾರ್ಯ ಕ್ರಮಗಳಲ್ಲಿ ಬಡತನರೇಖೆಗಿಂತ ಕೆಳಗೆ ಇರುವವರ ಕಾರ್ಯಕ್ರಮಗಳಲ್ಲಿ ಅಕೌಂಟ್ಸ್ ಓಪನ್ ಆಗಿದೆ. ಅಂತಹ ಅಕೌಂಟ್ಸ್‌ಗಳು ಇದ್ದರೆ ಅವುಗಳನ್ನು ಐಡೆಂಟಿಫೈ ಮಾಡಿ ಆ ಅಕೌಂಟ್ಸ್‌ಗೆ ಹಣ ಹಾಕಿಯೆಂದು ನಾವು ಹೇಳಿದ್ದೇವೆ. That process is going on.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಒಂದು ನಿಮಿಷ ಮಾನ್ಯ ಮಂತ್ರಿಗಳು ಈಲ್ಡ್ ಆದರೆ, ತಮ್ಮ ಪ್ರಕಾರ it is haif-way through.

ಇದರಲ್ಲಿ ಏನಾಗಿದೆ ಅಂದರೆ ತಾವು ಏನು ಹೇಳುತ್ತಿದ್ದೀರಿ ಅದು ಲೇಟೆಸ್ಟ್. ಒಬ್ಬ ಸ್ಟೂಡೆಂಟ್‌ಗೆ ಒನ್ ಡೇಗೆ ಒಂದು ರೂಪಾಯಿ ಕೊಡತಕ್ಕದ್ದು ಏನಿದೆ ಅದು ತಾವು ಮೊದಲು ಫುಡ್ ಕೊಡುತ್ತೇವೆಂದು ಹೇಳಿದಿರಿ, ಆಮೇಲೆ ಎಗ್ ಕೊಡುತ್ತೇವೆಂದು ಹೇಳಿದಿರಿ, ಈಗ ರೂಪಾಯಿಗೆ ಬಂದಿದ್ದೀರಿ. ಇಲ್ಲಿ ಏನಾಗಿದೆ ಅಂದರೆ ಕೆಲವು ಆಫೀಸರ್ಸ್‌ಗಳು ತಾವೇನು ಡಿಡಿಪಿಐಗಳಿಗೆ 18 ರಿಂದ 20 ಕೋಟಿ ರೂಪಾಯಿ ರಿಲೀಸ್ ಮಾಡಿದ್ದೀರಲ್ಲ ಅದರಲ್ಲಿ ಅವರು ತಪ್ಪಲೆ, ಚೆಂಬು, ಪಾತ್ರೆಗಳನ್ನು ತೆಗೆದುಕೊಂಡಿದ್ದಾರೆ. ಇದು ನನಗೆ ಚೆನ್ನಾಗಿ ಗೊತ್ತಿದೆ. ಇದು ನಿಮ್ಮ ಗಮನಕ್ಕೆ ಬಂದಿಲ್ಲ. ನೀವು ಕೊಟ್ಟ ಹಣದಲ್ಲಿ ಅವರು ತಪ್ಪಲೆ, ಚೆಂಬು ತೆಗೆದುಕೊಂಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಸಿಂಧ್ಯಾರವರೇ ಒಂದು ನಿಮಿಷ ಈಲ್ಡ್ ಆಗಿ. ತಾವು ಮಿಸ್ಟೇಕ್ ಮಾಡಿಕೊಳ್ಳುವುದು ಬೇಡ you are mistaken. There is no mistaking on this matter. Money has gone only the other day. How can they purchase?

ಶ್ರೀ ಪಿ. ಜಿ. ಆರ್. ಸಿಂಧ್ಯ:- ತೆಗೆದುಕೊಂಡಿದ್ದಾರೆ. I stand by my statement. I know it. ನನಗೆ ಗೊತ್ತಿದೆ.

SRI M. VEERAPPA MOILY:- I am sorry. No.No. I am on my legs.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಜಿಲ್ಲಾ ಪರಿಷತ್‌ನ ವ್ಯಾಪ್ತಿಯಲ್ಲಿ ಬರತಕ್ಕ ಡಿಡಿಪಿಐಗಳು ತಪ್ಪಲೆ, ಚೆಂಬು, ಪ್ಲೇಟು, ಅಡಿಗೆ ಮಾಡುವ ಪಾತ್ರೆಗಳನ್ನು ಮತ್ತು ಸಾಮಾನುಗಳನ್ನು ತೆಗೆದುಕೊಟ್ಟಿದ್ದಾರೆ.

SRI M. VEERAPPA MOILY:- Money has gone to the Zilla Parishad. That is a different scheme.

ತಾವು ಹೇಳತಕ್ಕ ತಪ್ಪಲಿ, ಚೆಂಬು, ಪ್ಲೇಟು, ಪಾತ್ರೆ ತೆಗೆದುಕೊಟ್ಟಿರುವುದು ಅದು ಬೇರೆ ಸ್ಕೀಮ್ ಅದು ಜಿಲ್ಲಾ ಪರಿಷತ್‌ನದು.

ಅಧ್ಯಕ್ಷರು:- ಅದು ಮಾನ್ಯ ಸಿಂಧ್ಯಾರವರು ಮಾಡಿದ ಸ್ಕೀಮ್ ಇರಬೇಕು. ಅದಿರಲಿ, ಆ ಸ್ಕೀಮ್‌ನಲ್ಲಿ ಚೆಂಬು, ಪಾತ್ರೆ ಅದೆಲ್ಲ ಆಯಿತು. ಈಗ ಇವರ ಸ್ಕೀಮ್‌ನಲ್ಲಿ ರೂಪಾಯಿ ಬರುತ್ತಾ ಇದೆ.

SRI M. VEERAPPA MOILY:- There is no mistaking in the facts. It will be paid through the banks only and that too to mother's account.

5.05 ಪಿ. ಎಂ.

Even if a single rupee is diverted I will keep that officer under suspension. He has no liberty. Why are you arguing on facts which are irrelevant. I keep the challenge open. If I give incorrect fact, then tomorrow there will be breach of privilege. I know what are my limitations.

(INTERRUPTIONS)

SRI M. VEERAPPA MOILY:- He cannot pay anything and he cannot purchase anything. The duty of the DDPI is only to pass on the amount to the bank. Teachers have no role to play. Even the DDPI has no role to play except that he has to go to the treasury and he has to deposit only to the bank. On 25th there was a State level bankers meeting. We have prevailed upon the Finance Minister to see that it is enforced. We will find out alternative. No question hypocracy or bogus things. ಈ ಒಂದು ರೂಪಾಯಿ ಪೇರೆಂಟ್ಸ್‌ಗೆ ಕೊಟ್ಟರೆ ಅವರು ಸದುಪಯೋಗಪಡಿಸಿಕೊಳ್ಳುತ್ತಾರೋ ಇಲ್ಲವೋ ಎನ್ನುವುದು ಬೇರೆ ಪ್ರಶ್ನೆ.

MR. SPEAKER:- Whether a separate pass book is issued.

Sri M. VEERAPPA MOILY:- Once in a month it will be credited to their respective accounts. There is some reluctancy on the part of the banks.

(INTERRUPTIONS)

SRI M. VEERAPPA MOILY:- Our experience is that there are number of accounts in IRDP and other schemes.

ಈಗಾಗಲೇ ಪೇರೆಂಟ್ಸ್ ಹೆಸರಿಗೆ ಅಕೌಂಟ್ಸ್ ಇದೆ. ಐ. ಆರ್. ಡಿ. ಪಿ. ಮತ್ತು ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಅಕೌಂಟ್ಸ್ ಇದ್ದು ಅವುಗಳಿಗೆ ಡೆಪಾಸಿಟ್ ಮಾಡುವುದಕ್ಕೆ ಬ್ಯಾಂಕ್‌ನವರು ಆಕ್ಷೇಪಣೆ ಮಾಡುವುದಕ್ಕೆ ಆಗುವುದಿಲ್ಲ. ಉಳಿದ ಅಕೌಂಟ್ಸ್ ಏನಿದೆ ಅದನ್ನೂ ಸ್ವೀಕಾರ ಮಾಡಬೇಕೆಂದು ಹೇಳಿದ್ದೇವೆ. Not even a pie has been spent or given in exchange or some materials have been purchased. There is no question of that sort.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಈ 'ವಿಶ್ವ' ಬಗ್ಗೆ ಬಹಳ ಹೇಳುತ್ತಾರೆ. ಎಂ. ಟಿ. ಆರ್. ಮಸಾಲೆ....

ಅಧ್ಯಕ್ಷರು:- ನಾವೀಗ ವಿಶ್ವದಿಂದ ಮುಂದುವರೆದು ಅಕ್ಷಯಕ್ಕೆ ಬಂದಿದ್ದೇವೆ. I would pose a question.

ಶ್ರೀ ಕೆ. ಎಸ್. ಈಶ್ವರಪ್ಪ:- ಎಂ.ಟಿ.ಆರ್. ಮಸಾಲೆಯನ್ನು ತಂದು ವಿಶ್ವ ಪ್ರದರ್ಶನದಲ್ಲಿ ಇಟ್ಟಿದ್ದಾರೆ. ಇದು ಸುಳ್ಳು ಎಂದರೆ ನಾನು ನನ್ನ ವಿಧಾನಸಭೆ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು:- ವಿಶ್ವದಲ್ಲಿ ಎಲ್ಲಿಯಾದರೂ ಹೋಗಿ. ಎಂ.ಟಿ.ಆರ್. ಗಿಂತ ಒಳ್ಳೆಯ ಮಸಾಲೆ ಸಿಗುತ್ತದೆಯೆ?

ಶ್ರೀ ಕೆ. ಎಸ್. ಈಶ್ವರಪ್ಪ:- ಯಾರಿಗೋ ಕೊಟ್ಟ ದುಡ್ಡಿಗೆ ಇವರು ಲೇಬಲ್ ಹಾಕಿಕೊಳ್ಳಬೇಕೇ? ಶಿವಮೊಗ್ಗದಲ್ಲಿ ಕೆ. ಎಸ್.ಎಫ್.ಸಿ. ಯಿಂದ ಲೋನ್ ಕೊಟ್ಟಿದ್ದಾರೆ. ಯಾರಿಗೆ ಕೊಟ್ಟಿದ್ದಾರೆ. ಎಂದರೆ ಕಾಂಗ್ರೆಸ್ ಮುನಿಸಿಪಲ್ ಕೌನ್ಸಿಲರ್‌ಗೆ ಲಾರಿಗೆ ಲೋನ್ ಕೊಟ್ಟಿದ್ದಾರೆ. ಇವರು 'ವಿಶ್ವ'ದ ಬೋರ್ಡ್ ಹಾಕಿದ್ದಾರೆ. ಯಾರದೋ ದುಡ್ಡಿಗೆ ಇವರ ಹೆಸರು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಈ ವಿಶ್ವ ಯೋಜನೆ ಎಷ್ಟು ಬೋಗಸ್ ಎಂದರೆ ಒಂದಕ್ಕೊಂದು ಸಂಬಂಧ ಇಲ್ಲ. ಎಂ.ಟಿ.ಆರ್. ಮಸಾಲೆ ದೋಸೆಯನ್ನು 'ವಿಶ್ವ'ದ್ದು ಎಂದು ಹೇಳುತ್ತಾರೆ. ಲಾರಿ ತಮ್ಮದು ಎನ್ನುತ್ತಾರೆ. ಲಾರಿ ಎನ್ನುವುದು ಯಾವ ಕೈಗಾರಿಕೆ? ಬಡವನಿಗೆ, ಗ್ರಾಮಾಂತರ ಪ್ರದೇಶದವನಿಗೆ ಇವರು ಏನು ಕೊಟ್ಟಿದ್ದಾರೆ?

ಶ್ರೀ ಡಿ. ಕೆ. ಶಿವಕುಮಾರ್:- ಶಿವಮೊಗ್ಗ ಮುನಿಸಿಪಾಲಿಟಿಯಲ್ಲಿ ಏನಾಯಿತು?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಒಬ್ಬ ಮಂತ್ರಿಯಾಗಿ ಜವಾಬ್ದಾರಿಯಿಂದ ಮಾತನಾಡುವುದನ್ನು ಕಲಿತುಕೊಳ್ಳಿ, ಶಿವಮೊಗ್ಗ ಮುನಿಸಿಪಾಲಿಟಿ ಬಗ್ಗೆ ಏನಾದರೂ ಒಂದು ಚಾಲೆಂಜ್ ಮಾಡಿ. ನೀವು ಹೇಳಿದ ಹಾಗೆ ನಾನು ಕೇಳುತ್ತೇನೆ. ಎಂ. ಟಿ. ಆರ್. ಮಸಾಲೆ ಬಗ್ಗೆ ಚಾಲೆಂಜ್ ಮಾಡಿ. ಬರೇ ಪುಗಸಟ್ಟೆ ಚಾಲೆಂಜ್ ಮಾಡಿದರೆ ಹೇಗೆ? ಮುನಿಸಿಪಾಲಿಟಿ ಬಗ್ಗೆ ಏನು ಹೇಳುತ್ತೀರಿ?

ಅಧ್ಯಕ್ಷರು:-ಮುನಿಸಿಪಲ್ ಡಿಮ್ಯಾಂಡ್ ಬಂದಾಗ ಹೇಳಿ.

(ಗೊಂದಲ)

ಶ್ರೀ ವಾಟಾಲ್ ನಾಗರಾಜ್:- ಇದು ಏನಾಗಿದೆ ಎಂದರೆ ನನಗೆ ಬಹಳ ನೋವು ತಂದಿದೆ. ಇವರು ಕಾರಾಸೇವೆ ಬಗ್ಗೆ ಹೇಳಿದರು. ಆಮೇಲೆ ಕಲ್ಯಾಣ ಸೇವೆ ಆಯಿತು. ಈಗ ಮಸಾಲೆದೋಸೆ ಹೇಳಿದರು. ಈಗ ವೇಳೆ ಐದು ಗಂಟೆಯಾಗಿದೆ. ನಮಗೂ ಆಸೆ, ಆಶೋತ್ತರ ಇದೆ. ತಾವು ಏನಾದರೂ ತರಿಸುತ್ತೀರಾ ಹೇಗೆ ? ಮಸಾಲೆ ದೋಸೆಯನ್ನು ತಯಾರು ಮಾಡುವುದು ಇದ್ದರೆ, ಕಾರಾಸೇವೆ ತಯಾರು ಮಾಡುವುದಿದ್ದರೆ ಕಲ್ಯಾಣ ಸೇವೆ ತಯಾರು ಮಾಡುವುದಿದ್ದರೆ ಸ್ವಲ್ಪ ತರಿಸಿರಿ. ನಮಗೆ ಸ್ವಲ್ಪ ತಿನ್ನೋಣ ಅನ್ನಿಸುತ್ತದೆ.

ಅಧ್ಯಕ್ಷರು:- ಅದಕ್ಕೆ ಪರಿಹಾರ ಇದೆ, ನೀವು ಹೇಳಿದ್ದು ಎಲ್ಲವನ್ನೂ, ತರಿಸಿಕೊಡುತ್ತಾರೆ. ಐದೂವರೆ ಗಂಟೆಗೆ ಅಲ್ಲಿಗೆ ಬಂದುಬಿಡಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಶಿಕ್ಷಣ ಸಚಿವರು ಈಗಾಗಲೇ ಹೇಳಿದ್ದಾರೆ. ಬ್ಯಾಂಕ್ ಮೂಲಕ ಕೊಡುತ್ತೇವೆಂದು ಹೇಳಿದರು. ಬ್ಯಾಂಕ್‌ನಲ್ಲಿ ಐ. ಆರ್.ಡಿ.ಪಿ. ಯೋಜನೆ ಕೆಳಗೆ ಅಕೌಂಟ್ ತೆರೆದಿದ್ದಾರೆ, ಅಲ್ಲಿಗೆ ಕ್ರೆಡಿಟ್ ಮಾಡುತ್ತೇವೆಂದು ಹೇಳಿದರು. ನಿಮ್ಮ ಸ್ಕೀಮ್ ಇದ್ದದ್ದು, ತಾಯಿ ಹೆಸರಿನಲ್ಲಿ ಜಮಾ ಆಗಬೇಕೆಂದು. IRDP loans are not in the names of females. Accounts are in the name of male members. I humbly submit, you are also a seasoned parliamentarian, are we not making the future generation as beggars? You have to create self-respect. You have to create assets. We would have purchase desks, constructed school rooms out of this Rs. 20 crores. We would have generated employment to that extent. ನಾವು ಬಟ್ಟೆ ಕೊಡುವುದು ಇತ್ಯಾದಿಗಳನ್ನು ಈಗ ನೀವು ಬಂದ್ ಮಾಡಿದ್ದೀರಿ. ನಾನು ನಿಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ಬಹಳಷ್ಟು ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ಮಾತನಾಡುತ್ತೀರಿ. ನೀವು ಆಶ್ರಯಯೋಜನೆಯಡಿ ಮನೆಕಟ್ಟುತ್ತಿದ್ದೀರಿ. ನಿಜವಾಗಿಯೂ ಎಂಪ್ಲಾಯ್‌ಮೆಂಟ್ ಜನರೇಟ್ ಮಾಡಬೇಕಾದರೆ, why have you called for tenders? ವಿಶ್ವ ಯೋಜನೆಯಲ್ಲಿ ನಿಮಗೆ ನಿಜವಾಗಿಯೂ ವಿಶ್ವಾಸ ಇದ್ದರೆ, ಕಾರ್ಪೆಂಟರ್ಸ್, ಮೇಸ್ತ್ರಿಗಳು ಎಲ್ಲರಿಗೂ ಕೆಲಸ ಕೊಡುವುದಕ್ಕೆ ಬರುತ್ತಿತ್ತು. You are not giving. You have called for tenders.

ಶ್ರೀ ಕೆ. ಜೆ. ಜಾರ್ಜ್:- ಈಗಾಗಲೇ ವಿಂಡೋ ಮತ್ತಿತರ ಕೆಲಸಗಳಿಗೆ, ಸುಮಾರು ಒಂದು-ಒಂದೂವರೆ ಕೋಟಿ ರೂಪಾಯಿಗಳ ಆರ್ಡರ್‌ನ್ನು ವಿಶ್ವ ಯೋಜನೆಯಡಿ ಕೊಟ್ಟಿದ್ದೇವೆ.

SRI R. V. DESHPANDE:- You have called for tenders. ನೀವು ಈ ಕೆಲಸವನ್ನು ಸಣ್ಣ ಕೈಗಾರಿಕೆಗೆ, ಯುವಕರಿಗೆ, ಉತ್ತೇಜನ ಕೊಡುವುದಕ್ಕೆ ಕೊಟ್ಟಿಲ್ಲ. ಮನೆ ಕಟ್ಟುವುದರಲ್ಲಿ ಕೊಡುವುದಕ್ಕೆ ಆಗುತ್ತಿತ್ತು.

ನಿಜವಾಗಿಯೂ ನಿಮ್ಮ ಉದ್ದೇಶ ಎಂಪ್ಲಾಯ್‌ಮೆಂಟ್ ಜನರೇಟ್ ಮಾಡುವ ಹಾಗಿದ್ದರೆ, it is very clear, you don't want to generate any employment in VISWA.

ಮುಂದೆ ಎರಡು ವಿಚಾರ ಹೇಳಿ ಮುಗಿಸುತ್ತೇನೆ. ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್, permanent ನಲ್ಲಿ ಕಮೀಷನ್ ಮಾಡುತ್ತೇವೆಂದು ಹೇಳಿದ್ದೀರಿ, ಬಹಳ ಸಂತೋಷ. ಆದರೆ, if the intention is to woo the backward class voters, it is not correct and it is not in the right direction and right spirit.

ಈಗಾಗಲೇ ಜಸ್ಟೀಸ್ ಚಿನ್ನಪ್ಪರೆಡ್ಡಿ ಆಯೋಗ ಏನು ವರದಿ ಕೊಟ್ಟಿದೆ, ಅದು ನಿಮ್ಮ ಮುಂದೆ ಕಳೆದ ಮೂರು ವರ್ಷಗಳಿಂದ ಇದೆ. ಪ್ರತಿ ಸದನದಲ್ಲಿಯೂ ಮಾನ್ಯ ಮುಖ್ಯ ಮಂತ್ರಿಗಳು, ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳುತ್ತೇವೆ, ಸಬ್ ಕಮಿಟಿ ಮಾಡಿದ್ದೇವೆ ಎಂದು ಹೇಳುತ್ತಿರುತ್ತಾರೆ. ಇವತ್ತು ನೀವು ಪರ್ಮನೆಂಟ್ ಬ್ಯಾಕ್ ವರ್ಡ್ ಕ್ಲಾಸ್ ಕಮೀಷನ್ ಮಾಡುವುದಕ್ಕೆ ಹೊರಟಿದ್ದೀರಿ. ಈ ಚಿನ್ನಪ್ಪ ರೆಡ್ಡಿ ಕಮೀಷನ್ ರಿಪೋರ್ಟ್ ಇಂಪ್ಲಿಮೆಂಟ್ ಮಾಡುವುದಕ್ಕೆ ಏನು ತೊಂದರೆಯಾಗುತ್ತಿದೆ. You have no real commitment to the poor, SCs/STs, farmers etc., but you are telling about the backward classes for vote catching purposes. This is a populist programme. ಬರೀ ವೋಟು ಪಡೆಯುವುದಕ್ಕೆ ಬ್ಯಾಕ್ ವರ್ಡ್ ಕ್ಲಾಸ್ ಕಮೀಷನ್ ಮಾಡಿದ್ದೇವೆ ಎಂದು ಹೇಳುತ್ತೀರೇ ಹೊರತು ಬಡವರಿಗೆ, ಹಿಂದುಳಿದವರಿಗೆ ಸಹಾಯ ಮಾಡುವ ಇಚ್ಛೆ ಕಾಣುವುದಿಲ್ಲ. ಇವತ್ತು ಬೆಲೆ ಏರಿಕೆ. ಈ ವಿಚಾರದಲ್ಲಿ ಮಾನ್ಯ ಬೈರೇಗೌಡರು ಸಾಕಷ್ಟು ಹೇಳಿದ್ದಾರೆ, ನಾನು ಹೆಚ್ಚು ಹೇಳುವುದಿಲ್ಲ. ಒಂದು ಮಾತನ್ನು ಮಾತ್ರ ಹೇಳುತ್ತೇನೆ. ತಾವು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಬಗ್ಗೆ ಹೇಳಿದ್ದೀರಿ, ಈ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಎಷ್ಟು ಕೆಟ್ಟದಾಗಿದೆ ಎಂದರೆ, ಸರಿ ಸಮಯದಲ್ಲಿ ಅಕ್ಕಿ ಇಲ್ಲ, ಸರಿ ಸಮಯದಲ್ಲಿ ಗೋಧಿ ಇಲ್ಲ, ಜೋಳ ಇಲ್ಲ. ನಾವು ಇದ್ದಾಗ, ಪ್ರತಿ ತಿಂಗಳು 15-20 ಕೆ. ಜಿ. ಅಕ್ಕಿ ಕೊಡುತ್ತಿದ್ದೆವು. ಇವತ್ತು ಬಡವರಿಗೆ 5 ಕೆ.ಜಿ. ಅಕ್ಕಿ ಕೂಡ ಕೊಡುತ್ತಾ ಇಲ್ಲ. ಬೆಲೆ ಗಗನಕ್ಕೆ ಹೋಗಿದೆ ಎಂದು ತಾವು ಹೇಳಬಹುದು. ಈ ಬೆಲೆ ಏರಿಕೆ ನಮ್ಮ ಕೈಯಲ್ಲಿಲ್ಲ, ಕೇಂದ್ರ ಸರ್ಕಾರದ ಕೈಲಿದೆ ಎಂದು ಹೇಳಬಹುದು. ಆದರೆ, ನೀವೂ ಕೂಡ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದ ಕಾರ್ಯಕ್ರಮದಲ್ಲಿ ಕಮಿಟ್‌ಮೆಂಟ್ ಇದ್ದರೆ ಹತೋಟಿ ಮಾಡಬಹುದು. ಈಗ ನೀವು ಹಸಿರು ಕಾರ್ಡಿನ ಮೇಲೆ ಫೋಟೋ ಹಾಕುವುದಕ್ಕೆ ಹೊರಟಿದ್ದೀರಿ. ಇದು ನಿಮ್ಮ ಪ್ರಶ್ನೆ, ನಾವು ಇದಕ್ಕೆ ವಿರೋಧ ಮಾಡಿದ್ದೇವೆ. ನಾನು ಹೇಳುತ್ತಿದ್ದೇನೆ, ಫೋಟೋ ಹಾಕುವುದಕ್ಕಿಂತ, ಬಡ ಜನರಿಗೆ ಸಹಾಯ ಮಾಡುವುದಿದ್ದರೆ, ಕೇಂದ್ರ ಸರ್ಕಾರದವರು ಅಕ್ಕಿಗಾಗಿ ಸಬ್ಸಿಡಿ ಕೊಡುತ್ತಾರೆ, ನೀವೂ ಕೂಡ ಸಬ್ಸಿಡಿ ಕೊಡುವುದಕ್ಕೆ ಸಾಧ್ಯವಿದೆ. ನೀವು ಏಕೆ ಸಬ್ಸಿಡೈಸ್ಡ್ ಮಾಡಿ ಅಕ್ಕಿ ಕೊಡುತ್ತಾ ಇಲ್ಲ, ಗೋಧಿ ಕೊಡುತ್ತಾ ಇಲ್ಲ, ಜೋಳ ಕೊಡುತ್ತಾ ಇಲ್ಲ. ಏಕೆಂದರೆ ಕಮಿಟ್‌ಮೆಂಟ್ ಇಲ್ಲ; ನಮ್ಮ ಸರ್ಕಾರ ಇದ್ದಾಗ 2 ರೂಪಾಯಿ ಕಿಲೋ ಅಕ್ಕಿ ಕೊಟ್ಟೆವು. ನಮ್ಮ ಸಚಿವ ಸಂಪುಟದಲ್ಲಿ 2-15 ಪೈಸೆ ಮಾಡಬೇಕೆಂದು ಕೆಲವರು ಹೇಳಿದರು ಆದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಅದು ಸಾಧ್ಯವಿಲ್ಲ, ನಾವು ನಾಡಿನ ಜನಗಳಿಗೆ ಮಾತು ಕೊಟ್ಟಿದ್ದೇವೆ, 2 ರೂಪಾಯಿಗೇ ಕೊಡುತ್ತೇವೆಂದು ಹೇಳಿದ್ದೇವೆ, ಎಂದು ಹೇಳಿದರು. ನಾವು ಇರುವತನಕ 2 ರೂಪಾಯಿಗೆ ಕಿಲೋ ಅಕ್ಕಿ ಕೊಟ್ಟೆವು. ಇವತ್ತು ನೀವು ಮೂರುವರೆ ರೂಪಾಯಿ ಮಾಡಿದ್ದೀರಿ. ನಿಮಗೆ ಬಡವರ ಮೇಲೆ ಏನು ಪ್ರೀತಿ ಇದೆ, ಏನು ಭಕ್ತಿ ಇದೆ. ಹಾಗಾಗಿ ಇವತ್ತು ನೀವು ಎಲ್ಲಾ ದೃಷ್ಟಿಯಿಂದರೂ ವಿಫಲರಾಗಿದ್ದೀರಿ. ಕೊನೆಯದಾಗಿ ನನ್ನ ಜಿಲ್ಲೆಯ ಒಂದೆರಡು ಸಮಸ್ಯೆಗಳ ಬಗ್ಗೆ ಹೇಳುತ್ತೇನೆ. ಪ್ರತಿಬಾರಿ ನಾನು ಇದನ್ನು ಸರಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಫಾರೆಸ್ಟ್‌ಲ್ಯಾಂಡ್ ರೆಗ್ಯುಲರೈಸ್ ಮಾಡುವ ಬಗ್ಗೆ ಹಾಗೂ ಹಂಗಾಮಿ ಲೀಸ್ ಲ್ಯಾಂಡ್ ರೆಗ್ಯುಲರೈಸ್ ಮಾಡುವ ಬಗ್ಗೆ ನಾನು ಹೇಳುತ್ತೇನೆ. ಹಂಗಾಮಿ ಲೀಸ್ ಲ್ಯಾಂಡ್ ಕಾಯಿದೆ ಬದ್ಧವಾಗಿ ಕೊಟ್ಟಾಗಿದೆ. ಅದು ಇನ್ನೂ ಮಂಜೂರಾಗಿಲ್ಲ. ಎಷ್ಟೋ ಜನ ಬಡವರು ಅದರಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅವರಿಗೆ ಸಾಲ ಸಿಗುತ್ತಿಲ್ಲ. ಅದೇ ಪ್ರಕಾರ ಅರಣ್ಯ ಭೂಮಿಯನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದರ ಬಗ್ಗೆ ನಾನು ಸಹ ಪತ್ರ ಬರೆದೆ. ಅದರ ಬಗ್ಗೆ ಯಾವುದೇ ಕ್ರಮ ಇಲ್ಲ. ನನ್ನ ಜಿಲ್ಲೆಯ ಜನರ ಎರಡು ಸಮಸ್ಯೆ ಇದೆ, ಇದನ್ನು ಪ್ರಿಯಾರಿಟಿ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸರಕಾರ ಬಗೆಹರಿಸಬೇಕೆಂದು ಹೇಳಿ, ಕೊನೆಯದಾಗಿ ಮತ್ತೊಮ್ಮೆ ಮಾನ್ಯ ಸಭಾಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಎಸ್. ರಾಣೆ (ಕಾರವಾರ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣಾನಿರ್ಣಯದ ಮೇಲೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರ ಭಾಷಣ, ಸರಕಾರದ ಧ್ಯೇಯ ಧೋರಣೆಗಳು ಏನು, ಸರಕಾರ ಯಾವ ದಿಕ್ಕಿನಲ್ಲಿ ಹೋಗಬೇಕಾಗುತ್ತದೆ, ಹೋಗಬಯಸುತ್ತದೆ, ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ ಎಂಬುದನ್ನು ಪ್ರತಿಬಿಂಬಿಸಬೇಕು. ನಾವು ರಾಜ್ಯಪಾಲರ ಭಾಷಣವನ್ನು ವಿವರವಾಗಿ ಪರಿಶೀಲಿಸಿದಾಗ ಅಂತಹ ಯಾವುದೇ ಸೂಚನೆ ಇಲ್ಲಿ ಸ್ಪಷ್ಟವಾಗಿ ಕಂಡು ಬರುವುದಿಲ್ಲ. ಈಗಾಗಲೇ ಅನೇಕ ಸ್ನೇಹಿತ ಸದಸ್ಯರು ಹೇಳಿದಂತೆ ಇದೊಂದು ನೀರಸವಾದಂಥ, ನಿಸ್ತೇಜವಾದಂಥ, ನಿರುಪಯುಕ್ತವಾದಂಥ ಒಂದು ಭಾಷಣ ಎಂದು ಹೇಳಿ ಅತ್ಯಂತ ವಿಷಾದದಿಂದ ಹೇಳಬೇಕಾಗುತ್ತದೆ.

ರಾಜ್ಯಪಾಲರ ಭಾಷಣದ ಮೇಲಿನಿಂದ ಒಂದು ಸರಕಾರ ತನ್ನ ಜನಪರವಾದ ಕಾಳಜಿ ಏನು ಎಂಬುದನ್ನು ವ್ಯಕ್ತಪಡಿಸಬೇಕು. ದುರ್ದೈವದಿಂದ ಇದು ಇಲ್ಲಿ ಆಗಿಲ್ಲ, ತನ್ನ ನೀತಿ, ತನ್ನ ತಾತ್ವಿಕ ನೆಲೆಗಟ್ಟು ಏನು ಎಂಬುದನ್ನೂ ಸಹ ಇದು ಇಲ್ಲಿ ಹೇಳಬೇಕು, ಅದೂ ಸಹ ಇಲ್ಲಿ ಕಂಡುಬಂದಿಲ್ಲ. ರಾಜ್ಯಪಾಲರ ಭಾಷಣವನ್ನು ನೋಡಿದಾಗ ಇಷ್ಟೊಂದು ನೀರಸವಾಗಿ ಇದನ್ನು ಏತಕ್ಕೆ ಮಾಡಿದರು ಎಂದು ಅರ್ಥವಾಗುತ್ತಿಲ್ಲ. ಏನು ಈ ಒಂದು ರಾಜ್ಯಪಾಲರ ಭಾಷಣವನ್ನು ತಯಾರು ಮಾಡುವಾಗ ಆ ಒಂದು ಕಾಳಜಿಯನ್ನು ತೆಗೆದುಕೊಳ್ಳಲಿಲ್ಲವೋ ಏನೋ ಎಂದು ಹೇಳಿ ಅನ್ನಿಸುತ್ತದೆ. ಈಗ ಇನ್ನೂ ಒಂದು ವಿಷಯ ಇಲ್ಲಿ ಕಂಡು ಬರುವುದು ಎಂದು ಹೇಳಿದರೆ ಆಳುವವರು ರಾಜ್ಯದ ಆಗುಹೋಗುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವಂತಹ ಪ್ರಮೇಯವನ್ನೇ ಮಾಡಲಿಲ್ಲವೇನೋ ಎಂದು ಸಂಶಯ ಬರುತ್ತಿದೆ. ಈ ಭಾಷಣದ ಏಳನೆಯ ಪ್ಯಾರಾಗ್ರಾಫ್‌ನಲ್ಲಿ ಹೇಳಿದ್ದಾರೆ.

> "The State's performance in implementing plan schemes has been appreciated by the Planning Commission, notably the State's fiscal management and efforts on resource moblisation and utlising these resources for overall development of the State."

ರಾಜ್ಯದ ಸರ್ವಾಂಗೀಣವಾದ ಅಭಿವೃದ್ಧಿ ಕಳೆದ ಒಂದು ವರ್ಷದಲ್ಲಿ ಯಾವ ರೀತಿ ಮಾಡಿರುತ್ತಾರೆಂದು ಹೇಳಿದರೆ ಇಲ್ಲಿ ಪ್ಲಾನಿಂಗ್ ಕಮೀಷನ್‌ನವರು, ವಿಶೇಷವಾಗಿ ಯೋಜನಾ ಆಯೋಗದ ಉಪಾಧ್ಯಕ್ಷರು ಯಾವ ಆಧಾರದ ಮೇಲೆ ಇವರಿಗೆ ಈ ಒಂದು ಸರ್ಟಿಫಿಕೇಟ್ ನೀಡಿದರು ಎಂದು ನಾವು ಇವತ್ತು ಸರಕಾರಕ್ಕೆ ಕೇಳಬೇಕಾಗುತ್ತದೆ. ಏತಕ್ಕೆಂದರೆ ಈ ಒಂದು ಸರ್ಟಿಫಿಕೇಟ್ ಪಡೆಯುವುದಕ್ಕೆ ತಾವು ಯಾರ ಯಾರ ಮುಂದೆ ಯಾವ ಯಾವ ಅಂಕಿ ಅಂಶಗಳನ್ನು ಇಟ್ಟಿದ್ದೀರಿ, ನೀವು ಇವತ್ತಿನವರೆಗೂ ವೆಚ್ಚ ಮಾಡಿದಂಥ ಹಣ ಎಷ್ಟು, ನೀವು ಏನು ರಿಸೋರ್ಸಸ್ ಮೋಬಲೈಸೇಷನ್ ಮಾಡಿರುತ್ತೇವೆಂದು ಹೇಳುತ್ತಿದ್ದೀರಲ್ಲ, ಎಷ್ಟು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದೀರಿ, ಆ ರೀತಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದರೆ ಅನೇಕ ವಿಷಯಗಳ ಬಗ್ಗೆ ತೊಂದರೆ ಏತಕ್ಕೆ ಬರುತ್ತದೆ ಎಂದು ಇವತ್ತು ಕೇಳಬೇಕಾಗುತ್ತದೆ.

ನಾನು ಒಂದು ಉದಾಹರಣೆ ಹೇಳುವುದಾದರೆ ಮಾನ್ಯ ಅಧ್ಯಕ್ಷರೇ....

ಶ್ರೀ ಸಿ. ಬೈರೇಗೌಡ:- ನೋಡಿ ಆಗಲೇ ಶುರು ಆಯಿತು....

ಶ್ರೀ ಪಿ. ಎಸ್. ರಾಣೆ:- ಬೈರೇಗೌಡರೇ, ನಾನು ಯಾವುದನ್ನು ಹೇಳಬೇಕೋ ಅದನ್ನು ಹೇಳಿಯೇ ಹೇಳುತ್ತೇನೆ. ನಾವೇನು ಸಲಹೆ ಕೊಡಬೇಕೊ ಅದನ್ನು ಕೊಟ್ಟೇ ಕೊಡುತ್ತೇವೆ. ಎಲ್ಲಿ ಮರ್ಯಾಟ ಕೊಡಬೇಕೋ ಅಲ್ಲಿ ಮರ್ಯಾದೆ ಕೊಡುತ್ತೇವೆ.

SRI C. BYRE GOWDA:- That is what exactly I wanted. Please go on.

ಶ್ರೀ ಪಿ. ಎಸ್. ರಾಣೆ:- ಇವತ್ತು ನಾನು ಹೇಳುತ್ತೇನೆ. ಯಾವುದೇ ಒಂದು ವಿಷಯದ ಬಗ್ಗೆ ಮಾತನಾಡುವಾಗ ಉದ್ದೇಶಪೂರ್ವಕವಾಗಿ ಈ ಸದನವನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು. ಆ ಅಭಿಪ್ರಾಯವನ್ನು ಇಟ್ಟುಕೊಂಡೆ ನಾನು ವಸ್ತು ಸ್ಥಿತಿ ಏನಿದೆ ಅದನ್ನು ಜನರ ಪ್ರತಿನಿಧಿಯಾಗಿ ಹೇಳಬೇಕಾದ್ದುದು ನನ್ನ ಕರ್ತವ್ಯ. ನಾನು ಅದನ್ನು ಹೇಳುತ್ತೇನೆ. ಕೇವಲ ಒಳ್ಳೆಯ ಸಂಗತಿಗಳನ್ನೇ ಇಲ್ಲಿ ಹೇಳಬೇಕಾಗಿಲ್ಲ.

ಲೋಪದೋಷಗಳು ಇದ್ದರೆ ಅವುಗಳನ್ನು ಎತ್ತಿ ತೋರಿಸಿ ಸರ್ಕಾರಕ್ಕೆ ನಾವು ಸಹಾಯ ಮಾಡಬೇಕಾಗುತ್ತದೆ. ದುರ್ದೈವದಿಂದ ಆ ಕಡೆ ಇರುವ ಜನರು ಬಾಯಿ ಮುಚ್ಚಿಕೊಂಡು ಕುಳಿತುಕೊಂಡಿದ್ದರಿಂದ ನಾವು ಅದಕ್ಕೋಸ್ಕರ ಈ ಒಂದು ಪ್ರಯತ್ನ ಮಾಡಬೇಕಾಗಿದೆ. ಅದೇನೆ ಇರಲಿ, ಮಾನ್ಯ ಅಧ್ಯಕ್ಷರೇ ಈಗ ಅಡಿಶನಲ್ ರೀಸೋರ್ಸಸ್ ಮೊಬಿಲೈಜೇಶನ್ ಬಗ್ಗೆ ಹೇಳುತ್ತಿದ್ದೆ. ಇವತ್ತು ಸರ್ಕಾರ ಡಿಸೆಂಬರ್ 91 ರಂದು ಒಂದು ಆಜ್ಞೆ ಹೊರಡಿಸಿತು. ಅದೇನೆಂದರೆ ರೈತರ ಸಾಲದ ಮೇಲಿನ ಬಡ್ಡಿಗೆ ಸಬ್ಸಿಡಿ ಕೊಡುತ್ತೇವೆ ಶೇಕಡ 5 ರಷ್ಟು ಬಡ್ಡಿ ಸಬ್ಸಿಡಿ ಕೊಡುತ್ತೇವೆ ಎಂದು ದಿನಾಂಕ 31-3-92 ರಲ್ಲಿ ಯಾರು ಸಾಲವನ್ನು ಮರುಪಾವತಿ ಮಾಡುತ್ತಾರೊ ಅಂಥವರಿಗೆ ಶೇಕಡ 5 ರಷ್ಟು ಬಡ್ಡಿಯಲ್ಲಿ ರಿಯಾಯಿತಿ ಸಿಗುತ್ತದೆ ಎನ್ನುವ ಮಾತನ್ನು ಈ ಒಂದು ಆಜ್ಞೆಯಲ್ಲಿ ಹೇಳಿದರು. ಯಾರು ಈ ಸಾಲದ ಹಣ ಮರುಪಾವತಿ ಮಾಡುತ್ತಾರೋ ಮರುಪಾವತಿ ಮಾಡಿದ 10 ದಿವಸದಲ್ಲಿ ಅವರಿಗೆ ಬಡ್ಡಿ ರಿಯಾಯಿತಿ ಕೊಡುತ್ತೇವೆಂದು ಸರ್ಕಾರ ಈ ಆಜ್ಞೆ ಮಾಡಿದ್ದಾರೆ. ಆದರೆ ಡಿಸೆಂಬರ್ 91 ರಂದು ಆಜ್ಞೆ ಮಾಡಿರುವಂತಾದ್ದು. ಈ ಆಜ್ಞೆ ಎಷ್ಟರ ಮಟ್ಟಿಗೆ ಕಾರ್ಯರೂಪದಲ್ಲಿ ಬಂದಿದೆ ನೋಡಿದರೆ ನಮ್ಮ ಒಂದೇ ಒಂದು ಜಿಲ್ಲೆ ಉತ್ತರ ಕನ್ನಡ ಜಿಲ್ಲೆಯ ಸಹಕಾರ ಸಂಘದ ಬಾಬ್ತು ಈ ಬಡ್ಡಿ ರಿಯಾಯಿತಿ ಮತ್ತು ಉಳಿದ ಹಣ ಕೊಡಬೇಕಾದುದು 93 ಲಕ್ಷ ರೂಪಾಯಿಗಳು ಬಾಕಿ ಇದೆ. ಅನೇಕ ಜನರಿಗೆ ಬಡ್ಡಿ ರಿಯಾಯಿತಿ ಕೊಡತಕ್ಕಂಥಾದ್ದು ಇದೆ. ರೈತರು ಬಡ್ಡಿ ರಿಯಾಯಿತಿ ಕೊಡುತ್ತಾರೆಂದು ಎಲ್ಲಿಂದಲೋ ಸಾಲ ತೆಗೆದುಕೊಂಡು ಬಂದು ಈ ಸಾಲವನ್ನು ಮರುಪಾವತಿ ಮಾಡುವಂಥ ಪ್ರಯತ್ನ ಮಾಡಿದರು. ಆದರೆ ಇದುವರೆವಿಗೂ ಸರ್ಕಾರ ಈ ಬಗ್ಗೆ ಒಂದು ಪೈಸೆ ರಿಲೀಸ್ ಮಾಡಿಲ್ಲ. ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರನ್ನು ಕೇಳಿದಾಗ, ಸರ್ಕಾರವನ್ನು ಕೇಳಿದಾಗ ಸಹಕಾರ ಸಂಘಗಳ ರಿಜಿಸ್ಟ್ರಾರ್‌ಗೆ 10 ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಿದ್ದಾರೆ. ಅದರ ಬಗ್ಗೆ ನಾವು ವಿಚಾರ ಮಾಡುವುದಾದರೆ ಆ 10 ಕೋಟಿ ರೂಪಾಯಿಗಳು ಕೇವಲ ಕಾಗದದ ಮೇಲೆ ಇದೆಯೇ ಹೊರತಾಗಿ ಯಾವುದೇ ಡಿ. ಸಿ. ಸಿ. ಬ್ಯಾಂಕ್‌ಗಳಿಗೆ ಯಾವುದೇ ಸಹಕಾರ ಸಂಘಗಳಿಗೆ ಜಮಾ ಆಗಿಲ್ಲ. ಆದ್ದರಿಂದ ಅಂತಹ ಒಂದು ಪರಿಸ್ಥಿತಿ ಇರುವಾಗ ಯಾವ ರೀತಿಯಲ್ಲಿ ನೀವು ಅಡಿಶನಲ್ ರೀಸೋರ್ಸಸ್ ಮೊಬಲೈಜೇಶನ್‌ಗೆ ಪ್ರಯತ್ನ ಮಾಡಿ ಈ ಮೂಲಕ ಕೊಡಲಿಕ್ಕೆ ಸಾಧ್ಯವಾಗಲಿಲ್ಲ, ಏತಕ್ಕೆ ಸಾಧ್ಯವಾಗಲಿಲ್ಲ ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕು. ಮಾನ್ಯ ಅಧ್ಯಕ್ಷರೇ ನನಗೆ ಆಶ್ಚರ್ಯವಾಗುತ್ತದೆ. ರೈತರ ಬಡ್ಡಿ ಮೇಲೆ ಸಬ್ಸಿಡಿ ಕೊಡಿ ಎಂದು ಕೇಳಿದಾಗ ಕೊಡುತ್ತೇವೆಂದು ಆರ್ಡರ್ ಮಾಡಿ ತಿಂಗಳಾನುಗಟ್ಟಲೆ ಅದರೂ ಕೂಡ ಯಾವುದೇ ಕಾರ್ಯಕ್ರಮವನ್ನು ಕೈಗೊಳ್ಳದೆ ಏಕಾಏಕಿ ಕೇವಲ 17 ಜನ ಸಾರಾಯಿ ಗುತ್ತಿಗೆದಾರರಿಗೆ ಅವರು ಸರ್ಕಾರಕ್ಕೆ ಕೊಡಬೇಕಾದಂತಹ ಹಣದ ಮೇಲೆ ಬಡ್ಡಿ ರಿಯಾಯಿತಿ ಕೊಟ್ಟು ತಾವು ಆಜ್ಞೆ ಮಾಡಿದ್ದೀರಿ. ಅವರಿಗೆ ನೀವು 36 ಕೋಟಿ ರೂಪಾಯಿಗಳ ಬಡ್ಡಿ ರಿಯಾಯಿತಿ ಕೊಟ್ಟಿದ್ದೀರಿ. ನಾನು ತಮ್ಮನ್ನು ಒಂದು ಪ್ರಶ್ನೆ ಕೇಳಬೇಕಾಗಿದೆ. ಆ 17 ಜನ ಎಕ್ಸೈಸ್ ಕಂಟ್ರಾಕ್ಟರ್ಸ್‌ಗೆ ಬಡ್ಡಿ ರಿಯಾಯಿತಿ ಕೊಡುವಂತಹ ಆಜ್ಞೆ ಮಾಡಿದ್ದೀರಿ. ಅವರೇನು ಬರಗಾಲದಿಂದ ಪೀಡಿತರಾಗಿದ್ದಾರೆಯೇ ಅಥವಾ ಅತಿವೃಷ್ಟಿಯಿಂದ ಅವರಿಗೆ ಏನಾದರೂ ಹಾನಿಯಾಗಿದೆಯೇ? ಅಥವಾ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಜೀವನ ಸಾಗಿಸಲಾರದಂತಹ ಪರಿಸ್ಥಿತಿ ಉಂಟಾಗಿದೆಯೇ? ಸರ್ಕಾರ ಏನು ಇಷ್ಟು ಉದಾರ ನೀತಿಯನ್ನು ಅನುಸರಿಸುತ್ತಿದೆ ಇದಕ್ಕೇನು ಕಾರಣ ಎನ್ನುವುದನ್ನು ಸದನದ ಮುಂದೆ ಇಡಬೇಕು. ಮಾನ್ಯ ಅಧ್ಯಕ್ಷರೇ ನಾವು ಸಾಮಾನ್ಯವಾಗಿ ಭಾವಿಸುವುದೇನೆಂದರೆ ಇದು ಒಂದು ಪ್ರಜಾಸತ್ತಾತ್ಮಕ ಸರ್ಕಾರ. ಪ್ರಜೆಗಳ ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ನಡೆಸತಕ್ಕಂಥ ಸರ್ಕಾರ ಎಂದು ತಿಳಿದುಕೊಂಡಿದ್ದೆವು.

ಆದರೆ, ಇವತ್ತು ಇಲ್ಲಿರುವಂಥ ಸರ್ಕಾರ ನಡೆಯುವಂಥ ರೀತಿ ನೋಡಿದಾಗ ಆ ಒಂದು ಅಭಿಪ್ರಾಯದಲ್ಲಿ ಬದಲಾವಣೆ ಮಾಡಬೇಕಾದಂಥ ಪ್ರಸಂಗ ಬರುತ್ತದೆಯೇನೋ ಅನಿಸುತ್ತದೆ. ಏಕೆಂದರೆ ಇವತ್ತು ಸಾರಾಯಿ ಗುತ್ತಿಗೆದಾರರ ಮೇಲೆ ನಮ್ಮ ಸರ್ಕಾರ ಎಲ್ಲೂ ಇಲ್ಲದಂಥ ಒಂದು ಒಲವು ತೋರಿಸುವಂಥ ಕಾರ್ಯಕ್ರಮವನ್ನು ಮೊದಲಿನಿಂದಲೂ ಹಾಕಿಕೊಂಡು ಬರುತ್ತಿದೆ. ಉದಾಹರಣೆಗೆ, ಹೆಂಡದ ಮಾರಾಟದ ಮೇಲಿನ ನಿಷೇಧ ತೆಗೆದುಹಾಕಿದ್ದು, ರಾಜ್ಯದ ಅನೇಕ ತಾಲ್ಲೂಕಿನಲ್ಲಿ ಇವತ್ತು ಹರಾಜು ಇಲ್ಲದೆ ಹೆಂಡ ಮಾರಾಟ ಮಾಡುವಂಥ ಪದ್ಧತಿ ಬೆಳೆದು ಬಂದಿದೆ. ಅದರಿಂದ ಸರ್ಕಾರಕ್ಕೆ ಬಿಡಿಕಾಸೂ ಆದಾಯವಿಲ್ಲ. ಅಷ್ಟೇ ಅಲ್ಲ ಐ.ಎಂ.ಎಫ್.ಎಲ್., ಸಾರಾಯಿಯನ್ನು ಸರ್ಕಾರದ ಪರವಾಗಿ ಮಾರಾಟ ಮಾಡತಕ್ಕಂಥ ಏನು ವೀರೇಂದ್ರ ಪಾಟೀಲರ ಸರ್ಕಾರ ಯೋಜನೆ ಹಾಕಿಕೊಂಡಿತ್ತೋ ಅದನ್ನು ಸಂಪೂರ್ಣ ಸಮಾಧಿ ಮಾಡಲಾಗಿದೆ. ಅದೂ ಅಲ್ಲದೆ ಐ.ಎಂ.ಎಫ್.ಎಲ್., ಮೇಲಿನ ರಫ್ತು ತೆರಿಗೆ 20 ರೂಪಾಯಿ ಇದ್ದದ್ದನ್ನು ಒಂದೇ ಸಲ 2 ರೂಪಾಯಿಗೆ ಇಳಿಸಿ ಬಿಟ್ಟಿದ್ದಾರೆ. ಹೀಗೇ ಒಂದರ ಮೇಲೆ ಒಂದು. ಸೆಕೆಂಡ್ಸ್ ಮಾರಾಟದ ಹಾವಳಿ ಬೇಕಾದಷ್ಟು ರಾಜಾರೋಷವಾಗಿ ಆಗುತ್ತಿದೆ. ಇದನ್ನೆಲ್ಲಾ ನೋಡಿದಾಗ ಈ

ಸರ್ಕಾರದ ಬಗ್ಗೆ ಯಾರ ಸಲುವಾಗಿ ಈ ಸರ್ಕಾರ ಇದೆ ಎನ್ನುವುದರ ಬಗ್ಗೆ ಸಂಶಯ ಸಾಮಾನ್ಯ ಜನರಲ್ಲಿ ಮೂಡುತ್ತಿದೆ. ಈ ಸರ್ಕಾರ, ಸಾರಾಯಿಗಾರರ ಸರ್ಕಾರ, ಸಾರಾಯಿಗಾರರಿಂದ ನಡೆಸುವಂಥ ಸರ್ಕಾರ. ಸಾರಾಯಿ ಮಾರಾಟಗಾರರ ಸಲುವಾಗಿ ನಡೆಸುವಂಥ ಸರ್ಕಾರ ಏನೋ ಎನ್ನುವ ಒಂದು ಅಭಿಪ್ರಾಯ ಇವತ್ತು ಸಾಮಾನ್ಯ ಜನರಲ್ಲಿ ಬಂದಿದೆ. ಅದಕ್ಕಿಂಥಲೂ ವಿಷಾದವಾದ ಸಂಗತಿ, ಅದಕ್ಕಿಂತಲೂ ಲಜ್ಜಾಸ್ಪದವಾದ ಸಂಗತಿ ಬೇರೊಂದು ಇದೆಯೆ ಎಂದು ನಾನು ಇವತ್ತು ಸರ್ಕಾರಕ್ಕೆ ಕೇಳಬೇಕಾಗುತ್ತದೆ. ಅಧ್ಯಕ್ಷರೆ, ತಮಗೆ ಗೊತ್ತು. ಕಾಂಗ್ರೆಸ್ ಪಕ್ಷದ ಸದಸ್ಯನಾಗಬೇಕಾದರೆ ನಾವು ಅನೇಕ ವಚನಗಳನ್ನು ತೆಗೆದುಕೊಳ್ಳುತ್ತೇವೆ. ಖಾದಿ ಬಟ್ಟೆಯನ್ನು ಧರಿಸಬೇಕು, ಮದ್ಯ ಸೇವಿಸಬಾರದು. ಇವತ್ತು ಖಾದಿ ಬಟ್ಟೆ, ಮದ್ಯ ಸೇವಿಸುವುದು ಬದಿಗೆ ಇರಲಿ, ಮದ್ಯವನ್ನು ತಯಾರು ಮಾಡುವವರ ಸಲುವಾಗಿಯೇ ಒಂದು ಸರ್ಕಾರವನ್ನು ಅಡವು ಇಟ್ಟರೆ ಅದಕ್ಕಿಂಥ ಖೇದದ ಸಂಗತಿ ಕಾಂಗ್ರೆಸಿಗನಾಗಿ ಏನಾದರೂ ಇದೆಯೇ ಎಂದು ಇವತ್ತು ನಾನು ಕೇಳಬೇಕಾಗುತ್ತದೆ. ನಿಜವಾಗಿಯೂ ಮನಸ್ಸಿಗೆ ಬಹಳ ವಿಷಾದ ಎನಿಸುತ್ತದೆ. ಇಂಥ ಒಂದು ಪರಿಸ್ಥಿತಿಯಲ್ಲಿ ನಾವು ಇದನ್ನು ನೋಡಲಾರದೆ ನೋಡುವಂಥ ಸಹನೆ ಮಾಡಿಕೊಳ್ಳುವಂಥ ಸ್ಥಿತಿಗೆ ಇವತ್ತು ಬಂದಿದೆಯಲ್ಲಾ ಎಂದು ಬಹಳಷ್ಟು ವಿಷಾದದಿಂದ ಹೇಳಬೇಕಾಗುತ್ತದೆ. ಈ ರಾಜ್ಯಪಾಲರ ಭಾಷಣದಲ್ಲಿ ಪಂಚಸೂತ್ರದ ಬಗ್ಗೆ ಹೇಳಿದ್ದಾರೆ.

> "My Government has initiated Pancha Sutra comprising simplification of procedures, delegation of authority, public accountability monitoring village to State level and redressal of public grievances ".

ಅಧ್ಯಕ್ಷರೆ, ಇವತ್ತು ಈ ಪಂಚಸೂತ್ರಗಳನ್ನು ಇಲ್ಲಿ ಜಾರಿಗೆ ತಂದಿದ್ದಾರೆ ಎಂದು ಹೇಳಿದರೆ ಯಾರಿಗೂ ನಂಬಲಿಕ್ಕೆ ಆಗುತ್ತಿಲ್ಲ. ನನಗನಿಸುತ್ತದೆ, ಇವರ ಅರ್ಥದಲ್ಲಿ ಈ ಪಂಚಸೂತ್ರಗಳು ಬೇರೆಯಾಗಿಯೇ ಇವೆಯೆನೋ ಎಂದು. ಮೊದಲನೆಯದಾಗಿ ಏನುಹೇಳುತ್ತಾರೆ comprising simplication of procedures ನನಗನಿಸುತ್ತದೆ. ಇವರ ಅರ್ಥದಲ್ಲಿ ಲಂಚವನ್ನು ಯಾವುದೇ ಮಧ್ಯಸ್ತರ ಮುಖಾಂತರ ಕೊಡದೆ ನೇರವಾಗಿ ಕೊಡಬಹುದು. ಇದು ಒಂದು simplication of procedures ಯಾವ ದಳ್ಳಾಳಿಗಳ ಅವಶ್ಯಕತೆ ಇಲ್ಲ ಎನ್ನುವ ಒಂದು ರೀತಿ ಅವರದು ಎಂದು ಏನೋ ಅನಿಸುತ್ತದೆ. Delegation of authority, ಈ ಲಂಚವನ್ನು ಸ್ವೀಕರಿಸುವಂಥ ಅಧಿಕಾರವನ್ನು ಮೇಲಿನಿಂದ ಕೆಳಗಿನ ಮಟ್ಟದವರೆಗೂ ಎಲ್ಲಾ ಅಧಿಕಾರಿಗಳಿಗೂ ಧಾರಾಳವಾಗಿ ನಾವು ಕೊಟ್ಟಿದ್ದೇವೆ ಅಂತಾ ಹೇಳಿ ಅವರ ಅರ್ಥದಲ್ಲಿ ಇರಬಹುದು ಏನೋ ಅನಿಸುತ್ತದೆ. Public accountability fixing the responsibility.

ಒಬ್ಬ ಅಧಿಕಾರಿ ತನಗೆ ನಿರ್ದಿಷ್ಟ ಪಡಿಸಿದ ರೀತಿಯಲ್ಲಿ ಲಂಚವನ್ನು ಕಲೆಕ್ಟ್ ಮಾಡದಿದ್ದರೆ ಜವಾಬ್ದಾರಿ ಮಾಡಲಾಗುವುದು.

ಶ್ರೀ ಕೆ. ಜೆ. ಜಾರ್ಜ್:- ಪಾಯಿಂಟ್ ಆಫ್ ಆರ್ಡರ್. ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೆಲವೊಂದು ಆರೋಪಗಳನ್ನು ಮಾಡುತ್ತಿದ್ದಾರೆ. ಅವರಲ್ಲಿ ನಿರ್ದಿಷ್ಟವಾಗಿ ಏನಾದರೂ ಇದ್ದುಬಿಟ್ಟರೆ, ದಾಖಲೆ ಒದಗಿಸಿ ಹೇಳಿದರೆ ಸರಿಯಾಗುತ್ತದೆ. ಜನರಲೈಸ್ ಮಾಡಿ ಎಲ್ಲಾ ಅಧಿಕಾರಿಗಳು ಕಲೆಕ್ಟ್ ಮಾಡುತ್ತಾರೆಂದು ಹೇಳಿದರೆ ನಿಜವಾಗಿ, ನಾಳೆ ಅಡ್ಮಿನಿಸ್ಟ್ರೇಷನ್ ಡೀಮಾರಲೈಸ್ ಆಗುತ್ತದೆ. ಇದರಲ್ಲಿ ದಾಖಲೆ ಇಟ್ಟು ಮಾತನಾಡಿದರೆ ಸರಿಯಾಗುತ್ತದೆ.

ಶ್ರೀ ಪಿ.ಎಸ್. ರಾಣೆ:- ಈ ಪಂಚಸೂತ್ರದ ಬಗ್ಗೆ ಜನರ ಅಭಿಪ್ರಾಯ ಏನು ಎನ್ನುವುದನ್ನು ತಮಗೆ ಹೇಳುತ್ತಿದ್ದೇನೆ. ಏಕೆಂದರೆ ನಿಜವಾದ ರೀತಿಯಲ್ಲಿ ಯಾವುದೇ ಒಂದು ಕಾರ್ಯಕ್ರಮ ಅದು ಅಮಲಿನಲ್ಲಿ ಬರದೇ ಇದ್ದಾಗ, ಅದರ ವಿಪರ್ಯಾಸ ಆಗಿದೆ. ಸಂಪೂರ್ಣವಾಗಿ ಆಡಳಿತ ಯಂತ್ರ ಕುಸಿದುಹೋಗಿ ಎಲ್ಲಿ ನೋಡಲಿ ಅಲ್ಲಿ ಭ್ರಷ್ಟಾಚಾರ ಇದೆ. ಲಂಚ ಕೊಡದೆ ಯಾವುದೇ ಕೆಲಸ ಆಗುವುದಿಲ್ಲ ಎನ್ನುವುದನ್ನು ನಾನು ಪ್ರಥಮ ಸಲ ಹೇಳುತ್ತಾ ಇಲ್ಲ, ಹಿರಿಯ ಸದಸ್ಯರಾದ ಮಾನ್ಯ ವೀರೇಂದ್ರ ಪಾಟೀಲರು ಹೇಳಿದ್ದಾರೆ. ಅನೇಕ ಸದಸ್ಯರು ಹೇಳಿದ್ದಾರೆ. ಇಲ್ಲ ಹಾಗಾಗಿಲ್ಲ ಎನ್ನುವುದನ್ನು ಅವರು ತಮ್ಮ ಆಡಳಿತ ಸುಧಾರಣೆಯಿಂದ ತೋರಿಸಬೇಕಾಗಿದೆಯೇ ಹೊರತಾಗಿ ನಮಗೆ ಅದನ್ನು ಸಿದ್ಧಮಾಡಿ ಎಂದರೆ ಸಿದ್ಧ ಮಾಡುತ್ತೇನೆ. ಅದರ ಬಗ್ಗೆ ಒಂದು ವ್ಯವಸ್ಥೆ ಆಗಲಿ. ಒಂದು ವಿಚಾರಣೆ ನಡೆಯಲಿ, ಎಲ್ಲೆಲ್ಲಿ ಏನೇನು ಆಗಿದೆ ಎಂದು ನಾನು ಹೇಳುತ್ತೇನೆ. ತಾವು ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾಯುಕ್ತ ಹಿಂದೆ

ಏನು ಆರೋಪದ ಪಟ್ಟಿಯನ್ನು ಸಲ್ಲಿಸಿ ನ್ಯಾಯಾಲಕ್ಕೆ ಕಳಿಸಿತ್ತು ಮತ್ತು ಆ ಹಿರಿಯ ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಆರೋಪವನ್ನು ಹೊರಿಸಲಾಗಿತ್ತು. ಅಂಥವರು ಮೇಲು ನೋಟಕ್ಕೆ ಭ್ರಷ್ಟ ಅಧಿಕಾರಿಗಳು ಎಂದು ಸಾಬೀತು ಆಗಿದೆ. ಅಕ್ರಮವಾಗಿ ಹಣವನ್ನು ಸಂಗ್ರಹ ಮಾಡಿದ್ದಾರೆ, ಅಕ್ರಮವಾದ ಆಸ್ತಿ ಪಾಸ್ತಿಗಳನ್ನು ಸಂಗ್ರಹಿಸಿದ್ದಾರೆ ಎಂದು ಲೋಕಾಯುಕ್ತದವರು ಅವರ ಮೇಲೆ ಕೇಸ್ ಹಾಕಿ ಹಿಂದಿನ ವೀರೇಂದ್ರ ಪಾಟೀಲರ ಸರ್ಕಾರ ಅವರನ್ನು ಸಸ್ಪೆಂಡ್‌ನಲ್ಲಿ ಇಡಲಾಗಿತ್ತು. ಅಂಥ ಸಸ್ಪೆಂಡ್‌ನಲ್ಲಿ ಇಟ್ಟಂತಹ ಅಧಿಕಾರಿಗಳನ್ನು ದೋಷಮುಕ್ತರನ್ನಾಗಿ ಮಾಡುವ ದೃಷ್ಟಿಯಿಂದ 'ಬಿ' ರೀಪೋರ್ಟ್‌ನ್ನು ಹಾಕಿ ನೀವು ದೋಷ ಮುಕ್ತರನ್ನಾಗಿ ಮಾಡುತ್ತಿದ್ದೀರಿ. ಇದು ಏನು ನಿಮ್ಮ ನೀತಿ? ಇದು ಯಾವ ನೀತಿಯನ್ನು ನಿರೂಪಿಸುತ್ತದೆ?

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಸದಸ್ಯರು ಹೇಳುವುದರಲ್ಲಿ ಏನಾದರೂ ಒಂದು ಸತ್ಯಾಂಶ ಇರಬೇಕು. ಯಾವ ಲೋಕಾಯುಕ್ತ ಕೇಸ್ ಹಾಕಿದೆ, ಅದೇ ಲೋಕಾಯುಕ್ತ 'ಬಿ' ರಿಪೋರ್ಟ್ ಮಾಡಿ ಕಳಿಸಿದೆ. ನಾವು ಏನು 'ಬಿ' ರಿಪೋರ್ಟ್ ಮಾಡಿದ್ದೇವೆಯೇ?

(ಗೊಂದಲ)

ಸಸ್ಪೆಂಡ್ ಆದ ಅಧಿಕಾರಿಗಳ ಸಸ್‌ಪೆನ್‌ಷನ್‌ಅನ್ನು ನಾವು ವಿತ್‌ಡ್ರಾ ಮಾಡಿಲ್ಲ. ಲೋಕಾಯುಕ್ತದವರು ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್‌ನ ಜಜ್‌ಮೆಂಟ್ ಪ್ರಕಾರ ಸ್ಟೇ ಮಾಡಿದ್ದಾರೆ. ಅದರ ಪ್ರಕಾರ ಮಾಡಿದೆಯೇ ಹೊರತು ನಮ್ಮ ಸರ್ಕಾರ ಯಾವುದೇ ಅಧಿಕಾರಿಯ ಮೇಲೆ ಲೋಕಾಯುಕ್ತ ಸಸ್‌ಪೆಂಡ್ ಮಾಡಿದಂತಹದನ್ನು ನಾವು ವಿತ್‌ಡ್ರಾ ಮಾಡಿಲ್ಲ. ನಮ್ಮ ಸರ್ಕಾರ ಯಾವುದೇ 'ಬಿ' ರಿಪೋರ್ಟ್‌ನ್ನು ಹಾಕಲಿಲ್ಲ. ಅದು ಲೋಕಾಯುಕ್ತ 'ಬಿ' ರಿಪೋರ್ಟ್ ಹಾಕಿದೆಯೇ ಹೊರತು ನಮ್ಮ ಸರ್ಕಾರ ಹಾಕಿಲ್ಲ.

SRI H. EKANTHAIAH:- I have a point of order..

ಅಧ್ಯಕ್ಷರು:- ಸ್ವಲ್ಪ ತಡೆಯಿರಿ. Mr. Dayananda Roa you have caught my eye.

ನೀವು ಏನೋ ಹೇಳಬೇಕು ಎಂದಿರಲ್ಲ.

ಶ್ರೀ ಆರ್. ದಯಾನಂದ ರಾವ್:- ನಾನು ಏನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಎಂದರೆ ಮಾನ್ಯ ಸದಸ್ಯರು ಡೈರೆಕ್ಟಾಗಿ ಸರ್ಕಾರಕ್ಕೆ ಆರೋಪ ಮಾಡುತ್ತಿದ್ದಾರೆ. In no way the Government is concerned, that is left to Lok Ayukta.

ಲೋಕಾಯುಕ್ತ ಕೇಸ್ ಬುಕ್ ಮಾಡಿದರು, 'ಬಿ' ರಿಪೋರ್ಟ್‌ನ್ನು ಅವರೇ ಕಳಿಸಿದ್ದಾರೆ.

In what way the Government is concerned ? False statement is being made by the hon'ble member.

ಅಧ್ಯಕ್ಷರು:- Mr. Rane, if you are making some accusations against officers against whom certain enquiries were initiated by Lokayuktha and now you are trying to bring in the Government also into the picture. The point is that the hon'ble Minster has made it clear that the Government is nowhere in the picture. It is the Lok Ayukta who initiated; it is the Lok Ayukta who filed the 'B' Report.

SRI H. EKANTAIAH:- It is not like that.

MR. SPEAKER:- That is what the hon'ble Minister has stated.

(ಗೊಂದಲ)

SRI C. BYREGOWDA:- Report of the Lok Ayukta be placed on the table of the House.

(Interruptions)

ಅಧ್ಯಕ್ಷರು:- ನನಗೆ ಯಾರಾದರೂ ಒಬ್ಬರು ಹೇಳಿದರೆ ಸಾಕು. ನೀವು ನೀವು ಮಾತನಾಡಿ ಒಬ್ಬರು ಯಾರಾದರೂ ಹೇಳಿ.

ಶ್ರೀ ಹೆಚ್. ಏಕಾಂತಯ್ಯ:- ತಾವು ಅಪ್ಪಣೆ ಕೊಟ್ಟರೆ, ನಾನು ಮಾತನಾಡುತ್ತೇನೆ. ಪ್ರಶ್ನೆ ಇರುವುದು ಇಲ್ಲಿ ಹಾಗಲ್ಲ. ಅವರು ಅವರದೇ ಆದ ವ್ಯಾಖ್ಯಾನವನ್ನು ಮಾಡುತ್ತಾ ಇರಬಹುದು, ಅದು ಪ್ರಶ್ನೆ ಬೇರೆ. ಅದಕ್ಕಿಂತ ಹೆಚ್ಚಾಗಿ ಲೋಕಾಯುಕ್ತದವರು ಒಬ್ಬ ಅಧಿಕಾರಿ ಮೇಲು ನೋಟಕ್ಕೆ ತಪ್ಪಿತಸ್ಥ ಎಂದು ಕಂಡು ಬರುವಂತಹ ಅಂಶ ಇದ್ದಾಗ ಅವರಷ್ಟಕ್ಕೆ ಅವರು ಸಸ್ಪೆಂಡ್ ಮಾಡುವುದಕ್ಕೆ ಸಾಧ್ಯ ಇಲ್ಲ. ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಇಂತಹ ಒಂದು ಪ್ರಕರಣದಲ್ಲಿ ಸರ್ಕಾರ ಒಪ್ಪಿಗೆ ನೀಡಿದೆಯೇ ಅಥವಾ ಇಲ್ಲವೇ? ಸರ್ಕಾರ ಒಪ್ಪಿಗೆ ನೀಡಿದ ಮೇಲೆ ತದ ನಂತರ 'ಬಿ' ರಿಪೋರ್ಟನ್ನು ಕೊಡಬೇಕಾದರೆ ಅದಕ್ಕೆ ಏನು ಕಾರಣ?

MR. SPEAKER:- I will take you on that. The Lok Ayukta found a particular officer that he was reponsible for some offence. They brought it to the notice of the Government and the Government took cognisance of the Lok Ayukta's version and then kept the officer under suspension. Subsequently, if the same Lok Ayukta were to write to the Government that a B-Report has been submitted before a court of law, before any other agency, what do you expect the Government to do?

5.35 ಪಿ.ಎಂ.

ಶ್ರೀ ಎಚ್. ಏಕಾಂತಯ್ಯ:- ಈಗ ಪ್ರಶ್ನೆ ಇಷ್ಟೆ. ಒಂದು ಸಾರಿ ಸರಕಾರಕ್ಕೆ ಮೇಲ್ನೋಟಕ್ಕೆ ಕಂಡು ಬರುವಂಥ ಅಪರಾಧವು ಮಾಡಿದ್ದು ಸಾಬೀತು ಆದರೆ ಸರಕಾರಕ್ಕೆ ಆ ತೀರ್ಮಾನಕ್ಕೆ ಬಂದಮೇಲೆ ಸರಕಾರವು ಅಂಥ ಅಧಿಕಾರಿಯನ್ನು ಅಮಾನತ್ತಿನಲ್ಲಿಡುವುದಕ್ಕೆ ಆದೇಶ ಮಾಡುತ್ತಾರೆ. ಅದನ್ನು ಬಿಟ್ಟು ಲೋಕಾಯುಕ್ತದವರಿಗೆ ಅವರಷ್ಟಕ್ಕೆ ಅವರೇ ಮಾಡುವಂಥ ಅಧಿಕಾರ ಇಲ್ಲ. ಹಾಗಿದ್ದಲ್ಲಿ, ಮೊದಲು ಲೋಕಾಯುಕ್ತದವರಿಂದ ಕೊಟ್ಟ ವರದಿಯು ಏನಾಯಿತು? ಮೇಲ್ನೋಟಕ್ಕೆ ಸಾಬೀತು ಮಾಡಿದಂಥ ಅಂಶಗಳು ಏನಿದ್ದಾವೆ ಅದು ಸುಳ್ಳು ಎಂದು ಸರಕಾರಕ್ಕೆ ತದನಂತರ ಬಂದಂಥ ವರದಿಯಿಂದ ಗೊತ್ತಾಗುವುದಾದರೆ, ಈ ಎರಡು ವರದಿಗಳಲ್ಲಿ ಒಂದು ತಪ್ಪಾಗಿರಬೇಕಲ್ಲ? ಹಾಗಾದರೆ ಸರಕಾರ ಏತಕ್ಕೋಸ್ಕರವಾಗಿ ಯಾರು ಮೊದಲು ಇನ್ವೆಸ್ಟಿಗೇಟ್ ಮಾಡಿದ್ದರೂ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಾ ಇದೆ?

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತದವರು ಏನು ಮಾಡುತ್ತಾರೆ ಅಂದರೆ, ಅವರು ಇನ್‌ಫಾರ್‌ಮೇಶನ್ ಬಂದ ಪ್ರಕಾರ ಅವರ ಅಧಿಕಾರಿಗಳು ಹೋಗಿ ರೈಡ್ ಮಾಡುತ್ತಾರೆ. ಹೀಗೆ ರೈಡ್ ಮಾಡಿದ ಮೇಲೆ ಆಫೀಸರ್ಸ್‌ಗೆ ಒಂದು ಆಪರ್ಚುನಿಟಿ ಕೊಡುತ್ತಾರೆ. ರೈಡ್ ವಿಚಾರದಲ್ಲಿ ನೀವು ಎಕ್ಸ್‌ಪ್ಲನೇಶನ್ ಮಾಡಿ ಅದು ನಿಜವೋ, ಸುಳ್ಳೋ ಎಂದು ಹೇಳಿದ ಮೇಲೆ ಸಂಬಂಧಪಟ್ಟ ಅಧಿಕಾರಿ ಎಕ್ಸ್‌ಪ್ಲನೇಶನ್ ಕೊಟ್ಟಿರ ಬಹುದು. ಅದನ್ನು ಅನುಸರಿಸಿ ಈ ಕೇಸ್ ಇಲ್ಲವೆಂದು ಹೇಳಿ 'ಬಿ' ರಿಪೋರ್ಟ್ ಕೊಟ್ಟರೆ ನಾವು ಆದೇಶ ಮಾಡುತ್ತೇವೆ. ಈ ವಿಚಾರದಲ್ಲಿ ಸರಕಾರದ ವತಿಯಿಂದ ಯಾವುದೇ ಇಂಟರ್‌ಫೇರ್ ಆಗಿಲ್ಲ. ಆದ್ದರಿಂದ ಇದು ಸರಕಾರದ ಗಮನಕ್ಕೆ ಬರುವುದಿಲ್ಲ. ಅದು ಸಂಪೂರ್ಣವಾಗಿ ಲೋಕಾಯುಕ್ತದವರಿಗೆ ಸಂಬಂಧ ಪಟ್ಟದ್ದು.

ಶ್ರೀ ಎಚ್. ಏಕಾಂತಯ್ಯ:- ಈ ದೇಶದಲ್ಲಿ ಒಂದು ಕಾನೂನು ಇದೆ. All India Civil Services and Conduct Rules. ಅದರ ಪ್ರಕಾರ ರಾಜ್ಯಸರಕಾರಕ್ಕೆ ಅಧಿಕಾರ ಇದೆಯೇ? ಇಲ್ಲವೇ ಎಂಬುದನ್ನು ಹೇಳಬೇಕು. ಸದ್ಯಕ್ಕೆ ಉತ್ತರ ಕೊಡುವುದು ಆಗಲಿಲ್ಲವಾದರೂ ತದನಂತರ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಪ್ರಭಾಕರ ಎಸ್. ರಾಣೆ:- ಮಾನ್ಯ ಅಧ್ಯಕ್ಷರೆ, ಸಚಿವರು ಈ ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುವಂಥ ಒಂದು ಸಂದರ್ಭದಲ್ಲಿ ಕೆಲವು ಕಾನೂನನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಇವೊತ್ತು ನಾವು ನಮ್ಮ ಅತ್ಮ ಸಾಕ್ಷಿಗೆ ಕೇಳಬೇಕು. ಆವೊತ್ತು ಮಾನ್ಯ ವೀರೇಂದ್ರ ಪಾಟೀಲರು ಸರಕಾರದ ಕೆಲವು ಅಪ್ರಮಾಣಿಕ ಅಧಿಕಾರಿಗಳನ್ನು, ಅದಕ್ಷ ಅಧಿಕಾರಿಗಳನ್ನು ಭ್ರಷ್ಟ ಅಧಿಕಾರಿಗಳು ಎಂದು ಹೇಳಿ ಗುರುತಿಸಿ ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದಾಗ ಅವರಲ್ಲಿ ಅಕ್ರಮವಾಗಿರತಕ್ಕಂಥ ಆಸ್ತಿಪಾಸ್ತಿಗಳು ಸಂಗ್ರಹಿಸಿದ್ದು ಹೇರಳವಾಗಿ ಮತ್ತು ಆಧಾರ ಸಹಿತವಾಗಿ ಸಿಕ್ಕಿದೆ. ಅವುಗಳ ಆಧಾರದ ಮೇಲೆ ಅಂಥವರನ್ನು ಅಮಾನತ್ತಿನಲ್ಲಿಡುವಂಥ ಕ್ರಮವನ್ನು ಸರಕಾರದವರು ಕೈಗೊಂಡರು. ಲೋಕಾಯುಕ್ತದ ವರದಿಯ ಮೇಲೆ ಅಮಾನತ್ತಿನಲ್ಲಿ ಇಡುವಂಥ ಅಧಿಕಾರವು ಸರ್ಕಾರಕ್ಕೆ ಇದೆ. ಲೋಕಾಯುಕ್ತದವರು ವರದಿಯನ್ನು ಸಲ್ಲಿಸುವುದಷ್ಟೆ ಮಾಡುತ್ತಾರೆ. ಅದರ ಮೇಲೆ ಸರಕಾರದವರು ಈ ಕ್ರಮವನ್ನು ತೆಗೆದುಕೊಂಡಿದ್ದುದು. ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆ ಆಗಬೇಕೆಂದು ಮಾಡಿದ್ದುದು. ಕಠಿಣ ಹಾಗೂ ಕಠೋರವಾದಂಥ ಈ ಒಂದು ನಿರ್ಣಯವನ್ನು ಆಗಿನ ಸರಕಾರದವರು ತೆಗೆದುಕೊಂಡಿದ್ದರು. ನಾವು ಇವೊತ್ತು ವಸ್ತುಸ್ಥಿತಿ ಏನೆಂದು ಅದರ ಬಗ್ಗೆ ನೋಡಿದಾಗ ಮೊದಲು ಈ ಅಧಿಕಾರಿಗಳ ಮೇಲೆ ಪ್ರೈಮಾಫೆಸಿ ಕೇಸ್ ಇದೆ ಎಂದು ವರದಿ ಮಾಡಿದ್ದಾರೋ ಆ ಅಧಿಕಾರಿಗಳ ಬದಲಾವಣೆ ಆಯಿತು. ಅನಂತರ ಅದು ಸತ್ಯ ಸಂಗತಿಯಾಗಿದ್ದು ಇದನ್ನು ಸರಕಾರದವರು ಅಳ್ಳಗಳೆಯುವುದಿಲ್ಲ ಎಂದು ತಿಳಿಯುತ್ತೇನೆ. ಇದಾದ ನಂತರ ಬೇರೆ ಅಧಿಕಾರಿಗಳು ಒಂದು ಕೆಲವು ಸಮಯದ ನಂತರ ಇದೇ ಭ್ರಷ್ಟ ಅಧಿಕಾರಿಗಳ ಮೇಲೆ ಮೊದಲು ಸಲ್ಲಿಸಿದ ವರದಿ ಸರಿಯಲ್ಲ ಎಂಬ ಅರ್ಥದಲ್ಲಿ 'ಬಿ' ರಿಪೋರ್ಟನ್ನು ಸಲ್ಲಿಸಿದರು. ಆಗ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿ ನ್ಯಾಯಾಲಯ ಅವರನ್ನು ದೋಷಮುಕ್ತರನ್ನಾಗಿ ಮಾಡಿದೆ. ಇದನ್ನು ನಾವು ಕೇಳಿದ್ದೇವೆ. ಇಲ್ಲಿ ಇರುವ ಪ್ರಶ್ನೆ ಅಂದರೆ ಒಬ್ಬ ಅಧಿಕಾರಿ ತನ್ನ ಆದಾಯಕ್ಕಿಂತಲೂ ಹೆಚ್ಚಿಗೆ ವರಮಾನವನ್ನು ಗಳಿಸಿದ್ದು ಆಧಾರ ಸಮೇತವಾಗಿ ಸಿಕ್ಕಿವಾಗ ಅದನ್ನು ಅಲ್ಲಗೆಳೆಯುವ ವರದಿ ಇನ್ನೊಂದು ಬಂದರೆ ಅದರ ಬಗ್ಗೆ ಸರಕಾರ ವಿಚಾರ ಮಾಡಬಾರದೆ?

ಶ್ರೀ ಕೆ. ಜೆ. ಜಾರ್ಜ್:- ಲೋಕಾಯುಕ್ತದವರು ಮೊದಲ ಒಂದು ಕೇಸನ್ನು ರಿಜಿಸ್ಟರ್ ಮಾಡುತ್ತಾರೆ. ಆಮೇಲೆ ಎನ್‌ಕ್ವಯರಿ ಮಾಡಿದ ಮೇಲೆ ಆ ಆಫೀಸರ್ಸ್ ನಿರಪರಾಧಿಗಳು ಅಂತ ಅವರ ಮೇಲೆ ಹಾಕಿರುವ ಕೇಸು ಸರಿಯಿಲ್ಲ ಎಂದು ಪ್ರೂವ್ ಮಾಡಿದ ಮೇಲ್ ಆ ಕೇಸನ್ನು ಕೋರ್ಟಿಗೆ ಹಾಕಿಬಿಟ್ಟು ಆ ಕೋರ್ಟ್ ಅದನ್ನು ಅಕ್ಸೆಪ್ಟ್ ಮಾಡಿದ ಮೇಲೆ ಸರ್ಕಾರ ಏನು ಮಾಡಲು ಸಾಧ್ಯ? ಇದನ್ನೇ ಇನ್ನೊಂದು ರೀತಿಯಲ್ಲೂ ಹೇಳಬಹುದಲ್ಲ! ಮೊದಲು ಅವರ ಮನೆಯನ್ನು ರೈಡ್ ಮಾಡಿಸಿದಾಗ ಬೇರೆ ಯಾವುದೋ ದುರುದ್ದೇಶದಿಂದ ಮಾಡಿಸಿ ಅವರ ಮೇಲೆ ಇಲ್ಲದ ಕೇಸ್‌ಗಳನ್ನು ಕಟ್ಟಿ, ಇದ. ಮಾಡಿದರು ಅಂತ ಹೇಳಿದರೆ ಅದನ್ನು ನೀವು ಒಪ್ಪುತ್ತೀರಾ? ನಾನು ಏನು ಹೇಳುತ್ತಿದ್ದೇನೆ, ಆಂಟಿ ಕರಪ್‌ಶನ್ ಅಂತ ಹೇಳಿಬಿಟ್ಟರೆ ಯಾವುದೇ ಒಬ್ಬ ಅಧಿಕಾರಿ ಆಗಿರಲಿ ಅವರು ಫೈನಲಾಗಿ ಅವರು ತಪ್ಪು ಮಾಡಿದ್ದಾರೆ ಎಂದು ಕಂಡುಹಿಡಿಯುವ ತನಕ ನೀವು ಅವರನ್ನು ಅಪರಾಧಿ ಎಂದು ಹೇಳಲಿಕ್ಕಾಗುವುದಿಲ್ಲ. ಸಸ್ಪೆನ್‌ಶನ್ ಅಂತ ಹೇಳಿ ಬಿಟ್ಟರೆ ಪ್ರತಿಯೊಂದಕ್ಕೂ suspension is not a punishment.

ಶ್ರೀ ಪ್ರಭಾಕರ್ ಎಸ್. ರಾಣೆ:- ಅಧ್ಯಕ್ಷರೆ, ನಾನು ಮತ್ತೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಸರ್ಕಾರ ಇವತ್ತು ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತದೆ ಎಂಬ ಮಾತು ಸಾಬೀತಾಗಿದೆ, ನನ್ನ ಪ್ರಕಾರ. ಅದನ್ನು ಸಾಬೀತುಮಾಡುವ ಕಾಲ ಬಂದಾಗ ಅದನ್ನು ಮಾಡುತ್ತೇನೆ. ಭ್ರಷ್ಟಾಚಾರದ ಬಗ್ಗೆ ಎಷ್ಟು ಮಾತನಾಡಿದರೂ ಕಡಿಮೆಯೇ. ಈ ಭ್ರಷ್ಟಾಚಾರ ವಿಷಯ ಬಂದಾಗ ಮಹಾತ್ಮ ಗಾಂಧಿಯವರ ಒಂದು ಮಾತು ನೆನಪಿಗೆ ಬರುತ್ತದೆ. ಅಹಿಂಸಾವಾದಿಗಳಾದ ಗಾಂಧೀಜಿಯವರು ಭ್ರಷ್ಟಾಚಾರದ ಬಗ್ಗೆ ಒಂದು ಮಾತನ್ನು ಹೇಳುತ್ತಾರೆ. ಈ ಭ್ರಷ್ಟಾಚಾರಿಗಳನ್ನು ನಾಲ್ಕು ರಸ್ತೆಗಳು ಕೂಡುವಲ್ಲಿ ನಿಲ್ಲಿಸಿ ಗುಂಡಿಕ್ಕಿರಿ ಎಂದು.

ಅಧ್ಯಕ್ಷರು:- ರಾಣೆಯವರೂ ಕೂಡ ಹಾಗಾದರೆ ಇರುವುದಿಲ್ಲ ಎಂದು ಕಾಣುತ್ತದೆ.

ಡಾ: ನಂಜಪ್ಪನವರೇ ಗಾಂಧೀಜಿಯವರ ಮಾತು ನಡೆಸಬೇಕಾದರೆ ನಾವೆಲ್ಲಾ ಸೆಲ್ಫ್ ಇಮೊಲೇಶನ್ ಮಾಡಿಕೊಳ್ಳಬೇಕಾಗುತ್ತದೆ.

DR. N. B. NANJAPPA:- Nobody has got the moral right to speak about corruption.

(ಗೊಂದಲ)

MR. SPEAKER:- Dr. Nanjappa, I think you can speak for yourself, you know.

ಶ್ರೀ ಬಿ. ಎಸ್. ಯಡಿಯೂರಪ್ಪ:- ಅವರು ಹೇಳಿರುವ ಮಾತು ಕಡತಕ್ಕೆ ಹೋಗದೆ ಇರುವುದು ಒಳ್ಳೆಯದು.

ಶ್ರೀ ಕೆ. ಹೆಚ್. ರಂಗನಾಥ್:- ನಂಜಪ್ಪನವರ ಮಾತು, ಯಾರೂ ಉಳಿದೇ ಇಲ್ಲ ಎಲ್ಲರೂ ಹಾಗೆ ಅಂತ ಹೇಳಿದರಲ್ಲ, ಆ ಮಾತು ಕಡತಕ್ಕೆ ಹೋಗಬಾರದು.

ಅಧ್ಯಕ್ಷರು:- ಇಲ್ಲ ಹೋಗಿಲ್ಲ, ಅದು ಹೇಗೆ ಹೋಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್:- ನಂಜಪ್ಪನವರೇ ನೀವೂ ಉಳಿದುಕೊಂಡಿರಿ.

MR. SPEAKER:- I think Mr. Rane, you can move to the next subject.

ಶ್ರೀ ಪ್ರಭಾಕರ್ ಎಸ್. ರಾಣೆ:- ಅಧ್ಯಕ್ಷರೇ, ಸ್ವಲ್ಪದರಲ್ಲಿ ಮುಗಿಸುತ್ತೇನೆ. ಗಾಂಧೀಜಿಯವರ ಮಾತು ನಾನು ಏಕೆ ಹೇಳಿದೆ ಎಂದರೆ ಅವರು ತಮ್ಮ ಕಾಲದಲ್ಲಿ ನಡೆಯುವಂತಹ ಭ್ರಷ್ಟಾಚಾರದ ಬಗ್ಗೆ ಕೋಪಗೊಂಡು ಈ ಉದ್ಗಾರ ತೆಗೆದರು. ಆದರೆ ನನಗನ್ನಿಸುತ್ತದೆ, ಅವರು ಇವತ್ತೇನಾದರೂ ಜೀವಂತವಾಗಿದ್ದರೆ, ಇಲ್ಲ. ಜೀವಂತವಾಗಿದ್ದರೆ, ಇಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ತಾಂಡವನೃತ್ಯ ನೋಡಿದರೆ ಅವರು ತಮ್ಮ ಮಾತನ್ನು ಬದಲಾಯಿಸುತ್ತಿದ್ದರು. ಆಗ ನನಗೆ ಅನಿಸುತ್ತದೆ, ನಾಲ್ಕು ರಸ್ತೆಗಳು ಕೂಡುವಲ್ಲಿ ನಿಲ್ಲಿಸಿ ಗುಂಡಿಕ್ಕಿರಿ ಎನ್ನುವ ಬದಲು ಜೀವಂತವಾಗಿ ಚರ್ಮವನ್ನು ಸುಲಿಯಿರಿ ಎನ್ನುತ್ತಿದ್ದರು. ಏಕೆಂದರೆ ಇಷ್ಟೊಂದು ಪ್ರಮಾಣದಲ್ಲಿ ಇವತ್ತು ಭ್ರಷ್ಟಾಚಾರ ನಡೆಯುತ್ತಿದೆ. ಇಷ್ಟಕ್ಕೆ ಮುಗಿಸುತ್ತೇನೆ. ತಾವು ಆದೇಶವನ್ನು ಕೊಟ್ಟಿದ್ದಿರಿ. ಭ್ರಷ್ಟಾಚಾರದ ಮೇಲೆ ಮತ್ತೆ ಮಾತನಾಡುವುದಿಲ್ಲ.

ಅಧ್ಯಕ್ಷರು:- ಆದೇಶವನ್ನು ಕೊಡಲಿಲ್ಲ. ಸೂಚನೆಯನ್ನು ಕೊಟ್ಟೆ ಅಷ್ಟೆ. ಮುಂದಕ್ಕೆ ಹೋಗಿ ಎಂದು.

ಶ್ರೀ ಪ್ರಭಾಕರ್ ಎಸ್. ರಾಣೆ:- ಅಧ್ಯಕ್ಷರೇ, ಪಂಚಸೂತ್ರದ ಬಗ್ಗೆ ಹೇಳುತ್ತಿದ್ದೀರಿ. ಮತ್ತೆ ಕೆಲವು ವಿಷಯಗಳನ್ನು ಇಲ್ಲಿ ಹೇಳಲೇಬೇಕಾಗುತ್ತದೆ. ಏಕೆಂದರೆ ಪಂಚಸೂತ್ರ ಪಂಚಸೂತ್ರ ಎಂದು ಬಹಳಷ್ಟು ನಾವು ಹೆಮ್ಮೆಯಿಂದ ಈ ಮಾತನ್ನು ಎಲ್ಲಾ ಕಡೆಯಲ್ಲೂ ಹೇಳುತ್ತಿದ್ದೇವೆ. ಆದರೆ ಇವತ್ತಿನ ದುರ್ದೆಶೆ ಏನಾಗಿದೆ ಎನ್ನುವುದನ್ನೂ ಸಹ ನಾವು ನೋಡಲೇಬೇಕಾಗುತ್ತದೆ. ನಾನು ಪಬ್ಲಿಕ್ ಅಕೌಂಟಿಬಿಲಿಟಿ ಬಗ್ಗೆ ಹೇಳಿದೆ. ಆಮೇಲೆ Redressal of public grievances ನಿಜವಾಗಿಯೂ ಸರ್ಕಾರ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಪಟ್ಟಿದೆ. ಕೇವಲ 17 ಜನರಿಗೆ 35 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಟ್ಟಿದೆ. ಅದಕ್ಕಿಂತಲೂ ಸಣ್ಣದಾದ ಕೆಲಸವಿದೆಯೇ? ಆದರಿಂದ ಈ ದಿಸೆಯಲ್ಲಿ ಸರ್ಕಾರ ತನ್ನ ಪಂಚಸೂತ್ರದ ಒಂದು ಕಾರ್ಯಾಚರಣೆಯನ್ನು ಮಾಡುತ್ತಿದೆ ಎಂದು ಸ್ಪಷ್ಟವಾಗಿ ಹೇಳಲೇಬೇಕಾಗುತ್ತದೆ. ಇಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಖಾಸಗೀಕರಣದ ಬಗ್ಗೆ. ಈ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ಬಗ್ಗೆ ಇಡೀ ದೇಶದಲ್ಲಿ ಆ ಬಗ್ಗೆ ಒಂದು ಹೊಸ ನೀತಿಯ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಇದರ ಬಗ್ಗೆ ಕೇಂದ್ರ ಸರ್ಕಾರವೂ ಸಹ ಕಾರ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಸಾರ್ವಜನಿಕ ಉದ್ದಿಮೆಗಳು, ಸಹಿಸಲಾರದಂಥ ಹಾನಿಯನ್ನು ಉಂಟುಮಾಡಿವೆ. ಅವುಗಳು ಬಿಳಿ ಆನೆಗಳಾಗಿರುವುದರಿಂದ ಸರ್ಕಾರದ ಬೊಕ್ಕಸದ ಮೇಲೆ ಭಾರಿ ಹೊರೆ ಬಿದ್ದಿದೆ. ಆದರೆ ಇವತ್ತು ಇಂಥ ಖಾಸಗೀಕರಣವನ್ನು ಮಾಡುವಾಗ ಖಾಸಗೀಕರಣ ಮಾಡುವವರ ಉದ್ದೇಶ ಅದು ಒಳ್ಳೆಯದು ಇರಬೇಕಾಗುತ್ತದೆ. ಯಾರು ಈ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಬೇಕು ಎಂದು ಹೇಳುತ್ತಾರೋ ಅವರಲ್ಲಿ ಪ್ರಾಮಾಣಿಕತೆ ಇರಬೇಕಾಗುತ್ತದೆ. ಸದುದ್ದೇಶ ಇರಬೇಕಾಗುತ್ತದೆ. ನಿಜವಾಗಿಯೂ ಸರ್ಕಾರಕ್ಕೆ ಅದರಿಂದ ಹೊರೆಯನ್ನು ಕಡಿಮೆ ಮಾಡಿ ಸಾರ್ವಜನಿಕರಿಗೆ ಇನ್ನುಳಿದ ರೀತಿಯಲ್ಲಿ ಪ್ರಯೋಜನವನ್ನು ದೊರಕಿಸುವಂಥ ಪ್ರಯತ್ನವನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದು ಯಾವಾಗ ಎಂದರೆ ಅದನ್ನು ಮಾಡುವಂಥ ಜನರಲ್ಲಿ ಒಳ್ಳೆಯ ಉದ್ದೇಶ ಇದ್ದಾಗ, ಮತ್ತು ಅವರು ಪ್ರಾಮಾಣಿಕರಾಗಿದ್ದಾಗ. ಅಪ್ರಾಮಾಣಿಕರು, ಭ್ರಷ್ಟಾಚಾರಿಗಳು ಇದರ ಬಗ್ಗೆ ನಿರ್ಣಯವನ್ನು ಕೈಗೊಂಡರೆ ಅದರಿಂದ ಲಾಭಕ್ಕಿಂತಲೂ ಹಾನಿಯೇ ಹೆಚ್ಚಾಗುತ್ತದೆ. ಆದ್ದರಿಂದ ಇದರ ಬಗ್ಗೆ ಗಂಭೀರವಾದಂಥ ವಿಚಾರವನ್ನು ಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಇದಲ್ಲದೆ, ಇವತ್ತು ಕೆಲವು ಸ್ಕೀಮ್‌ಗಳ ಬಗ್ಗೆ ಹೇಳಿದ್ದಾರೆ. 'ಆಶ್ರಯ' 'ಆರಾಧನಾ' 'ಅಕ್ಷಯ'ಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಶಿಕ್ಷಣ ಮಂತ್ರಿಗಳೇ ಹೇಳಿದಂತೆ 'ಅಕ್ಷಯ' ಇನ್ನು ಪ್ರಾರಂಭವಾಗಿಲ್ಲ, ಅದು ಪ್ರಾರಂಭವಾಗುವ ಹಂತದಲ್ಲಿದೆ. ಅದರಿಂದ ಅದರ ಹೆಚ್ಚಿನ ಚರ್ಚೆಯನ್ನು

'ವಿಶ್ವ' ಮತ್ತು ಆಶ್ರಯ ಯೋಜನೆಗಳು, ಆಶ್ರಯ ಯೋಜನೆ ಅದು ಸರಿಯಾದಂಥ ರೀತಿಯಲ್ಲಿ ಕಾರ್ಯರೂಪದಲ್ಲಿ ಬಂದರೆ ಅದು ನಿಜವಾಗಿಯೂ ಒಳ್ಳೆಯ ಕಾರ್ಯಕ್ರಮ. ಆದರೆ ಇವತ್ತು ಏನಾಗುತ್ತಿದೆ, ಇದೇ ಹುಡ್ಕೋ ಯೋಜನೆಯಿಂದ ಈ ಹಿಂದೆಯೂ ಸಹಾ ಜನತಾ ಮನೆಗಳು ಮಾಡಿ ಅಲ್ಪ ವೆಚ್ಚದ ಮನೆಗಳು ಎಂದು ಹೇಳಿ ಮನೆಗಳು ಇಲ್ಲದಿದ್ದವರಿಗೆ ಮನೆಗಳನ್ನು, ಸೈಟುಗಳು ಇಲ್ಲದಿದ್ದವರಿಗೆ ಸೈಟುಗಳನ್ನು ಕೊಡುವ ಯೋಜನೆ ಜಾರಿಯಲ್ಲಿತ್ತು. ಇವತ್ತು ಏನು ಆಗಿದೆ? ನಾವು 'ಆಶ್ರಯ' ಯೋಜನೆಯಲ್ಲಿ ಈಗಾಗಲೇ ಹೇಳಿದಂತೆ ಮೊದಲಿಗೆ ತಾಲ್ಲೂಕಿಗೆ ಒಂದು ಸಾವಿರ, ಅನಂತರ ಕ್ಷೇತ್ರಕ್ಕೆ ಒಂದು ಸಾವಿರ, ಇವತ್ತು ಇದಾದನಂತರ ಕ್ಷೇತ್ರಕ್ಕೆ ಐದು ನೂರು ಎಂದು ಹೇಳಿ ಮೇಲಿಂದ ಮೇಲೆ ಬದಲಾವಣೆಯಾಯಿತು. ಅದೇನೇ ಇರಲಿ. ಆದರೆ ಇದನ್ನೆಲ್ಲಾ ನಾವು ಕಾರ್ಯರೂಪದಲ್ಲಿ ತರುವ ಬದಲು ಏನು ಹಿಂದಿನ ಬ್ಯಾಕ್‌ಲಾಗ್ ಇದೆ, ಇವತ್ತು 86-87 /87-88 ರಲ್ಲಿ ಜನತಾ ಮನೆಗಳನ್ನು ಕಟ್ಟಿರುವ ಬಗ್ಗೆ ಇವತ್ತಿನವರೆಗೂ ಸಬ್ಸಿಡಿಯೇ ರಿಲೀಸ್ ಆಗಿಲ್ಲ, ಇವತ್ತಿಗೂ ಸಹಾ ಅನೇಕ ಜನರು ನಮಗೆ ಇನ್ನು ದುಡ್ಡು ಕೊಟ್ಟಿಲ್ಲ ಎಂದು ಹೇಳಿ ತಾಲ್ಲೂಕು ಕಛೇರಿಗೆ ಮತ್ತು ಬಿ. ಡಿ. ಓ. ಕಛೇರಿಗಳಿಗೆ ಅಲೆದಾಡುವಂಥ ಪ್ರಸಂಗ ಬಂದಿದೆ.

ಅದರ ಬಗ್ಗೆ ಸರ್ಕಾರ ಏನು ಮಾಡಬೇಕೆನ್ನುವುದನ್ನು ಸ್ಪಷ್ಟಪಡಿಸಲಿ. ಏಕೆಂದರೆ ಹಿಂದಿನ ಕಾರ್ಯಕ್ರಮಗಳನ್ನು ಸಂಪೂರ್ಣ ಮುಕ್ತಾಯಗೊಳಿಸಿ ಅಲ್ಲಿ ಇರುವಂತಹ ಬೆನಿಫಿಷರಿಸ್ ಬಗ್ಗೆ ಸರಿಯಾದಂತಹ ರೀತಿಯಲ್ಲಿ ಪ್ರಯೋಜನವನ್ನು ಕೊಟ್ಟು ಅನಂತರ ಈ ಕಾರ್ಯಕ್ರಮವನ್ನು ತಂದರೆ ಅದರಿಂದ ಪ್ರಯೋಜನವಾಗುತ್ತದೆ. ಒಂದೇ ಸಲ ಆಶ್ರಯ ಯೋಜನೆಯಲ್ಲಿ ನೀವು ತಾಲ್ಲೂಕಿಗೆ ಒಂದು ಸಾವಿರ ಅಂಶ ನಿವೇಶಗಳನ್ನು ಗುರ್ತು ಮಾಡಬೇಕೆಂದು ಹೇಳಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಂಥ ಈ ಅರಣ್ಯಮಯ ಪ್ರದೇಶಗಳಲ್ಲಿ ಒಂದು ತಾಲ್ಲೂಕಿನಲ್ಲಿ ಕಂದಾಯ ಜಮೀನುಗಳಲ್ಲಿ ಅಥವಾ ಸರ್ಕಾರೀ ಜಮೀನುಗಳಲ್ಲಿ 100 ನಿವೇಶನಗಳು ಸಿಗುವುದು ಕಷ್ಟವಾಗಿದೆ. ಇವತ್ತು ನಮ್ಮ ಕಡೆ ನೋಡುತ್ತಿದ್ದೇವೆ. ಅಲ್ಲಲ್ಲಿ ಅರಣ್ಯ ಭೂಮಿಗಳಲ್ಲೂ ಸಹ ಈ ನಿವೇಶನಗಳನ್ನು ಗುರುತು ಮಾಡುತ್ತಿದ್ದಾರೆ. ನಾಳೆ ಪಟ್ಟಾಗಳನ್ನು ಕೊಟ್ಟರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಅರಣ್ಯ ಜಮೀನಿನಲ್ಲಿ ಒಂದು ಇಂಚನ್ನು ಸಹ ಯಾವುದೇ ವ್ಯಕ್ತಿಗೆ ಹಸ್ತಾಂತರ ಮಾಡಲಿಕ್ಕೆ ರಾಜ್ಯಸರ್ಕಾರಕ್ಕೆ ಅಧಿಕಾರವೂ ಇಲ್ಲ. ಹೀಗಿರುವಾಗ ನಾವು ಒಂದು ರೀತಿಯಲ್ಲಿ ಗಡಿಬಿಡಿಯಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದರೆ ಜನರಿಗೆ ಮೋಸಮಾಡುವಂಥ ಪ್ರಸಂಗಗಳು ಆಗುತ್ತದೆ. ಇದಕ್ಕೆ ಅವಕಾಶ ಕೊಡಬಾರದೆಂದು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವೊತ್ತು ಒಟ್ಟಾರೆ ಹೇಳುವುದಾದರೆ ರಾಜ್ಯಪಾಲರ ಭಾಷಣದ ಬಗ್ಗೆ ಸರ್ಕಾರ ವಿಶೇಷ ಮುತುವರ್ಜಿವಹಿಸಿದೆ. ಈ ರೀತಿ ಭಾಷಣವನ್ನು ತಯಾರಿಸುವುದು ನಿಜವಾಗಿಯೂ ಸರಿಯಲ್ಲ.

ಮಾನ್ಯ ಒಬ್ಬ ಸದಸ್ಯರು:- ಹುಡ್ಕೋ ಮನೆಗಳ ಬಗ್ಗೆ ಇನ್ನೂ 80 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೆ, ಮಂಜುಕಾಲದಲ್ಲಿ ಹಿಡಿದವರಿಗೆ ನೋಡಿದ್ದೆಲ್ಲ ಮಂಜು ಕಾಣುವಹಾಗೆ ನಮ್ಮ ರಾಣೆಯವರಿಗೆ ಯಾವುದೋ ಒಂದು ಕಾರ್ಯಕ್ರಮ ಸರಿ ಇಲ್ಲ ಅಂದರೆ ಎಲ್ಲಾ ಸರಿಯಿಲ್ಲವೆಂದು ಕಾಣುತ್ತದೆ. ಈಗ ಅವರು ಹೇಳಿದ ಹಾಗೆ ಒಂದು ಕ್ಷೇತ್ರಕ್ಕೆ 500 ಮನೆಗಳು ಎಂದು ಮಾಡಲಿಲ್ಲ. ಒಂದು ಕ್ಷೇತ್ರಕ್ಕೆ 1000 ಮನೆಗಳು ಇವೆ. ಸಿಟಿ ಮುನಿಸಿಪಲ್ ಕೌನ್ಸಿಲ್ ನಗರ ಪ್ರದೇಶಗಳ ಕ್ಷೇತ್ರಗಳಲ್ಲಿ ಜಾಸ್ತಿಬರುವುದರಿಂದ ಆ ಮುನಿಸಿಪಾಲಿಟಿ ಏರಿಯಾಕ್ಕೆ 500 ಮನೆಗಳನ್ನು ಕೊಡಬಹುದು, 500 ಮನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೊಡಬಹುದೆಂದು ಈಗಾಗಲೇ ಸರ್ಕ್ಯುಲರ್‌ಅನ್ನು ಕಳುಹಿಸಿದ್ದೇವೆ. ಮೊದಲು ಸ್ಟೇಟ್ ಮುನಿಸಿಪಾಲಿಟಿ ಕೌನ್ಸಿಲ್‌ಗೆ 500 ಮನೆಗಳು ಟೌನ್ ಒಳಗಡೆ ಕೊಡಬಹುದು, 500 ಹೊರಗಡೆ ಕೊಡಬೇಕೆಂದು ಸರ್ಕ್ಯುಲರ್ ಕೊಟ್ಟಿದ್ದೇವೆ. ಅದನ್ನು ಬದಲಾವಣೆ ಮಾಡಿದ್ದೇವೆ. ಏಕೆಂದರೆ 200 ಮನೆಗಳನ್ನು ಕೊಟ್ಟರೆ ಸಾಲದೆಂದು ರೆಪ್ರಜಂಟೇಷನ್ ಬಂದ ಪ್ರಕಾರ ಬದಲಾವಣೆ 500-500 ಎಂದು ಮಾಡಿದ್ದೇವೆ. ಮೊದಲು ಆರ್‌ಡಿಪಿಆರ್ ನವರು ಜನತಾ ಮನೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅದರಲ್ಲಿ ಬಾಕಿ ಆಗಿದೆ. ಆದುದರಿಂದ ಆರ್. ಡಿ. ಪಿ. ಆರ್. ಅವರೇ ದುಡ್ಡನ್ನು ಕೊಟ್ಟು ಕೊಂಡುಕೊಂಡು ಸಂಪೂರ್ಣವಾಗಿ ಮಾಡುತ್ತಿದ್ದಾರೆ.

ಶ್ರೀ ಎಂ. ನಾರಾಯಣ ಸ್ವಾಮಿ:- 1990-91 ಸಾಲು ಹುಡ್ಕೋ ಮನೆಗಳಿಗೆ ಒಂದು ಪೈಸಾ ರಿಲೀಸ್ ಮಾಡಿಲ್ಲ, ಕಟ್ಟಡವನ್ನು ನೆಲಮಟ್ಟಕ್ಕೆ, ಕಿಟಕಿಮಟ್ಟಕ್ಕೆ ಕಟ್ಟಿರತಕ್ಕದ್ದು ಕೂಡ ಈಗ ಕಂಪ್ಲೀಟ್ ಹಾಳಾಗಿಹೋಗಿವೆ. ಒಂದು ರೂಪಾಯಿಯನ್ನು ಕೂಡ ಕೊಟ್ಟಿಲ್ಲ.

ಶ್ರೀ ಕೆ. ಜೆ. ಜಾರ್ಜ್:- ಅದು ಮಾಡದಿದ್ದರೆ ಅದು ಜಿಲ್ಲಾ ಪರಿಷತ್ತಿನವರು ಮಾಡಬೇಕಾದ ಕೆಲಸ.

ಶ್ರೀ ಎಂ. ನಾರಾಯಣ ಸ್ವಾಮಿ:- ಜಿಲ್ಲಾ ಪರಿಷತ್ತಿನವರಿಗೆ ನೀವು ಹಣವನ್ನು ಕೊಟ್ಟಿಲ್ಲ.

(ಗೊಂದಲ)

ಶ್ರೀ ಜಿ. ಸಿ. ಮಾಧುಸ್ವಾಮಿ:- ಮಂಡಲ್ ಪಂಚಾಯತಿಯಲ್ಲಿ 43 ಮನೆ ಏನು ಕೊಡಬೇಕಾಗಿದೆ ಅದನ್ನು ಕೂಡ ರದ್ದು ಮಾಡಿದ್ದೀರಿ.

(ಗೊಂದಲ)

ಶ್ರೀ ಕೆ. ಜೆ. ಜಾರ್ಜ್:- ಇದರಿಂದ ಏನಾಗಿದೆ ಎಂದರೆ ಹಳೆಯದು ಯಾವುದೇ ಜಿಲ್ಲಾಪರಿಷತ್ತಿನ ಮನೆಗಳನ್ನು ತೆಗೆದುಕೊಂಡಿದ್ದರೆ ಇದರಿಂದ ಬಾಕಿ ಇರುವುದು ಯಾವ ಸ್ಟೇಜ್‌ನಲ್ಲಿದೆ ಇದನ್ನು ಸಂಪೂರ್ಣವಾಗಿ ಮಾಡಲಿಕ್ಕೆ ಈಗಾಗಲೇ ಜಿಲ್ಲಾಪರಿಷತ್ತು ಮತ್ತು ಆರ್.ಡಿ.ಪಿ.ಆರ್. ನವರು ಕೂಡಲೇ ಅದನ್ನು ತೆಗೆದುಕೊಳ್ಳುತ್ತಿದ್ದಾರೆ. ನಾವು 'ಆಶ್ರಯ' ಸ್ಕೀಮ್‌ನಲ್ಲಿ ಹೊಸ ಮನೆಗಳನ್ನು ಮಾತ್ರ ತೆಗೆದುಕೊಂಡಿದ್ದೇವೆ. ಹಳೆಯ ಮನೆಗಳನ್ನು ನಾವು ತೆಗೆದುಕೊಂಡಿಲ್ಲ. ಹಳೆ ಮನೆಗಳನ್ನು 'ಆಶ್ರಯ' ಸ್ಕೀಮ್‌ನಲ್ಲಿ ತೆಗೆದುಕೊಳ್ಳುವುದಿಲ್ಲ. ಈ ಹಣ ಆರ್.ಡಿ.ಪಿ.ಆರ್. ಯಿಂದ ಜಿಲ್ಲಾಪರಿಷತ್ತಿಗೆ ಹೋಗುತ್ತದೆ. ಈ ರೀತಿಯಾಗಿ ನಾರ್ತ್ ಕೆನರಾ, ಶಿವಮೊಗ್ಗ, ಮಲೆನಾಡು ಏರಿಯಾದಲ್ಲಿ ರಾಣೆಯವರು ಹೇಳಿದಹಾಗೆ ರೆವಿನ್ಯೂ ಲ್ಯಾಂಡ್ ಇಲ್ಲ, ಬೇರೆ ಖಾಸಗಿ ಲ್ಯಾಂಡ್ ಇಲ್ಲ, ಅಲ್ಲಿ ಎಲ್ಲಾ ಫಾರೆಸ್ಟ್ ಲ್ಯಾಂಡ್ನಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಅವರಿಗೆ ಪೊಸಿಷನ್ ಸರ್ಟಿಫಿಕೇಟ್ ಕೊಡಿ ಎಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಮೊನ್ನೆ ತಾನೆ ಆಲ್ ಇಂಡಿಯಾ ಫಾರೆಸ್ಟ್ ಮಿನಿಸ್ಟರ್ ಕಾನ್‌ಫರೆನ್ಸ್ ಕರೆದಾಗ ಸೆಂಟ್ರಲ್ ಮಿನಿಸ್ಟರ್‌ರವರು ಹೇಳಿದ್ದಾರೆ.

ಸೆಂಟ್ರಲ್ ಎನ್‌ವಿರೋನ್‌ಮೆಂಟ್ ಮಿನಿಸ್ಟರ್‌ರವರು ಐದು ಎಕರೆ ತನಕ ಇರುವ ಫಾರೆಸ್ಟ್ ಲ್ಯಾಂಡ್‌ಅನ್ನು ರೆಗ್ಯುಲರೈಸ್ ಮಾಡಬಹುದೆಂದು ಈಗಾಗಲೇ ಡಿಸಿಶನ್ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್:- ಕೇಂದ್ರ ಸರ್ಕಾರದವರು ಅನುಮತಿ ಕೊಡದೆ ಇದ್ದರೂ ನೀವು ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಹಕ್ಕು ಏನಿದೆ? ನೀವು ಪಟ್ಟಾ ಹೇಗೆ ಕೊಡುತ್ತೀರಿ.

ಶ್ರೀ ಕೆ. ಜೆ. ಜಾರ್ಜ್:- ಪಟ್ಟಾ ಕೊಡಲಿಲ್ಲ. ಪೊಸೆಶನ್ ಸರ್ಟಿಫಿಕೇಟ್ ಕೊಟಿದ್ದೇವೆ. ಟೈಟಲ್ ಕೊಡಲಿಲ್ಲ. ಈಗ ಟೈಟಲ್ ಕೊಡಬಹುದು.

ಶ್ರೀ ಕೆ. ಎಚ್. ರಂಗನಾಥ್:- ಪೊಸೆಶನ್ ಸರ್ಟಿಫಿಕೇಟ್ ಹೇಗೆ ಕೊಡುತ್ತೀರಿ?

ಶ್ರೀ ಕೆ. ಜೆ. ಜಾರ್ಜ್:- ಫಾರೆಸ್ಟ್ ಲ್ಯಾಂಡ್‌ನಲ್ಲಿ ಐದು ಎಕರೆ ತನಕ ಜಮೀನು ಇದ್ದವರಿಗೆ ಮಾತ್ರ ಹೌಸ್ ಸೈಟ್ಸ್ ಕೊಡಬೇಕೆಂದು ಸೆಂಟ್ರಲ್ ಗೌರ್ನಮೆಂಟ್‌ನವರು ಡಿಸಿಶನ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ನಾರಾಯಣಸ್ವಾಮಿ:- ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ರೀತಿಯಲ್ಲಿ ಈ ಸರ್ಕಾರ ಬಂದಾಗಿನಿಂದ, ಈ ಹಿಂದೆ ಮಾನ್ಯ ಶ್ರೀ ಬಸವಲಿಂಗಪ್ಪನವರು ಸಹ 1990 ರಲ್ಲಿ ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದರು. ಅನಂತರ 1991 ರಲ್ಲಿ ಚುನಾವಣಾ ಭಾಷಣದಲ್ಲಿ ಕೂಡ ಹೇಳಿದರು. ಒಂದು ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳನ್ನು ಕಟ್ಟಿಸಿಕೊಡುವುದಾಗಿ ಹೇಳಿದರು. ಅನಂತರ ಆ ಕ್ಷೇತ್ರದಲ್ಲಿ ಸಿಟಿ ಮುನಿಸಿಪಾಲಿಟಿಗೆ 200 ಮನೆಗಳನ್ನು, ರೂರಲ್ ಪಾರ್ಟ್ಸ್‌ಗೆ 800 ಮನೆಗಳೆಂದು ಹೇಳಿದರು. ನಾನು ಸರ್ಕಾರಕ್ಕೆ ಪ್ರಶ್ನೆಯನ್ನು ಕೇಳುವುದಿಷ್ಟೇ. ಈ ಎರಡು ವರ್ಷಗಳಿಂದ ಮನೆಗಳ ಸವಲತ್ತು ಕೊಡುವುದಾಗಿ ಜನರಿಗೆ ಮೋಸ ಮಾಡಿಕೊಂಡು ಬರುತ್ತಿದ್ದಾರಲ್ಲ, ಜನತೆಗೆ ಮನೆಯ ಸೌಲಭ್ಯವನ್ನು ಒದಗಿಸಿಕೊಡುವಲ್ಲಿ ಎಷ್ಟು ಅಭಿವೃದ್ಧಿಯಾಗಿದೆ? ಒಂದು ಸಾರ್ವಜನಿಕ ಕ್ಷೇತ್ರಕ್ಕೆ ಮಾನ್ಯ ಚಿಕ್ಕೇಗೌಡರು ಬಂದಿದ್ದರು, ಆ ಕ್ಷೇತ್ರಕ್ಕೆ ಮೂರು ಲಕ್ಷ ಮನೆ ಕೊಡುತ್ತಿದ್ದಾರೆ.

(ಗೊಂದಲ)

ನಾನು ಮಾನ್ಯ ರಾಣೆಯವರಿಗೆ ಸಪೋರ್ಟ್ ಮಾಡುತ್ತಿದ್ದೇನೆ. ಸರ್ಕಾರ, ಈ ಸುಳ್ಳು ಆಶ್ವಾಸನೆ ಮತ್ತು ಪೊಳ್ಳು ಘೋಷಣೆಗಳನ್ನು ಮಾಡುವುದನ್ನು ಬಿಡಬೇಕು.

(ಗೊಂದಲ)

ಸರ್ಕಾರದವರು ಸೈಟ್ ಹಂಚಲಿಲ್ಲವೆಂದು ನಾನು ಹೇಳಲಿಲ್ಲ. ಎರಡು ವರ್ಷಗಳಿಂದ ನಿಮ್ಮ ಸರ್ಕಾರದ ಬಣ್ಣ ಬಯಲಾಗುತ್ತಿದೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಅಧ್ಯಕ್ಷರೇ, ಶ್ರೀ ನಾರಾಯಣಸ್ವಾಮಿಯವರು ಹೇಳಿದ ರೀತಿ ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದುದು ನಿಜ. ಆದರೆ, ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟರೆ, ಒಬ್ಬ ಶಾಸಕರಿಗೆ ಎರಡು ತಾಲ್ಲೂಕುಗಳು ಬರುವುದರಿಂದ ತೊಂದರೆಯಾಗುತ್ತದೆಂದು, ಇದನ್ನು ತಪ್ಪಿಸಲಿಕ್ಕೆ ಒಂದು ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳೆಂದು ಮಾಡಿದ್ದೇವೆ. ಮೊದಲು ಆರ್‌ಡಿಪಿಆರ್ ಅಧೀನದಲ್ಲಿ ರೂರಲ್ ಹೌಸಿಂಗ್ ಇತ್ತು ಮತ್ತು ಹೆಚ್.ಯು.ಡಿ. ಅಧೀನದಲ್ಲಿ ಅರ್ಬನ್ ಹೌಸಿಂಗ್ ಇತ್ತು. ಅನಂತರ ಅದಕ್ಕೆ ಸಂಬಂಧಪಟ್ಟಂತೆ ಒಂದು ಸುತ್ತೋಲೆ ಕಳುಹಿಸಬೇಕಾಗಿತ್ತು. ಅದರಲ್ಲಿ ಬದಲಾವಣೆ ಮಾಡಿ, 800 ಮನೆಗಳನ್ನು ನಗರ ಪ್ರದೇಶಗಳಿಗೆ, 200 ಮನೆಗಳನ್ನು ಸಿಟಿ ಮುನಿಸಿಪಾಲಿಟಿಗೆ ಕೊಟ್ಟಿದ್ದೇವೆ. ಆಗ ಎಂ.ಎಲ್.ಎ. ಗಳು ಬಂದು ಸಿಟಿ ಮುನಿಸಿಪಾಲಿಟಿಗೆ ಕೊಟ್ಟಿರುವ 200 ಮನೆಗಳು ಸಾಕಾಗುವುದಿಲ್ಲವೆಂದು ಹೇಳಿದರು. ಅವರ ಅಭಿಪ್ರಾಯದ ಮೇಲೆ ನಾವು ಬದಲಾವಣೆ ಮಾಡಿದರೆ ದೊಡ್ಡ ಆರೋಪವಾಗುತ್ತದೆ. ಈ ರೀತಿಯಾದರೆ ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ನೀವು ನಮ್ಮ ಅಭಿಪ್ರಾಯವನ್ನು ಕೇಳುವುದಕ್ಕಾಗುವುದಿಲ್ಲವೆ? ಆದ್ದರಿಂದ, ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು, ಆ ಪ್ರಕಾರ ನಾವು ಪ್ರಾಕ್ಟಿಕಲ್ ಆಗಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎಂ. ನಾರಾಯಣ ಸ್ವಾಮಿ:- ನಾನು ಮಾನ್ಯ ಜಾರ್ಜ್‌ರವರ ಹತ್ತಿರ ಮನವಿ ಮಾಡಿಕೊಂಡಿದ್ದೆ. ಹಿಂದೆ ನಾನು ಮತ್ತು ಸಿಂಧ್ಯರವರು ಕನಕಪುರ ತಾಲ್ಲೂಕಿನಲ್ಲಿ ಶಾಸಕರಾಗಿದ್ದೆವು. ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಯಂತೆ ತೀರ್ಮಾನ ಮಾಡಿದ್ದರು. ರಾಮನಗರದಲ್ಲಿ ಶ್ರೀಮಾನ್ ಲಿಂಗಪ್ಪನವರು ಶಾಸಕರಾಗಿದ್ದಾರೆ. ತಾಲ್ಲೂಕಿನಲ್ಲಿರುವ ಎರಡು ಕ್ಷೇತ್ರಗಳಿಗೆ ಒಂದು ಸಾವಿರ ಮನೆಗಳಿಗೆಂದು ಮಂಜೂರಾಗಿತ್ತು. ಆಗ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡು ಇದು ಸರಿಯಲ್ಲವೆಂದು ಪ್ರತ್ಯೇಕವಾಗಿ ಒಂದು ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳೆಂದು ಕೊಡಬೇಕೆಂದು, ಆ ಪ್ರಕಾರ್ರ ತೀರ್ಮಾನ ಮಾಡಿದ್ದಾರೆಯೇ ಹೊರತು ತಾವು ಹೇಳುವುದರಲ್ಲಿ ಅರ್ಥವಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಜೆ. ಜಾರ್ಜ್:- ನಾಳೆ ನಾವು ಎಂಎಲ್‌ಎ ಗಳನ್ನೆ ಛೇರ್ಮನ್‌ರಾಗಿ ಮಾಡಿ ಸುಳ್ಳು ಕೆಲಸ ಮಾಡುವುದಕ್ಕಾಗುತ್ತದೆಯೇ? ನಿಮ್ಮನ್ನೆ ಛೇರ್ಮನ್ ಮಾಡಿ, ನಿಮ್ಮನ್ನೆ ರೆಸ್ಪಾನ್ಸಿಬಲ್ ಮಾಡಿದ ನಂತರ, ನೀವು ಈ ತರಹ ಮಾತನಾಡಿದರೆ ಹೇಗೆ ?

ಶ್ರೀ ಜೆ. ಸಿ. ಮಾಧುಸ್ವಾಮಿ: ಸೋರುತ್ತಿರುವ ಮನೆಗಳಿಗೆ ತಾವೇನು ಮಾಡುತ್ತೀರಿ? ಒಂದು ರೂಪಾಯಿ ಕೂಡ ಗ್ರಾಂಟ್ ಕೊಟ್ಟಿಲ್ಲ.

(ಗೊಂದಲ)

ಶ್ರೀ ಪ್ರಭಾಕರ ಎಸ್. ರಾಣೆ:- ಉಪಾಧ್ಯಾಕ್ಷಣಿಯರೆ, ನಾನು ಇಲ್ಲಿ ಪ್ರಸ್ತಾಪ ಮಾಡಿದ್ದುದು ಅರಣ್ಯ ಭೂಮಿಯ ಬಗ್ಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ....

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ:- ಉಪಾಧ್ಯಕ್ಷಣಿಯರೆ, 5-6 ವರ್ಷದ ಬಿಲ್ಲನ್ನು ಈಗ ಕೊಡುತ್ತಿದ್ದಾರೆ. ಅವರು ಪೂರ್ಣವಾಗದ ಮನೆಗಳಿಗೆ ಇದುವರೆಗೂ ಒಂದು ರೂಪಾಯಿಯನ್ನು ಕೂಡ ರಿಲೀಸ್ ಮಾಡಿಲ್ಲ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ:- ಉಪಾಧ್ಯಕ್ಷಣೆಯರೆ, ನಮ್ಮ ಚಿಂತನೆ ಏನು ಎನ್ನುವುದನ್ನು ಅರ್ಥಮಾಡಿಕೊಳ್ಳಿ. ಶ್ರೀಮಾನ್ ನಾರಾಯಣಸ್ವಾಮಿಯವರು ಹೇಳಿದ್ದುದು ಶ್ರೀಮಾನ್ ಮಾಧುಸ್ವಾಮಿಯವರು ಹೇಳಿದ್ದುದು, ನಾವು ಹೇಳುತ್ತಿರುವುದೇನೆಂದರೆ ಹಿಂದಿನ ಸಲದ ಬಜೆಟ್‌ನಲ್ಲಿ ನೀವು ಒಂದು ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಆ ರೀತಿ ಹೇಳಿದ್ದರೆ ಆಗೋಯಿತಲ್ಲ ಇನ್ನೊಂದು ತಿಂಗಳಿಗೆ ಸಮಯ ಮುಗಿದುಹೋಗುತ್ತದಲ್ಲ. ಈ ಒಂದು ವರ್ಷದಲ್ಲಿ ಮನೆಗಳನ್ನು ನೀವು ಕಟ್ಟಿದ್ದರೆ ನಾವು ನಿಮ್ಮನ್ನು ಕೇಳುತ್ತಲೆ ಇರಲಿಲ್ಲ We would have appreciated if the entire money is lapsed. You have saved Rs. 380 crores. You have saved that money. That is why you are getting such certificates from the Planning Commission.

(ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಿಮಗೆ ಪ್ರಣಬ್ ಮುಖರ್ಜಿಯವರು ಸರ್ಟಿಫಿಕೇಟನ್ನು ಕೊಡದಿದ್ದರೆ ಏನು ಮಾಡುತ್ತೀರಿ ಸ್ವಾಮಿ? ಅದನ್ನು ಟಚ್ ಮಾಡದಿದ್ದರೆ ಹೇಗೆ? ಈ ಒಂದು ಸಾವಿರ ಮನೆಗಳನ್ನು ಕಟ್ಟಿದ್ದರೆ 350-380 ಕೋಟಿಗಳನ್ನು ಖರ್ಚು ಮಾಡುತ್ತಿದ್ದಿರಿ, ಇನ್ನು ಒಂದು ತಿಂಗಳಿದೆ, ಆ ಅವಧಿಯಲ್ಲಿ 380 ಕೋಟಿಯನ್ನು ಖರ್ಚು ಮಾಡುತ್ತೀರಾ? ಅದು ಸಾಧ್ಯವಿಲ್ಲ.

(ಗೊಂದಲ)

ಉಪಾಧ್ಯಕ್ಷಣೆಯರೆ, ಎರಡನೆಯದಾಗಿ ಇದನ್ನು ಜಿಲ್ಲಾಪರಿಷತ್ತಿನವರು ಕೊಡಲಿ ಮಂಡಲ ಪಂಚಾಯಿತಿಯವರು ಕೊಡಲಿ ಅದು ಸರ್ಕಾರದ ಹಣ ಜಿಲ್ಲಾಪರಿಷತ್ತಿನವರು ಕೂಡ ಸರ್ಕಾರದ ಹಣವೇ ಅವರಿಗೆ ಸ್ವಂತವಾದ ಸಂಪನ್ಮೂಲಗಳಿಲ್ಲ. ಅವರಿಗೆ ಸರ್ಕಾರ 2-3 ವರ್ಷಗಳಿಂದ ಹಣವನ್ನು ಕೊಡದಿದ್ದರೆ ಅವರು ಮನೆಗಳನ್ನು ಕಟ್ಟುವುದು, ಕಟ್ಟಿರತಕ್ಕೆ ಮನೆಗಳನ್ನು ಕಂಪ್ಲೀಟ್ ಮಾಡುವುದು ಹೇಗೆ? 1987-88, 1988-89, 1989-90 ರ ಮನೆಗಳೆಲ್ಲ ಹಾಗೆಯೇ ಉಳಿದಿದೆ. ಅದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿ. 'ವಿಶ್ವ' ಮಾಡಿದಿರಿ ಅದಕ್ಕೆ ಹಣವನ್ನು ಖರ್ಚು ಮಾಡಲಿಲ್ಲ, ಅಕ್ಷಯ ಮಾಡಿದಿರಿ ಅದು ಕ್ಷಯ ಹಿಡಿದು ಹೋಯಿತು ಅದಕ್ಕೆ ಹಣ ಖರ್ಚು ಮಾಡಲಿಲ್ಲ, 'ಆಶ್ರಯ' ಮಾಡಿದಿರಿ ಅದು ವಿನಾಶವಾಯಿತು ಅದಕ್ಕೆ ಹಣವನ್ನು ಖರ್ಚು ಮಾಡಲಿಲ್ಲ, ಸುಮ್ಮನೆ ಕೋಟಿ ಕೋಟಿ, ಸಾವಿರ ಸಾವಿರ ಎಂದು ಮಾತನಾಡುತ್ತೀರಿ. ಸ್ವಾಮಿ ಮಾತನಾಡಿದರೆ ಮೈಮೇಲೆ ಬೀಳುತ್ತಾರೆ ನಮ್ಮ ಶಿವರಾಮೇಗೌಡರು. ಇವರನ್ನು ದಯಮಾಡಿ ಆ ಕಡೆಗೆ ಕರೆದುಕೊಳ್ಳಿ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ:- ಉಪಾಧ್ಯಕ್ಷಣೆಯರೆ, ಅವರಂತೆ ನಾನು ಮಾತನಾಡುವುದಿಲ್ಲ

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ:- ನಾನು ನಿಮ್ಮಂತೆ ಸುಳ್ಳು ಹೇಳಿ ಬರಲಿಲ್ಲಿ, ವರ್ಷವಿಡೀ ಸುಳ್ಳು ಹೇಳುವುದೇ ನಿಮ್ಮ ಕೆಲಸ. It is not Correct.

(ಗೊಂದಲ)

ಇವರು ನಮ್ಮ ಕೈಗೆ ಕೊಟ್ಟಿರುವುದು ಮೂರು ಕುದುರೆಯ ಲಾಳವನ್ನು, ಇನ್ನು ಕುದುರೆ ಬೇಕು ಅದಕ್ಕೆ. ಬರಿ ಲಾಳವನ್ನು ಕೊಟ್ಟುಬಿಟ್ಟು ಕೊಟ್ಟಿದ್ದೇವೆ ಕೊಟ್ಟಿದ್ದೇವೆ ಎಂದು ಎರಡು ಲಕ್ಷವಾಯಿತು ಎರಡುವರೆ ಲಕ್ಷವಾಯಿತು ಎಂದ ಲೆಕ್ಕವನ್ನು ಮಾತ್ರ ಹೇಳುತ್ತೀರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಉಪಾಧ್ಯಕ್ಷಣೆಯರೆ, ಮಾನ್ಯ ಚಿಕ್ಕೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನೀವು 1983 ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂದ ಮೇಲೆ 1988ರವರೆಗೂ ಎಷ್ಟು ಮನೆಗಳನ್ನು

ಹಂಚಿದ್ದೀರಿ ಎಂಬುದನ್ನು ದಯಮಾಡಿ ತಿಳಿಸಬೇಕೆಂದಿದ್ದಾರೆ. ಮತ್ತು ನೀವು ಮನೆಗಳನ್ನು ಹಂಚಿಲ್ಲವೆಂದು ಹೇಳುತ್ತಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟದ್ದು ತಮ್ಮ ಹತ್ತಿರವೆ ಇದೆ. ನಾನು ಒಂದಷ್ಟು ದಿನ ಈ ಇಲಾಖೆಯಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಿಮ್ಮ ಮುಖ್ಯಮಂತ್ರಿಗಳು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ದಯಮಾಡಿ ನಾವು 1983 ರಿಂದ 1988 ರವರೆಗೂ ಎಷ್ಟು ಲಕ್ಷ ಮನೆಗಳನ್ನು ಕಟ್ಟಿದ್ದೇವೆ ಎನ್ನತಕ್ಕಂಥದನ್ನು ಇವರ ಕಾರ್ಯದರ್ಶಿಯವರಿಗೆ ಕೇಳಿದರೆ ಹೇಳುತ್ತಾರೆ. ದಯಮಾಡಿ ಅದಕ್ಕೆ ಉತ್ತರವನ್ನು ಕೊಡಿ. ಎರಡನೆಯದಾಗಿ, ಆಡಳಿತ ಪಕ್ಷದ ಕಡೆ ಕುಳಿತುಕೊಂಡಿರುವ ಕೆಲವರು ಆಡಳಿತ ಪಕ್ಷವನ್ನು ಟೀಕೆ ಮಾಡುತ್ತಿದ್ದಾರೆ ಮತ್ತು ಈ ಕಡೆ ಕುಳಿತುಕೊಂಡಿರುವ ಕೆಲವರು ಆಡಳಿತ ಪಕ್ಷಕ್ಕೆ ಬೆಂಬಲವನ್ನು ಕೊಡುತ್ತಾರೆ. ಇದರಿಂದ ನಮಗೆ ಇಲ್ಲಿ ಕೆಲಸ ಮಾಡಲು ಕಷ್ಟವಾಗುತ್ತದೆ. ನಾವು ಇಲ್ಲಿರುವುದೇಕೆಂದರೆ ಕೇವಲ ಸರ್ಕಾರ ಮಾಡತಕ್ಕ ಒಳ್ಳೆಯ ಕೆಲಸವನ್ನು ಹೊಗಳಿಬಿಟ್ಟು ಹೋಗುವುದಕ್ಕಲ್ಲ. ಸರ್ಕಾರ ಮಾಡತಕ್ಕ ಲೋಪದೋಷಗಳನ್ನು ಎತ್ತಿಹಿಡಿಯದೆಹೋದರೆ ನಮ್ಮ ಕರ್ತವ್ಯದಲ್ಲಿ ಲೋಪ ಮಾಡಿದಂತಾಗುತ್ತದೆ. ನಾವು ವಿರೋಧ ಪಕ್ಷದವರೆಂದು ಏಕೆ ಹೇಳಿಕೊಳ್ಳಬೇಕು? ಒಳ್ಳೆಯ ಕೆಲಸಕ್ಕೆ ಬೆನ್ನುತಟ್ಟುತ್ತೇವೆಂದರೆ ನಾವು ವಿರೋಧ ಪಕ್ಷದವರೆಂದು ಏಕೆ ಹೇಳಿಕೊಳ್ಳಬೇಕು? ನಾವು ಆಡಳಿತ ಪಕ್ಷದ ದಾಸರಾಗಿ ನಿಮ್ಮ ಕಡೆ ಕುಳಿತುಕೊಂಡು ಎಲ್ಲಾ ಕೆಲಸಗಳನ್ನು ಮಾಡಿಸಿಕೊಳ್ಳಬಹುದಲ್ಲ? ನಾವು ವಿರೋಧ ಪಕ್ಷವಾಗಿ ಕುಳಿತು ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ. ಈಗ ತೊಂದರೆ ಏನೆಂದರೆ ನಾವು 1983 ರಲ್ಲಿ ಅಧಿಕಾರಕ್ಕೆ ಬಂದೆವು, 1980-81, 1981-82 ರ ನಮ್ಮ ಹಿಂದಿನ ಸರ್ಕಾರಗಳು ಬಡವರಿಗೆ ಮನೆಗಳನ್ನು ಕಟ್ಟತಕ್ಕಂಥದ್ದರಲ್ಲಿ ಬಾಕಿ ಉಳಿದಿರಲಿಲ್ಲವೆ? ಆ ರೀತಿ ಬಾಕಿ ಇರತಕ್ಕಂಥ ಮನೆಗಳಿಗೆ ನಾವು ಹಣವನ್ನು ಕೊಡಲಿಲ್ಲವೆ? ದಯಮಾಡಿ ವೀರಪ್ಪ ಮೊಯಿಲಿಯವರು ನೀವೆ ಹೇಳಿ? ಅದು ನಮ್ಮ ಸ್ವಂತದ ಹಣವೆ? Government is a continuous process.

ಒಂದು ನಿಜ 1986-87, 1987-88 ಮತ್ತು 1988-89 ಈ 3-4 ವರ್ಷದಲ್ಲಿ ನಮ್ಮ ಸರ್ಕಾರವಿದ್ದಾಗ ಈ ವಿಚಾರದಲ್ಲಿ ಅನೇಕ ಕಾರಣಗಳಿಂದ, ಆರ್ಥಿಕ ಬಿಕ್ಕಟ್ಟಿನಿಂದ ಹಣ ಬಿಡುಗಡೆಯಾಗದೆ ಬಾಕಿ ಇರತಕ್ಕದ್ದು ಇದೆ. ಅದನ್ನು ಇಲ್ಲ ಎಂದು ನಾನು ಹೇಳುತ್ತಿಲ್ಲ. ಈಗ ಏನಾಗಿದೆ ಎಂದರೆ ಅದಕ್ಕೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ನಾರಾಯಣಸ್ವಾಮಿಯವರು ಮತ್ತು ಮಾಧುಸ್ವಾಮಿಯವರು ಹೇಳಿದ್ದೂ ಅದೇ ವಿಚಾರವನ್ನು. ತಮಗೂ ಗೊತ್ತಿದೆ ಚಿಕ್ಕೇಗೌಡರೆ, ನಿಮ್ಮ ಕ್ಷೇತ್ರದಲ್ಲಿ ಆ ಪಾರ್ಟಿಯೆಂದಲ್ಲಿ, ಈ ಪಾರ್ಟಿಯೆಂದಲ್ಲಿ ಬಡವರುಗಳು ಎಲ್ಲಿ ಓಟಾಕುತ್ತಾರೆಂದು ನಮಗೂ ಗೊತ್ತಿದೆ ನಿಮಗೂ ಗೊತ್ತಿದೆ. ಅವರೆಲ್ಲರೂ ಸಹಿತ ಮನೆಗಳನ್ನು ಕಟ್ಟಿಕೊಳ್ಳಲು ಚಿನ್ನವನ್ನು, ಮೂಗುಬಟ್ಟನ್ನು, ವಾಲೆ, ತಪ್ಪಲೆ, ಚೊಂಬು ಮುಂತಾದುವುಗಳನ್ನು ಅಡವಿಟ್ಟು ಈವತ್ತು ಬಿಲ್ಲಿಗೋಸ್ಕರ ಬಿ.ಡಿ.ಓ. ಕಛೇರಿಗೆ ಸುತ್ತಾಡಿ ಸುತ್ತಾಡಿ ಸುಸ್ತಾಗಿದ್ದಾರೆ.

6.05 ಪಿ. ಎಂ.

ಆದುದರಿಂದ ಮಾನ್ಯ ಮಂತ್ರಿಗಳನ್ನು ನಾನು ಒತ್ತಾಯ ಮಾಡುವಂಥದ್ದು ಏನೆಂದರೆ ಇವರಲ್ಲಿ ದಯವಿಟ್ಟು ರಾಜಕೀಯ ಬೆರಸತಕ್ಕಂತಹ ಅಗತ್ಯವಿಲ್ಲ, 1987-88 ರಿಂದ ಬಾಕಿ ಇರತಕ್ಕಂತಹ ಹಣ ಏನು ಇದೆ ಅದನ್ನು ಮುಂಚೆ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಸಭಾಪತಿಗಳೇ, ಈಗ ಯಾವುದು ಬಾಕಿ ಈ ಮನೆಗೆ ಬಂದಿದೆಯೆಂದರೆ ನಮಗೆ ಗೊತ್ತಿರುವ ಎಲ್ಲಾ ಮನೆಯಲ್ಲೂ ಹುಡ್ಕೋದಿಂದ ಸಾಲ ತೆಗೆಯುತ್ತೇವೆ. ಸರ್ಕಾರದಿಂದ ಸಬ್ಸಿಡಿ ಕೊಟ್ಟು ಈ ತರಹ ಮನೆ ಕಟ್ಟುತ್ತಿದ್ದೇವೆ. ಈಗ ಜಿಲ್ಲಾ ಪರಿಷತ್ತಿವರು ಏನಾಗಿದೆಯೆಂದರೆ ಅವರಿಗೆ ಕಂಪ್ಲೀಷನ್ ರಿಪೋರ್ಟ್ ಬರಬೇಕು. ಆ ರಿಪೋರ್ಟ್ ಬಂದರೆ ಮಾತ್ರ ಹುಡ್ಕೋನವರು ಬಾಕಿ ಹಣವನ್ನು ರಿಲೀಸ್ ಮಾಡುತ್ತಾರೆ. ಸುಮಾರು 2-3 ವರ್ಷದಿಂದ ರಿಪೋರ್ಟ್ ಬರುವುದು ತಡವಾಗಿರುವುದರಿಂದ ಮೊನ್ನೆ ತಾನೇ ಈ ವಿಚಾರದಲ್ಲಿ ಸಪರೇಟ್ ಮೀಟಿಂಗ್ ಮಾಡಿ ಡೈರೆಕ್ಷನ್ ಮಾಡಿಬಿಟ್ಟು ಆ ರಿಪೋರ್ಟ್ ತರಿಸುತ್ತಿದ್ದೇವೆ. ಯಾವುದು ಕಂಪ್ಲೀಟ್ ಆಗಿಲ್ಲ, ಅದನ್ನೆಲ್ಲಾ ಕಂಪ್ಲೀಟ್ ಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ. ಜಾಲಪ್ಪನವರು ಹೇಳಿದ ಹಾಗೆ ಏನಾಗುತ್ತಿದೆಯೆಂದರೆ ನಾವು ಮನೆ ಕೊಡಬೇಕಾದರೆ ಸೈಟ್ ರೆಡಿ ಆಗಬೇಕು, ಸೈಟ್ ಆದಮೇಲೆ ಟಾಸ್ಕ್ ಫೋರ್ಸ್ ಕಮಿಟಿಯವರಿಗೆ ನೀವು ಬಿನಿಫಿಷಿಯರಿ ಲಿಸ್ಟ ಕಳುಹಿಸಿಕೊಡಿ ಎಂದು ಕೇಳಿದ್ದೇವೆ. ಎಷ್ಟೋ ಜನ ನಮ್ಮ ಎಂ.ಎಲ್.ಎ. ಗಳು ಹೇಳಿದರೂ ಇದನ್ನು ಕಳುಹಿಸುವುದಿಲ್ಲ. ಈಗಾಗಲೇ ಆರ್ಡರ್‌ಗಳನ್ನು ಕೊಟ್ಟಿದ್ದೇವೆ, ಮನೆ ಕಟ್ಟಲಿಕ್ಕೆ ಎಲ್ಲಾ

ಕಂಟ್ರಾಕ್ಟದಾರರನ್ನು ಫಿಕ್ಸ್ ಮಾಡಿದ್ದೇವೆ. ಸಿಂಧ್ಯರವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ರಾಜಕೀಯವಿಲ್ಲ. ಬಡವರಿಗೆ ಮನೆ ಕಟ್ಟುವುದು ಎಲ್ಲಾ ಪಾರ್ಟಿಯವರಿಗೂ ಬರುತ್ತದೆ. ಆದರೆ ಈ ಒಳ್ಳೆಯ ಕಾರ್ಯಕ್ರಮಕ್ಕಾಗಿ ತಾವೆಲ್ಲಾ ಸಹಕಾರ ನೀಡಬೇಕು.

ಉಪಾಧ್ಯಕ್ಷಿಣಿಯವರು:- ರಾಣೆಯವರೇ, ತಾವು ಈಲ್ಡ್ ಆಗಬೇಡಿ ಬೇಗ ಮುಗಿಸಿ.

ಶ್ರೀ ಪ್ರಭಾಕರ ಎಸ್. ರಾಣೆ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಪ್ರಸ್ತಾಪ ಮಾಡುವುದು ಅರಣ್ಯ ಭೂಮಿಯ ಬಗ್ಗೆ ಮಾನ್ಯ ಸಚಿವರು ಅರಣ್ಯ ಭೂಮಿಯನ್ನು ಸಹ ಅದರ ಬಗ್ಗೆ ಪೊಸಿಷನ್ ಸರ್ಟಿಫಿಕೇಟ್ ಕೊಡುತ್ತೇವೆಂದು ಹೇಳಿದರು. ಹೇಗೆ ಕೊಡುವುದಕ್ಕೆ ಸಾಧ್ಯವಾಗುತ್ತವೆ? ಅರಣ್ಯ ಜಮೀನುಗಳ ಮೇಲೆ ಇರತಕ್ಕಂತಹ ಸ್ವಾಮಿತ್ವ ಅಥವಾ ಒಡೆತನ ಅಥವಾ ಅದನ್ನು ಹಸ್ತಾಂತರಗೊಳಿಸುವಂತಹ ಅಧಿಕಾರ ಕೇವಲ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ.

ಶ್ರೀ ಕೆ.ಜೆ. ಜಾರ್ಜ್:- ಈಗಾಗಲೇ ಅದು ಸೆಂಟ್ರಲ್ ಗೌರ್ನಮೆಂಟ್‌ನಲ್ಲಿ ಡಿಸಿಷನ್ ಆಗಿದೆ. 5 ಹೆಕ್ಟೇರ್‌ತನಕ ಯಾವುದು ಫಾರೆಸ್ಟ್ ಲ್ಯಾಂಡ್ ಇದೆ ಅದನ್ನು ರೆಗ್ಯುಲರೈಸ್ ಸ್ಟೇಟ್ ಗೌರ್ನಮೆಂಟ್ ಮಾಡಬಹುದೆಂದು. ಮತ್ತು ಚೀಫ್ ಕನ್‌ಸರ್‌ವೇಟರ್ ಎಂದು ಸ್ಪೆಷಲ್ ಒಬ್ಬರು ಇರುತ್ತಾರೆ. ಅದು ನಮ್ಮ ಏರಿಯಾದಲ್ಲಿ ಇರುತ್ತಾರೆ, ಅವರು ಮಾಡಬಹುದೆಂದು ತೀರ್ಮಾನವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಶುಕ್ರವಾಗ 6-00 ಗಂಟೆಗೆ ಖಾಸಗಿ ಕಾರ್ಯಕಲಾಪ ಇನ್ನು ಎರಡೂವರೆ ಗಂಟೆಗಳ ಕಾಲ ನಡೆಯಬೇಕು.

ಉಪಾಧ್ಯಕ್ಷಿಣಿಯವರು:- ಹೀಗೆ ನೀವು ಮಧ್ಯೆ ಮಧ್ಯೆ ಬಂದರೆ ಹೇಗೆ ಮುಗಿಯುತ್ತದೆ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾಳೆ ಬೆಳಿಗ್ಗೆ ಮುಗಿಸುತ್ತೇವೆ, ಇನ್ನು ಎರಡು ಗಂಟೆ ಮುಗಿಯಬೇಕು, ತಾವು ಸಭೆಯನ್ನು ಮುಂದೂಡಿ, ನಾವು ಪ್ರೋಗ್ರಾಮ್‌ಗಳನ್ನು ಹಾಕಿಕೊಂಡಿದ್ದೇವೆ. ಅವನ್ನೆಲ್ಲಾ ಕ್ಯಾನ್ಸಲ್ ಮಾಡಬೇಕಾಗುತ್ತದೆ. ಈಗ ಮುಂದೂಡಿ ನಾಳೆಗೆ ಮುಂದುವರಿಸೋಣ.

ಉಪಾಧ್ಯಕ್ಷಿಣಿಯವರು:- ನಾಳೆ ರಿಪ್ಲೈ ಇದೆ.

ಶ್ರೀ ಪ್ರಭಾಕರ್ ಎಸ್. ರಾಣೆ:- ಮಾನ್ಯ ಸಚಿವರು ಹೇಳಿರುವುಂಥಾದ್ದನ್ನು ಅದು 5 ಹೆಕ್ಟೇರ್‌ವರೆಗೆ ಏನು ಅರಣ್ಯ ಜಮೀನು ಸರ್ಕಾರಕ್ಕೆ ಹಸ್ತಾಂತರ ಮಾಡುವಂತಹ ಅಧಿಕಾರ ಕೊಟ್ಟಿದ್ದಾರೆ ಅಥವಾ ಒಂದು ನಿರ್ಣಯವಾಗಿದೆ, ಆ ನಿರ್ಣಯವಾದರೂ ಅದಕ್ಕೆ ಆಜ್ಞೆ ಆಗಬೇಕು. ಏನು ಹಿಂದಿನ ಸುಗ್ರೀವಾಜ್ಞೆ ಇದೆ, ಅದನ್ನು ತಿದ್ದುಪಡಿ ಮಾಡಿಕೊಂಡು ಆಗಬೇಕಾಗಿದೆ. ಅದು ಆಗುವವರಿಗೆ ಹಸ್ತಾಂತರ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಒಂದು ಪರಿಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಇದನ್ನು ಆದಷ್ಟು ಬೇಗನೆ ಕಾರ್ಯರೂಪದಲ್ಲಿ ಬರುವಂತೆ ಮಾಡಬೇಕು. 1986-87, 87-88 ರಿಂದ 1991 ರವರೆಗೆ ಏನು ಸಬ್ಸಿಡಿ ಕೊಡುವಂತಾದ್ದು ಇದೆ ಸರ್ಕಾರದಿಂದ ಅದು ಜಿಲ್ಲಾಪರಿಷತ್ತಿಗಾಗಲಿ ಇನ್ನೊಂದಕ್ಕೆ ಹೋಗಿಲ್ಲ, ಆದ್ದರಿಂದ ಅನೇಕ ಮನೆಗಳನ್ನು ನಾವು ಈ ಒಂದು ಯೋಜನೆಯಲ್ಲಿ ಕೊಡುತ್ತೇವೆಂದು ತಿಳಿದುಕೊಂಡರು. ಆದರೆ ಜನ ನಿರಾಶರಾಗಿದ್ದಾರೆ. ಇವತ್ತು ಸರ್ಕಾರ ಆ ಯೋಜನೆಯಲ್ಲಿ ಮನೆಗಳನ್ನು ಕಟ್ಟುತ್ತಿಲ್ಲ, ಆಶ್ರಯ ಒಂದು ಬೇರೆ ಯೋಜನೆಯೆಂದು ಹೇಳಿದರೂ ಸಹ, ಅದೂ ಸಹ ಸರ್ಕಾರ ಒಂದು ಯೋಜನೆಯಾಗಿರುವುದರಿಂದ ಅದಕ್ಕೂ ಹಣವನ್ನು ತೊಡಗಿಸಲು ಬರುವಂತಹ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಈ ಸರ್ಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಸರ್ಕಾರದವರು ಆದಷ್ಟು ಬೇಗನೆ ಆ ಒಂದು ಬಾಬಿನಲ್ಲಿಯೂ ಸಹ ಹಣವನ್ನು ಬಿಡುಗಡೆ ಮಾಡಿ ಜನರಿಗೂ ಪ್ರಯೋಜನ ತರುವಂಥದ್ದನ್ನು ಮಾಡಬೇಕು.

ಇನ್ನೊಂದು ವಿಚಾರ ಎಂದರೆ, ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕಟ್ಟುವಂಥ ಜವಾಬ್ದಾರಿ ಇದ್ದು ಟೆಂಡರ್ ಕರೆದು ಗುತ್ತಿಗೆದಾರರಿಗೆ ಕೊಡತಕ್ಕ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಆದರೆ ಈ ನೀತಿ ಸರಿಯಾದುದಲ್ಲ, ಏಕೆಂದರೆ ಆಶ್ರಯದಲ್ಲಿ ಒಂದು ಮನೆಯನ್ನು ಕಟ್ಟಬೇಕಾದರೆ 15 ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಒಂದು ಮನೆಯನ್ನು ಒಬ್ಬ ಗುತ್ತಿಗೆದಾರ 15 ಸಾವಿರ ರೂಪಾಯಿನಲ್ಲಿ ಕಟ್ಟಬೇಕಾದರೆ ಅವನಿಗೆ ಸ್ವಲ್ಪಮಟ್ಟಿಗಾದರೂ ಲಾಭಾಂಶ ಇರಲೇ

ಬೇಕಾಗುತ್ತದೆ. ಹಿಂದೆ ಜನತಾ ಮನೆಗಳನ್ನು ಅಥವಾ ಹುಡ್ಕೋ ಮನೆಗಳನ್ನು ನಮ್ಮ ಭಾಗದಲ್ಲಿ ಕಟ್ಟಿಸುವಾಗ ಯಾರು ಫಲಾನುಭವಿಗಳಿರುತ್ತಿದ್ದರು ಅವರೇ ಕಟ್ಟಿಕೊಳ್ಳುತ್ತಿದ್ದರು. ಸರ್ಕಾರದ ವತಿಯಿಂದ ಫಲಾನುಭವಿಗಳಿಗೆ ಹಣಕಾಸಿನ ಸೌಲಭ್ಯವನ್ನು ಕೊಟ್ಟಮೇಲೆ ಆತನು ಸ್ಥಳೀಯವಾಗಿ ದೊರಕುವಂಥ ಕೆಲವು ವಸ್ತುಗಳನ್ನು ಪಡೆದುಕೊಂಡು ತನಗೆ ಯಾವರೀತಿಯ ಮನೆ ಇರಬೇಕೋ, ಯಾವರೀತಿ ಗಟ್ಟಿ ಮುಟ್ಟಾಗಿರಬೇಕೋ ಅಥವಾ ಅನೇಕ ವರ್ಷಗಳ ಕಾಲ ಆ ಮನೆ ಬಾಳಬೇಕೆಂಬ ಕಾಳಜಿ ಇಟ್ಟುಕೊಂಡು ತನಗೆ ಸರಿಯಾದ ರೀತಿಯಲ್ಲಿ ಕಟ್ಟಿಕೊಳ್ಳುವುದಕ್ಕೆ ಸಾಧ್ಯತೆ ಹೆಚ್ಚಿಗೆ ಇರುತ್ತಿತ್ತು. ಆದರೆ ಇವತ್ತು ಈ ಮನೆಗಳನ್ನು ನೀವು ಗುತ್ತಿಗೆದಾರರಿಗೆ ಕೊಟ್ಟರೆ ಅವುಗಳ ಗತಿ ಏನಾಗಬಹುದು? ಏಕೆಂದರೆ ನಾವು ಅನೇಕ ಹೌಸಿಂಗ್‌ಬೋರ್ಡ್ ಮನೆಗಳು ಏನಾಗಿವೆ ಎಂಬುದನ್ನು ನೋಡಿದ್ದೇವೆ. 40 ಸಾವಿರದಿಂದ 80 ಸಾವಿರ ರೂ.ಗಳವರೆಗೆ ಎಲ್.ಐ.ಜಿ., ಎಂ.ಐ.ಜಿ. ಯೋಜನೆಯಲ್ಲಿ ಕಟ್ಟಿದಂಥ ಮನೆಗಳು ನಮ್ಮ ಕಾರವಾರದಲ್ಲಿ ಅವು ಪೂರ್ಣಗೊಳ್ಳುವ ಮೊದಲೇ ಬಿದ್ದು ಹೋದುವು. ಇಂಥ ಪರಿಸ್ಥಿತಿ ಇರುವಾಗ ಮತ್ತೆ ಈ ದಲ್ಲಾಳಿಗಳ, ಮಧ್ಯವರ್ತಿಗಳ, ಗುತ್ತಿಗೆದಾರರ ವಶಕ್ಕೆ ನೀವು ಮನೆ ಕೆಲಸವನ್ನು ಕೊಡುತ್ತಿದ್ದೀರಿ. ಇದು ಒಂದು ಬಹಳ ಉತ್ತಮವಾದ ಸ್ಕೀಂ ಎಂದು ಇದರ ಬಗ್ಗೆ ಪ್ರಾಮಾಣಿಕವಾದ ಕಳಕಳಿ ತಮಗೆ ಇರುವುದರಿಂದ ನೇರವಾಗಿ ಇದರ ಸೌಲಭ್ಯವನ್ನು ಸಂಪೂರ್ಣವಾಗಿ ಆ ಫಲಾನುಭವಿಗಳಿಗೆ ದೊರಕಿಸುವಂತೆ ತಾವು ಕ್ರಮ ತೆಗೆದುಕೊಳ್ಳಬೇಕು. ಆಗ ಮಾತ್ರ ತಮ್ಮ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಬೇಕೆಂದರೆ, ಅದು 'ವಿಶ್ವ' ಯೋಜನೆಯ ಬಗ್ಗೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹಾಗೂ ಇನ್ನೂ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವಿಶ್ವ ಯೋಜನೆಯನ್ನು ನನ್ನ ಕ್ಷೇತ್ರದಲ್ಲಿ ಉದ್ಘಾಟನೆ ಮಾಡುವ ಸಂದರ್ಭದಲ್ಲಿ ನಾನೂ ಭಾಗವಹಿಸಿದ್ದೆ. ನಮ್ಮಲ್ಲಿ ಸಮುದ್ರದಲ್ಲಿ ಸಿಕ್ಕತಕ್ಕ ಕಪ್ಪೆಚಿಪ್ಪಿನಿಂದ ಸುಣ್ಣವನ್ನು ಮಾಡತಕ್ಕ ಉದ್ಯೋಗ ಮತ್ತು ಕೋಳಿ ಆಹಾರದ ಉತ್ಪಾದನೆಯಲ್ಲಿ ಉಪಯೋಗಿಸುವಂಥ ಒಂದು ವಸ್ತುವಿನ ಸಣ್ಣ ಉದ್ಯಮವನ್ನು ಉದ್ಘಾಟನೆ ಮಾಡತಕ್ಕದ್ದು ನನ್ನ ಜವಾಬ್ದಾರಿಯಾಗಿತ್ತು. ನಾನು ಅವತ್ತು ಇದರ ಉದ್ಘಾಟನೆಯನ್ನು ಮಾಡುವುದಕ್ಕೆ ಹೋದಾಗ ಯಾವ ಷೆಡ್‌ನಲ್ಲಿ ಉದ್ಘಾಟನೆ ಮಾಡಬೇಕೆಂದು ಹೇಳಿದರೆ ಆ ಷಡ್‌ಗೆ ಅದರ ಮಾಲೀಕ ಬೀಗ ಹಾಕಿಕೊಂಡು ಹೋಗಿದ್ದ. ಆಗ ಆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧಿಕಾರಿಗಳೂ ಮತ್ತು ನಾವೂ ಸೇರಿ ಅಲ್ಲಿಗೆ ಆ ಫಲಾನುಭವಿಗಳನ್ನು ಕರೆಯಿಸಿಕೊಂಡು ಹೊರಗಡೆಯೇ ಉದ್ಘಾಟನಾ ಸಮಾರಂಭವನ್ನು ಮಾಡಿದ್ದಾಯಿತು. ನಾನು ಮತ್ತೆ ಇದರ ಬಗ್ಗೆ ವಿಚಾರ ಮಾಡಿದಾಗ ಇವತ್ತಿನವರೆಗೂ ಕೂಡ ಆ ಉದ್ದಿಮೆ ಪ್ರಾರಂಭವೇ ಆಗಿಲ್ಲ. ಹಾಗಿರುವಾಗ ಈ ವಿಶ್ವ ಯೋಜನೆಯ ಪ್ರಯೋಜನ ಫಲಾನುಭವಿಗಳಿಗೆ ಸರಿಯಾಗಿ ಮುಟ್ಟಿದೆ ಎಂಬುದನ್ನು ಸರ್ಕಾರದವರು ಅಂಕಿಅಂಶಗಳ ಮುಖಾಂತರ ಹೇಳಬೇಕು. ಇದಕ್ಕೆ ಎಷ್ಟು ಹಣ ವೆಚ್ಚ ಮಾಡಿದೆ ಎನ್ನತಕ್ಕದ್ದನ್ನೂ ಕೂಡ ಹೇಳಬೇಕು. 5 ವರ್ಷಗಳಲ್ಲಿ 700 ಕೋಟಿ ರೂ. ಗಳನ್ನು ಖರ್ಚುಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿರುವುದಾಗಿ ಮೊದಲು ತಾವು ಹೇಳುತ್ತಿದ್ದೀರಿ. ಆದರೆ ಇವತ್ತು 700 ಕೋಟಿ ರೂ.ಗಳನ್ನು ವೆಚ್ಚಮಾಡಿದ್ದೇವೆಂದು ತಾವು ಹೇಳುತ್ತಿದ್ದೀರಿ. ಇಷ್ಟೊಂದು ಪ್ರಮಾಣದಲ್ಲಿ ಖರ್ಚು ಮಾಡಿದಾಗ ನೇರವಾಗಿ ಗ್ರಾಮಾಂತರ ಪ್ರದೇಶದ ವಿದ್ಯಾವಂತ ನಿರುದ್ಯೋಗಿಗಳಿಗೆ ಆಗಲಿ, ಅಥವಾ ಬೇರೆ ನಿರುದ್ಯೋಗಿಗಳಿಗೆ ಆಗಲಿ ಇದರ ಪೂರ್ಣ ಪ್ರಯೋಜನ ಸಿಕ್ಕಿದೆಯೇ ಎಂಬುದನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಈ ಯೋಜನೆಗಳ ಬಗ್ಗೆ ಕೇವಲ ಘೋಷಣೆಯನ್ನು ಮಾಡಿದರೆ ಸಾಲದು. ಅವು ಯೋಗ್ಯ ರೀತಿಯಲ್ಲಿ ಕಾರ್ಯರೂಪದಲ್ಲಿ ಬರುವಂಥ ರೀತಿಯಲ್ಲಿ ಶ್ರದ್ಧೆ ವಹಿಸಿದರೆ ಮಾತ್ರ ಜನರು ಅದನ್ನು ಮೆಚ್ಚುತ್ತಾರೆಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಬೆಳಿಗ್ಗೆಯಿಂದ ಇಲ್ಲಿ ಕಾಯುತ್ತಾ ಕುಳಿತಿದ್ದೇನೆ. ನಮ್ಮ ಸಮಸ್ಯೆಗಳನ್ನು ನಿಮಗಲ್ಲದೆ ಬೇರೆ ಯಾರಿಗೆ ಹೇಳಬೇಕು?

ಉಪಾಧ್ಯಕ್ಷಿಣಿಯವರು:- ಅವರದ್ದು ಆಗಲಿ ಅನಂತರ ನಿಮಗೆ ಕೊಡೋಣ.

ಶ್ರೀ ಎಲ್. ಆರ್. ಶಿವರಾಮೇ ಗೌಡ:- ಈ ರೀತಿ ಆದರೆ ನಾನು ಪ್ರತಿಭಟನೆ ಮಾಡಬೇಕಾಗುತ್ತದೆ. ನಿಯಮ ಎಂದರೆ ನಮಗೂ, ಅವರಿಗೂ, ಎಲ್ಲರಿಗೂ ಒಂದೇ. ಆದರೆ ಏತಕ್ಕೆ ಈ ರೀತಿ ಮಾಡುತ್ತೀರಿ?

ಉಪಾಧ್ಯಕ್ಷಿಣಿಯವರು:- ನಿಮ್ಮ ಛಾನ್ಸ್ ಬರುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ನನ್ನ ಛಾನ್ಸ್ ಈಗಾಗಲೇ ಹೋಗಿದೆ. ನನ್ನ ಛಾನ್ಸ್ ಬೆಳಿಗ್ಗೆಯೇ ಇತ್ತು. ನಾನು ಇದನ್ನು ತಮಗೆ ಹೇಳಬಾರದೆಂದು ಸುಮ್ಮನಿದ್ದೆ. ಯಾವಾಗ ಕೊಡುತ್ತೀರೆಂಬುದನ್ನು ದಯವಿಟ್ಟು ಹೇಳಿ.

ಉಪಾಧ್ಯಕ್ಷಿಣಿಯವರು:- ಇವರದ್ದು ಆದಕೂಡಲೇ ನಿಮಗೆ ಅವಕಾಶ ಕೊಡುತ್ತೇನೆ.

SRI QUMURUL ISLAM:- (Gulbarga) Madam Deputy Speaker, in the beginning of the Governor's address, there is a mention of the special stress for the upliftment of the poorer sections of the society and to bring in a satisfactory standard of living to the people of the State and also, there is a mention that there should be an awakening in the poorer sections of the society and also there is a mention regarding 15-point programme for the minorities which were initiated by the former Prime Minister, that the Government is committed for the implementation of this 15-point programme. I want to begin my speech as to whether really the Government is interested in the implementation of the 15-point programme. There was a high power committee in the year 1980, there was a high power committee in the year 1983 and there was a high power committee in 1986. The term of that high power committee has ended in the year 1989 and I want to know, through you Madam, why till today that high power committee has not been constituted. If there is no high power committee in existence, there is no high power committee. It means that Government is not sincere to implement its own programme as far as the minorities are concerned, and 15-point programme is concerned. This is according to the review of the High Power Committee. The district level, taluk level and the State level committees will also be there, and those committees have to meet as per the directions and the circular, every month. And in Karnataka there is no existence of the distict level committees, taluk level committees as well as the State level committees. During the year 1979 and 1980 there was a portfolio and that portfolio of the Minority was always with the Chief Minister and when the National Intergration Council meeting was there, that National Integration Council has given the direction to the States that the Chief Minster of the State should create a portfolio of the Minorities. I want to know whether to-day the Hon. Chief Minister holds that portfolio? If that portfolio is not existing, I would like to know whether the Government of Karnataka is interested in the implementation of the schemes of minorities and want to solve the problems of the minorities. If they are really interested in the economic, educational and social upliftment, then there should be a portfolio for Minorities. If the Chief Minister does not want to have it, let this be given to any other Minister to review this. I am demanding in this House that there should be a portfolio of the Minorities either with the Chief Minister or with any other Minister of State. Second demand which I wanted to make here is that the Government should immediately constitute the high power committee to review every month, the problems of the minorities at the state level, district level as well as taluk levels. And also, I want to make the demand

that there should be a Minorites Commission with the statutory power and the Government of India has also made the Minorities Commission, a statutory commission. Here also I want that this Government should also give the statutory power to the Minorities Commission. Also I want that the reports of the Minorities Commissions should be implemented. Goodwala Commission and Mohisin Commission reports have also not been implemented. The Government should implement the recommendations of the Goodwala Commission as well as Mohisin Commission report immediately. I think there was a sub-committee of the Cabinet. It has met once. But, we do not know the outcome of that sub-committee. Whether the sub-committee of the Cabinet has already submitted its report to the cabinet?

If it has been submitted, what is the outcome of it? Minority Community constitues about 12.1%. As far as the report of O. Chinnappa Reddy Commission is concerned, this is the third largest population in Karnataka and their economic conditions, and per capita income are just equal to the Scheduled Castes and Scheduled Tribes, and they are below the poverty line. The Sub-Committee's recommendations should also be implemented immdiately. The Congress Party in Karnataka printed a manifesto in which they have said because of minority communities' votes the party was able to secure 188 seats. You have sincerely given this in the manifesto and you have said that as far as recruitments are concerned, and implementation of Backward Class Commission Report is concerned, they are under active consideration. We are hearing this right from Mr. Veerendra Patilji when he was the Chief Minister and this is the third Governor's Address and here also you have said that the report of O. Chinnappa Reddy is under the active consideration of the Government. How long this Government will take to consider this report, God alone knows. If people come to know they will teach you a lesson. You have forgotten your own manifesto. It is a written manifesto in which you have assured that you will issue orders on the pattern of Kerala. In Kerala there are hundred cycles. According to the Nettur Commission report each community/caste is given reservation there. Here, there are three categories. In category-I 5% reservation, category-II 28% reservation and in category-III 5% reservation. In category-I, 52 castes/communities are included; in category-II, about 14 castes/communities. Muslims are included in category II. I want that 28% adequate representation should be given to Muslims in specific cycles in an order. If they are included in group you know there will be no injustice. When you consider and issue a new Government Order you must see that proportionate, atleast adequate representation is given to them. In the Havanur Commission Report at that time it was mentioned that Muslims are about 11.9% and 6% representation should be given to them. Now we are in 1992. Adequate representation means, in my mind, now atleast eight cycles

should be given to Muslims and the cycles should be arranged in such a way that in hundred cycles a definite number of cycles say 1 to 10 should go to the Muslims and this is on the pattern of Kerala. This you have assured in your manifesto. The minorites want to know whether this manifesto of the Congress Party given at the time of Parliamentary and Assembly Elections will be fulfilled in the near future or not. Further, the Government has committed itself in the Governor's Address that it is going to implement the 15 point programme to create a sense of confidence among the minorities for their economical and educational upliftment. I want this to be implemented.

Madam, during the communal riots many people died. It was assured on the floor of the House that a job will be provided to one of the members of the deceased family. About 94 families were affected and their applications are pending for the last $1^1/_2$ or 2 years. Some of our colleagues have raised this question many times during question hour and under so many other rules. But the Government has still not given jobs to the affected families. I want the assurance given in this House should be implemented immediately.

As far as Urdu Directorate is concerned, Mr. Veerendra Patilji when he was Chief Minister, mentioned about this in the Governor's Address. But till today the Urdu Directorate has not been established. As far as Udru language is concerned it has played a vital role for the independence of the country. Urdu slogans have created an impression to those who were in the forefront of freedom struggle in this country. Urdu language has born here and I want all facilities should be given to develop this language and the assurance given on the floor of this House should be implemented by creating a Urdu Directorate. About establishing Urdu Chairs, there is no Urdu Chair in Karnataka University and Mangalore University and in Bangalore there is no fulfledged Urdu Chair. I demand, through you Madam, that Karnataka University should get a Chair and also Mangalore and Bangalore Universities. All formalities should be completed for establishing Urdu Chairs in these Universities.

Now we talk of "Kannada" in Karnataka. I belong to a minority community. I want to learn Kannada language because I am coming from Hyderbad-Karnataka, the erstwhile Nizam State where Urdu was the official language. Sri Narayana Rao and Sri Shankar Rao were my teachers, and important teachers were non-Muslims. Now Gokak report is there. In Government High Schools, Primary Schools, and Aided High Schools there are posts of Kannada teachers. But in the aided Primary Schools there is no post of Kannada teacher. We have made Kannada as compulsory. When the minority people want to learn Kannada, the Government has failed to give them Kannada teachers posts in Urdu Primary Schools, and at the same time the

Government has issued circulars that "C" and "D" group posts will not be given to the people who do not know Kannada. C and D group posts are meant for metric and below metric students. Even though Kannada language is made compulsory in the primary schools, the Government has failed to give them Kannada teachers and it is a shame on our part to say that we want to develop Kannada. We are not sincere in developing Kannada. I demanded in the last session also to provide Kannada teachers in aided Urdu Primary Schools and many legislators also, but that has not been done by the Government, and here we talk of Kannada Culture and Kannada Language. My friend, Mr. Vatal Nagaraj is not here. Let me also join with him and agitate for the development of Kannada. For high schools you have provided Kannada teachers, but you have not provided for aided primary schools. That means, should we not learn Kannada in the primary schools? Madam, I sincerely demand and I am very very serious that in the near future if Kannada teachers posts are not created in aided Urdu primary schools, definitely Qumurul Islam along with Mr. Vatal Nagaraj will start an agitation in Karnataka State.

ಶ್ರೀ ಪಿ. ಜಿ. ಆರ್. ಸಿಂಧ್ಯಾ:- ಆರೂವರೆ ಗಂಟೆ ಆಯಿತು. ಕೋರಂ ಬೇರೆ ಇಲ್ಲ. ದಯವಿಟ್ಟು ಸದನವನ್ನು ನಾಳೆಗೆ ಮುಂದೂಡಬೇಕೆಂದು ಪ್ರಾರ್ಥನೆ. ಮತ್ತೆ ಸದಸ್ಯರು ಹೇಳಿದ್ದನ್ನು ಬರೆದುಕೊಳ್ಳುವುದಕ್ಕೆ ಪ್ರೆಸ್‌ನವರೂ ಸಹ ಇಲ್ಲ.

ಉಪಾಧ್ಯಕ್ಷರು:- ಕೋರಂ ಇದೆ. ಮಾನ್ಯ ಸದಸ್ಯರು ಭಾಷಣವನ್ನು ಮುಂದುವರಿಸಬಹುದು.

6.35 ಪಿ.ಎಂ.

SRI QUMURUL ISLAM:- We must learn a lesson from the past history. Some of the lapses were there as far as the Cauvery basin is concerned. Now, here it is mentioned about formation of Krishna Basin Development Authority. I want to know whether the Government is really sincere to take up all the major, medium and minor irrigation projects in the Krishna basin by forming this authority and how much money will be allotted to these projects. Whether with that much of money can we utilise water by completing the projects as per the Bachawat Award by 2000 A. D. ?

Madam, every Government has some schemes. Our Janata Dal and earler Governments were having populist schemes and this Government has also a populist scheme called "Ashraya". Every member has his own opinion. But I and even my party welcome this populist scheme "Ashraya" and congratulate Mr. K. J. George, Hon'ble Minister for Housing and Urban Development for bringing this scheme. This scheme has really created a sort of confindence among the people. People are expecting to have "Roti, Kapada and Makan".

Whether Makan will come or not, we will come to know it only in the months of April, May and June. But we hope for the better. The signs are good. We ourselves have been made the Chairman, but what we want is full support and cooperation from the officers. Becasue we are coming from urban areas and you know in Gulbarga city it is difficult to get a piece of land. Here, in Bangalore, you have exempted the lands from green belt. But I am happy with the Hon'ble Minister's statement yesterday that in particular urban cities whether it is Gulbarga or Shimoga where it is difficult to get the land he would give exemption from green-belt for acquiring land for Ashraya scheme. I welcome the Minister's statement, and as far as this scheme is concerned, I really give full support and even on behalf of my party.

As regards "Green Cards" are concerned, they have been given to the rural poor whose income is less than Rs. 6,400, but the urban poor have not been given. I don't understand the discrimination between the rural poor and the urban poor. That discrimination should go and in informal rationing areas like Gulbarga, green cards should also be distributed to the poorer sections of the urban areas as has been given to the rural poor.

Madam, I don't want to take much time of the House, but one very important issue I want to bring to the notice of this House. This is a newspaper of the Times of India dated 16th. It reads thus:"Commotion at Joshi's Rally" - "An attempt to hit Dr. Murali Manohar Joshi took place when during the course of his speech Dr. Joshi said, the leaders of the Congress, the Janatha Dal, the Communist Party, Muslim League and the DMK had expressed their apprehension about the Ekta Yatra causing tension in the country." When he was addressing a rally in Bangalore there was an attack on him and a Pakistani flag was raised in the rally. It has appeared in the Times of India. I want to know what action has been taken against the person who raised the flag. The flag was raised by one Chandrashekar Reddy, an RSS worker and the man who hit Dr. Joshi was another RSS worker namely Manjunath, who was in a drunken position. The RSS is always having an attitude saying that some of the Muslims become happy whenever Pakistan wins a cricket match and they raise Pakistani slogans and all these things. But here when our BJP leader had come two RSS workers-one of them raised the Pakistani flag and the other worker who was in a drunken position gone to the dias and tried to hit Dr. Joshi when he was mentioning the names of political parties as per the news item of Times of India. Madam, I demand in this House that there should be a House Committee to investigate. This is not the first incident in Karnataka. There are number of incidents. As far as the loyalty and intergrity of Muslims are concerned, they cannot be challeged because I know since independence till today there is no Muslim who has passed on the secrets of this country, but we have got records to say that non-Muslims of this country had revealed and there

are so many names appeared in the press. Just to spoil the name and integrity of the minorities of this country, there is an organisation called RSS which is having a plan and with their plan they try to create tension in this State. So, I demand, there should be a Committe constituted and it should go round the State and submit a report so that in future the integrity and loyalty are not shaken in this country.

ಶ್ರೀ ಬಸವರಾಜ ರಾಯ ರೆಡ್ಡಿ:- ಮಾನ್ಯ ಸದಸ್ಯರ ಭಾಷಣ ಮುಗಿದ ತಕ್ಷಣ ಸಭೆಯನ್ನು ಮುಂದೆ ಹಾಕುವುದು ಉತ್ತಮ.

ಶ್ರೀ ವಾಟಾಳ್ ನಾಗರಾಜ್:- ಪತ್ರಿಕಾ ವರದಿಗಾರರು ಕುಳಿತುಕೊಳ್ಳತಕ್ಕ ಗ್ಯಾಲರಿಯಲ್ಲಿ ರಕ್ಷಣಾದಳದವರು ಪ್ರಜಾವಾಣಿ, ಕನ್ನಡ ಪ್ರಭ ಪತ್ರಿಕೆಗಳ ವರದಿಗಾರರ ಪಾಸ್‌ಗಳನ್ನು ತೆಗೆದುಕೊಂಡು ಒಂದು ಗಂಟೆಯಾಗಿದೆ. ತಾವು ಬಂದು ಇಲ್ಲಿ ಏತಕ್ಕೆ ಕುಳಿತುಕೊಂಡಿದ್ದೀರಿ ಎಂದು ಪಾಸ್‌ಗಳನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಯಾರು ಹೇಳಿದವರು? ಇದರ ಉದ್ದೇಶವೇನು? ಇದು ಪ್ರಪ್ರಥಮವಾಗಿ ನಡೆದಿರತಕ್ಕದ್ದು. ಇದು ಇತಿಹಾಸದಲ್ಲಿ ನಡೆದಿರಲಿಲ್ಲ. ಪಾಸ್‌ಗಳನ್ನು ತೆಗೆದುಕೊಂಡು ಹೋಗಿ ಒಂದು ಗಂಟೆಯಾಗಿದೆ. ಇದು ಅಗೌರವ, ಎಲ್ಲಿಗೆ ತೆಗೆದುಕೊಂಡು ಹೋಗಿದ್ದಾರೆ? ಇದರ ಉದ್ದೇಶವೇನು?

ಉಪಾಧ್ಯಕ್ಷರು:- ಅದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇದು ಅತ್ಯಂತ ಅಗೌರವವಾಗಿ ನಡೆದುಕೊಂಡಿರತಕ್ಕದ್ದು. ಯಾರು ಈ ತರಹ ನಡೆದುಕೊಂಡಿದ್ದಾರೆ. ಅವರು ಆ ರೀತಿ ನಡೆದುಕೊಳ್ಳುವುದು ಸರಿಯಲ್ಲ.

ಉಪಾಧ್ಯಕ್ಷರು:- ಅದನ್ನು ನಾನು ವಿಚಾರ ಮಾಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಏತಕ್ಕೆ ಕುಳಿತುಕೊಂಡಿದ್ದೀರಿ ಎಂದು ಪಾಸ್‌ಗಳನ್ನು ತೆಗೆದುಕೊಂಡು ಹೋದ ಉದ್ದೇಶವೇನು? ಇದಕ್ಕೆ ಕಾರಣವೇನು? ಏಕೆ ಮಾಡಿದ್ದಾರೆ ಇದನ್ನು?

ಉಪಾಧ್ಯಕ್ಷರು:- ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಈಗ ಸಭೆ ನಡೆಯುವುದು ಬೇಡ. ಈಗ ಏನಾಗಿದೆ ಎಂದರೆ ಪಾಪ, ಒಂದು ಗಂಟೆ ಆಗಿಹೋಗಿದೆ. ಅವುಗಳನ್ನು ತೆಗೆದುಕೊಂಡು ಹೋಗಿರುವುದಕ್ಕೆ ಕಾರಣಕೊಡಬೇಕು. ಅವರ ಪಾಸ್‌ಗಳನ್ನು ತೆಗೆದುಕೊಳ್ಳಲಿಕ್ಕೆ ಕಾರಣ ಏನು?

(ಗೊಂದಲ)

ಉಪಾಧ್ಯಕ್ಷಿಣಿಯವರು:- ಅದನ್ನು ನಾನು ಈಗ ವಿಚಾರಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:- ತಮ್ಮ ಗಮನಕ್ಕೆ ಈ ವಿಚಾರ ಬಂದಿದೆಯೋ ಇಲ್ಲವೋ?

ಶ್ರೀ ವಾಟಾಳ್ ನಾಗರಾಜ್:- ಈ ಸದನದ ಒಳಗೆ ಇರತಕ್ಕಂಥ ಎಲ್ಲರಿಗೂ ಅವರು ಪರಿಚಯ ಇರತಕ್ಕವರು. ಅಲ್ಲಿ ಇರತಕ್ಕ ರಕ್ಷಣಾ ದಳದವರಿಗೂ ಅವರ ಪರಿಚಯ ಇದೆ. ಹೀಗಿದ್ದರೂ ಅವರ ಪಾಸುಗಳನ್ನು ತೆಗೆದುಕೊಂಡು ಈಗ ಒಂದು ಗಂಟೆಯಾಗಿದೆ. ಎಲ್ಲಿ ಹೋಗಿವೆ ಅವುಗಳು?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಪಾಸ್‌ಗಳು ವಾಪಸ್ಸು ಬಂದಿವೆ. ಈಗ ಕೊಟ್ಟರಂತೆ.

ಶ್ರೀ ವಾಟಾಳ್ ನಾಗರಾಜ್:- ಯಾರು ಅವುಗಳನ್ನು ತೆಗೆದುಕೊಂಡುಹೋಗಿದ್ದರು? ಏಕೆ ತೆಗೆದುಕೊಂಡು ಹೋಗಿದ್ದರು? ಒಂದು ಗಂಟೆಯವರೆಗೆ ಪಾಸ್‌ಗಳನ್ನು ತೆಗೆದುಕೊಂಡು ಹೋಗುವಂಥ ಉದ್ದೇಶ ಏನಿತ್ತು? ಇದು ಲಘುವಾಗಿ ಇರತಕ್ಕದ್ದಲ್ಲ.

ಉಪಾಧ್ಯಕ್ಷಿಣಿಯವರು:- ನೀವು ಹೇಳಿದ ತಕ್ಷಣ ನಾನು ಹೇಳುವುದಕ್ಕೆ ಆಗುತ್ತದೆಯೆ? ಅದು ಏನು ಎಂದು ನಾನು ಕೇಳಬೇಕಲ್ಲ? ಈಗ ಮಾರ್ಷಲ್ ಅವರನ್ನು ವಿಚಾರಿಸಿ ಹೇಳೋಣವಂತೆ. ಶ್ರೀ ಕಮರುಲ್‌ರವರೇ ನೀವು ಹೇಳಿ.

SRI QUMURAL ISLAM:- I demand that there should be an investigation regarding what has happened in the rally of Dr. Murali Manohar Joshi; and to know those who have raised the flag of Pakistan, those who have tried to assault Dr. Murali Manohar Joshi, the leader of our country. I demand in this House that a Committee may be constituted and facts may be investigated. With this I conclude my speech.

ಉಪಾಧ್ಯಕ್ಷಿಣಿಯವರು:- ಶ್ರೀಯುತ ಶಿವರಾಮೇ ಗೌಡರು....

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾನು ನಾಳೆ ಮಾತನಾಡುತ್ತೇನೆ.

ಉಪಾಧ್ಯಕ್ಷಿಣಿಯವರು:- ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಗಿಯಬೇಕು ಅಂತ ತೀರ್ಮಾನವಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಶಿವರಾಮೇಗೌಡರು ಇವತ್ತು ಬೇಕಾದರೆ ಮಾತನಾಡಲಿ. ನಾಳೆ ಅಂದರೆ ಇಲ್ಲ.

ಉಪಾಧ್ಯಕ್ಷಿಣಿಯವರು:- ಇವತ್ತೇ ಚರ್ಚೆ ಮುಗಿಯಬೇಕೆಂದು ತೀರ್ಮಾನವಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾತನಾಡಲಿಕ್ಕೆ ಅವಕಾಶ ಕೊಡಿ ಎಂದು ಹೇಳುವುದು. ಕರೆದಾಗ ಮಾತನಾಡುವುದಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಎಲ್. ಆರ್. ಶಿವರಾಮೇ ಗೌಡ:- ನನಗೆ ಮಾತನಾಡುವ ಹಕ್ಕನ್ನು ನಾಗಮಂಗಲದವರು ಕೊಟ್ಟಿದ್ದಾರೆ. ನೀವು ಅಲ್ಲ.

ಉಪಾಧ್ಯಕ್ಷಿಣಿಯವರು:- ಏಳು ಗಂಟೆಯವರೆಗೆ ನಡೆಸೋಣ. ಇಲ್ಲದಿದ್ದರೆ ತಾವೆಲ್ಲರೂ ಹೇಳಿದ ಹಾಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೋಡಿ, ಕೋರಮ್ ಇಲ್ಲ.

ಉಪಾಧ್ಯಕ್ಷಿಣಿಯವರು:- ಕೋರಮ್ ಇದೆ. ಈಗ ಶಿವರಾಮೇಗೌಡರು ಮಾತನಾಡಿದರೆ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್:- ನನಗೆ ಮಾತನಾಡುವುದಕ್ಕೆ ನಾಗಮಂಗಲದವರು ಅಧಿಕಾರ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಇಲ್ಲಿ ಕುಳಿತುಕೊಳ್ಳುವುದಕ್ಕೆ ಅಲ್ಲ, ಅಲ್ಲಿ ಕುಳಿತು ಕೊಳ್ಳುವುದಕ್ಕೆ. ನಮಗೆ ಈಗ ಗೊತ್ತಾಗಬೇಕು ಇವರು ಯಾವ ಪಕ್ಷಕ್ಕೆ ಸೇರಿದವರು ಎಂದು. ಇವರ ಪಕ್ಷ ಯಾವುದು ಎಂಬುದು ತೀರ್ಮಾನವಾಗಬೇಕು. ಇವರದ್ದೇನು ಕಾಂಗ್ರೆಸ್ ಪರವೋ, ಕಾಂಗ್ರೆಸ್ ಪಕ್ಷವೋ ಎಂದು ಗೊತ್ತಾಗಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬೆಳಿಗ್ಗೆ 11 ಗಂಟೆಯಿಂದ ಕುಳಿತಿದ್ದೇವೆ....

ಶ್ರೀ ಬಸವರಾಜ ರಾಯರೆಡ್ಡಿ:- ಸಭೆ ನಡೆಸಬೇಕಾದರೆ ಒಂದು ಸಂತೋಷ ಇರಬೇಕು. ಅಂತಹ ವಾತಾವರಣ ಇಲ್ಲಿ ಇಲ್ಲ. ಬೆಳಿಗ್ಗೆಯಿಂದ ಕುಳಿತಿದ್ದೇವೆ.

(ಗೊಂದಲ)

SRI QUMURAL ISLAM:- Before concluding you please take up non-official resolution.

ಉಪಾಧ್ಯಕ್ಷಿಣಿಯವರು:- ಸಭೆಯನ್ನು ಅಡ್ಜರ್ನ್ ಮಾಡುವುದಕ್ಕೆ ಮುಂಚೆ ಶಿಕ್ಷಣ ಮಂತ್ರಿಗಳು ಏನೋ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ನನಗೂ ಮಾತನಾಡಲಿಕ್ಕೆ ಇದೆ.

ಶ್ರೀ ಬಿ. ಎಚ್. ಬನ್ನಿಕೋಡ್:- ಖಾಸಗಿ ಕಾರ್ಯಕಲಾಪಗಳು ಬೇರೆ ಇವೆ....

ಶ್ರೀ ವಾಟಾಳ್ ನಾಗರಾಜ್:- ತಮ್ಮ ಮೂಲಕ ಎಲ್ಲಾ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ಅವರನ್ನು ಆ ಕಡೆ ಕರೆದುಕೊಳ್ಳಿ. ನಾವು ಈ ಹೊಡೆತ ಸಹಿಸಿಕೊಂಡು ಸಾಕಾಗಿದೆ.

ಮಂತ್ರಿಗಳ ಹೇಳಿಕೆ.

ಹೆಗ್ಗಡದೇವನ ಕೋಟೆಯಲ್ಲಿ ಒಬ್ಬ ಮಹಿಳೆ ನೀರಿಲ್ಲದೆ ಸತ್ತಿರುವ ವಿಚಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮುಂಜಾನೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಂಥ ಸುದ್ದಿ ಸಮಾಚಾರದಲ್ಲಿ ಈ ಸದನದಲ್ಲಿ ಪ್ರಶ್ನೆಯನ್ನು ಎತ್ತಿದ್ದರು. ಹೆಗ್ಗಡದೇವನಕೋಟೆಯಲ್ಲಿ ಒಬ್ಬ ಹೆಣ್ಣುಮಗಳು ನೀರು ಇಲ್ಲದೆ ಸತ್ತಿದ್ದಾರೆ ಎನ್ನುವುದನ್ನು ಹೇಳಿದರು. ಈಗಾಗಲೇ ನಾನು ಫ್ಯಾಕ್ಸನ್ನು ಟೆಲಿಫೋನ್ ಮುಖಾಂತರ ತರಿಸಿಕೊಂಡಿದ್ದೇನೆ. ಸಂಬಂಧಪಟ್ಟ ಡಿ. ಸಿ. ಯವರ ಜೊತೆಯಲ್ಲಿ ಮಾತನಾಡಿದ್ದೇನೆ, ಆ ವಿವರ ಈ ರೀತಿಯಾಗಿದೆ.

"The following are the facts about the death of the tribal girl in Anagatti Radi in H. D. Kote Taluk, Mysore District.

The deceased belongs to the Jenukuruba tribe. She is said to have died on 26-1-1992. The cause of death as ascertained was due to high temperature and bleeding and not due to thirst.

There are 14 to 145 families living in huts close in Anagatti village of H. D. Kote Taluk. These people are Nomadic and continuously move from place to place. They generally encroach forest lands. They are engaged in the collection of honey, teakwood seeds and other forest products. These 15 families came to the present settlement 6 months ago.

The deceased Kalamma was physically handicapped girl and did not die because of water scarcity, but because of fever and bleeding. The village Anagatti itself is nearby and water is available in that village from a borewell. Besides water was available in all the huts when the death occurred. At that time Kalamma was only one left behind and all other including children and elders had gone out.